ಶನಿವಾರ, ಜುಲೈ 22, 2023 | ₹ 7.00
www.prajavani.net
prajavani.net prajavani prajavani prajavani

# ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಪ್ರಚಾರ**
ಮುಂಬೈನಲ್ಲಿ ಹಮ್ಮಿಕೊಂಡಿದ್ದ ಸಿನಿಮಾವೊಂದರ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟಿ ಆಲಿಯಾ ಭಟ್

#9, 1st Floor, Above Sudarshan Silks, Margosa Road,
Near 8th Cross, Malleshwaram, Bengaluru - 03
080-46300 300 | 080-29909733 | 080-40981886

ಶನಿವಾರ, ಜುಲೈ 22, 2023 | ₹ 7.00

www.prajavani.net

prajavani.net prajavani prajavani prajavani

# ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಫ್ಯಾಶನ್ ಷೋ**

ಮುಂಬೈನಲ್ಲಿ ನಡೆದ ಫ್ಯಾಶನ್ ಷೋನಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟಿ ಹುಮಾ ಖುರೇಶಿ

ಬಿಬಿಎಂಪಿ: ಬಿ ಖಾತೆಗೆ ವರ್ಗಾಯಿಸಲು ಸೂಚನೆ; ಅಭಿವೃದ್ಧಿ ಶುಲ್ಕ ಪಾವತಿಯಲ್ಲಿ ನಿಯಮ ಉಲ್ಲಂಘನೆ

# ಅಕ್ರಮ: 40 ಸಾವಿರ ಎ ಖಾತೆ ರದ್ದು

• ಆರ್. ಮಂಜುನಾಥ್

**ಬೆಂಗಳೂರು:** ಬಿಬಿಎಂಪಿ ವ್ಯಾಪ್ತಿಯಲ್ಲಿ 40 ಸಾವಿರಕ್ಕೂ ಹೆಚ್ಚು ಆಸ್ತಿಗಳಿಗೆ ಅಕ್ರಮವಾಗಿ ಮಾಡಿಕೊಟ್ಟಿರುವ 'ಎ' ಖಾತಾಗಳು ರದ್ದಾಗಲಿವೆ. ಎಲ್ಲವನ್ನೂ 'ಬಿ' ಖಾತಾಗೆ ವರ್ಗಾಯಿಸಲು ನಿರ್ಧರಿಸಲಾಗಿದೆ.

ಬಿ ಖಾತಾಗೆ ಅರ್ಹವಾಗಿರುವ ಆಸ್ತಿಗಳಿಗೆ ಅಕ್ರಮವಾಗಿ ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು, 'ಐಎಫ್‌ಎಂಎಸ್' ತಂತ್ರಾಂಶದ 'ಆರ್ ಕೋಡ್ 130' ಬಳಸಿ 'ಎ' ಖಾತಾ ನೀಡಿರುವುದು ತನಿಖೆಯಿಂದ ಗೊತ್ತಾಗಿದೆ. 2015ರಿಂದ 2023ರವರೆಗೆ ಒಟ್ಟು 45,133 ಪ್ರಕರಣಗಳಲ್ಲಿ ₹898.70 ಕೋಟಿ ಪಾವತಿಸಿಕೊಳ್ಳಲಾಗಿದೆ. ಇವುಗಳಲ್ಲಿ ಶೇ 90ರಷ್ಟು ಪ್ರಕರಣಗಳು ಅಕ್ರಮ ಎಂದು ಪರಿಗಣಿಸಲಾಗಿದೆ.

ಅಕ್ರಮವಾಗಿ 'ಎ' ಖಾತಾ ನೀಡಿರುವ ಆಸ್ತಿಗಳ ಮಾಹಿತಿ ಒದಗಿಸಲು ಸಹಾಯಕ ಕಂದಾಯ ಅಧಿಕಾರಿಗಳಿಗೆ (ಎಆರ್‌ಒ) ಅವಕಾಶ ನೀಡಲಾಗಿತ್ತು. ಅವರು 9,736 ಆಸ್ತಿಗಳ ಮಾಹಿತಿ ನೀಡಿದ್ದರು. ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯಪುರ ಅವರ ನೇತೃತ್ವದ ತಂಡ 'ಬ್ಯಾಕ್‌ಹ್ಯಾಂಡ್ ಸಾಫ್ಟ್‌ವೇರ್ ಇನ್‌ವೆಸ್ಟಿಗೇಷನ್' ನಡೆಸಿದ್ದರಿಂದ, 40 ಸಾವಿರಕ್ಕೂ ಅಧಿಕ ಪ್ರಕರಣಗಳಲ್ಲಿ ಅಕ್ರಮವಾಗಿ ಖಾತಾ ನೀಡಿರುವುದು ಗೊತ್ತಾಗಿದೆ.

ಪ್ರಜಾವಾಣಿ ವಿಶೇಷ

ಸರ್ಕಾರದ ಆದೇಶದ ಪ್ರಕಾರ, ಕೊಳೆಗೇರಿ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ಹಕ್ಕು ಪತ್ರ ನೀಡಲಾಗಿದೆ. ಅಂತಹ ಆಸ್ತಿಗಳಿಗೆ ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು ಎ ಖಾತಾ ನೀಡಲು ಆರ್ ಕೋಡ್– 130 ಬಳಸಲಾಗುತ್ತದೆ. ಆದರೆ, ಎಆರ್‌ಒಗಳು ಇದನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಈ ಎಲ್ಲ ಅಕ್ರಮ ಎ ಖಾತೆಗಳನ್ನು ಬಿ ವಹಿಗೆ ಸೇರಿಸಲು ಕಂದಾಯ ವಿಭಾಗದ ಅಧಿಕಾರಿಗಳ ತಂಡ ರಚನೆ ಮಾಡಿ, ಕೂಡಲೇ ಕ್ರಮ ಕೈಗೊಳ್ಳಲು ವಲಯ ಆಯುಕ್ತರಿಗೆ ಸೂಚನೆ ನೀಡಲಾಗಿದೆ ಎಂದು ಜಯರಾಂ ರಾಯಪುರ ತಿಳಿಸಿದರು.

ಭೂ ಪರಿವರ್ತನೆಯಾಗದ ನಿವೇಶನಗಳಿಗೆ ಅಭಿವೃದ್ಧಿ ಶುಲ್ಕ ಪಾವತಿಸಿಕೊಳ್ಳಲು ಬರುವುದಿಲ್ಲ. ಅಂತಹ ಆಸ್ತಿಗಳೆಲ್ಲವೂ ಬಿ ಖಾತಾ ಅಥವಾ ವಹಿಯಲ್ಲಿ ದಾಖಲಾಗಿರುತ್ತವೆ. ಇಂತಹ ಪ್ರಕರಣಗಳಲ್ಲಿ ಎ ಖಾತಾ ನೀಡಿ ಅಕ್ರಮ ಎಸಗಲಾಗಿದೆ. ಅಂತಹ ಎಲ್ಲ ಅಧಿಕಾರಿಗಳ ಮೇಲೂ ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

**ಒಂದು ಲಕ್ಷ ಪ್ರಕರಣ:** ತಂತ್ರಾಂಶದಿಂದ ಪರಿಶೀಲನೆ ನಡೆಸಿದಾಗ 40 ಸಾವಿರಕ್ಕೂ ಹೆಚ್ಚು ಪ್ರಕರಣಗಳ ಅಕ್ರಮ ಗೊತ್ತಾಗಿದೆ. ಇನ್ನು, 9 ಸಾವಿರ ಪ್ರಕರಣಗಳ ಬಗ್ಗೆ ಎಆರ್‌ಒಗಳೇ ಮಾಹಿತಿ ನೀಡಿದ್ದಾರೆ. ಇದಲ್ಲದೆ, ಪುಸ್ತಕದಲ್ಲಿ 'ಎ' ಖಾತೆ ಎಂದು ಅಕ್ರಮವಾಗಿ ಬದಲಾಯಿಸಿ, ಹಣ ಪಡೆದಿರುವ ಪ್ರಕರಣಗಳೂ ಹೆಚ್ಚಿವೆ. ಇಂತಹ ಪ್ರಕರಣಗಳು ಸುಮಾರು 50 ಸಾವಿರ ಮೀರಬಹುದು. ಇವುಗಳೆಲ್ಲವನ್ನೂ ತನಿಖೆ ನಡೆಸಲಾಗುತ್ತಿದೆ.

**ಲಕ್ಷದೊಳಗೆ ಅಧಿಕ:** ₹1 ಲಕ್ಷಕ್ಕಿಂತ ಕಡಿಮೆ ಅಭಿವೃದ್ಧಿ ಶುಲ್ಕ ಪಾವತಿಸಿಕೊಂಡಿರುವ 37,968 ಪ್ರಕರಣಗಳಿದ್ದು, ಇವುಗಳೆಲ್ಲ ಅಕ್ರಮ ಎಂದು ಪರಿಗಣಿಸಲಾಗಿದೆ. 484 ಚದರ ಅಡಿವರೆಗೆ ₹10 ಸಾವಿರ, 1,211 ಚದರ ಅಡಿವರೆಗೆ ₹25 ಸಾವಿರ, 2,422 ಚದರ ಅಡಿವರೆಗೆ ₹50 ಸಾವಿರ, 3,633 ಚದರ ಅಡಿವರೆಗೆ ₹75 ಸಾವಿರ, 4,844 ಚದರ ಅಡಿವರೆಗೆ ₹1 ಲಕ್ಷ, 24,219 ಚದರ ಅಡಿವರೆಗೆ ₹5 ಲಕ್ಷ, 48,438 ಚದರ ಅಡಿವರೆಗೆ ₹10 ಲಕ್ಷ ಅಭಿವೃದ್ಧಿ ಶುಲ್ಕವನ್ನು ಪಾವತಿಸಿಕೊಳ್ಳಲು 'ಆರ್ ಕೋಡ್–130'ಯಲ್ಲಿ ಅವಕಾಶವಿದೆ.

### ಪ್ರಕರಣ, ಶುಲ್ಕ ಸಂಗ್ರಹ




2,154 ₹10 ಲಕ್ಷ ಮೇಲ್ಪಟ್ಟು
1,309 ₹5 ಲಕ್ಷದಿಂದ ₹10 ಲಕ್ಷ
3,702 ₹1 ಲಕ್ಷದಿಂದ ₹5 ಲಕ್ಷ
835 ₹75 ಸಾವಿರದಿಂದ ₹1 ಲಕ್ಷ
2,544 ₹50 ಸಾವಿರದಿಂದ ₹75 ಸಾವಿರ
9,678 ₹25 ಸಾವಿರದಿಂದ ₹50 ಸಾವಿರ
16,624 ₹10 ಸಾವಿರದಿಂದ ₹25 ಸಾವಿರ
8,287 ₹10 ಸಾವಿರದೊಳಗೆ

| ವಲಯ | ರಸೀದಿ | ಸಂಗ್ರಹ ಮೊತ್ತ (ಕೋಟಿಗಳಲ್ಲಿ) |
|---|---|---|
| ಮಹದೇವಪುರ | 12,334 | ₹427.69 |
| ಬೊಮ್ಮನಹಳ್ಳಿ | 6,413 | ₹129.31 |
| ಪೂರ್ವ | 6,136 | ₹21.46 |
| ಯಲಹಂಕ | 6,121 | ₹180.22 |
| ಪಶ್ಚಿಮ | 4,623 | ₹8.43 |
| ದಾಸರಹಳ್ಳಿ | 3,927 | ₹31.28 |
| ಆರ್.ಆರ್. ನಗರ | 3,422 | ₹92.17 |
| ದಕ್ಷಿಣ | 2,157 | ₹8.13 |
| ಒಟ್ಟು | 45,133 | ₹898.70 |

**ಅತಿ ಹೆಚ್ಚು ಪ್ರಕರಣಗಳು**

| ಎಆರ್‌ಒ | ಪ್ರಕರಣ |
|---|---|
| ಹೂಡಿ | 3,565 |
| ಮಾರತ್‌ಹಳ್ಳಿ | 3,320 |
| ವೈಟ್‌ಫೀಲ್ಡ್ | 2,574 |
| ಉತ್ತರಹಳ್ಳಿ | 2,371 |
| ಚಂದ್ರಲೇಔಟ್ | 2,236 |
| ಯಲಹಂಕ | 2,099 |
| ಬೇಗೂರು | 1,927 |
| ದಾಸರಹಳ್ಳಿ | 1,798 |
| ಶೆಟ್ಟಿಹಳ್ಳಿ | 1,673 |
| ಯಲಹಂಕ ಸ್ಯಾಟಲೈಟ್ ಟೌನ್ | 1,625 |
| ಕೆಂಗೇರಿ | 1,621 |
| ಹೊರಮಾವು | 1,467 |
| ಥಣಿಸಂದ್ರ | 1,424 |
| ಗೋವಿಂದರಾಜನಗರ | 1,234 |
| ಎಚ್‌ಬಿಆರ್ ಲೇಔಟ್ | 1,206 |
| ಮಾರುತಿಸೇವಾನಗರ | 1,206 |
| ಅಂಜನಾಪುರ | 1,007 |

## ಅರ್ಜಿ ನೀಡಿದರೆ ಹಣ ವಾಪಸ್: ಜಯರಾಂ

'ಅಕ್ರಮವಾಗಿ ಎ ಖಾತಾ ಪಡೆಯಲು ಅಭಿವೃದ್ಧಿ ಶುಲ್ಕವನ್ನು ಪಾವತಿಸಿರುವ ನಿವೇಶನದ ಮಾಲೀಕರು ತಪ್ಪೊಪ್ಪಿಗೆ ಅರ್ಜಿ ನೀಡಿದರೆ ಶುಲ್ಕವನ್ನು ಹಿಂದಿರುಗಿಸಲಾಗುತ್ತದೆ. ಇಲ್ಲದಿದ್ದರೆ ಆ ಮೊತ್ತ ಪಾಲಿಕೆಯಲ್ಲೇ ಉಳಿಯುತ್ತದೆ. ಅಕ್ರಮ ಎ ಖಾತಾವನ್ನು ರದ್ದುಪಡಿಸಿ, ಆ ಎಲ್ಲ ಆಸ್ತಿಗಳನ್ನು ಬಿ ಖಾತಾಗೆ ವರ್ಗಾಯಿಸುವ ಪ್ರಕ್ರಿಯೆ ಶೀಘ್ರ ಮುಗಿಯಲಿದೆ' ಎಂದು ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯಪುರ ತಿಳಿಸಿದರು.

## ಮಹದೇವಪುರದಲ್ಲಿ ಅಧಿಕ!

ಅಭಿವೃದ್ಧಿ ಶುಲ್ಕ ಕಟ್ಟಿಸಿಕೊಂಡು ಅಕ್ರಮವಾಗಿ ಎ ಖಾತಾ ನೀಡಿರುವ ಪ್ರಕರಣಗಳು ಮಹದೇವಪುರ ವಲಯದಲ್ಲಿ ಅತಿ ಹೆಚ್ಚಾಗಿವೆ. 12 ಸಾವಿರ ನಿವೇಶನಗಳಿಗೆ ಎ ಖಾತಾ ನೀಡಲಾಗಿದ್ದು, ಇದರಲ್ಲಿ 1,078 ಪ್ರಕರಣಗಳಲ್ಲಿ ₹10 ಲಕ್ಷಕ್ಕೂ ಹೆಚ್ಚು ಅಭಿವೃದ್ಧಿ ಶುಲ್ಕ ಪಾವತಿಯಾಗಿದೆ. ಯಲಹಂಕದಲ್ಲಿ 391, ಬೊಮ್ಮನಹಳ್ಳಿಯಲ್ಲಿ 329 ಹಾಗೂ ಆರ್.ಆರ್. ನಗರ ವಲಯದಲ್ಲಿ 250 ಪ್ರಕರಣಗಳಲ್ಲಿ ₹10 ಲಕ್ಷಕ್ಕೂ ಹೆಚ್ಚು ಅಭಿವೃದ್ಧಿ ಶುಲ್ಕ ಪಾವತಿಯಾಗಿದೆ. 24 ಸಾವಿರ ಚದರ ಅಡಿಗೂ ಹೆಚ್ಚು ನಿವೇಶನಗಳಿಗೆ ಇಷ್ಟು ದೊಡ್ಡ ಮೊತ್ತ ಪಾವತಿಸಬೇಕಾಗುತ್ತದೆ.

### ಅಭಿವೃದ್ಧಿ ಶುಲ್ಕ ಸಂಗ್ರಹ (ವರ್ಷಾವಾರು)



| ವರ್ಷ | ಶುಲ್ಕ (₹ ಕೋಟಿ) | ಪ್ರಕರಣಗಳು |
|---|---|---|
| 2015-16 | ₹65.58 | 3,242 |
| 2016-17 | ₹138.92 | 5,427 |
| 2017-18 | ₹124.44 | 5,780 |
| 2018-19 | ₹118.95 | 6,742 |
| 2019-20 | ₹108.07 | 6,011 |
| 2020-21 | ₹95.05 | 5,412 |
| 2021-22 | ₹94.47 | 5,331 |
| 2022-23 | ₹126.44 | 6,371 |
| 2023-24 | ₹26.79 | 817 |

## ಸುದ್ದಿ 2 ನಿಮಿಷ

### ರಾಷ್ಟ್ರೀಯ ಧ್ವಜ ದಿನ: ವಿಶೇಷ ಲಕೋಟೆ ಬಿಡುಗಡೆ ಇಂದು

**ಬೆಂಗಳೂರು:** ರಾಷ್ಟ್ರ ಧ್ವಜ ದಿನ– 2023 ಅಂಗವಾಗಿ ಅಂಚೆ ಇಲಾಖೆ ಕರ್ನಾಟಕ ವೃತ್ತದಿಂದ ಜುಲೈ 22ರಂದು ಬೆಳಿಗ್ಗೆ 11ಕ್ಕೆ ವಿಶೇಷ ಕವರ್ ಬಿಡುಗಡೆಯಾಗಲಿದೆ. ರಾಖಿ ಪೋಸ್ಟ್ ಪ್ರಚಾರ ಮಾಡಲು ಇದೇ ಸಂದರ್ಭದಲ್ಲಿ ವಿಶೇಷ ರಾಖಿ ಲಕೋಟೆ ಕೂಡ ಬಿಡುಗಡೆ ಮಾಡಲಾಗುವುದು ಎಂದು ಮುಖ್ಯ ಪೋಸ್ಟ್ ಮಾಸ್ಟರ್ ತಿಳಿಸಿದ್ದಾರೆ.

ಕರ್ನಾಟಕ ಸರ್ಕಲ್ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್ ಬಿಡುಗಡೆ ಮಾಡಲಿದ್ದಾರೆ. ವಿಶೇಷ ಕವರ್‌ಗಳು ಬೆಂಗಳೂರು ಜಿಪಿಒ ಅಂಚೆಚೀಟಿಗಳ ಸಂಗ್ರಹಾಲಯ, ಮಂಗಳೂರು, ಮೈಸೂರು ಮತ್ತು ಕರ್ನಾಟಕ ಪೋಸ್ಟಲ್ ಸರ್ಕಲ್‌ನಲ್ಲಿರುವ ಬೆಳಗಾವಿ ಮುಖ್ಯ ಕಚೇರಿಗಳಲ್ಲಿ ಮತ್ತು ಇ-ಪೋಸ್ಟ್ ಆಫೀಸ್‌ನಲ್ಲಿ (www.Indiapost.gov.in) ಮಾರಾಟಕ್ಕೆ ಲಭ್ಯವಿದೆ.

ಆಗಸ್ಟ್ 30 ರಂದು ನಡೆಯುವ ರಕ್ಷಾ ಬಂಧನ ಆಚರಣೆಯ ಸಂದರ್ಭದಲ್ಲಿ 'ರಾಖಿ ಪೋಸ್ಟ್' ಅನ್ನು ಆನ್‌ಲೈನ್‌ನಲ್ಲಿ ಬುಕ್ ಮಾಡಲು, ಶುಭಾಶಯ ಕಳುಹಿಸಲು ಸಹಾಯ ಮಾಡಲಿದೆ. ಜುಲೈ 26ರವರೆಗೆ ಈ ಸೇವೆ ಇರಲಿದ್ದು, ಭಾರತದ ಯಾವುದೇ ಮೂಲೆಯ ವಿಳಾಸ ನೀಡಿದರೂ ಆ.10ರಂದು ತಲುಪಿಸಲಾಗುವುದು. https://www.karnatakapost.gov.in/Rakhi_Post ಗೆ ಪ್ರವೇಶಿಸುವ ಮೂಲಕ ರಾಖಿ ಪೋಸ್ಟ್ ಸೇವೆಯನ್ನು ಪಡೆಯಬಹುದು ಎಂದು ಮುಖ್ಯ ಪೋಸ್ಟ್ ಮಾಸ್ಟರ್ ಮಾಹಿತಿ ನೀಡಿದ್ದಾರೆ.

### ವರ್ಗಾವಣೆ ದಂಧೆಯಲ್ಲಿ ಮುಳುಗಿದ ಸರ್ಕಾರ: ಕೆಆರ್‌ಎಸ್ ಆರೋಪ

**ಬೆಂಗಳೂರು:** ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವೂ ವರ್ಗಾವಣೆ ದಂಧೆಯಲ್ಲಿ ಮುಳುಗಿದೆ ಎಂದು ಆರೋಪಿಸಿ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

'ಈ ಹಿಂದಿನ ಬಿಜೆಪಿ ಸರ್ಕಾರದ ನಿಯಂತ್ರಣವಿಲ್ಲದ ಭ್ರಷ್ಟಾಚಾರ, ಕಮಿಷನ್ ದಂಧೆ, ದುರಾಡಳಿತದಿಂದ ಬೇಸತ್ತ ಜನರು, ಕಾಂಗ್ರೆಸ್‌ಗೆ ಅಧಿಕಾರ ಕೊಟ್ಟಿದ್ದರು. ಜನರು ಉತ್ತಮ ಆಡಳಿತದ ನಿರೀಕ್ಷೆಯಲ್ಲಿದ್ದರು. ಆದರೆ, ಅಧಿಕಾರಕ್ಕೆ ಬಂದ ಮೇಲೆ ಕಾಂಗ್ರೆಸ್ ಸಹ ನೌಕರರ ವರ್ಗಾವಣೆ ದಂಧೆಯನ್ನಾಗಿ ಮಾಡಿಕೊಂಡಿದೆ. ತಾವು ಈ ಹಿಂದಿನ ಸರ್ಕಾರಕ್ಕಿಂತ ಯಾವುದೇ ರೀತಿಯಲ್ಲಿ ಭಿನ್ನವಿಲ್ಲವೆಂದು ತೋರಿಸಿದೆ' ಎಂದು ಪ್ರತಿಭಟನಕಾರರು ಆಪಾದಿಸಿದರು.

ಪಕ್ಷದ ಉಪಾಧ್ಯಕ್ಷ ಎಸ್.ಎಚ್. ಲಿಂಗೇಗೌಡ ಮಾತನಾಡಿ, 'ರಾಜ್ಯದಲ್ಲಿ ದುರಾಡಳಿತವಿದ್ದು, ಈ ಹಿಂದಿನ ಬಿಜೆಪಿ ಸರ್ಕಾರದ ಮುಂದುವರಿದ ಭಾಗವಾಗಿ ಕಾಂಗ್ರೆಸ್ ಸರ್ಕಾರ ಕೆಲಸ ಮಾಡುತ್ತಿದೆ. ಭ್ರಷ್ಟಾಚಾರ ಮತ್ತು ದುರಾಡಳಿತದಲ್ಲಿ ರಾಜ್ಯದ ಮೂರು ಪ್ರಮುಖ ಪಕ್ಷಗಳು ಯಾವುದೇ ರೀತಿಯಲ್ಲಿ ಭಿನ್ನವಿಲ್ಲ' ಎಂದು ಹೇಳಿದರು.

'ನಿರಂತರವಾಗಿ ಸಾರ್ವಜನಿಕ ಆಡಳಿತದಲ್ಲಿ ಪಾರದರ್ಶಕ ವ್ಯವಸ್ಥೆಯನ್ನು ಕಟ್ಟಿಕೊಳ್ಳಲು ವಿಫಲವಾಗಿರುವುದೇ ಇಂದಿನ ಪರಿಸ್ಥಿತಿಗೆ ಕಾರಣವಾಗಿದೆ. ಇದನ್ನು ತೊಡೆದು ಹಾಕಲು ಕೆಆರ್‌ಎಸ್ ಪಕ್ಷವು ಹೋರಾಟ ನಡೆಸುತ್ತಿದೆ' ಎಂದರು.

ನಗರದ ಪುರಭವನದ ಎದುರು ಸಮಾನಮನಸ್ಕ ವೇದಿಕೆಯಿಂದ ಶುಕ್ರವಾರ ಮಣಿಪುರದ ನಿವಾಸಿಗಳಿಗೆ ನ್ಯಾಯ ಕಲ್ಪಿಸುವಂತೆ ಕೋರಿ ಪ್ರತಿಭಟನೆ ನಡೆಸಿಯಿತು

## ಮಣಿಪುರ ಘಟನೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಣಿಪುರದಲ್ಲಿ ಕುಕಿ ಬುಡಕಟ್ಟು ಸಮುದಾಯದ ಮೂವರು ಮಹಿಳೆಯರನ್ನು ಬೆತ್ತಲೆಗೊಳಿಸಿ, ಲೈಂಗಿಕ ದೌರ್ಜನ್ಯ ನಡೆಸಿದ ಹಾಗೂ ಯುವತಿಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ ಕೃತ್ಯವನ್ನು ಖಂಡಿಸಿ ಸಮಾನ ಮನಸ್ಕರ ವೇದಿಕೆ ಪ್ರತಿನಿಧಿಗಳು ನಗರದ ಪುರಭವನದ ಎದುರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಘಟನೆ ವಿರುದ್ಧ ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು. ಮಣಿಪುರ ಸಂತ್ರಸ್ತರೊಂದಿಗೆ ನಾವಿದ್ದೇವೆ ಎಂದು ಘೋಷಿಸಿದರು. ಅಲ್ಲದೇ ಕೇಂದ್ರ ಹಾಗೂ ಮಣಿಪುರದ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

'ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರವು ಮನುಷ್ಯತ್ವವೇ ತಲೆತಗ್ಗಿಸುವ ಕೃತ್ಯವಾಗಿದೆ. ಆದರೂ, ಕೇಂದ್ರ ಸರ್ಕಾರವು ಕ್ರಮ ತೆಗೆದುಕೊಳ್ಳಲು ವಿಳಂಬ ಧೋರಣೆ ಅನುಸರಿಸುತ್ತಿವೆ. ಮಣಿಪುರದಲ್ಲಿ ಸಂಘರ್ಷ ಆರಂಭಗೊಂಡು ಮೂರು ತಿಂಗಳಾಗಿದ್ದರೂ ಆಡಳಿತ ವ್ಯವಸ್ಥೆ ಕ್ರಮಕ್ಕೆ ಮುಂದಾಗುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಸಂಘರ್ಷವನ್ನು ನಿಯಂತ್ರಣಕ್ಕೆ ತಂದು ಮಹಿಳೆಯರು ಹಾಗೂ ಮಕ್ಕಳು ನೆಮ್ಮದಿಯಿಂದ ಜೀವನ ನಡೆಸುವ ವ್ಯವಸ್ಥೆ ಸೃಷ್ಟಿಯಾಗಬೇಕಿದೆ' ಎಂದು ಒತ್ತಾಯಿಸಿದರು.

'ಕೇಂದ್ರ ಸರ್ಕಾರವು ಮಹಿಳೆಯರ ಸುರಕ್ಷತೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಕೆಲವು ಸ್ಥಗಳಲ್ಲಿ ಬದುಕಲು ಭಯದ ವಾತಾವರಣ ನಿರ್ಮಾಣಗೊಳ್ಳುತ್ತಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಮಣಿಪುರದಲ್ಲಿ ಮೊದಲು ಶಾಂತಿ ಮರು ಸ್ಥಾಪಿಸಬೇಕು. ಮಹಿಳೆಯರ ಘನತೆಯನ್ನು ಕೇವಲ ಘೋಷಣೆಗಳಿಂದ ಕಾಪಾಡಲು ಸಾಧ್ಯವಿಲ್ಲ. ಇಡೀ ಸಂಘರ್ಷದ ಪ್ರಕರಣವನ್ನು ತನಿಖೆಗೆ ಒಳಪಡಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಹಲವು ದಿನಗಳಿಂದ ಹಿಂಸಾಚಾರ ನಡೆದರೂ ಪ್ರಧಾನಿಯವರು ಒಂದೇ ಒಂದು ಮಾತನಾಡಿರಲಿಲ್ಲ. ಸುಪ್ರೀಂ ಕೋರ್ಟ್ ಮಧ್ಯಪ್ರವೇಶಿಸಿದ ಮೇಲೆ 30 ಸೆಕೆಂಡ್ ಮಾತನಾಡಿದ್ದಾರೆ. ಇದು ಅಕ್ಷಮ್ಯ. ಮೀಸಲಾತಿ ವಿಚಾರಕ್ಕೆ ಆರಂಭವಾದ ಹೋರಾಟವು ಹಿಂಸಾರೂಪ ಪಡೆದುಕೊಂಡಿದೆ' ಎಂದು ಹೇಳಿದರು.

ಪ್ರತಿಭಟನೆಯಲ್ಲಿ ಎಸ್.ಜಿ.ಸಿದ್ದರಾಮಯ್ಯ, ಕೆ.ಮರುಳ ಸಿದ್ದಪ್ಪ, ಡಾ.ಜಿ. ರಾಮಕೃಷ್ಣ, ಕೆ.ಪ್ರಕಾಶ್, ವಿಜಯಾ, ಕೆ.ಎಸ್. ವಿಮಲಾ, ಗೌರಮ್ಮ, ದೇವಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಉತ್ತಮ 'ಬ್ರ್ಯಾಂಡ್ ಬೆಂಗಳೂರು' ಅಧ್ಯಯನಕ್ಕೆ ಹೆಚ್ಚಿನ ಆದ್ಯತೆ

## ತಜ್ಞರ ಸಮಿತಿ ಮತ್ತೆ ಪುನರ್‌ರಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರವನ್ನು ಉತ್ತಮ 'ಬ್ರ್ಯಾಂಡ್–ಬೆಂಗಳೂರು' ಮತ್ತು ಜಾಗತಿಕ ನಗರವನ್ನಾಗಿ ಮಾಡಲು ಅಧ್ಯಯನ ವರದಿಯನ್ನು ಸಲ್ಲಿಸಲು ನಿವೃತ್ತ ಮುಖ್ಯ ಕಾರ್ಯದರ್ಶಿ ಬಿ.ಎಸ್. ಪಾಟೀಲ ನೇತೃತ್ವದಲ್ಲಿ 'ತಜ್ಞರ ಸಮಿತಿ'ಯನ್ನು ಸರ್ಕಾರ ಮತ್ತೆ ಪುನರ್ ರಚಿಸಿದೆ.

2014ರಲ್ಲಿ ಬಿಬಿಎಂಪಿ ವಿಭಜನೆ ಸಂಬಂಧ ವರದಿ ನೀಡಲು ರಚಿಸಲಾಗಿದ್ದ 'ತಜ್ಞರ ಸಮಿತಿ'ಯನ್ನೇ ಜೂನ್ 12ರಂದು ಪುನರ್‌ರಚಿಸಲಾಗಿತ್ತು. ಜುಲೈ 18ರಂದು ಮತ್ತೊಮ್ಮೆ ಈ ಸಮಿತಿಯನ್ನು ಪುನರ್ ರಚಿಸಿದ್ದು, ಬಿಬಿಎಂಪಿ– ಬಿಡಿಎ ಆಯುಕ್ತರಾಗಿದ್ದ ಸಿದ್ದಯ್ಯ ಮತ್ತು ಹಿಂದಿನ ಬೆಂಗಳೂರು ಅಜೆಂಡಾ ಕಾರ್ಯಪಡೆಯ ಸದಸ್ಯ ರವಿಚಂದರ್ ಅವರ ಜೊತೆಗೆ ರಾಜ್ಯಸಭೆ ಮಾಜಿ ಸದಸ್ಯ ಎಂ.ವಿ ರಾಜೀವ್‌ಗೌಡ ಸದಸ್ಯರಾಗಿದ್ದಾರೆ.

ಆರು ಅಂಶಗಳನ್ನು ಗುರುತಿಸಿ, ಈ ಬಗ್ಗೆ ವರದಿ ಸಲ್ಲಿಸಲು ಸಮಿತಿಗೆ ಸೂಚಿಸಲಾಗಿದೆ.

- ಬೆಂಗಳೂರು ಮಹಾನಗರ ವ್ಯಾಪ್ತಿಯ ನಗರಾಭಿವೃದ್ಧಿ ಇಲಾಖೆ, ಬಿಬಿಎಂಪಿ, ಬಿಡಿಎ, ಬಿಡಬ್ಲ್ಯುಎಸ್‌ಎಸ್‌ಬಿ, ಬಿಎಂಆರ್‌ಡಿಎ, ನಗರ ಭೂ ಸಾರಿಗೆ ನಿರ್ದೇಶನಾಲಯ (ಡಲ್ಟ್), ಬಿಎಂಎಲ್‌ಟಿಎ ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತದಂತಹ ಇಲಾಖೆಗಳನ್ನು ಒಳಗೊಂಡ ಬೆಂಗಳೂರಿನ ಆಡಳಿತವನ್ನು 'ಮರು–ಇಮೇಜಿಂಗ್' ಮಾಡಲು ಕೈಗೊಳ್ಳಬೇಕಾದ ಪ್ರಕ್ರಿಯೆಗಳು.
- ಬೆಂಗಳೂರು ಮಹಾನಗರ ಪೊಲೀಸ್, ಅಗ್ನಿಶಾಮಕ ವಿಭಾಗ, ಕೊಳೆಗೇರಿ ಅಭಿವೃದ್ಧಿ ಮಂಡಳಿ, ಬಿಎಂಟಿಸಿ, ಬೆಸ್ಕಾಂ, ಉಪನಗರ ರೈಲು ಸೇರಿದಂತೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ ಸಮನ್ವಯ ಸಾಧಿಸುವ ಕ್ರಮಗಳು.
- ಬೆಂಗಳೂರನ್ನು ಜಾಗತಿಕ ನಗರವನ್ನಾಗಿ ಮಾಡಲು ಸಂಚಾರ ನಿರ್ವಹಣೆ, ಪರಿಸರ, ಘನತ್ಯಾಜ್ಯ ನಿರ್ವಹಣೆ, ಸಾರ್ವಜನಿಕ ಸ್ಥಳಗಳ ಸರಿಯಾದ ಬಳಕೆ, ಸಾರ್ವಜನಿಕ– ಪ್ರಾಣಿಗಳ ಆರೋಗ್ಯ, ಜನಸ್ನೇಹಿ ಇ–ಆಡಳಿತ, ಉತ್ತಮ ಗುಣಮಟ್ಟದ ನೀರಿನ ಲಭ್ಯತೆ–ಭದ್ರತೆ, ಪ್ರವಾಹಗಳ ಸಮರ್ಪಕ ನಿರ್ವಹಣೆ, ಉತ್ತಮ ಆಡಳಿತಕ್ಕಾಗಿ ಸಾಂಸ್ಥಿಕ ಕಾರ್ಯವಿಧಾನಗಳ ಸೂಚನೆ. ಸಮರ್ಥನೀಯ ಮತ್ತು ಸುಸ್ಥಿರ ಸ್ಥಿತಿಸ್ಥಾಪಕ ಚೇತೋಹಾರಿ ನಗರವನ್ನು ರಚಿಸಲು ಯೋಜಿತ ಮತ್ತು ವೈಜ್ಞಾನಿಕ ರೀತಿಯ ಸವಾಲು ಎದುರಿಸಲು ಅಗತ್ಯ ಕ್ರಮ ಮತ್ತು ಶಿಫಾರಸು.
- ಬ್ರ್ಯಾಂಡ್ ಬೆಂಗಳೂರು ಬಲಿಷ್ಠಗೊಳಿಸುವ ಕಾರ್ಯಗಳು
- ಮೆಟ್ರೊಪಾಲಿಟನ್ ಯೋಜನಾ ಸಮಿತಿ (ಎಂಪಿಸಿ) ಸ್ಥಾಪನೆ ಸೇರಿದಂತೆ 74ನೇ ತಿದ್ದುಪಡಿಗೆ ಅನುಗುಣವಾಗಿ ವಾರ್ಡ್ ಮಟ್ಟದಲ್ಲಿ ನಾಗರಿಕರ ಭಾಗವಹಿಸುವಿಕೆಯಿಂದ ಅಧಿಕಾರ ವಿಕೇಂದ್ರೀಕರಣ, ಉನ್ನತ ಮಟ್ಟದಲ್ಲಿ ಕೇಂದ್ರೀಕರಣದ ಕ್ರಮಗಳು
- ನಾಗರಿಕ ಕೇಂದ್ರಿತವಾದ ಸೇವೆಗಳಿಗೆ ಆಡಳಿತ ಮತ್ತು ನಿರ್ವಹಣೆಯನ್ನು ಸುಧಾರಿಸುವ ಪ್ರಕ್ರಿಯೆಗಳು
- ಸರ್ಕಾರ ನಿರ್ದೇಶಿಸುವ ಯಾವುದೇ ಮಹತ್ವದ ವಿಷಯದ ಬಗ್ಗೆ ವರದಿ ನೀಡಬೇಕು.

ಬಿಬಿಎಂಪಿ ಆಡಳಿತ ವಿಭಾಗದ ವಿಶೇಷ ಆಯುಕ್ತರು ಸಮಿತಿಗೆ ಬೇಕಾದ ಮಾಹಿತಿ ಒದಗಿಸಬೇಕು ಮತ್ತು ಸಭೆಗಳ ಸಮನ್ವಯ ಕಾರ್ಯ ನಿರ್ವಹಿಸಲು ಆದೇಶದಲ್ಲಿ ಸೂಚಿಸಲಾಗಿದೆ.

### ಕಲಬುರಗಿ–ಬೆಂಗಳೂರು ನಡುವೆ ನಿತ್ಯ ವಿಮಾನ ಸಂಚಾರ

**ಕಲಬುರಗಿ:** ಬೆಂಗಳೂರು–ಕಲಬುರಗಿ ನಡುವೆ ಜುಲೈ 21ರಿಂದ ಪ್ರತಿ ದಿನ ವಿಮಾನ ಸಂಚಾರ ಸೇವೆ ಆರಂಭಗೊಂಡಿದೆ ಎಂದು ಕಲಬುರಗಿ ವಿಮಾನ ನಿಲ್ದಾಣ ಪ್ರಾಧಿಕಾರದ ಸದಸ್ಯ ನರಸಿಂಹ ಮೆಂಡನ್ ತಿಳಿಸಿದ್ದಾರೆ.

'ಕಲಬುರಗಿ–ಬೆಂಗಳೂರು ನಡುವೆ ವಿಮಾನ ಸಂಚಾರ ಮೊಟಕುಗೊಳಿಸಿದ್ದರಿಂದ ಪ್ರಯಾಣಿಕರು ತೊಂದರೆ ಎದುರಿಸುತ್ತಿದ್ದರು. ಈ ಬಗ್ಗೆ ಸಂಸದ ಡಾ.ಉಮೇಶ ಜಾದವ್ ವಿಮಾನಯಾನ ಸಂಸ್ಥೆಗಳ ಜೊತೆ ನಡೆಸಿದ ಮಾತುಕತೆ ಯಶಸ್ವಿಗೊಂಡಿದೆ. ಸ್ಟಾರ್ ಏರ್ ಲೈನ್ಸ್ ಹಾಗೂ ಅಲಯನ್ಸ್ ಏರ್ ಸಂಸ್ಥೆಯವರ ಸಹಯೋಗದೊಂದಿಗೆ ನಿತ್ಯ ವಿಮಾನ ಸಂಚಾರ ನಡೆಸಲು ಒಪ್ಪಿಗೆ ಸಿಕ್ಕಿದೆ. ಸಂಸದರು ಕೇಂದ್ರ ನಾಗರಿಕ ವಿಮಾನ ಖಾತೆಯ ಜೊತೆ ಮಾತುಕತೆ ನಡೆಸಿ ವಾರಪೂರ್ತಿ ವಿಮಾನ ಸಂಚಾರ ಪ್ರಾರಂಭಿಸಲು ಪ್ರಯತ್ನಿಸಿದ್ದರು. ಪ್ರಯಾಣಿಕರು ಈ ಸೌಲಭ್ಯವನ್ನು ಬಳಸಿಕೊಳ್ಳಬೇಕು' ಎಂದು ಮೆಂಡನ್ ನಾಗರಿಕರಲ್ಲಿ ಮನವಿ ಮಾಡಿದ್ದಾರೆ.

## ಮಿದುಳು ನಿಷ್ಕ್ರಿಯ: ಅಂಗಾಂಗ ದಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಿದುಳು ನಿಷ್ಕ್ರಿಯಗೊಂಡಿದ್ದ ಕೋಲಾರದ 51 ವರ್ಷದ ರೈತರೊಬ್ಬರ ಅಂಗಾಂಗಗಳನ್ನು ಇಲ್ಲಿನ ಸ್ಪರ್ಶ್ ಆಸ್ಪತ್ರೆಯ ವೈದ್ಯರು ದಾನವಾಗಿ ಪಡೆದಿದ್ದಾರೆ.

ಅವರ ಪತ್ನಿ ಅಂಧರಾಗಿದ್ದು, ಪುತ್ರಿ ಇದ್ದಾಳೆ. ಅನಿಯಂತ್ರಿತ ರಕ್ತದೊತ್ತಡದಿಂದ ಅವರಿಗೆ ಮಿದುಳಿನಲ್ಲಿ ರಕ್ತಸ್ರಾವವಾಗಿತ್ತು. ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಜು.18ರಂದು ಯಶವಂತಪುರದ ಸ್ಪರ್ಶ್ ಆಸ್ಪತ್ರೆಗೆ ದಾಖಲಾಗಿದ್ದರು. ಜು.20ರಂದು ಅವರ ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ಘೋಷಿಸಿದ ವೈದ್ಯರು, ಕುಟುಂಬದ ಸದಸ್ಯರ ಸಮ್ಮತಿ ಮೇರೆಗೆ ಅಂಗಾಂಗ ದಾನ ಪ್ರಕ್ರಿಯೆ ಕೈಗೊಂಡರು. ಹೃದಯ, ಶ್ವಾಸಕೋಶ, ಎರಡು ಮೂತ್ರಪಿಂಡಗಳು ಮತ್ತು ಕಾರ್ನಿಯಾವನ್ನು ದಾನವಾಗಿ ಪಡೆದರು ಎಂದು ಆಸ್ಪತ್ರೆ ತಿಳಿಸಿದೆ.

'ದುಃಖದ ಸಂದರ್ಭದಲ್ಲಿಯೂ ಕುಟುಂಬ ಸದಸ್ಯರು ಅಂಗಾಂಗ ದಾನಕ್ಕೆ ಸಮ್ಮತಿಸುವ ಮೂಲಕ ಮಾದರಿಯಾಗಿದ್ದಾರೆ. ಅಂಗಾಂಗಕ್ಕಾಗಿ ಹಲವಾರು ಮಂದಿ ಎದುರು ನೋಡುತ್ತಿದ್ದು, ಈ ಬಗ್ಗೆ ಜಾಗೃತಿ ಹೆಚ್ಚಬೇಕು' ಎಂದು ಆಸ್ಪತ್ರೆಗಳ ಸಮೂಹದ ಮುಖ್ಯ ಕಾರ್ಯಾಚರಣೆ ಅಧಿಕಾರಿ ಜೋಸೆಫ್ ಪಸಂಘ ತಿಳಿಸಿದ್ದಾರೆ.

## ವಿಮಾನದ ತುರ್ತು ಬಾಗಿಲು ತೆರೆಯಲು ಯತ್ನ: ಬಂಧನ

**ದೇವನಹಳ್ಳಿ:** ಪ್ಯಾರಿಸ್‌ನಿಂದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರುತ್ತಿದ್ದ ಏರ್ ಫ್ರಾನ್ಸ್-194 ವಿಮಾನದ ತುರ್ತು ನಿರ್ಗಮನದ ಬಾಗಿಲು ತೆರೆಯಲು ಯತ್ನಿಸಿದ ವ್ಯಕ್ತಿಯನ್ನು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಆರೋಪಿಯನ್ನು ಆಂಧ್ರಪ್ರದೇಶ ಮೂಲದ ವೆಂಕಟ್ ಮೋಹಿತ್ ಆಚಾರಿ(29) ಎಂದು ಗುರುತಿಸಲಾಗಿದೆ.

ಜುಲೈ 15ರ ರಾತ್ರಿ ಈ ಘಟನೆ ನಡೆದಿದ್ದು, ಈ ಕುರಿತು ವಿಮಾನದ ಸಿಬ್ಬಂದಿ ಸಲ್ಲಿಸಿದ್ದ ವರದಿ ಆಧಾರದ ಮೇರೆಗೆ ವಿಮಾನ ನಿಲ್ದಾಣದ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಪ್ಯಾರಿಸ್‌ನಿಂದ ಬೆಂಗಳೂರಿಗೆ ಆಗಮಿಸುವ ವೇಳೆ ಆರೋಪಿಯು ವಿಮಾನದ ತುರ್ತು ನಿರ್ಗಮನ ಬಾಗಿಲು ತೆರೆಯಲು ಯತ್ನಿಸಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

ಅಮೆರಿಕದ ನ್ಯೂ ಜೆರ್ಸಿಯ ಫ್ರ್ಯಾಂಕ್ಲಿನ್ ಟೌನ್ಶಿಪ್‌ನಲ್ಲಿ ಆದಿಚುಂಚನಗಿರಿ ಮಠದಿಂದ ನಡೆಯುತ್ತಿರುವ ಕಾಲಭೈರವೇಶ್ವರ ದೇಗುಲದ ಕಾಮಗಾರಿಯನ್ನು ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಪರಿಶೀಲಿಸಿದರು.

## ಅಮೆರಿಕದಲ್ಲಿ ಕಾಲಭೈರವೇಶ್ವರ ದೇಗುಲ ನಿರ್ಮಾಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಮೆರಿಕದ ನ್ಯೂಜೆರ್ಸಿಯ ಫ್ರ್ಯಾಂಕ್ಲಿನ್ ಟೌನ್‌ಶಿಪ್‌ನಲ್ಲಿ ಆದಿ ಚುಂಚನಗಿರಿ ಮಠದಿಂದ ಸುಮಾರು 1 ಕೋಟಿ ಡಾಲರ್ (₹ 80 ಕೋಟಿ) ವೆಚ್ಚದಲ್ಲಿ ಕಾಲಭೈರವೇಶ್ವರ ದೇಗುಲ ನಿರ್ಮಾಣಗೊಳ್ಳುತ್ತಿದ್ದು, ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಕಾಮಗಾರಿ ಪರಿಶೀಲಿಸಿದರು.

ಶ್ರೀಗಳು ದೇಗುಲ ಕಾಮಗಾರಿ ಪರಿಶೀಲನೆಗಾಗಿ ಅಮೆರಿಕಕ್ಕೆ ತೆರಳಿದ್ದಾರೆ ಎಂದು ಮಠದ ಪ್ರಕಟಣೆ ತಿಳಿಸಿದ್ದು, ಆದಿಚುಂಚನಗಿರಿ ಮಹಾಸಂಸ್ಥಾನವು ಈ ಟೌನ್‌ಶಿಪ್‌ನಲ್ಲಿ 20 ಎಕರೆ ಜಮೀನು ಖರೀದಿಸಿದೆ. ಅಲ್ಲಿ ನಿರ್ಮಾಣ ಆಗುತ್ತಿರುವ 5,000 ಚದರ ಮೀಟರ್ ಕಟ್ಟಡದಲ್ಲಿ ಯೋಗ, ಧ್ಯಾನ ಹಾಗೂ ಇತರೆ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಉದ್ದೇಶ ಹೊಂದಿದೆ. ಮೊದಲ ಹಂತದಲ್ಲಿ ದೇವಾಲಯ, ಅರ್ಚಕರ ನಿವಾಸ ನಿರ್ಮಾಣವಾಗಲಿದೆ.

ಡಾ.ಅಮರನಾಥಗೌಡ, ಡಾ.ಬಾಬು ಕೀಲಾರ ಅವರ ನೇತೃತ್ವದಲ್ಲಿ ಕಾಮಗಾರಿಗಳು ಆರಂಭವಾಗಿವೆ. ಕೀಲಾರ ಅವರು ದೇವಾಲಯದ ವಿನ್ಯಾಸ, ಪರಿಸರ ಇಲಾಖೆ ಅನುಮತಿ, ನಿರ್ಮಾಣದ ಜವಾಬ್ದಾರಿ ವಹಿಸಿಕೊಂಡಿದ್ದಾರೆ ಎಂದಿದೆ.

ನ್ಯಾಯಮೂರ್ತಿ ಅಲೋಕ್ ಆರಾಧೆಗೆ ಬೀಳ್ಕೊಡುಗೆ

## 'ಮಧುರ ನೆನಪಿನೊಂದಿಗೆ ತೆರಳುತ್ತಿದ್ದೇನೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ದೇಶದಲ್ಲೇ ಬೆಂಗಳೂರು ವಕೀಲರ ಸಂಘ ಅತ್ಯುತ್ತಮವಾದುದು, ಅಂತೆಯೇ, ಬೆಂಗಳೂರು ಒಂದು ಸುಂದರ ನಗರಿ, ಇಲ್ಲಿನ ಹಿರಿಯ ವಕೀಲರ ಕೌಶಲ ಕಂಡು ನಾನು ಬೆರಗಾಗಿದ್ದೇನೆ. ಎಲ್ಲ ಸಹೃದಯಿಗಳ ಪ್ರೀತಿಯ ಮಧುರ ನೆನಪುಗಳನ್ನು ಹೊತ್ತು ತೆರಳುತ್ತಿದ್ದೇನೆ' ಎಂದು ತೆಲಂಗಾಣ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕವಾಗಿರುವ ಅಲೋಕ್ ಆರಾಧೆ ಭಾವುಕ ನುಡಿಗಳನ್ನಾಡಿದರು.

ಕರ್ನಾಟಕ ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿಯಾಗಿದ್ದ ಅವರಿಗೆ ತೆಲಂಗಾಣ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಪದೋನ್ನತಿ ನೀಡಿದ ಹಿನ್ನೆಲೆಯಲ್ಲಿ ಬೆಂಗಳೂರು ವಕೀಲರ ಸಂಘ ಶುಕ್ರವಾರ ಬೀಳ್ಕೊಡುಗೆ ಸಮಾರಂಭ ಏರ್ಪಡಿಸಿತ್ತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಆರಾಧೆ, 'ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ಮತ್ತು ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿಯಂತಹವರ ಯುವ ಶಕ್ತಿಯಿಂದ ಹೈಕೋರ್ಟ್ ಸಶಕ್ತವಾಗಿ ಕಾರ್ಯ ನಿರ್ವಹಿಸುತ್ತಿದೆ' ಎಂದರು.

ತೆಲಂಗಾಣ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ಪದೋನ್ನತಿ ಹೊಂದಿದ ಕರ್ನಾಟಕ ಹೈಕೋರ್ಟ್‌ನ ಹಿರಿಯ ನ್ಯಾಯಮೂರ್ತಿಯಾಗಿದ್ದ ಅಲೋಕ್ ಆರಾಧೆ ಅವರಿಗೆ ಶುಕ್ರವಾರ ರಾಜ್ಯ ವಕೀಲರ ಪರಿಷತ್ ಮತ್ತು ಬೆಂಗಳೂರು ವಕೀಲರ ಸಂಘದ ವತಿಯಿಂದ ಬೀಳ್ಕೊಡುಗೆ ನೀಡಲಾಯಿತು. ನ್ಯಾಯಮೂರ್ತಿ ದಿನೇಶ್ ಕುಮಾರ್, ಇ.ಎಸ್.ಇಂದಿರೇಶ್, ಅಲೋಕ್ ಆರಾಧೆ ಮತ್ತು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಇದ್ದರು –ಪ್ರಜಾವಾಣಿ ಚಿತ್ರ

'ಎಲ್ಲರಿಗೂ ನಮಸ್ಕಾರ' ಎಂದು ಕನ್ನಡದಲ್ಲೇ ತಮ್ಮ ಭಾಷಣ ಆರಂಭಿಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ, 'ಆರಾಧೆ ಒಬ್ಬ ಕಠಿಣ ಪರಿಶ್ರಮ ಜೀವಿ. ಕಿರಿಯರಿಗೆ ಮಾದರಿಯಾಗಬಲ್ಲ ವೃತ್ತಿ ಬದ್ಧತೆ ವ್ಯಕ್ತಿತ್ವ ಅವರದ್ದು. ನ್ಯಾಯದಾನದ ವಿಚಾರದಲ್ಲೂ ಅವರು ಹಿಂದೆ ಬಿದ್ದಿಲ್ಲ. ತೆಲಂಗಾಣದಲ್ಲಿ ಅವರು ಪ್ರಸಿದ್ಧ ನ್ಯಾಯಮೂರ್ತಿಯಾಗಿ ಇನ್ನಷ್ಟು ಹೆಸರು ಪಡೆಯಲಿ' ಎಂದು ಆಶಿಸಿದರು.

ವಿವೇಕ್ ರೆಡ್ಡಿ ಮಾತನಾಡಿ, 'ಅಲೋಕ್ ಆರಾಧೆ ಒಬ್ಬ ಸರಳ ಜೀವಿ. ಜಮ್ಮು ಕಾಶ್ಮೀರ ಹೈಕೋರ್ಟ್‌ನಿಂದ ಇಲ್ಲಿಗೆ ಯಾವ ರೀತಿ ಸರಳವಾಗಿ ಬಂದರೋ ಅಷ್ಟೇ ಸರಳತೆಯಿಂದ ತೆಲಂಗಾಣಕ್ಕೆ ತೆರಳುತ್ತಿರುವುದು ಅವರ ವಿಶೇಷತೆ' ಎಂದರು.

ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, 'ಆರಾಧೆ ಒಬ್ಬ ಶಿಕ್ಷಕ, ಲೇಖಕ ಮತ್ತು ಪ್ರೀತಿಪಾತ್ರ ಸಜ್ಜನ ವ್ಯಕ್ತಿತ್ವದ ನ್ಯಾಯಮೂರ್ತಿ' ಎಂದರು. ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳಾದ ಎನ್.ಪಿ. ಅಮೃತೇಶ್, ರಾಜು ಮತ್ತು ಹೇಮಲತಾ ಇದ್ದರು.

## ಗ್ಯಾರಂಟಿಗಾಗಿ ಪರಿಶಿಷ್ಟರ ಹಣ ಬಳಕೆ: ಬೊಮ್ಮಾಯಿ ಆರೋಪ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಜಾರಿಗೆ ಹಣವನ್ನು ಹೊಂದಿಸಲು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾದ ಎಸ್‌ಸಿಪಿ– ಟಿಎಸ್‌ಪಿ ಅನುದಾನವನ್ನು ಬಳಸಿಕೊಳ್ಳುವ ಮೂಲಕ ಆ ಸಮುದಾಯಗಳಿಗೆ ದ್ರೋಹ ಮಾಡಿದೆ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಟೀಕಿಸಿದ್ದಾರೆ.

ಪಕ್ಷದ ಶಾಸಕರನ್ನು ವಿಧಾನಸಭೆ ಕಲಾಪದಿಂದ ಅಮಾನತು ಮಾಡಿರುವುದನ್ನು ವಿರೋಧಿಸಿ ವಿಧಾನಸೌಧದ ಗಾಂಧಿ ಪ್ರತಿಮೆಯ ಬಳಿ ಶುಕ್ರವಾರವೂ ಪ್ರತಿಭಟನೆ ನಡೆಸಿ ಮಾತನಾಡಿದರು.

ಸಿದ್ದರಾಮಯ್ಯ ಸರ್ಕಾರ ಬಂದ ಮೇಲೆ ಕರ್ನಾಟಕದ ಜನರ ಬದುಕು ದುಸ್ತರವಾಗಿದೆ. ರೈತರು ಎರಡು ಬಾರಿ ಬಿತ್ತನೆ ಮಾಡಿದರೂ ಬೆಳೆ ಬರದೇ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರ ಅವರ ರಕ್ಷಣೆಗೆ ಬಂದಿಲ್ಲ. ಹಿಂದೆ ಇವರ ಅವಧಿಯಲ್ಲೇ ನಾಲ್ಕು ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡ ದಾಖಲೆ ಇದೆ. ಈಗಲೂ ರೈತರ ಆತ್ಮಹತ್ಯೆ ಸರಣಿ ಆರಂಭವಾಗಿದೆ. ಇದು ಕಳವಳದ ಸಂಗತಿ ಎಂದರು.

'ವಿದ್ಯಾರ್ಥಿಗಳು, ರೈತರು, ಸರ್ಕಾರಿ ನೌಕರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ದುಡಿಯುವ ಸಾಮಾನ್ಯ ಜನರ ಬದುಕು ಅಸ್ಥಿರಗೊಳಿಸಿದ್ದಾರೆ. ಜನ ವಿರೋಧಿ ಬಜೆಟ್ ಮಂಡಿಸಿರುವ ಇವರು ಗ್ಯಾರಂಟಿಗಳಿಗೆ ಹಣ ಹೊಂದಿಸಲು ಪರದಾಡುತ್ತಿದ್ದಾರೆ. ಸಿದ್ದರಾಮಯ್ಯ ಅತಿ ಹೆಚ್ಚು ಸಾಲ ಮಾಡಿದ್ದಾರೆ. ಸಿದ್ದರಾಮಯ್ಯ ಅವಧಿಯಲ್ಲಿ ₹1.30 ಲಕ್ಷ ಕೋಟಿ ಸಾಲ ಮಾಡಿದರು. ನಮ್ಮ ಅವಧಿಯಲ್ಲಿ ಕೋವಿಡ್, ಪ್ರವಾಹ ಮತ್ತು ಲಾಕ್‌ಡೌನ್ ಕಾರಣ ಆದಾಯ ಇಲ್ಲದೇ ಸಾಲ ಮಾಡಬೇಕಾಗಿ ಬಂದಿತ್ತು. ನಾವು ಅಧಿಕಾರ ಬಿಟ್ಟಾಗ ಆರ್ಥಿಕ ಸ್ಥಿತಿ ಉತ್ತಮವಾಗಿತ್ತು. ಆದರೆ ಇವರು ಗ್ಯಾರಂಟಿಗಾಗಿ ಹೆಚ್ಚಿನ ಸಾಲ ಮಾಡಿದ್ದಾರೆ' ಎಂದು ಟೀಕಿಸಿದರು.

ಶನಿವಾರ ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಕಾಂಗ್ರೆಸ್ ಸರ್ಕಾರದ ಜನ ವಿರೋಧಿ ನೀತಿ ಮತ್ತು ವೈಫಲ್ಯಗಳನ್ನು ಖಂಡಿಸಿ ಪ್ರತಿಭಟನೆ ನಡೆಸುವುದಾಗಿ ಬಿಜೆಪಿ ರಾಜ್ಯ ಪ್ರಧಾನಕಾರ್ಯದರ್ಶಿ ಎನ್.ರವಿಕುಮಾರ್ ತಿಳಿಸಿದರು.

ಶನಿವಾರ, ಜುಲೈ 22, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 202 | ಪುಟ 28
www.prajavani.net
prajavani.net prajavani prajavani prajavani

# ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ: ಮಹಿಳೆಯರ ಸ್ವಾವಲಂಬನೆ ಬದುಕಿಗೆ ದಾರಿ ತೋರಿದ ಮಲೆನಾಡು ಮೇಳ

ಆಳ-ಅಗಲ: ಟೆನಿಸ್ ಅಂಗಣದ ಮಿನುಗು ತಾರೆಯರು
ಋಣಭಾರ ಹಾಕಿ ಹಣ ನೀಡದ ಬ್ಯಾಂಕ್ 4A
ವಿಪಕ್ಷ ನಾಯಕರಿಲ್ಲದೇ ಮುಗಿದ ಅಧಿವೇಶನ 4B

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 66,684 | 19,745 | ₹61,520 (ಬೆಂಗಳೂರು) | ₹77,000 (ಬೆಂಗಳೂರು) | 81.98 |

ಉಗ್ರರ ಬಂಧನ ಪ್ರಕರಣ: ತನಿಖೆ ಚುರುಕು • ಜಪ್ತಿ ವಸ್ತುಗಳ ಮಾಹಿತಿ ಹಂಚಿಕೊಂಡ ತಜ್ಞರು

# ‘ಸ್ಫೋಟಕ್ಕೆ ವಾಕಿಟಾಕಿ ಟ್ರಿಗರ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ್ದ ಪ್ರಕರಣದಲ್ಲಿ ಬಂಧಿಸಿರುವ ಶಂಕಿತರಿಂದ ಜಪ್ತಿ ಮಾಡಲಾಗಿರುವ ವಾಕಿಟಾಕಿಗಳು, ಬಾಂಬ್ ಸ್ಫೋಟಕ್ಕೆ ಬಳಸುವ ಟ್ರಿಗರ್‌ಗಳು (ರಿಮೋಟ್) ಎಂಬ ಮಾಹಿತಿ ಸಿಸಿಬಿ ತನಿಖೆಯಿಂದ ಹೊರಬಿದ್ದಿದೆ.

ವಾಕಿಟಾಕಿ ರೀತಿಯಲ್ಲಿ ಸಿದ್ಧಪಡಿಸಿದ್ದ ಟ್ರಿಗರ್‌ಗಳನ್ನು ಬಳಸಿಕೊಂಡು ನಗರದಲ್ಲಿ ದೊಡ್ಡ ಪ್ರಮಾಣದ ಬಾಂಬ್ ಇರಿಸಿ ಭಯೋತ್ಪಾದಕ ಕೃತ್ಯ ನಡೆಸಲು ಶಂಕಿತರು ಸಿದ್ಧತೆ ನಡೆಸುತ್ತಿದ್ದರೆಂಬ ಮಾಹಿತಿಯೂ ಸಿಸಿಬಿಗೆ ಸಿಕ್ಕಿದೆ.

ಹೆಬ್ಬಾಳ ಠಾಣೆ ವ್ಯಾಪ್ತಿಯ ಸುಲ್ತಾನ್ ಪಾಳ್ಯದಲ್ಲಿ ಜುಲೈ 18ರಂದು ಕಾರ್ಯಾಚರಣೆ ನಡೆಸಿದ್ದ ಸಿಸಿಬಿ ಪೊಲೀಸರು, ಐವರು ಶಂಕಿತರನ್ನು ಬಂಧಿಸಿದ್ದರು. 7 ನಾಡ ಪಿಸ್ತೂಲ್, 45 ಗುಂಡುಗಳು, 12 ಮೊಬೈಲ್, ಡ್ಯಾಗರ್ ಹಾಗೂ 4 ವಾಕಿಟಾಕಿ ಮಾದರಿ ಉಪಕರಣ ಜಪ್ತಿ ಮಾಡಿದ್ದರು. ಈ ಎಲ್ಲ ವಸ್ತುಗಳನ್ನೂ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಈ ಸಾಧನಗಳ ಪರೀಕ್ಷೆ ನಡೆಸಿರುವ ತಜ್ಞರು ಪ್ರಾಥಮಿಕ ಮಾಹಿತಿ ಹಂಚಿಕೊಂಡಿದ್ದಾರೆ.

‘ಉಗ್ರ ಸಂಘಟನೆಗಳ ಸದಸ್ಯರ ಜೊತೆ ಮಾತುಕತೆ ನಡೆಸಲು ಶಂಕಿತರು ವಾಕಿಟಾಕಿ ಬಳಸುತ್ತಿದ್ದರು ಎಂಬ ಅನುಮಾನವಿತ್ತು. ಆದರೆ, ಜಪ್ತಿ ಮಾಡಿರುವ ವಾಕಿಟಾಕಿಗಳ ಮಾದರಿಯೇ ಬೇರೆ ಇದೆ. ಈ ವಾಕಿಟಾಕಿಗಳು, ಸ್ಫೋಟಕಗಳನ್ನು (ಐಇಡಿ) ಸ್ಫೋಟಿಸಲು ಬಳಸುವ ಟ್ರಿಗರ್ ಅಥವಾ ರಿಮೋಟ್ ಆಗಿರಬಹುದೆಂಬ ಅನುಮಾನ ಬಂದಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಾಕಿಟಾಕಿ ರೀತಿಯಲ್ಲಿ ಕಂಡಿದ್ದರಿಂದ, ಇದೊಂದು ಸಂವಹನ ಸಾಧನವೆಂದು ತಿಳಿಯಲಾಗಿತ್ತು. ಈ ಉಪಕರಣದಲ್ಲಿ ತಂತಿಗಳ ಜೋಡಣೆ ಇದೆ. ಅದು ಯಾವ ರೀತಿ ಕೆಲಸ ಮಾಡುತ್ತದೆ ಎಂಬುದನ್ನು ತಜ್ಞರು ಪರಿಶೀಲಿಸುತ್ತಿದ್ದಾರೆ. ಕೆಲವೇ ದಿನಗಳಲ್ಲಿ ಅದರ ನೈಜ ರೂಪದ ಬಗ್ಗೆ ವರದಿ ನೀಡಲಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

**ಮತ್ತಷ್ಟು ಸ್ಫೋಟಕ ಸಂಗ್ರಹಿಸಿದ ಅನುಮಾನ:** ಶಂಕಿತ ಜಾಹೀದ್ ತಬ್ರೇಜ್ ವಾಸವಿದ್ದ ಕೊಡಿಗೇಹಳ್ಳಿಯ ಭದ್ರಪ್ಪ ಬಡಾವಣೆಯಲ್ಲಿರುವ ಮನೆಯಲ್ಲಿ 4 ಗ್ರೆನೇಡ್‌ಗಳು ಈಗಾಗಲೇ ಪತ್ತೆಯಾಗಿವೆ. ಟ್ರಿಗರ್ ಸಿಕ್ಕಿರುವುದರಿಂದಾಗಿ, ದುಷ್ಕೃತ್ಯ ನಡೆಸಲು ನಗರದ ಹಲವೆಡೆ ಹೆಚ್ಚಿನ ಪ್ರಮಾಣದಲ್ಲಿ ಸ್ಫೋಟಕಗಳನ್ನು ಸಂಗ್ರಹಿಸಿಟ್ಟಿರುವ ಅನುಮಾನ ವ್ಯಕ್ತವಾಗಿದೆ.

4A ಪುಟ ನೋಡಿ

## ‘ಜೈಲಿನಲ್ಲಿ ಸಂಚು: ತನಿಖೆಗೆ ಆದೇಶ’

ಬೆಂಗಳೂರಿನಲ್ಲಿ 2008ರಲ್ಲಿ ನಡೆಸಿದ್ದ ಬಾಂಬ್ ಸ್ಫೋಟದ ಆರೋಪಿ ಟಿ. ನಾಸೀರ್, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಯುವಕರ ಗುಂಪು ಸೇರಿಸಿಕೊಂಡು ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ್ದ ಸಂಗತಿ ಸಿಸಿಬಿ ಪೊಲೀಸರ ತನಿಖೆಯಿಂದ ಪತ್ತೆಯಾಗಿದೆ. ಈ ಸಂಗತಿ ಬಗ್ಗೆ ಆಂತರಿಕ ತನಿಖೆ ನಡೆಸಲು ಕಾರಾಗೃಹ ಇಲಾಖೆ ಎಡಿಜಿಪಿ ಮಾಲಿನಿ ಕೃಷ್ಣಮೂರ್ತಿ ಅವರು ಆದೇಶ ಹೊರಡಿಸಿದ್ದಾರೆ.

‘ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ನಾಸೀರ್, ವಿಶೇಷ ಕೊಠಡಿ ಸೌಲಭ್ಯ ಪಡೆದಿದ್ದ. ಕೊಲೆ ಹಾಗೂ ಇತರೆ ಪ್ರಕರಣಗಳಲ್ಲಿ ಬಂಧಿತರಾಗಿ ಜೈಲಿಗೆ ಬರುವ ಮುಸ್ಲಿಂ ಯುವಕರ ಜೊತೆ ಒಡನಾಟ ಬೆಳೆಸಿಕೊಂಡಿದ್ದ. ಆರ್ಥಿಕ ನೆರವು ಹಾಗೂ ಇತರೆ ಆಮಿಷವೊಡ್ಡಿ ಯುವಕರನ್ನು ಭಯೋತ್ಪಾದನಾ ಕೃತ್ಯಕ್ಕೆ ಪ್ರಚೋದಿಸುತ್ತಿದ್ದನೆಂಬ ಮಾಹಿತಿ ಇದೆ’ ಎಂದು ಮೂಲಗಳು ಹೇಳಿವೆ.

‘ನಾಸೀರ್ ಹೆಚ್ಚಾಗಿ ಜೈಲಿನಲ್ಲಿ ಇರಲು ಇಷ್ಟಪಡುತ್ತಿದ್ದ. ಹೊರಗಡೆ ಬಂದರೆ, ಪೊಲೀಸರು ತನ್ನನ್ನು ಹಿಂಬಾಲಿಸುವ ಮಾಹಿತಿ ಆತನಿಗೆ ಗೊತ್ತಿತ್ತು. ಹೀಗಾಗಿ, ಜೈಲು ತನಗೆ ಸುರಕ್ಷಿತ ಸ್ಥಳವೆಂದು ಈತ ತಿಳಿದಿದ್ದ. ಜೈಲಿನಲ್ಲಿ ಕುಳಿತು ಏನೇ ಮಾಡಿದರೂ ಕೇಳುವವರು ಇರುವುದಿಲ್ಲವೆಂಬುದು ಹಾಗೂ ಆರೋಪಿಗಳ ಮನಸ್ಸನ್ನು ಸುಲಭವಾಗಿ ಪರಿವರ್ತಿಸಬಹುದೆಂಬುದು ಈತನಿಗೆ ಗೊತ್ತಿತ್ತು. ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ್ದ ಪ್ರಮುಖ ಆರೋಪಿ ಜುನೈದ್ ಸಹ ನಾಸೀರ್‌ನನ್ನು ಜೈಲಿನಲ್ಲಿಯೇ ಭೇಟಿಯಾಗಿದ್ದ. ಅಲ್ಲಿಯೇ ಅವರಿಬ್ಬರಿಗೂ ಸ್ನೇಹ ಬೆಳೆದಿತ್ತು. ನಾಸೀರ್ ಕೃತ್ಯಕ್ಕೆ ಜೈಲಿನ ಕೆಲ ಸಿಬ್ಬಂದಿಯೂ ಸಹಕಾರ ನೀಡುತ್ತಿದ್ದ ಮಾಹಿತಿ ಇದೆ. ಹೀಗಾಗಿ, ಎಡಿಜಿಪಿ ಅವರು ಆಂತರಿಕ ತನಿಖೆಗೆ ಆದೇಶಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

**ಜೈಲಿನಲ್ಲಿ ಜಟಾಪಟಿ:** ಪ್ರಕರಣವೊಂದರ ವಿಚಾರಣೆಗೆಂದು ಕಾರಾಗೃಹದಿಂದ ನಾಸೀರ್‌ನನ್ನು ನ್ಯಾಯಾಲಯಕ್ಕೆ ಕರೆದೊಯ್ಯುವ ವೇಳೆ ಕೈದಿಗಳ ನಡುವೆ ಜಟಾಪಟಿ ನಡೆದಿದೆ.

‘ದೇಶ ವಿರೋಧಿ ಕೃತ್ಯದಲ್ಲಿ ತೊಡಗಿರುವ ನಾಸೀರ್‌ನಿಂದ ಜೈಲಿಗೆ ಕೆಟ್ಟ ಹೆಸರು ಬಂದಿದೆ’ ಎಂದು ಕೈದಿಗಳ ಗುಂಪು ಕೂಗಾಡಿತ್ತು. ನಾಸೀರ್‌ನನ್ನು ತಳ್ಳಾಡಲು ಯತ್ನಿಸಿತ್ತು. ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದ್ದರೆಂದು ಗೊತ್ತಾಗಿದೆ.

### ‘ಎನ್ಐಎ ಅಧಿಕಾರಿಗಳಿಂದ ಶಂಕಿತರ ವಿಚಾರಣೆ’

‘ಶಂಕಿತರ ವಿರುದ್ಧ ಕಾನೂನುಬಾಹಿರ ಚಟುವಟಿಕೆ ತಡೆ (ಯುಎಪಿ) ಕಾಯ್ದೆಯಡಿ ಹೆಬ್ಬಾಳ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ. ಹೀಗಾಗಿ, ಎನ್ಐಎ ಅಧಿಕಾರಿಗಳು ಸಹ ತನಿಖೆ ಆರಂಭಿಸಿದ್ದಾರೆ. ಸಿಸಿಬಿ ಪೊಲೀಸರ ಜೊತೆ ಎನ್ಐಎ ಅಧಿಕಾರಿಗಳು, ಶಂಕಿತರನ್ನು ವಿಚಾರಣೆಗೆ ಒಳಪಡಿಸುತ್ತಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಪ್ರಕರಣ ದಾಖಲಾದ ದಿನದಿಂದಲೂ ಎನ್ಐಎ ಅಧಿಕಾರಿಗಳು, ಸಿಸಿಬಿ ಜೊತೆಯಲ್ಲಿದ್ದಾರೆ. ಜಂಟಿಯಾಗಿ ತನಿಖೆ ಮುಂದುವರಿದಿದೆ’ ಎಂದು ತಿಳಿಸಿವೆ.

> ವಾಕಿಟಾಕಿ ಮಾದರಿ ಉಪಕರಣದಲ್ಲಿ ತಂತಿಗಳನ್ನು ಜೋಡಿಸಲಾಗಿದೆ. ಇದು ಬೇರೆ ರೀತಿಯ ಉಪಕರಣವಿರುವ ಅನುಮಾನವಿದೆ. ವಿಧಿವಿಜ್ಞಾನ ತಜ್ಞರಿಂದ ನಿಖರ ವರದಿ ಬರಬೇಕಿದೆ
> **ಬಿ. ದಯಾನಂದ್**, ಬೆಂಗಳೂರು ಪೊಲೀಸ್ ಕಮಿಷನರ್

> ಉಗ್ರರ ಬಂಧನ ಪ್ರಕರಣವನ್ನು ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ರಾಷ್ಟ್ರೀಯ ತನಿಖಾ ದಳಕ್ಕೆ ವಹಿಸಿ ವಿಶೇಷ ತನಿಖಾ ತಂಡವನ್ನು ರಚಿಸಬೇಕು
> **ಶೋಭಾ ಕರಂದ್ಲಾಜೆ,** ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ರಾಜ್ಯ ಸಚಿವೆ

ಪಿಎಸ್ಐ ಅಕ್ರಮ: ನ್ಯಾಯಾಂಗ

# ತನಿಖೆಗೆ ಬಿ.ವೀರಪ್ಪ ನೇತೃತ್ವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನಡೆದಿದ್ದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಸಿವಿಲ್) –545 ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂಬ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಿ ರಾಜ್ಯ ಸರ್ಕಾರ ಶುಕ್ರವಾರ ಆದೇಶಿಸಿದೆ.



ನ್ಯಾ. ಬಿ.ವೀರಪ್ಪ

ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರ ನೇತೃತ್ವದಲ್ಲಿ ಏಕಸದಸ್ಯ ತನಿಖಾ ಆಯೋಗ ರಚಿಸಲಾಗಿದೆ. ಅಕ್ರಮ ಪ್ರಕರಣದ ವರದಿಯನ್ನು ಮೂರು ತಿಂಗಳಲ್ಲಿ ನೀಡುವಂತೆ ಆಯೋಗವನ್ನು ಸರ್ಕಾರ ಕೋರಿದೆ.

2021ರ ಜನವರಿ 21ರಂದು ಪಿಎಸ್ಐಗಳ ಆಯ್ಕೆ ಪ್ರಕ್ರಿಯೆ ಆರಂಭವಾಗಿತ್ತು. ನೇಮಕಾತಿಯಲ್ಲಿ ನಿಯಮಗಳ ಉಲ್ಲಂಘನೆ, ವಿವಿಧ ಹಂತಗಳಲ್ಲಿ ನಡೆದಿರುವ ಅಕ್ರಮಗಳು ಹಾಗೂ ಯಾರೆಲ್ಲಾ ದುರ್ಲಾಭ ಪಡೆದಿದ್ದಾರೆ ಎಂಬುದರ ಕುರಿತು ತನಿಖೆ ನಡೆಸುವಂತೆ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಮುಂದಿನ ದಿನಗಳಲ್ಲಿ ಪಿಎಸ್ಐ ಹುದ್ದೆಯ ನೇರ ನೇಮಕಾತಿಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಿಯಮಾನುಸಾರ, ಪಾರದರ್ಶಕ ಹಾಗೂ ಲೋಪರಹಿತವಾಗಿ ನಡೆಸಲು ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯೂ ಶಿಫಾರಸು ಮಾಡುವಂತೆ ಆಯೋಗವನ್ನು ಕೋರಲಾಗಿದೆ. ಸಿಐಡಿ ತಂಡ ಹಾಗೂ ಪೊಲೀಸ್ ನೇಮಕಾತಿ ವಿಭಾಗವು ಆಯೋಗಕ್ಕೆ ಸಮಗ್ರ ಮಾಹಿತಿ, ದಾಖಲೆ ಸಲ್ಲಿಸುವಂತೆ ಸೂಚಿಸಿದೆ.

2021ರ ಅಕ್ಟೋಬರ್ 3ರಂದು ರಾಜ್ಯದ 92 ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆ ನಡೆದಿತ್ತು. ಲಿಖಿತ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಲಾಗಿತ್ತು. ಬಳಿಕ 52 ಮಂದಿಯ ವಿರುದ್ಧ ರಾಜ್ಯದ ವಿವಿಧ ಠಾಣೆಗಳಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿತ್ತು. ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ 52 ಅಭ್ಯರ್ಥಿಗಳನ್ನು ಪೊಲೀಸ್ ಇಲಾಖೆ ನಡೆಸುವ ಯಾವುದೇ ಪರೀಕ್ಷೆ ಬರೆಯುವುದಕ್ಕೆ ನಿಷೇಧ ಹೇರಲಾಗಿದೆ.

### ಬೆಂಗಳೂರಿನಲ್ಲೇ ಕಚೇರಿ

ಆಯೋಗದ ಕಾರ್ಯ ನಿರ್ವಹಣೆಗೆ ಬೆಂಗಳೂರಿನಲ್ಲೇ ಕಚೇರಿ ಇರಲಿದೆ. ನ್ಯಾಯಮೂರ್ತಿ, ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಎಲ್ಲ ರೀತಿಯ ಸೌಲಭ್ಯ ಕಲ್ಪಿಸುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೂಚಿಸಲಾಗಿದೆ.

ಜ್ಞಾನವಾಪಿ ಮಸೀದಿ: ನ್ಯಾಯಾಲಯ ಆದೇಶ

# ವೈಜ್ಞಾನಿಕ ಸಮೀಕ್ಷೆಗೆ ಅನುಮತಿ

ಪ್ರಜಾವಾಣಿ ವಾರ್ತೆ

ಲಖನೌ: ಜ್ಞಾನವಾಪಿ ಮಸೀದಿಯ ವೈಜ್ಞಾನಿಕ ಸಮೀಕ್ಷೆ ನಡೆಸಲು ಅನುಮತಿ ನೀಡಿ ವಾರಾಣಸಿ ನ್ಯಾಯಾಲಯ ಶುಕ್ರವಾರ ಮಹತ್ವದ ಆದೇಶ ನೀಡಿದೆ.

ಕಾಶಿ ವಿಶ್ವನಾಥ ದೇವಾಲಯ ಪಕ್ಕದಲ್ಲಿರುವ ಮಸೀದಿ ಕುರಿತು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯಿಂದ (ಎಎಸ್ಐ) ಸಮೀಕ್ಷೆ ನಡೆಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಜಿಲ್ಲಾ ನ್ಯಾಯಾಧೀಶ ಎ.ಕೆ.ವಿಶ್ವೇಶ ಅವರು ಪುರಸ್ಕರಿಸಿದ್ದಾರೆ.

‘ಮಸೀದಿ ಆವರಣದಲ್ಲಿರುವ ‘ವಜುಖಾನ’ ಈ ವೈಜ್ಞಾನಿಕ ಸಮೀಕ್ಷೆಯ ಭಾಗವಾಗಿರಬಾರದು’ ಎಂದಿರುವ ನ್ಯಾಯಾಲಯ, ಆಗಸ್ಟ್ 4ರ ಒಳಗಾಗಿ ವರದಿ ಸಲ್ಲಿಸುವಂತೆ ಎಎಸ್ಐಗೆ ನಿರ್ದೇಶನ ನೀಡಿದೆ.

ಮಸೀದಿಯಲ್ಲಿ ನಮಾಜ್ ಸಲ್ಲಿಸಲು ನಿರ್ಬಂಧ ಇರಕೂಡದು ಎಂದೂ ನ್ಯಾಯಾಲಯ ಹೇಳಿದೆ.

ಹಿಂದೂ ಅರ್ಜಿದಾರರ ಪರ ವಕೀಲ ವಿಷ್ಣುಶಂಕರ್ ಜೈನ್ ಅವರು ತೀರ್ಪನ್ನು ಸ್ವಾಗತಿಸಿದ್ದಾರೆ. ‘ವೈಜ್ಞಾನಿಕ ಸಮೀಕ್ಷೆಯಿಂದ ಈ ವಿಷಯ ಕುರಿತ ಸತ್ಯಾಂಶ ಹೊರಬರಲಿದೆ’ ಎಂದು ಜೈನ್ ಪ್ರತಿಕ್ರಿಯಿಸಿದ್ದಾರೆ.

ಮಸೀದಿಯ ವೈಜ್ಞಾನಿಕ ಸಮೀಕ್ಷೆ ನಡೆಸುವಂತೆ ಕೋರಿ ಆರು ಮಂದಿ ಹಿಂದೂಗಳು ಅರ್ಜಿ ಸಲ್ಲಿಸಿದ್ದರು. ‘17ನೇ ಶತಮಾನದಲ್ಲಿ ಮುಸ್ಲಿಂ ದೊರೆಗಳು ದೇವಸ್ಥಾನವನ್ನು ಧ್ವಂಸಗೊಳಿಸಿದ ನಂತರ ಈ ಮಸೀದಿ ನಿರ್ಮಿಸಲಾಗಿದೆ. ಸನಾತನ ಧರ್ಮದಲ್ಲಿ ನಂಬಿಕೆ ಹೊಂದಿರುವವರು ಈ ವಿಷಯ ಕುರಿತ ಸತ್ಯ ತಿಳಿದುಕೊಳ್ಳುವ ಅಧಿಕಾರ ಹೊಂದಿದ್ದಾರೆ’ ಎಂಬುದು ಅರ್ಜಿದಾರರ ವಾದ.

ಮಸೀದಿ ಮೇಲ್ವಿಚಾರಣೆ ನಡೆಸುತ್ತಿರುವ ಅಂಜುಮಾನ್ ಇಂತೆಜಾಮಿಯಾ ಮಸೀದಿ ಸಮಿತಿ ವೈಜ್ಞಾನಿಕ ಪರೀಕ್ಷೆಗೆ ವಿರೋಧ ವ್ಯಕ್ತಪಡಿಸಿತ್ತು.

ಒಳ ಪುಟ

ಬಾಂಧವ್ಯ ವೃದ್ಧಿಗೆ ದೂರದರ್ಶಿ ಯೋಜನೆ 10

## ಐ.ಟಿ. ಕುಸಿತ; ಕರಡಿ ಕುಣಿತ

ಮುಂಬೈ (ಪಿಟಿಐ): ಐ.ಟಿ. ಕಂಪನಿಗಳ ಷೇರು ಮೌಲ್ಯ ಕುಸಿತ ಕಂಡಿದ್ದು ದೇಶದ ಷೇರುಪೇಟೆಗಳಲ್ಲಿ ಶುಕ್ರವಾರ ಕರಡಿ ಕುಣಿತಕ್ಕೆ ಕಾರಣವಾಯಿತು. ಇದರಿಂದಾಗಿ ಆರು ದಿನಗಳ ಗೂಳಿ ಓಟ ಕೊನೆಗೊಂಡಿತು. 10

## ಉಕ್ಕಿದ ನದಿಗಳು, ಮುಳುಗಿದ ಸೇತುವೆಗಳು

ಬೆಂಗಳೂರು: ಕಲ್ಯಾಣ ಕರ್ನಾಟಕ ಮತ್ತು ಮಲೆನಾಡು ಭಾಗದಲ್ಲಿ ಶುಕ್ರವಾರ ಉತ್ತಮ ಮಳೆಯಾಗಿದೆ. ಹಲವೆಡೆ ನದಿಗಳು ಉಕ್ಕಿ ಹರಿಯುತ್ತಿದ್ದು, ಸೇತುವೆಗಳು ಮಳುಗಡೆಯಾಗಿವೆ. ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ರಭಸದ ಮಳೆಯಾಗಿದೆ. 4A

ಮಣಿಪುರ: ಬೆತ್ತಲೆ ಮೆರವಣಿಗೆ ಕುರಿತು ಜೂನ್ 12ಕ್ಕೇ ದೂರು

# ‘ಮಹಿಳಾ ಆಯೋಗ ನಿಷ್ಕ್ರಿಯ’

ನವದೆಹಲಿ (ಪಿಟಿಐ): ಕುಕಿ–ಜೋ ಸಮುದಾಯಕ್ಕೆ ಸೇರಿದ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ, ರಸ್ತೆಯಲ್ಲಿ ಮೆರವಣಿಗೆ ನಡೆಸಿ, ಲೈಂಗಿಕ ದೌರ್ಜನ್ಯ ಎಸಗಲಾಗಿದೆ. ಒಬ್ಬ ಮಹಿಳೆಯ ಮೇಲೆ ಅತ್ಯಾಚಾರ ಮಾಡಲಾಗಿದೆ ಎಂದು ನಾರ್ಥ್ ಅಮೆರಿಕನ್ ಮಣಿಪುರ ಟ್ರೈಬಲ್ ಅಸೋಸಿಯೇಷನ್ ಎಂಬ ಸಂಸ್ಥೆಯು ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಜೂನ್ 12ರಂದೇ ದೂರು ನೀಡಿತ್ತು. ಆದರೆ, ಮಹಿಳಾ ಆಯೋಗವು ದೂರು ತಲುಪಿದ 38 ದಿನಗಳ ಬಳಿಕವೂ ಯಾವುದೇ ಕ್ರಮ ಕೈಗೊಂಡಿಲ್ಲ. ವಿಡಿಯೊ ಬಹಿರಂಗವಾದ ಬಳಿಕಷ್ಟೇ ಆಯೋಗವು ಹೇಳಿಕೆ ನೀಡಿದೆ.

ಇಬ್ಬರು ಸಾಮಾಜಿಕ ಕಾರ್ಯಕರ್ತರು ಹಾಗೂ ನಾರ್ಥ್ ಅಮೆರಿಕನ್ ಮಣಿಪುರ ಟ್ರೈಬಲ್ ಅಸೋಸಿಯೇಷನ್ ಎಂಬ ಸಂಸ್ಥೆಯ ಸದಸ್ಯರು ಮಣಿಪುರದಲ್ಲಿ ಸಂತ್ರಸ್ತೆಯರನ್ನು ಮಾತನಾಡಿಸಿದ್ದರು. ಅಲ್ಲಿನ ಸ್ಥಿತಿಗತಿಯನ್ನು ಅವಲೋಕಿಸಿ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ಅವರಿಗೆ ಜೂನ್ 12ರಂದೇ ಇ–ಮೇಲ್ ಮಾಡಿದ್ದರು.

7ನೇ ಪುಟ ನೋಡಿ

ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ, ರಸ್ತೆಯಲ್ಲಿ ಮೆರವಣಿಗೆ ನಡೆಸಿದ ಪ್ರಕರಣದ ಆರೋಪಿಯ ಮನೆಯನ್ನು ಮಣಿಪುರದ ವಾಂಗ್‌ಜಿಂಗ್ ಅವಂಗ್ ಲೇಕ್ ಗ್ರಾಮದಲ್ಲಿ ಮಹಿಳೆಯರು ಧ್ವಂಸಗೊಳಿಸಿದರು –ಎಎಫ್‌ಪಿ ಚಿತ್ರ

### ರೇಖಾ ಶರ್ಮಾ ಸಮರ್ಥನೆ



ರೇಖಾ ಶರ್ಮಾ

‘ಸಾಮಾಜಿಕ ಕಾರ್ಯಕರ್ತರಿಂದ ನಮಗೆ ದೂರುಗಳು ಬಂದಿವೆ. ಆದರೆ, ಈ ದೂರುಗಳ ಸತ್ಯಾಸತ್ಯತೆಯ ಬಗ್ಗೆ ಪರಿಶೀಲನೆ ನಡೆಸಬೇಕಿತ್ತು. ಜೊತೆಗೆ, ದೂರುಗಳು ಮಣಿಪುರದಿಂದ ಬಂದವು ಆಗಿರಲಿಲ್ಲ’ ಎಂದು ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ಪಿಟಿಐ ಪ್ರಶ್ನೆಗೆ ಉತ್ತರಿಸಿದ್ದಾರೆ.

7ನೇ ಪುಟ ನೋಡಿ

### ಚಿನಕುರಳಿ

ಪ್ರಕಾಶ್ ಶೆಟ್ಟಿ

# ಆ.1ರಿಂದ ಹಾಲಿನ ದರ ₹3 ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನಿ ಹಾಲಿನ ದರ ಲೀಟರ್ ಒಂದಕ್ಕೆ ₹3 ಹೆಚ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಒಪ್ಪಿಗೆ ನೀಡಿದ್ದಾರೆ.

ರಾಜ್ಯದ ಎಲ್ಲ ಹಾಲು ಒಕ್ಕೂಟಗಳು ಮತ್ತು ಕೆಎಂಎಫ್ ಅಧ್ಯಕ್ಷರ ಸಭೆಯ ಬಳಿಕ ಕೆಎಂಎಫ್ ನಿರ್ದೇಶಕ ಎಚ್.ಡಿ.ರೇವಣ್ಣ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು. ಈ ನಿರ್ಣಯ ಆಗಸ್ಟ್ 1ರಿಂದ ಜಾರಿಗೆ ಬರಲಿದೆ.

‘ಹಾಲಿನ ದರ ಲೀಟರ್‌ಗೆ ₹5 ಹೆಚ್ಚಿಸಲು ನಾವು ಬೇಡಿಕೆ ಸಲ್ಲಿಸಿದ್ದೆವು. ಅದಕ್ಕೆ ಮುಖ್ಯಮಂತ್ರಿ ಒಪ್ಪಿಕೊಳ್ಳಲಿಲ್ಲ’ ಎಂದು ರೇವಣ್ಣ ಹೇಳಿದರು.

‘ಲೀಟರ್‌ಗೆ ₹8 ಹೆಚ್ಚಿಸಬೇಕು ಎಂದು ಹಾಲು ಒಕ್ಕೂಟಗಳು ಆರಂಭದಲ್ಲಿ ಹೇಳಿದಾಗ ಯಾವುದೇ ಕಾರಣಕ್ಕೂ ಹಾಲಿನ ದರ ಏರಿಕೆ ಮಾಡುವುದು ಬೇಡ. ಇದಕ್ಕೆ ತಮ್ಮ ಒಪ್ಪಿಗೆ ಇಲ್ಲ ಎಂದು ಸಿದ್ದರಾಮಯ್ಯ ಹೇಳಿದರು. ಸಂಸ್ಥೆಗಳು ಎದುರಿಸುತ್ತಿರುವ ಸಂಕಷ್ಟದ ಸ್ಥಿತಿಯನ್ನು ಒಕ್ಕೂಟಗಳ ಪ್ರತಿನಿಧಿಗಳು ಮುಖ್ಯಮಂತ್ರಿಯವರಿಗೆ ಮನದಟ್ಟು ಮಾಡುವ ಪ್ರಯತ್ನ ನಡೆಸಿದರು’ ಎಂದು ಮೂಲಗಳು ಹೇಳಿವೆ.

‘ಹೆಚ್ಚಿಸಿದ ಹಾಲಿನ ದರ ನೇರವಾಗಿ ರೈತರಿಗೆ ಹೋಗಬೇಕು. ಒಕ್ಕೂಟಗಳ ನಷ್ಟವನ್ನು ತುಂಬಿಕೊಳ್ಳಲು ಬಳಸಿಕೊಳ್ಳಬೇಡಿ. ಆ ರೀತಿಯಾದರೆ ಮಾತ್ರ ಒಪ್ಪಿಗೆ ನೀಡುತ್ತೇನೆ. ಒಕ್ಕೂಟಗಳು ನಷ್ಟಕ್ಕೆ ಒಳಗಾದರೆ ಆಡಳಿತಾಧಿಕಾರಿ ನೇಮಿಸುವುದಾಗಿ ಮುಖ್ಯಮಂತ್ರಿ ಎಚ್ಚರಿಕೆ ನೀಡಿದರು’ ಎಂದು ಮೂಲಗಳು ತಿಳಿಸಿವೆ. ಸಭೆಯಲ್ಲಿ ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ, ಸಹಕಾರ ಸಚಿವ ಕೆ.ಎನ್.ರಾಜಣ್ಣ, ಪಶುಸಂಗೋಪನಾ ಸಚಿವ ಕೆ.ವೆಂಕಟೇಶ್ ಇದ್ದರು.

ಸರ್ಕಾರ ಕೊಟ್ಟಿದ್ದ ಜಮೀನನ್ನು ಕೈಗಾರಿಕೆಗಳಿಗೆ ಕಸಿದುಕೊಂಡ ಕೆಐಎಡಿಬಿ

# ದೇವದಾಸಿಯರ ಬದುಕು ಅತಂತ್ರ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಪುನರ್ವಸತಿ ಕಲ್ಪಿತ ದೇವದಾಸಿಯರಿಗೆ ಎರಡು ದಶಕಗಳ ಹಿಂದೆ ಸರ್ಕಾರವು ತಲಾ ಎರಡು ಎಕರೆ ಜಮೀನು ಮಂಜೂರು ಮಾಡಿತ್ತು. ಕೈಗಾರಿಕೆಗಳ ಸ್ಥಾಪನೆಗೆ ಆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಬಳ್ಳಾರಿ ತಾಲ್ಲೂಕಿನ ಕುಡತಿನಿ, ಹರಗಿನ ಡೋಣಿ, ಸಿದ್ದಮ್ಮನಹಳ್ಳಿ, ಕೊಳಗಲ್ಲು, ಜಾನೆಕುಂಟೆ ಮುಂತಾದ ಗ್ರಾಮಗಳಲ್ಲಿ ಇದು ನಡೆದಿದೆ.

ಆರ್ಸೆಲಾರ್ ಮಿತ್ತಲ್, ಬ್ರಹ್ಮಿಣಿ ಸ್ಟೀಲ್ಸ್ ಮತ್ತು ಎನ್ಎಂಡಿಸಿ ಕಂಪನಿಗಳಿಗೆ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) 12,500 ಎಕರೆ ಕೃಷಿ ಜಮೀನನ್ನು 2009ರಲ್ಲಿ ವಶಪಡಿಸಿಕೊಂಡಿದೆ. ಇದರಲ್ಲಿ ಪುನರ್ವಸತಿಕಲ್ಪಿತ ದೇವದಾಸಿಯರ ಜಮೀನುಗಳೂ ಇವೆ.

‘ಸರ್ಕಾರ ನಮಗೆ ಜಮೀನು ಕೊಟ್ಟು ಕಸಿದುಕೊಂಡಿದೆ. ಕಸಿದುಕೊಂಡ ಜಮೀನಿಗೆ ಪುಡಿಗಾಸು ಪರಿಹಾರ ನೀಡಿದೆ. ದಲ್ಲಾಳಿಗಳೇ ಪರಿಹಾರವನ್ನು ನುಂಗಿ ನೀರು ಕುಡಿದಿದ್ದಾರೆ. ನಮಗೀಗ ದಿಕ್ಕು ತೋಚದಂತಾಗಿದೆ. ಕುಟುಂಬ ಹೇಗೆ ನಿರ್ವಹಿಸಬೇಕು? ಮಕ್ಕಳ ಮದುವೆ ಹೇಗೆ ಮಾಡಬೇಕು? ಜಮೀನಿದ್ದರೆ, ಯಾರಾದರೂ ಮದುವೆಯಾಗಲು ಬರುತ್ತಾರೆ’ ಎಂದು ತಾಯಮ್ಮ (ಹೆಸರು ಬದಲಿಸಲಾಗಿದೆ) ತಿಳಿಸಿದರು.

ದಾವಣಗೆರೆ ವಿಶೇಷ ಭೂಸ್ವಾಧೀನ ಅಧಿಕಾರಿ ನಜ್ಮಾ ಅವರ ಕಚೇರಿಯಲ್ಲಿ ಲಭ್ಯವಿರುವ ಮಾಹಿತಿ ಪ್ರಕಾರ, ‘ಕುಡತಿನಿಯಲ್ಲಿ ಪುನರ್ವಸತಿ ಕಲ್ಪಿತ ದೇವದಾಸಿಯರಿಗೆ ಮಂಜೂರಾದ ಜಮೀನು ಸೇರಿ 56 ಎಕರೆ 89 ಸೆಂಟ್ಸ್ ಕೃಷಿ ಜಮೀನು ವಶಪಡಿಸಿಕೊಳ್ಳಲಾಗಿದೆ. ಪ್ರತಿ ಎಕರೆಗೆ ₹5 ಲಕ್ಷ ಪರಿಹಾರ ನೀಡಲಾಗಿದೆ. 2011ರ ಫೆಬ್ರುವರಿ 14ರಿಂದ ಮಾರ್ಚ್ 19ರವರೆಗೆ ಪರಿಹಾರ ವಿತರಿಸಿ ಕೈ ತೊಳೆದುಕೊಳ್ಳಲಾಗಿದೆ.

‘ಕುಡತಿನಿ ಸುತ್ತಮುತ್ತಲ ಗ್ರಾಮಗಳಲ್ಲಿ 100ಕ್ಕೂ ಹೆಚ್ಚು ಪುನರ್ವಸತಿ ಕಲ್ಪಿತ ದೇವದಾಸಿಯರ ಜಮೀನುಗಳನ್ನು ಉದ್ಯಮಗಳಿಗೆ ಕಸಿದುಕೊಳ್ಳಲಾಗಿದೆ. ‘ಬ್ರಹ್ಮಿಣಿ ಸ್ಟೀಲ್ಸ್’ನವರು ಉತ್ತಮ್ ಗಾಲ್ವಾಗೆ ಜಮೀನು ಮಾರಾಟ ಮಾಡಿದ್ದಾರೆ. ಪುನರ್ವಸತಿಕಲ್ಪಿತ ದೇವದಾಸಿಯರು ಅತಂತ್ರರಾಗಿದ್ದಾರೆ’ ಎಂದು ಕುಡತಿನಿ ಭೂ ಸಂತ್ರಸ್ತ ಹೋರಾಟ ಸಮಿತಿ ಸದಸ್ಯರಾದ ತಿಪ್ಪೇಸ್ವಾಮಿ ಕುಡತಿನಿ ರಾಮು ಆರೋಪಿಸಿದ್ದಾರೆ.

‘ಕೈಗಾರಿಕೆಗಳನ್ನು ಸ್ಥಾಪಿಸಬೇಕು ಇಲ್ಲವೇ ಇಲ್ಲವೆ ಜಮೀನು ಹಿಂದಿರುಗಿಸಬೇಕು. ಸ್ವಾಧೀನಪಡಿಸಿಕೊಂಡ ಜಮೀನಿಗೆ ನ್ಯಾಯಸಮ್ಮತ ಪರಿಹಾರ ಕೊಡಬೇಕು. ಜಮೀನನ್ನು ಕಳೆದುಕೊಂಡ ಕುಟುಂಬದ ಒಬ್ಬ ಸದಸ್ಯರಿಗೆ ಉದ್ಯೋಗ ನೀಡಬೇಕು’ ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

**ಮುಖ್ಯಾಂಶಗಳು**

- ಪುನರ್ವಸತಿ ಕಲ್ಪಿತ ದೇವದಾಸಿಯರ 28 ಕುಟುಂಬಗಳು
- 56 ಎಕರೆ 89 ಸೆಂಟ್ಸ್ ಜಮೀನು ಸ್ವಾಧೀನ
- ₹5 ಲಕ್ಷ ಎಕರೆಗೆ ನೀಡಿದ ಪರಿಹಾರ

ಪರೀಕ್ಷಿಸಲಾಗಿರುವ ಮತ್ತು ಪ್ರಮಾಣೀಕೃತ ವಜ್ರಗಳು । 28 ಹಂತಗಳ ಗುಣಮಟ್ಟ ಪರೀಕ್ಷೆಗಳು । ಪುರಕ ವಿಮೆಗೆ ಒಳಪಡುತ್ತದೆ । ಬೈಬ್ಯಾಕ್ ಗ್ಯಾರಂಟಿ ವಜ್ರದ ಆಭರಣಗಳ ಮೇಲೆ 100% ವಿನಿಮಯ ಮೌಲ್ಯ । ಜೀವನಪರ್ಯಂತ ಮೇಯಿಂಟೆನೆನ್ಸ್ । ಜವಾಬ್ದಾರಿಯುತ ಮೂಲ
ಬೆಂಗಳೂರು: ಎಂ.ಜಿ ರೋಡ್ । ಡಿಕೆನ್‌ಸನ್ ರಸ್ತೆ । ಜಯನಗರ । ರಾಜಾಜಿನಗರ । ಕೋರಮಂಗಲ । ಫಿನಿಕ್ಸ್ ಮಾರ್ಕೆಟ್‌ಸಿಟಿ । ಮಾರತ್ತಹಳ್ಳಿ । ಬನ್ನೇರುಘಟ್ಟ ರಸ್ತೆ । ಕಮ್ಮನಹಳ್ಳಿ । ಮಲ್ಲೇಶ್ವರಂ ಹೆಚ್‌ಎಸ್‌ಆರ್ ಲೇಔಟ್ । ಬನಶಂಕರಿ । ಯಲಹಂಕ । ಫೋರಮ್ ಮಾಲ್, ಪ್ರೆಸ್ಟೀಜ್ ಫಾಲ್ಕನ್ ಸಿಟಿ । ಆರ್‌ಆರ್ ನಗರ । ಮೈಸೂರು । ಮಂಡ್ಯ । ಹಾಸನ । ಚಿಕ್ಕಮಗಳೂರು । ಮಂಗಳೂರು ಉಡುಪಿ । ಬೆಳಗಾವಿ । ಹುಬ್ಬಳ್ಳಿ । ಧಾರವಾಡ । ವಿಜಯಪುರ । ಕಲಬುರಗಿ । ಬೀದರ್ । ಬಳ್ಳಾರಿ । ದಾವಣಗೆರೆ । ಶಿವಮೊಗ್ಗ । ತುಮಕೂರು । ರಾಯಚೂರು.
Call: 1800 572 0916 | BUY ONLINE AT: malabargoldanddiamonds.com
OVER 320 STORES ACROSS 11 COUNTRIES

## ‘ಕಾಂಗ್ರೆಸ್‌ನಿಂದ ಮಾತ್ರ ಜನಪರ ಕಾರ್ಯಕ್ರಮ’

ಪ್ರಜಾವಾಣಿ ವಾರ್ತೆ

**ರಾಜರಾಜೇಶ್ವರಿನಗರ:** ‘ಎಲ್ಲ ವರ್ಗದ ಜನರಿಗೆ ಜನಪರ ಕಾರ್ಯಕ್ರಮ ನೀಡಲು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ’ ಎಂದು ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಂ.ರಾಜ್‌ಕುಮಾರ್ ಹೇಳಿದರು.

ಕಾಂಗ್ರೆಸ್ ಉತ್ಸವ ಮತ್ತು ಕಾಂಗ್ರೆಸ್ ಕಚೇರಿ ಪ್ರಾರಂಭೋತ್ಸವದಲ್ಲಿ ಮಾತನಾಡಿದ ಅವರು, ‘ದೇಶದಲ್ಲಿ ನುಡಿದಂತೆ ನಡೆಯುವ ಸರ್ಕಾರವಿದ್ದರೆ ಅದು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ ಎಂದು ಇಡೀ ಪ್ರಪಂಚವೇ ಹೇಳುತ್ತಿದೆ’ ಎಂದರು.

ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಚ್.ಮಂಜುನಾಥ್ ಮಾತನಾಡಿ, ಉಳುವವನಿಗೆ ಭೂಮಿ, ಉಚಿತ ನಿವೇಶನ, ವಸತಿ, ಭಾಗ್ಯ ಜ್ಯೋತಿ, ಶುದ್ಧ ಕುಡಿಯುವ ನೀರು, ನ್ಯಾಯ ಬೆಲೆ ಅಂಗಡಿಗಳನ್ನು ಪ್ರಾರಂಭಿಸುವ ಮೂಲಕ ಬಡವರ ಸೇವೆ ಮಾಡಿದ ಕೀರ್ತಿ ಕಾಂಗ್ರೆಸ್‌ಗೆ ಸಲ್ಲುತ್ತದೆ’ ಎಂದರು.

ಕೆಪಿಸಿಸಿ ಕಾರ್ಮಿಕ ವಿಭಾಗದ ಅಧ್ಯಕ್ಷ ಪುಟ್ಟಸ್ವಾಮಿಗೌಡ ಮಾತನಾಡಿ, ‘ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸರ್ಕಾರಿ ಉದ್ಯಮಗಳನ್ನು ಖಾಸಗಿಯವರಿಗೆ ಮಾರಾಟ ಮಾಡಿ ನಿರುದ್ಯೋಗ ಸಮಸ್ಯೆ ಸೃಷ್ಟಿಸಿದೆ’ ಎಂದು ದೂರಿದರು.

## ಲೇಖಕಿ ಮಲ್ಲಿಕಾ ಘಂಟಿಗೆ ‘ರಾಷ್ಟ್ರಕವಿ ಕುವೆಂಪು ಪ್ರಶಸ್ತಿ’

**ಬೆಂಗಳೂರು:** ಕುವೆಂಪು ಕಲಾನಿಕೇತನ ಸಂಸ್ಥೆ ನೀಡುವ ‘ರಾಷ್ಟ್ರಕವಿ ಕುವೆಂಪು ಪ್ರಶಸ್ತಿಗೆ’ ಲೇಖಕಿ ಮಲ್ಲಿಕಾ ಘಂಟಿ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ. ಆ.8ರಂದು ಇಲ್ಲಿನ ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಸಂಘದ ಅಧ್ಯಕ್ಷ ಕುವೆಂಪು ಪ್ರಕಾಶ್ ತಿಳಿಸಿದ್ದಾರೆ.


**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,**
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, 2ನೇ ಮಹಡಿ,
ತಾಲ್ಲೂಕು ಆಡಳಿತ ಸೌಧ, ಅಂಬೇಡ್ಕರ್ ನಗರ, ಕೆಜಿಎಫ್ ತಾಲ್ಲೂಕು
ದೂರವಾಣಿ ಸಂಖ್ಯೆ:08152–200300 ಇಮೇಲ್:cdpobtm@gmail.com
ಕ್ರ.ಸಂ.:ಶಿಅಯೋ/ಬೇ/ಕೆ.ಜಿ.ಎಫ್/ಹೊ.ಟೆ/2023–24 ದಿನಾಂಕ:14.07.2023

**ಅಲ್ಪಾವಧಿ ಟೆಂಡರ್ ಪ್ರಕಟಣೆ**

2023–24 ನೇ ಸಾಲಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ಅಧಿಕೃತ ಕೆಲಸಕಾರ್ಯಗಳಿಗೆ ಹೊರಗುತ್ತಿಗೆ ಆಧಾರದ ಮೇರೆಗೆ ಒಂದು ವಾಹನ ಚಾಲಕರೊಂದಿಗೆ.

| ಕ್ರ.ಸಂ | ವಿವರ | ಷರಾ |
|---|---|---|
| 1 | ಟೆಂಡರ್ ಪ್ರಾರಂಭದ ದಿನಾಂಕ | 14.07.2023 |
| 2 | ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ | 28.07.2023 |
| 3 | ತಾಂತ್ರಿಕ ಬಿಡ್ ದಿನಾಂಕ | 31.07.2023 |
| 4 | ಆರ್ಥಿಕ ಬಿಡ್ ದಿನಾಂಕ | 01.08.2023 |
| 5 | ಟೆಂಡರ್ ಮೊತ್ತ | ರೂ.4.20 ಲಕ್ಷ |
| 6 | ಇ.ಎಂ.ಡಿ. | ರೂ.8400/– |

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
ಬೇತಮಂಗಲ/ಕೆ.ಜಿ.ಎಫ್
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:72/ಕೆಎಸ್.ಎಂ.ಸಿ.ಎ/2023–24


# ವರ್ಷಾಂತ್ಯಕ್ಕೆ ಸಂಚರಿಸಲಿದೆ ಚಾಲಕರಹಿತ ಮೆಟ್ರೊ ರೈಲು

• ಬಾಲಕೃಷ್ಣ ಪಿ.ಎಚ್.

**ಬೆಂಗಳೂರು:** ಈ ವರ್ಷದ ಕೊನೆಗೆ ಚಾಲಕರಹಿತ ಮೆಟ್ರೊ ಸಂಚರಿಸುವಂತೆ ಮಾಡಬೇಕು ಎಂದು ಬಿಎಂಆರ್‌ಸಿಎಲ್ ಗುರಿ ಇಟ್ಟುಕೊಂಡಿದೆ. ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡುತ್ತಿದೆ.

ಸಂವಹನ ಆಧಾರಿತ ರೈಲು ನಿಯಂತ್ರಣ ವ್ಯವಸ್ಥೆ (ಸಿಬಿಟಿಸಿ) ಮೂಲಕ ಚಲಿಸುವ ಈ ರೈಲು ದೆಹಲಿಯಲ್ಲಿ ಪ್ರಾರಂಭವಾಗಿತ್ತು. ಆನಂತರ ಮುಂಬೈಯಲ್ಲೂ ಆರಂಭಿಸಲಾಗಿತ್ತು. ಮುಂಬೈ ಮೆಟ್ರೊ ನಿಗಮಕ್ಕೆ ಭಾರತ್ ಅರ್ಥ ಮೂವರ್ಸ್ ಕಂಪನಿಯ ಬೆಂಗಳೂರು ಘಟಕವೇ ಪೂರೈಸುತ್ತಿದೆ. ಚೆನ್ನೈ ಮೆಟ್ರೊ ನಿಗಮವು ಚಾಲಕ ರಹಿತ ಮೆಟ್ರೊ ರೈಲನ್ನು ಮುಂದಿನ ತಿಂಗಳು ಆರಂಭಿಸುತ್ತಿದೆ.

ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತವು (ಬಿಎಂಆರ್‌ಸಿಎಲ್) ನಮ್ಮ ಮೆಟ್ರೊ ಎರಡನೇ ಹಂತದ ಹಳದಿ ಮಾರ್ಗದಲ್ಲಿ ಚಾಲಕ ರಹಿತ ಮೆಟ್ರೊ ಓಡಿಸುವ ಗುರಿಯನ್ನು ಇಟ್ಟುಕೊಂಡಿತ್ತು. ಆರ್.ವಿ. ರಸ್ತೆ–ಬೊಮ್ಮಸಂದ್ರ–ಎಲೆಕ್ಟ್ರಾನಿಕ್ ಸಿಟಿ ನಡುವಿನ ಈ ಮಾರ್ಗ (ಹಳದಿ) ಶೇ 99ರಷ್ಟು ಮುಗಿದಿದ್ದು, ಆಗಸ್ಟ್‌ನಲ್ಲಿ ಮೆಟ್ರೊ ರೈಲು ಸಂಚಾರ ಶುರುವಾಗಲಿದೆ. ಆದರೆ, ಚಾಲಕ ರಹಿತ ಮೆಟ್ರೊ ಬದಲು ಈಗಿರುವ ‘ಡಿಸ್ಟೇನ್ಸ್ ಟು ಗೊ’ (ಡಿಟಿಜಿ) ವ್ಯವಸ್ಥೆಯ ಲೋಕೊ ಪೈಲಟ್ ಮೆಟ್ರೊಗಳೇ ಸಂಚರಿಸಲಿವೆ.

ದೆಹಲಿಯ ಮೊದಲ ಚಾಲಕ ರಹಿತ ಮೆಟ್ರೊ

> **ಸದ್ಯ ಲೋಕೊ ಪೈಲಟ್ ಮೆಟ್ರೊ ರೈಲುಗಳೇ ಸಂಚರಿಸಲಿವೆ. ನಾಲ್ಕೈದು ತಿಂಗಳಲ್ಲಿ ಚಾಲಕ ರಹಿತ ಮೆಟ್ರೊ ರೈಲು ಆರಂಭಿಸಬೇಕು ಎಂಬ ಯೋಜನೆ ಇದೆ**
> **ಯಶವಂತ್ ಚವಾಣ್,** ಮೆಟ್ರೊ ಸಾರ್ವಜನಿಕ ಸಂಪರ್ಕಾಧಿಕಾರಿ

‘ನಮ್ಮ ಮೆಟ್ರೊದ ಹೊಸ ಮಾರ್ಗಗಳಲ್ಲಿ ಚಾಲಕ ರಹಿತ ಮೆಟ್ರೊ ಸಂಚರಿಸುವಂತೆ ಮಾಡಬೇಕು ಎಂಬ ಯೋಜನೆ ಇದೆ. ಆದರೆ, ಇನ್ನೂ ಪರಿಶೀಲನೆಯಲ್ಲಿದೆ. ಚಾಲಕ ರಹಿತ ಮೆಟ್ರೊ ಖರೀದಿ ಪ್ರಕ್ರಿಯೆ ನಡೆಯಬೇಕು. ಬಳಿಕ ಸಂಚರಿಸಲಿವೆ. ಅದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ’ ಎಂದು ಮೆಟ್ರೊ ಸಾರ್ವಜನಿಕ ಸಂಪರ್ಕಾಧಿಕಾರಿ ಯಶವಂತ್ ಚವಾಣ್ ಮಾಹಿತಿ ನೀಡಿದ್ದಾರೆ.

ಚಾಲಕ ರಹಿತ ಮೆಟ್ರೊ ಸಂಚಾರ ಆರಂಭವಾದ ಮೇಲೆ ಮೂರು ವರ್ಷಗಳ ಕಾಲ ಅಟೆಂಡರ್ ಇರುತ್ತಾರೆ. ತುರ್ತು ಸಂದರ್ಭಗಳಲ್ಲಿ ಅವರು ಕಾರ್ಯನಿರ್ವಹಿಸುತ್ತಾರೆ. ಯಾವುದೇ ತಾಂತ್ರಿಕ ತೊಂದರೆಗಳು ಇಲ್ಲ ಎಂಬುದು ಖಚಿತವಾದ ಮೇಲೆ ಅಟೆಂಡರ್ ಕೂಡ ಇರುವುದಿಲ್ಲ ಎಂದು ಮೆಟ್ರೊ ಅಧಿಕಾರಿಗಳು ತಿಳಿಸಿದ್ದಾರೆ.

ಹಳದಿ ಮಾರ್ಗದಲ್ಲಿ ಒಮ್ಮೆ ಆರಂಭಗೊಂಡರೆ ಮುಂದೆ ನೀಲಿ ಮಾರ್ಗಕ್ಕೂ ವಿಸ್ತರಣೆಗೊಳ್ಳಲಿದೆ. ಈಗಿರುವ ನೇರಳೆ ಮತ್ತು ಹಸಿರು ಮಾರ್ಗದಲ್ಲಿಯೂ ಈ ವ್ಯವಸ್ಥೆ ಅಳವಡಿಸಲು ಬಿಎಂಆರ್‌ಸಿಎಲ್ ಚಿಂತನೆ ನಡೆಸುತ್ತಿದೆ.

### ಕೃಷ್ಣರಾಜ ಒಡೆಯರ್ ಅವರ ಪುತ್ಥಳಿ ಅನಾವರಣ

## ‘ಕನ್ನಡಿಗರ ಅಸ್ಮಿತೆ ಕಾಪಾಡಿದ್ದ ನಾಲ್ವಡಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಬ್ರಿಟಿಷರೊಂದಿಗೆ ಮೈಸೂರು ಅರಸರ ಸಂಬಂಧ ಚೆನ್ನಾಗಿತ್ತು ಎಂದು ಬಹುತೇಕರು ತಿಳಿದುಕೊಂಡಿದ್ದಾರೆ. ಆದರೆ, ಸಂಘರ್ಷ ನಿರಂತರವಾಗಿ ಇತ್ತು. ಮುಮ್ಮಡಿ ಕೃಷ್ಣರಾಜ ಒಡೆಯರು ಅನೇಕ ಸಂಘರ್ಷಗಳನ್ನು ಎದುರಿಸಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಚಾಕಚಕ್ಯತೆಯಿಂದ ಎದುರಿಸಿ ಕನ್ನಡಿಗರ ಅಸ್ಮಿತೆ ಉಳಿಸಿದರು’ ಎಂದು ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಲ್ಲಿ ಶುಕ್ರವಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿಯನ್ನು ಅನಾವರಣ ಮಾಡಿ ಅವರು ಮಾತನಾಡಿದರು.

‘ಬ್ರಿಟಿಷರ ಒಡೆದು ಆಳುವ ನೀತಿಯನ್ನು ಸಕಾರಾತ್ಮಕವಾಗಿ ಮೆಟ್ಟಿ ನಿಲ್ಲುವ ದೃಷ್ಟಿಯಿಂದ ಕನ್ನಡಿಗರನ್ನು ಒಂದುಗೂಡಿಸಲು ಕನ್ನಡ ಸಾಹಿತ್ಯ ಪರಿಷತ್ತು ಆರಂಭಿಸಿರುವುದು ಅವರ ದೂರದೃಷ್ಟಿಯ ದ್ಯೋತಕ’ ಎಂದು ಬಣ್ಣಿಸಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ಶುಕ್ರವಾರ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಯನ್ನು ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅನಾವರಣಗೊಳಿಸಿದರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಮತ್ತು ವಿಶ್ರಾಂತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ್ ಇದ್ದಾರೆ —ಪ್ರಜಾವಾಣಿ ಚಿತ್ರ

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಮಾತನಾಡಿ, ‘ನಾಲ್ವಡಿ ಕೃಷ್ಣರಾಜ ಒಡೆಯರ್ ಪುತ್ಥಳಿಯು ಪರಿಷತ್ತಿನ ಮೊದಲ ಮಹಡಿಯಲ್ಲಿತ್ತು. ಪರಿಷತ್ತಿನ ಅಧ್ಯಕ್ಷರನ್ನು ನೋಡಲು ಬರುವವರು ಮಾತ್ರ ಮಹಾರಾಜರ ಪುತ್ಥಳಿಯ ದರ್ಶನವನ್ನು ಪಡೆಯಬಹುದಿತ್ತು. ಈಗ ಪುತ್ಥಳಿಯನ್ನು ಪರಿಷತ್ತಿನ ಆವರಣದಲ್ಲಿ ಸ್ಥಾಪನೆ ಮಾಡಿ ಜನ ಸಾಮಾನ್ಯರೂ ನಾಲ್ವಡಿ ಅವರಿಗೆ ಗೌರವ ಸಲ್ಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ’ ಎಂದು ತಿಳಿಸಿದರು.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಮಾತನಾಡಿ, ‘ಪುತ್ಥಳಿಯ ಜೊತೆಗೆ ಮಹಾಪುರುಷರ ಬದುಕು, ಆದರ್ಶ ನೆನಪಾಗಬೇಕು. ನಾಲ್ವಡಿ ಕೃಷ್ಣರಾಜ ಒಡೆಯರ್ ಪುತ್ಥಳಿಯ ಮೂಲಕ ಅವರನ್ನೇ ಕಂಡಂತಾಗಬೇಕು. ನಾಲ್ವಡಿಯವರು ದಾರಿದೀಪವನ್ನು ಸ್ಥಾಪಿಸಿದ್ದರು ಎಂದು ಎಲ್ಲರೂ ನೆನಪು ಮಾಡಿಕೊಳ್ಳುತ್ತಾರೆ. ವಾಸ್ತವವೆಂದರೆ ಅವರು ನಾಡಿನ ಜನರ ಬದುಕಿಗೇ ದಾರಿದೀಪವಾಗಿದ್ದವರು’ ಎಂದು ಹೇಳಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಧನೆಯನ್ನು ಬಿಂಬಿಸುವ ಕವಿತೆಯನ್ನು ಕವಿ ದೊಡ್ಡರಂಗೇಗೌಡ ಓದಿದರು.

### ಸುದ್ದಿ 2 ನಿಮಿಷ

## ಎಫ್‌ಎಂ ರೈನ್‌ಬೋ ಪ್ರಸಾರಕ್ಕೆ ಅಡ್ಡಿಪಡಿಸದಂತೆ ಮನವಿ

**ಬೆಂಗಳೂರು:** ಎಫ್‌ಎಂ ರೈನ್‌ಬೋ (101.3) ಕನ್ನಡ ಕಾಮನಬಿಲ್ಲು ಚಾನೆಲ್ ಪ್ರಸಾರಕ್ಕೆ ಅಡ್ಡಿಪಡಿಸದಂತೆ ಕೇಂದ್ರ ಸರ್ಕಾರಕ್ಕೆ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಮನವಿ ಮಾಡಿದ್ದಾರೆ.

ಈ ಬಗ್ಗೆ ಅವರು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಅವರಿಗೆ ಪತ್ರ ಬರೆದಿದ್ದಾರೆ. ಎಫ್‌ಎಂ ರೈನ್‌ಬೋ ಚಾನೆಲ್‌ಗೆ ಹೆಚ್ಚಿನ ಕೇಳುಗರಿಲ್ಲ ಎಂಬ ಕಾರಣ ನೀಡಿ, ಮೀಡಿಯಂ ವೇವ್ ಜತೆಗೆ ವಿಲೀನ ಮಾಡಲು ಪ್ರಸಾರ ಭಾರತಿ ಮುಂದಾಗಿದೆ.

‘ರಾಜ್ಯದಲ್ಲಿ ಲಕ್ಷಾಂತರ ಶ್ರೋತೃಗಳನ್ನು ಹೊಂದಿರುವ ಎಫ್‌ಎಂ ರೈನ್‌ಬೋ ಚಾನೆಲ್ ಅನ್ನು ಪ್ರಸಾರ ಭಾರತಿ ಮುಚ್ಚಲು ಮುಂದಾಗಿದೆ. ಇದು ಕನ್ನಡಿಗರಿಗೆ ಆಘಾತವನ್ನುಂಟು ಮಾಡಿದೆ. ಈ ಚಾನೆಲ್ ರಾಜ್ಯದಲ್ಲಿ ಮಾತ್ರವಲ್ಲದೆ, ಪ್ರಪಂಚದಾದ್ಯಂತ 30 ಲಕ್ಷ ಕೇಳುಗರನ್ನು ಹೊಂದಿದೆ. ವಿಶೇಷವಾಗಿ ಬೆಂಗಳೂರಿಗರಿಗೆ ಈ ಚಾನಲ್ ಮೇಲೆ ಭಾವನಾತ್ಮಕ ಸಂಬಂಧವಿದೆ. ಹಿಂದಿ ಚಾನೆಲ್‌ಗಳನ್ನು ಪ್ರೋತ್ಸಾಹಿಸಿ, ಪ್ರಾದೇಶಿಕ ಭಾಷೆಗಳ ಚಾನೆಲ್‌ಗಳನ್ನು ಕಡೆಗಣಿಸುತ್ತಿರುವುದು ಬೇಸರವನ್ನುಂಟು ಮಾಡಿದೆ’ ಎಂದು ಹೇಳಿದ್ದಾರೆ.

‘ಎಫ್‌ಎಂ ರೈನ್‌ಬೋ (101.3) ಕನ್ನಡ ಕಾಮನಬಿಲ್ಲು ಚಾನೆಲ್ ಮುಚ್ಚಲು ಅವಕಾಶ ನೀಡಬಾರದು. ಈ ಬಗ್ಗೆ ಕ್ರಮವಹಿಸಬೇಕು’ ಎಂದು ಮನವಿ ಮಾಡಿಕೊಂಡಿದ್ದಾರೆ.

## ಅಮರ್ತ್ಯ ಸೇನ್ ಪರ ರಾಷ್ಟ್ರಪತಿಗೆ ಪತ್ರ: ವಿಶ್ವಭಾರತಿ ವಿ.ವಿ. ಆಶ್ಚರ್ಯ

**ಕೋಲ್ಕತ್ತ (ಪಿಟಿಐ):** ಆರ್ಥಿಕ ತಜ್ಞ ಅಮರ್ತ್ಯ ಸೇನ್ ಅವರ ನಿವಾಸ ನಿರ್ಮಾಣಕ್ಕೆ ವಿಶ್ವವಿದ್ಯಾಲಯದ ಭೂಮಿ ಒತ್ತುವರಿ ಆಗಿದೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸುಮಾರು 300 ಮಂದಿ ಪ್ರಮುಖರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪತ್ರ ಬರೆದಿರುವುದಕ್ಕೆ ವಿಶ್ವಭಾರತಿ ವಿಶ್ವವಿದ್ಯಾಲಯ ಆಶ್ಚರ್ಯ ವ್ಯಕ್ತಪಡಿಸಿದೆ.

ಈ ಪ್ರಕರಣ ಕುರಿತು ನ್ಯಾಯಾಲಯ ವಿಚಾರಣೆ ನಡೆಸಿದ ದಿನವೇ ಈ ಪತ್ರ ಬರೆಯಲಾಗಿದೆ. ರಾಷ್ಟ್ರಪತಿ ಅವರು ವಿಶ್ವವಿದ್ಯಾಲಯದ ಅತಿಥಿ ಗಣ್ಯರಾಗಿದ್ದಾರೆ. ಈ ವಿಷಯವನ್ನು ಮುಂದಿಟ್ಟುಕೊಂಡು ವಿಶ್ವವಿದ್ಯಾಲಯವು ಸೇನ್ ಅವರನ್ನು ಗುರಿ ಮಾಡುತ್ತಿರುವುದಕ್ಕೆ ಪ್ರಮುಖರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ನೊಬೆಲ್ ಪ್ರಶಸ್ತಿ ಪುರಸ್ಕೃತ ಅಮೆರಿಕದ ಆರ್ಥಿಕ ತಜ್ಞ ಜಾರ್ಜ್ ಎ ಕೆರ್ಲಾಫ್, ಅರ್ಥಶಾಸ್ತ್ರಜ್ಞ ಅಮಿಯಾ ಬಾಗ್ಚಿ ಪತ್ರಕ್ಕೆ ಸಹಿ ಹಾಕಿರುವ 300 ಪ್ರಮುಖರಲ್ಲಿ ಸೇರಿದ್ದಾರೆ.

ಅಮರ್ತ್ಯ ಸೇನ್ ಅವರ ನಿವಾಸವನ್ನು ಇದೇ ವರ್ಷದ ಮಾರ್ಚ್ ತಿಂಗಳಲ್ಲಿ ಸುಮಾರು 1.38 ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗಿದೆ. ಈ ಪೈಕಿ ವಿಶ್ವವಿದ್ಯಾಲಯದ 0.13 ಎಕರೆ ಭೂಮಿ ಸೇರಿದ್ದು, ಇದು ಒತ್ತುವರಿಯಾಗಿದೆ ಎಂಬುದು ಕುಲಪತಿ ಅವರ ವಾದ. ಈ ಬಗ್ಗೆ ಅವರು ಕೋರ್ಟ್ ಮೆಟ್ಟಿಲೇರಿದ್ದು, ಮುಂದಿನ ವಿಚಾರಣೆ ಜುಲೈ 28ರಂದು ನಡೆಯಲಿದೆ.

‘ಪ್ರೊ.ಸೇನ್ ಅವರ ಬಗ್ಗೆ ನಮಗೆ ಗೌರವವಿದೆ. ಆದರೆ, ಈ ವಿಷಯ ಕುರಿತು ಕಾನೂನು ಹೋರಾಟ ನಡೆಸಲು ವಿಶ್ವವಿದ್ಯಾಲಯ ಬದ್ಧವಾಗಿದೆ’ ಎಂದು ವಿಶ್ವಭಾರತಿಯ ವಕ್ತಾರರಾದ ಮಹುಅ ಬಂಡೋಪಾಧ್ಯಾಯ ಸ್ಪಷ್ಟಪಡಿಸಿದ್ದಾರೆ.

ಫ್ರೀ
ಕಂಪ್ಯೂಟರ್
ಟ್ರೈನಿಂಗ್
ಕ್ಯಾಂಪ್
ಚೆನ್ನಾಗಿ ಕಾಣಿಸಿಕೊಳ್ಳಿ
VISHAL MEGA MART®
ಸ್ಯಾಟಿನ್ ಶರ್ಟ್
₹499
ಬೆಲ್ಟೆಡ್ ಟ್ರೌಸರ್
₹699
***** ಬಟ್ಟೆಗಳ ಅತ್ಯುತ್ತಮ ಗುಣಮಟ್ಟ ಅದು ನಿಮ್ಮನ್ನು ಆಶ್ಚರ್ಯ ಗೊಳಿಸುತ್ತದೆ *****
ಕುರ್ತಾ
₹899+
2 ಖರೀದಿಸಿ ಪಡೆಯಿರಿ
₹400 ರಿಯಾಯಿತಿ
ಶರ್ಟ್
₹499
2 ಖರೀದಿಸಿ ಪಡೆಯಿರಿ
₹100 ರಿಯಾಯಿತಿ
ಜೀನ್ಸ್
₹799
2 ಖರೀದಿಸಿ ಪಡೆಯಿರಿ
₹400 ರಿಯಾಯಿತಿ
ಪ್ರಿಂಟೆಡ್ ಟೀ–ಶರ್ಟ್
₹299
ಪ್ರಿಂಟೆಡ್ ಟೀ–ಶರ್ಟ್
₹199+
3 ಖರೀದಿಸಿ
1 ಉಚಿತವಾಗಿ ಪಡೆಯಿರಿ
ಪ್ರಿಂಟೆಡ್ ಶರ್ಟ್
₹499
1 ಖರೀದಿಸಿ ಪಡೆಯಿರಿ
1 ಉಚಿತ
ಜೀನ್ಸ್
₹799
1 ಖರೀದಿಸಿ ಪಡೆಯಿರಿ
1 ಉಚಿತ

ಪ್ರಜಾವಾಣಿ

# ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

## REAL ESTATE SELLING

### Agricultural Land

#### Devanahalli

**4 ACRE** AGRICULTURE LAND FOR SALE AT DEVANAHALLI PRICE 10 Cr FOR DETAILS CONTACT: 9663192081

### Commerical

#### HBR Layout

**PREMIUM BDA** Commercial sites for sale HBR Layout 80 Feet Road (Near BDA Complex) Contact 9844039482

#### J P Nagar

**J.P.NAGAR RING** Road 60x90 & 40x60 North Commercial, Jayanagar 50x75 South, excellent locations Suraj Realtors -9845232711.

#### Multiple Locations

**WANTED 4000-20000SFT** Land Jayanagar, Basavangudi, Chamrajpet, J.P.Nagar, CBD Surrounding area. Purchase & JV, Verna Developers, MG Road, Bangalore. 9353128035/ 9620253180

**ANJANAPURA-ARKAVATHI,** Banashankari 6th Stage, Vishweswaraiah Layout, Kempegowda Layout. Any BDA Sites Wanted Contact: SAPTHAGIRI. 9900268073, 9448068073.

#### Vishweshwariah Layout

**BDA-SITES WANTED** Kempegowda Layout Vishweshwaraiah Layout Other BDA Approved Layouts 30x40, 40x60, 50x80 Immediate Settlement Call:8660220048 7676900174

**BUYING/ SELLING** 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

#### Hosur Road

**"SURYA-CITY KHB** Wanted 20x30,30x40, 40x60,50x80 Any dimensions Site-for Immediate Settlement. Genuine Sellers Contact. "Krishna"- 9886294610"

## REAL ESTATE BUYING

### Commerical

#### General

**WANTED TENANTED** Commercial Building in Bangalore for Purchase Budget 10 Crore -25 Crore. "Myriad Solutions"- 9886736785

### Flat

#### Multiple Locations

**WANTED 2/** 3 BHK resale flat purchase BTM, J.P.Nagar, Jayanagar, Kanakapura/ Bannerghatta Road. Contact: 9623440068

### Sites

#### Anjanapura

**WANTED BDA** Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. genuine Sellers Contact: 9902038118, 9449060605

**BDA-SITES WANTED** For-Immediate Settlement Anjanapura Banashankari 6th Stage J.P.Nagar 8th 9th Phase 20x30, 30x40,40x60,50x80 Call:9945610779

**WANTED BDA** SITES ANJANAPURA, JP-NAGAR 8TH,9TH PHASE ROYAL PARK, COUNTY BSK 6TH STAGE: 9880776950

## RENTAL PROPERTIES

### Accommodation Available

#### Commercial

**COMMERCIAL SPACE** FOR RENT 2000 SQ.FT, 1st Floor, OFFICE/ BUSINESS AVAILABLE ON, 80 feet Road, HBR Layout, 2nd BLOCK. CONTACT: 9449077530

## BUILDERS ESSENTIAL

### Water Proofing

**'WE FIX'** LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology- 9880916988


DH DECCAN HERALD ಪ್ರಜಾವಾಣಿ

BOOK YOUR PROPERTY TEXT AD ON SATURDAY & SUNDAY

DH ALL + PRAJAVANI BENGALURU CITY

FOR JUST ₹ 2250/-*

*conditions apply

For more information contact:

9845114560 | 9901641752
9731810277 | 9886213331
080 - 45557163 | 45557164



WEEKEND CORNER

ನ್ಯಾಷನಲ್ ಸಿಲ್ಕ್ ಎಕ್ಸ್‌ಪೋ

ಪ್ರದರ್ಶನ ಹಾಗೂ ಮಾರಾಟ

ಕೊನೆಯ 4 ದಿನಗಳು

ಶುಭ್ ಕನ್ವೆನ್ಷನ್ ಸೆಂಟರ್

(ಹಿಂದಿನ ಇಲಾನ್ ಕನ್ವೆನ್ಷನ್ ಸೆಂಟರ್)
7ನೇ ಹಂತ, ಕೊತ್ತನೂರು ದಿಣ್ಣೆ ಮುಖ್ಯರಸ್ತೆ, ಬ್ರಿಗೇಡ್ ಮಿಲೆನಿಯಂ ಎದುರು, ಜೆಪಿ ನಗರ, ಬೆಂಗಳೂರು

1,50,000 ಕ್ಕೂ ಹೆಚ್ಚು ಇತ್ತೀಚಿನ ವೈವಿಧ್ಯಮಯ ವಸ್ತ್ರಗಳನ್ನು ಆಯ್ಕೆ ಮಾಡಿ ಭಾರತದಾದ್ಯಂತ ನೇರ ತಯಾರಕರು ಮತ್ತು ಕೈಯಿಂದ ತಯಾರಿಸಿದ ಹೊಸ ವಿನ್ಯಾಸಗಳೊಂದಿಗೆ ಪ್ರಮಾಣೀಕೃತ ನೈಜ ರೇಷ್ಮೆ ಉತ್ಪನ್ನಗಳು ಒಂದೇ ಸೂರಿನಡಿ

ಭಾಗವಹಿಸುವ ರಾಜ್ಯಗಳು

ಬಿಹಾರ್, ಅಸ್ಸಾಂ, ಉತ್ತರ ಪ್ರದೇಶ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ರಾಜಸ್ಥಾನ, ಕರ್ನಾಟಕ, ತಮಿಳುನಾಡು, ಪಂಜಾಬ್, ತೆಲಂಗಾಣ, ಒಡಿಸ್ಸಾ, ಛತ್ತೀಸ್‌ಗಢ್, ಜಮ್ಮು & ಕಾಶ್ಮೀರ್, ಆಂಧ್ರಪ್ರದೇಶ್ & ಇತರೆ ರಾಜ್ಯಗಳು

M: 9441987009 | ALL DEBIT & CREDIT CARDS ACCEPTED | ENTRY FREE



First Time in KR PURAM Under Water Aquarium Tunnel

ರಾಷ್ಟ್ರೀಯ ಗ್ರಾಹಕರ ಮೇಳ NATIONAL CONSUMER FAIR

ITI Ground, Next to Hanging Bridge, KR Puram, Bengaluru

Complete Family Shopping & Amusement Exhibition

VISIT TODAY | Daily : 4pm - 9pm | Call : 8904727123


## JOB OPPORTUNITIES

### Teachers/ Professors

THE MUSLIM ORPHANAGE
No.43, Dickenson Road, Bengaluru-560 042

WANTED

Applications are invited from suitable Female Candidates for the following vacancies in centrally located KNOWLEDGE WOODS PUBLIC SCHOOL (High School and Nursery School) managed by the Muslim Orphanage, Bengaluru.

1. ENGLISH TEACHER....B.A., B.Ed (English) 1 No.
2. KANNADA TEACHER....B.A., B.Ed.(Kannada) 1 No.
3. SOCIAL SCIENCE TEACHER...B.A., B.Ed 1 No.
4. SCIENCE TEACHER...B.Sc.(CBZ), B.ED. OR M.SC. 1 No.
5. P.T. TEACHER..... B. P.Ed. 1 No.
6. Nursery Trained Teachers 2 Nos.
7. Wardens....Boys/Girls 3 Nos.

Interested Candidates may submit their Resume or mail the soft copy within 29/07/2023 to the address mentioned herein below The aforesaid teaching faculty shall be well-versed and possess a minimum of three years experience in their respective subjects. Salary and other benefits will be given depending upon their qualification/ experience.

The Hon. Secretary,
The Muslim Orphanage,
No.43, Dickenson Road, Bengaluru-560 042

Phone: 080-41264030/9986019296
Email-ID:themuslimorphanage1892@gmail.com

### Hotel

**REQUIRED**

Qualified Executives, House Keeping Staff, Sales/Marketing, Financial / Accounting for a reputed Hotel at Gardeenia Comforts, Electronic-city, Bangalore. Interested please send resume to mdgardeeniacomfortess @gmail.com

### General

**WANTED** GRAPHIC DESIGNER Computer Typt Male & Female Supervisor @ Jayanagar 9th Block Mob: 9845934508

**WORK FROM** home. (F) email Resume to info@primefincon.com

MORE Classifieds IN SUPPLEMENT

## BUSINESS

### Business Offers

#### Finance

**NRI'S INVESTMENT** And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

#### General

**SWIPE CREDIT** Card For Immediate Cash Purchase at Jayanagar with Reasonable Service Charge Contact:- 6364115555

### Business to Business

#### Business

**BEST INVESTMENT** For Petrol Bunk Lease Cum Sale or Partnership Kanakapura National Highway 209 Built`to`shuit Restaurant 35000sft Call:9035963540

## PERSONAL

### Change of Name

**I, BEENA** JAYACHANDRA, residing at No: 29, Eden House, Shivanna Kuntamma Temple Road, Opp Laxmi Narayana Timber, Nagondanahalli, Whitefield, Bangalore -560066 have changed my name to BEENA JOHN CHRISTOPHER vide affidavit dated 21/07/2023 before notary Veena J. Bangalore.

**CHANGE OF NAME**

I, **JENIFER,** R/at. # 27, 1st Square, Murphy Town, Ulsoor, Bengaluru-560008 have changed my name to **JENNIFER XAVIER** vide affidavit dt. 20/07/2023, before Notary B.V.Nagabhushana, Bengaluru. Henceforth, I shall be called **JENNIFER XAVIER** only

**MANI BEN,** mother/o 6498128X, NK/ASH, NAKUM HAREEBHAI MOHAN, Vill-Kenedi, Kalyanpur, Jamnagar, Gujarat, changed name MANI BEN to NAKUM MANIBEN MOHANBHAI, 21/07/2023, Notary K.V. Mani, Bangalore

**MOHAN, FATHER/O** 6498128X, NK/ASH, NAKUM HAREEBHAI MOHAN, Vill-Kenedi, Kalyanpur, Jamnagar, Gujarat, changed name MOHAN to NAKUM MOHANBHAI CHHAGANBHAI, 21/07/2023, Notary K.V. Mani, Bangalore

**MOHAMED HAFIZULLA** S/O Mohammed Shafi Changed My Name to Mohammed Hafizulla S/O Mohammed Shafi.

## ಸುಧಾ, ಮಯೂರ ಓದಿರಿ

# ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್.,

**ನೋಂದಾಯಿತ ಕಛೇರಿ** : ಸಂ. 19, 2ನೇ ಮುಖ್ಯ ರಸ್ತೆ, ಪೀಣ್ಯ 1ನೇ ಸ್ಟೇಜ್, ಫೇಸ್-1, ಪೀಣ್ಯ, ಬೆಂಗಳೂರು – 560058. **ದೂರವಾಣಿ** : 080 28397256; **ಫ್ಯಾಕ್ಸ್** : 080 28396727;
**ವೆಬ್‌ಸೈಟ್** : www.kirloskarelectric.com ಇ-ಮೇಲ್ : investors@kirloskarelectric.com
**CIN** : L31100KA1946PLC000415

## 76ನೇ ವಾರ್ಷಿಕ ಮಹಾಸಭೆಯ ಉದ್ದೇಶಕ್ಕಾಗಿ, ಪುಸ್ತಕ ಮುಚ್ಚುವಿಕೆ ಮತ್ತು ಇ-ಮತದಾನ, ಇತ್ಯಾದಿಗಳ ಮಾಹಿತಿ ಮತ್ತು ಸೂಚನೆ

ಈ ಮೂಲಕ ಸೂಚನೆ ನೀಡುವುದೇನೆಂದರೆ, ಕಾರ್ಪೊರೇಟ್ ವ್ಯವಹಾರಗಳ ಮಂತ್ರಾಲಯ ("ಎಂ.ಸಿ.ಎ") ಹಾಗೂ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (**"ಸೆಬಿ"**) ದ ಸಾಮಾನ್ಯ ಸುತ್ತೋಲೆಗಳ ಎಲ್ಲಾ ಕಾಯಿದೆ ಕಟ್ಟಳೆಗಳನ್ವಯ ಕಂಪನಿ ಕಾಯ್ದೆ 2013ರ (ಕಾಯ್ದೆ) ಅನ್ವಯವಾಗುವ ಎಲ್ಲಾ ನಿಯಮಗಳೂ ಮತ್ತು ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳು ಮತ್ತು **ಸೆಬಿ** (ಪಟ್ಟಿಮಾಡುವ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು 2015ರ ಅನುಸಾರವಾಗಿ ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್ (**"ಕಂಪನಿ"**) ಯ 76ನೇ ವಾರ್ಷಿಕ ಮಹಾಸಭೆಯು (**"ಎಜಿಎಂ"**) ಸೂಚನೆಯಲ್ಲಿ ಹೇಳಲಾದ ವ್ಯವಹಾರಗಳನ್ನು ನಿರ್ವಹಿಸಲು ಸೋಮವಾರ, ಆಗಸ್ಟ್ 14, 2023ರಂದು ಬೆಳಿಗ್ಗೆ 11.00ಗಂಟೆಗೆ ವಿಡಿಯೋ ಕಾನ್ಫರೆನ್ಸ್ (**"ವಿಸಿ"**) / ಇತರೆ ಆಡಿಯೋ ವಿಷುಯಲ್ ಮೀನ್ಸ್ (**"ಒಎವಿಎಂ"**) ಮೂಲಕ ನಡೆಯಲಿದೆ.

ಎಂಸಿಎ ಮತ್ತು ಸೆಬಿ ಸುತ್ತೋಲೆಗಳ ಅನುಸಾರ ಹಣಕಾಸು ವರ್ಷ 2022-23ರ 76ನೇ ವಾರ್ಷಿಕ ವರದಿಯೊಂದಿಗಿರುವ ಎಜಿಎಂ ಸೂಚನಾ ಪತ್ರವನ್ನು ಕಂಪನಿ / ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ / ಡೆಪಾಸಿಟರೀಸ್ / ಡೆಪಾಸಿಟರಿ ಪಾರ್ಟಿಸಿಪೆಂಟ್‌ರಲ್ಲಿ ನೋಂದಾಯಿತವಾದ ಸದಸ್ಯರ ಇ-ಮೇಲ್ ವಿಳಾಸಗಳಿಗೆ ಕಳುಹಿಸಲಾಗಿದೆ. ಎಜಿಎಂ ಸೂಚನೆ ಮತ್ತು ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್ www.kirloskarelectric.com ನಲ್ಲಿ ಲಭ್ಯವಿದ್ದು, ಸ್ಟಾಕ್ ಎಕ್ಸ್‌ಚೇಂಜ್ ಅಂದರೆ, ಕ್ರಮವಾಗಿ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯ ಲಿಮಿಟೆಡ್ ವೆಬ್‌ಸೈಟ್ www.bseindia.com ಮತ್ತು www.nseindia.com ನಿಂದ ಹಾಗೂ ಸಿಡಿಎಸ್‌ಎಲ್ ನ ವೆಬ್‌ಸೈಟ್ www.evotingindia.com ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಮತ್ತು ಪ್ರಶ್ನೆಗಳನ್ನು ಸಭೆಯ ಅವಧಿಯಲ್ಲಿ ವ್ಯಕ್ತಪಡಿಸಲು ಇಚ್ಛಿಸುವ ಸದಸ್ಯರು ಸಭೆಯ 7 ದಿನಗಳ ಮುಂಚೆ ಅವರ ಹೆಸರು, ಡಿಮ್ಯಾಟ್ ಅಕೌಂಟ್ ಸಂಖ್ಯೆ / ಫೋಲಿಯೋ ಸಂಖ್ಯೆ, ಇ-ಮೇಲ್ ಐಡಿ, ಮೊಬೈಲ್ ಸಂಖ್ಯೆಗಳನ್ನು ನಮೂದಿಸಿ investors@kirloskarelectric.com ಗೆ ಕಳುಹಿಸಬೇಕು. ಯಾವ ಸದಸ್ಯರು ಸ್ಪೀಕರ್ ಆಗಿ ಅವರ ಹೆಸರನ್ನು ನೋಂದಾಯಿಸಿಕೊಂಡಿರುತ್ತಾರೋ ಅಂತಹ ಷೇರುದಾರರಿಗೆ ಮಾತ್ರ ಪ್ರಶ್ನೆಗಳನ್ನು ಸಭೆಯಲ್ಲಿ ಕೇಳುವುದಕ್ಕಾಗಿ ಅನುಮತಿಸಲಾಗುವುದು. ಎಜಿಎಂನ ಉದ್ದೇಶಕ್ಕಾಗಿ, ಸದಸ್ಯರ ರಿಜಿಸ್ಟರ್ ಮತ್ತು ಷೇರು ವರ್ಗಾವಣೆ ಪುಸ್ತಕಗಳನ್ನು ಸೋಮವಾರ, ಆಗಸ್ಟ್ 07, 2023 ರಿಂದ ಸೋಮವಾರ, ಆಗಸ್ಟ್ 14, 2023 ರವರೆಗೆ (ಎರಡೂ ದಿನಗಳು ಸೇರಿದಂತೆ) ಮುಚ್ಚಲಾಗುತ್ತದೆ.

2013ರ ಕಂಪನಿಯ ಕಾಯಿದೆಯ ಕಲಂ 108ರ ಷರತ್ತುಗಳಂತೆ ಕಂಪನಿಯು ತನ್ನ ಸದಸ್ಯರುಗಳಿಗೆ ದೂರದ ಇ-ಮತದಾನವನ್ನು ಒದಗಿಸಿದ್ದು ಸದಸ್ಯರು ವಿದ್ಯುನ್ಮಾನದ ಮೂಲಕ ಇ-ಮತಗಳನ್ನು ಚಲಾಯಿಸುವಂತಾಗಲು ದೂರದ ಇ-ಮತದಾನ ಸೇವೆಗಳನ್ನು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ ಸಿಡಿಎಸ್‌ಎಲ್ ನಿಂದ ಒದಗಿಸಲಾಗುವುದು. ಈ ಉದ್ದೇಶಕ್ಕಾಗಿ ಅಂತಿಮ (ಕಟ್-ಆಫ್), ಶನಿವಾರ, ದಿನಾಂಕ ಆಗಸ್ಟ್ 05, 2023 ಆಗಿರುತ್ತದೆ. ಕಟ್-ಆಫ್ ದಿನಾಂಕದಂದು ಸದಸ್ಯರ ರಿಜಿಸ್ಟರ್‌ನಲ್ಲಿ ಹೆಸರು ಇರುವ ಸದಸ್ಯರು ಅಥವಾ ಲಾಭದಾಯಕ ಮಾಲೀಕರ ರೆಜಿಸ್ಟರ್‌ನಲ್ಲಿರುವ ಸದಸ್ಯರು ಇ-ಮತದಾನದ ಸೇವೆಗಳನ್ನು ಪಡೆಯಲು ಅರ್ಹರಾಗುತ್ತಾರೆ. ಇ-ಮತದಾನದ ಅವಧಿಯು ಗುರುವಾರ ಆಗಸ್ಟ್ 10, 2023 ರ ಬೆಳಿಗ್ಗೆ 9.00ಕ್ಕೆ (ಐಎಸ್‌ಟಿ) ಆರಂಭವಾಗಿ ಭಾನುವಾರ ಆಗಸ್ಟ್ 13, 2023 ಸಂಜೆ 5.00ಕ್ಕೆ (ಐಎಸ್‌ಟಿ) ಮುಕ್ತಾಯಗೊಳ್ಳುತ್ತದೆ. ತದನಂತರ ಇ-ವೋಟಿಂಗ್ ಮಾಡ್ಯೂಲ್‌ನ್ನು ಸಿಡಿಎಸ್‌ಎಲ್ ನಿಷ್ಕ್ರಿಯಗೊಳಿಸುತ್ತದೆ. ಇ-ಮತದಾನದ ಮೂಲಕ ಸಭೆಗೆ ಮೊದಲು ಮತ ಚಲಾಯಿಸಿದ ಸದಸ್ಯರು ಸಭೆಯಲ್ಲಿ ಭಾಗವಹಿಸಬಹುದು, ಆದರೆ ಮತ್ತೊಮ್ಮೆ ಮತದಾನ ಮಾಡಲು ಅವಕಾಶವಿರುವುದಿಲ್ಲ.

ಇ-ಮತದಾನದ ಮೂಲಕ ಮತದಾನದ ಸೌಲಭ್ಯವು ಸಭೆಯ ಸಮಯದಲ್ಲಿ ಲಭ್ಯವಿರುತ್ತದೆ ಮತ್ತು ಸಭೆಯಲ್ಲಿ ಭಾಗವಹಿಸುವ ಸದಸ್ಯರು ರಿಮೋಟ್ ಇ-ಮತದಾನದ ಮೂಲಕ ಈಗಾಗಲೇ ಮತ ಚಲಾಯಿಸದಿದ್ದಲ್ಲಿ ಸಭೆಯಲ್ಲಿ ತಮ್ಮ ಹಕ್ಕನ್ನು ಚಲಾಯಿಸಲು ಸಾಧ್ಯವಾಗುತ್ತದೆ. ಎಜಿಎಂ ಸಮಯದಲ್ಲಿ ರಿಮೋಟ್ ಇ-ಮತದಾನ / ಇ-ಮತದಾನ ಮತ್ತು ವಿಸಿ / ಒಎವಿಎಂ ಮೂಲಕ ಸಭೆಗೆ ಹಾಜರಾಗುವ ಸದಸ್ಯರಿಗೆ ಮಾಹಿತಿಯನ್ನು ಎಜಿಎಂ ನೋಟೀಸ್‌ನಲ್ಲಿ ನೀಡಲಾಗಿದೆ. ಒಂದು ಬಾರಿ ನಿರ್ಣಯದ ಮೇಲೆ ಮತವನ್ನು ಸದಸ್ಯರು ಚಲಾಯಿಸಿದರೆ, ನಂತರ ಅದನ್ನು ಬದಲಾಯಿಸಲು ಅಥವಾ ಮತ್ತೊಮ್ಮೆ ಮತ ಚಲಾಯಿಸಲು ಅನುಮತಿ ನೀಡಲಾಗುವುದಿಲ್ಲ.

ಎಜಿಎಂನ ಸೂಚನಾ ಪತ್ರದ ವಿತರಣೆಯ ನಂತರ ಯಾವುದೇ ವ್ಯಕ್ತಿ ಕಂಪನಿಯ ಸದಸ್ಯನಾಗಿದ್ದಲ್ಲಿ ಮತ್ತು ಅಂತಿಮ (ಕಟ್-ಆಫ್) ದಿನಾಂಕದಂದು ಷೇರುಗಳನ್ನು ಹೊಂದಿದ್ದಲ್ಲಿ ಅವರು ಆರ್‌ಟಿಎ ಇಂಟಿಗ್ರೇಟೆಡ್ ರಿಜಿಸ್ಟ್ರಿ ಮೇನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ರವರನ್ನು ಯೂಸರ್ ಐಡಿ, ಪಾಸ್‌ವರ್ಡ್ ಮತ್ತಿತರ ಸಂಗತಿಗಳ ವಿವರಗಳನ್ನು ತಿಳಿದುಕೊಳ್ಳುವುದಕ್ಕಾಗಿ ಶ್ರೀ ಹರೀಶ್ ಕೆ., ಹಿರಿಯ ವ್ಯವಸ್ಥಾಪಕರು, ಕಂಪನಿಯ ಪ್ರತಿನಿಧಿ ಆರ್‌ಟಿಎ, ಇವರನ್ನು ದೂರವಾಣಿ ಸಂ. 91-80-23460815-818ಗೆ ಕರೆ ಮಾಡಿ ಅಥವಾ irg@integratedindia.in ಗೆ ಇ-ಮೇಲ್ ಕಳುಹಿಸಬಹುದು.

ಕಂಪನಿಗಳ ಕಾಯಿದೆ 2013ರ ಸೆಕ್ಷನ್ 160 ರ ಪ್ರಕಾರ ಕಂಪನಿಗಳ ನಿಯಮ 13 (ನೇಮಕಾತಿ ಮತ್ತು ಅರ್ಹತೆ) ನಿಯಮಗಳು, 2014ರ ಸೆಬಿ (ಪಟ್ಟಿ ಮಾಡುವ ಕಟ್ಟುಪಾಡುಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015ರ ಪ್ರಕಾರ, ಕಂಪನಿಯು ಶ್ರೀ ವಿಜಯ್ ಆರ್ ಕಿರ್ಲೋಸ್ಕರ್ (ಡಿಐಎನ್: 00031253) ಇವರನ್ನು 'ಕಾರ್ಯನಿರ್ವಾಹಕ ಅಧ್ಯಕ್ಷ' ಸಾಮರ್ಥ್ಯದಲ್ಲಿ ಸಂಪೂರ್ಣ ಸಮಯದ ನಿರ್ದೇಶಕರಾಗಿ ಮತ್ತು ಶ್ರೀ ಸುರೇಶ್ ಕುಮಾರ್ (ಡಿಐಎನ್: 02741371) ಇವರನ್ನು ಕಂಪನಿಯ ಸ್ವತಂತ್ರ ನಿರ್ದೇಶಕರನ್ನಾಗಿ ಮಾಡಲು ಪ್ರಸ್ತಾಪಿಸುವ ಲಿಖಿತ ನೋಟೀಸನ್ನು ಸದಸ್ಯರುಗಳಿಂದ ಸ್ವೀಕರಿಸಿದೆ. ಅವರ ನೇಮಕಾತಿಗೆ ಸಂಬಂಧಿಸಿದ ಐಟಂಗಳನ್ನು ಕಂಪನಿಯ 76ನೇ ವಾರ್ಷಿಕ ಸಾಮಾನ್ಯ ಸಭೆಯ ಸೂಚನೆಯಲ್ಲಿ ಪ್ರಕಟಿಸಲಾಗಿದೆ.

ಇ-ಮತದಾನದ ಬಗ್ಗೆ ಮತ್ತು ಎಜಿಎಂನಲ್ಲಿ ಭಾಗವಹಿಸುವ ಬಗ್ಗೆ ಯಾವುದೇ ದೂರುಗಳಿದ್ದಲ್ಲಿ ಸಿಡಿಎಸ್‌ಎಲ್ ವ್ಯವಸ್ಥಾಪಕರಾದ ಶ್ರೀ ರಾಕೇಶ್ ದಳವಿ ಅವರ ಇ-ಮೇಲ್ ಐಡಿ helpdesk.evoting@cdslindia.com ಗೆ ಬರೆದು ತಿಳಿಸಬಹುದು ಅಥವಾ 022-23058738 / 23058542 / 23058543 ಗೆ ಕರೆ ಮಾಡಿ ತಿಳಿಸಬಹುದು ಮತ್ತು / ಅಥವಾ NSDL ಅವರ ಇ-ಮೇಲ್ ಐಡಿ evoting@nsdl.co.in ಗೆ ಬರೆದು ತಿಳಿಸಬಹುದು ಅಥವಾ 022-48867000 / 24997000 ಗೆ ಕರೆ ಮಾಡಿ ತಿಳಿಸಬಹುದು ಹಾಗೂ ಒಂದು ಪ್ರತಿಯನ್ನು investors@kirloskarelectric.com ಗೆ ಕಳುಹಿಸಬೇಕು.

ನಿರ್ದೇಶಕರ ಮಂಡಳಿಯ ಆದೇಶದ ಅನುಸಾರ,
**ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್‌ನ ಪರವಾಗಿ,**
ಮಹಾಬಲೇಶ್ವರ ಭಟ್,
ಜನರಲ್ ಮ್ಯಾನೇಜರ್ – ಕಾರ್ಪೊರೇಟ್ ವ್ಯವಹಾರಗಳು ಮತ್ತು ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ: ಜುಲೈ 22, 2023


राष्ट्रीय परीक्षा एजेंसी National Testing Agency Excellence in Assessment

NCTE

# ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್

ಆಹ್ವಾನಿಸುವ

ಐಐಟಿ, ಎನ್‌ಐಟಿ, ಆರ್‌ಐಇ, ಮತ್ತು ಸರ್ಕಾರಿ ಕಾಲೇಜುಗಳು ಸೇರಿದಂತೆ ಆಯ್ದ ಕೇಂದ್ರ/ರಾಜ್ಯ ವಿಶ್ವವಿದ್ಯಾಯ/ಸಂಸ್ಥೆಗಳಲ್ಲಿ ನಡೆಸಲಾಗುವ, ಶೈಕ್ಷಣಿಕ ವರ್ಷ 2023-24ನೇ ಸಾಲಿನ, 4 ವರ್ಷಗಳ ಇಂಟಿಗ್ರೇಟೆಡ್ ಟೀಚರ್ ಎಜುಕೇಶನ್ ಪ್ರೋಗ್ರಾಮ್ (ಐಟಿಇಪಿ) ಕಾರ್ಯಕ್ರಮಕ್ಕೆ ಪ್ರವೇಶಾತಿ ಪಡೆಯಲು ನ್ಯಾಷನಲ್ ಕಾಮನ್ ಎಂಟ್ರನ್ಸ್ ಟೆಸ್ಟ್ (ಎನ್‌ಸಿಇಟಿ) 2023 ಎಂಬ ರಾಷ್ಟ್ರೀಯ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಎನ್‌ಸಿಇಟಿ 2023 ಪರೀಕ್ಷೆಯು ಕಂಪ್ಯೂಟರ್ ಆಧಾರಿತ ಪರೀಕ್ಷೆ (ಸಿಬಿಟಿ) ಆಗಿದ್ದು ಎನ್‌ಟಿಎ ಇವರಿಂದ ಕೈಗೊಳ್ಳಲಾಗುತ್ತದೆ

**ಐಟಿಇಪಿ ಒಂದು ಡ್ಯುಯಲ್-ಮೇಜರ್ ಹೋಲಿಸ್ಟಿಕ್ ಬ್ಯಾಚಲರ್ ಡಿಗ್ರಿ ಆಗಿದ್ದು, ಇದು ಬಿ.ಎ ಬಿ.ಇಡಿ / ಬಿ.ಎಸ್ಸಿ. ಬಿ.ಇಡಿ. / ಬಿ.ಕಾಮ್ ಬಿ.ಇಡಿ ಪದವಿ ನೀಡುತ್ತದೆ.**

**ಅರ್ಹತೆ: ಸೀನಿಯರ್ ಸೆಕಂಡರಿ/+2 ಅಥವಾ ತತ್ಸಮಾನ ಪರೀಕ್ಷೆಯಲ್ಲಿ 50% ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳು, ಈ ಪ್ರವೇಶಾತಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.**

ವಿಶ್ವವಿದ್ಯಾಲಯಗಳು/ಸಂಸ್ಥೆಗಳು ನೀಡುವ 4 ವರ್ಷದ ಐಟಿಇಪಿ ಕುರಿತಾದ ವಿವರಗಳು ಎನ್‌ಟಿಎ, ಎನ್‌ಸಿಟಿಇ ಮತ್ತು ಸಂಬಂಧಿತ ವಿಶ್ವವಿದ್ಯಾಲಯಗಳ/ಸಂಸ್ಥೆಗಳ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ಎನ್‌ಟಿಎ ಇವರು 42 ವಿಶ್ವವಿದ್ಯಾಲಯ/ಸಂಸ್ಥೆಗಳಲ್ಲಿ ಕೈಗೊಳ್ಳುವ ಎನ್‌ಸಿಇಟಿ ಮುಖಾಂತರ, ಶೈಕ್ಷಣಿಕ ವರ್ಷ 2023-24ನೇ ಸಾಲಿನ ಐಟಿಇಪಿ ಪ್ರವೇಶಾತಿಗಾಗಿ ಅರ್ಜಿ ಸಲ್ಲಿಸಿರಿ. **ಅರ್ಜಿಗಳನ್ನು ಭರ್ತಿ ಮಾಡಲು ಕೊನೆಯ ದಿನಾಂಕ 25 ಜುಲೈ, 2023**. ದಯವಿಟ್ಟು ಸಂದರ್ಶಿಸಿ: https://www.nta.ac.in/, https://ncet.samarth.ac.in/, https://ncte.gov.in/

ತ್ವರೆ ಮಾಡಿ!! ತ್ವರೆ ಮಾಡಿ!! ತ್ವರೆ ಮಾಡಿ!!

ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕವನ್ನು **25 ಜುಲೈ, 2023** ರವರೆಗೆ ವಿಸ್ತರಿಸಲಾಗಿದೆ

CBC 21334/12/0002/2324


ಸಂಕ್ಷಿಪ್ತ ಸುದ್ದಿ

## ನಮ್ಮ ಮೆಟ್ರೊಗೆ ₹ 39.97 ಕೋಟಿ ಆದಾಯ

**ಬೆಂಗಳೂರು:** ನಮ್ಮ ಮೆಟ್ರೊ ರೈಲುಗಳಲ್ಲಿ ಜೂನ್ ತಿಂಗಳಲ್ಲಿ 1.81 ಕೋಟಿ ಜನರು ಪ್ರಯಾಣಿಸಿದ್ದು, ₹39.97 ಕೋಟಿ ಆದಾಯ ಬಂದಿದೆ.

ಜೂನ್ 30ರಂದು 6.88 ಲಕ್ಷ ಪ್ರಯಾಣಿಕರು ಸಂಚರಿಸಿದ್ದು ಇದು ಆ ತಿಂಗಳ ಗರಿಷ್ಠ ಪ್ರಮಾಣವಾಗಿದೆ.

ಒಟ್ಟು ಪ್ರಯಾಣಿಕರಲ್ಲಿ ಶೇ 62.79 ಮಂದಿ ಸ್ಮಾರ್ಟ್ ಕಾರ್ಡ್ ಬಳಸಿದ್ದಾರೆ. ಶೇ 37.17 ಮಂದಿ ಟೋಕನ್ ಬಳಕೆ ಮಾಡಿದ್ದಾರೆ.

ಶೇ 0.04ರಷ್ಟು ಗ್ರೂಪ್ ಟಿಕೆಟ್ ಬಳಕೆದಾರರು ಸಂಚರಿಸಿದ್ದಾರೆ ಎಂದು ಬಿಎಂಆರ್‌ಸಿಎಲ್ ಪ್ರಕಟಣೆ ತಿಳಿಸಿದೆ.

## ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

**ಬೆಂಗಳೂರು:** ವಿದ್ಯುತ್ ಸರಬರಾಜು ಕೇಂದ್ರಗಳಲ್ಲಿ ಕೆಪಿಟಿಸಿಎಲ್ ವತಿಯಿಂದ ನಿರ್ವಹಣಾ ಕಾರ್ಯವನ್ನು ಕೈಗೊಳ್ಳಲಾಗಿದೆ. ಹೀಗಾಗಿ, ಜುಲೈ 22ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಕಾರ್ಮೆಲರಾಮ್, ಜನತಾ ಕಾಲೊನಿ, ಹಾಡೋಸಿದ್ದಾಪುರ, ಚಿಕ್ಕನಾಯಕನಹಳ್ಳಿ, ಆರ್.ಜಿ.ಎ. ಟೆಕ್ ಪಾರ್ಕ್(ಎಚ್‌ಟಿ ಸ್ಥಾವರ), ಮೈಕ್ರೋ ಸಾಫ್ಟ್ (ಎಚ್‌ಟಿ ಸ್ಥಾವರ) ಸುತ್ತಮುತ್ತ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಎಚ್‌ಎಸ್‌ಆರ್ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ತಿಳಿಸಿದ್ದಾರೆ.

## ವೃತ್ತಿಪರ ತರಬೇತಿ ಕೇಂದ್ರ ಆರಂಭಕ್ಕೆ ನಿರ್ಧಾರ

**ಬೆಂಗಳೂರು:** ಯುವಶಕ್ತಿಯನ್ನು ಬೆಳೆಸಲು ವೃತ್ತಿಪರ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು ಎಂದು ಲಯನ್ಸ್ 317ಇ ಜಿಲ್ಲಾ ಗವರ್ನರ್ ಡಾ. ರಾಮರಾಜ ಅರಸ್ ಅವರು ತಿಳಿಸಿದರು.

ಜಿಲ್ಲಾ ಗವರ್ನರ್ ಆಗಿ ಆಯ್ಕೆ ಆಗಿರುವ ಹಿನ್ನೆಲೆಯಲ್ಲಿ ಅವರು ಮುಂದಿನ ಯೋಜನೆಗಳನ್ನು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ನೀಡಿದರು.

'ಈಸ್ಟ್ ಪಾಯಿಂಟ್ ವೈದ್ಯಕೀಯ ಕಾಲೇಜು ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಜುಲೈ 1ರಂದು ಲಯನ್ಸ್ ಜಿಲ್ಲಾ ಗವರ್ನರ್ ಆಗಿ ಅಧಿಕಾರ ಸ್ವೀಕರಿಸಿದ್ದೇನೆ. ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ, ಕಣ್ಣಿಗೆ ಸಂಬಂಧಪಟ್ಟ ಚಿಕಿತ್ಸೆಗಳನ್ನು ಹಮ್ಮಿಕೊಳ್ಳಲಾಗುವುದು. ಮಧುಮೇಹ, ಕ್ಯಾನ್ಸರ್, ವಾಕ್ ಮತ್ತು ಶ್ರವಣದೋಷ, ಡಯಾಲಿಸಿಸ್ ಹೀಗೆ ಆರೋಗ್ಯದ ಸಮಸ್ಯೆ ಇರುವವರಿಗೆ ನೆರವು ನೀಡಲಾಗುವುದು. ಪರಿಸರ ಸಂರಕ್ಷಣೆಗೆ 5 ಲಕ್ಷ ಗಿಡ ನೆಡಲಾಗುವುದು. ವಿದ್ಯಾಭಿವೃದ್ಧಿಗೆ ನೆರವು ನೀಡಲಾಗುವುದು' ಎಂದರು.

ಗಾಳಿಗೆ ನೆಲಕಚ್ಚಿದ ವಿದ್ಯುತ್ ಕಂಬ • ಹಲವೆಡೆ ರಸ್ತೆ ಸಂಪರ್ಕ ಕಡಿತ • ಜಲಾಶಯಗಳ ಒಳಹರಿವು ಹೆಚ್ಚಳ

# ಉಕ್ಕಿದ ನದಿಗಳು, ಮುಳುಗಿದ ಸೇತುವೆಗಳು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಲ್ಯಾಣ ಕರ್ನಾಟಕ ಮತ್ತು ಮಲೆನಾಡು ಭಾಗದಲ್ಲಿ ಶುಕ್ರವಾರ ಉತ್ತಮ ಮಳೆಯಾಗಿದೆ. ಹಲವೆಡೆ ನದಿಗಳು ಉಕ್ಕಿ ಹರಿಯುತ್ತಿದ್ದು, ಸೇತುವೆಗಳು ಮುಳುಗಡೆಯಾಗಿವೆ.

ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ರಭಸದ ಮಳೆಯಾಗಿದೆ. ಕಲಬುರಗಿ ಜಿಲ್ಲೆಯಲ್ಲಿ ಕಾಗಿಣಾ ಹಾಗೂ ಕಮಲಾವತಿ ನದಿಗಳು ಉಕ್ಕಿ ಹರಿಯುತ್ತಿದ್ದು, ಹಲವು ಸೇತುವೆಗಳು ಮುಳುಗಡೆಯಾಗಿವೆ.

ಕಲಬುರಗಿ–ಸೇಡಂ ಮಧ್ಯೆ ಮಳಖೇಡ ಬಳಿ ಕಾಗಿಣಾ ನದಿಗೆ ನಿರ್ಮಿಸಲಾದ ಹಳೆಯ ಸೇತುವೆ ಶುಕ್ರವಾರ ಬೆಳಗಿನ ಜಾವ 2ಕ್ಕೆ ಮುಳುಗಡೆಯಾಗಿತ್ತು. ನೀರಿನ ಪ್ರವಾಹ ಕಡಿಮೆಯಾಗಿದ್ದರಿಂದ ಬೆಳಿಗ್ಗೆ 6ಕ್ಕೆ ರಸ್ತೆ ಸಂಚಾರ ಪುನಃ ಆರಂಭವಾಯಿತು. ಆದರೆ, ಚಿಂಚೋಳಿ, ಸೇಡಂ, ಚಿತ್ತಾಪುರ ಭಾಗದಲ್ಲಿ ಭಾರಿ ಮಳೆಯಾಗುತ್ತಿದೆ. ಮಳಖೇಡದಲ್ಲಿರುವ ಜಯತೀರ್ಥರ ಮೂಲ ವೃಂದಾವನದ ಆವರಣದಲ್ಲಿ ಕೆಲ ಕಾಲ ನೀರು ಆವರಿಸಿತ್ತು.

ಕಾಳಗಿ ತಾಲ್ಲೂಕಿನ ತೆಂಗಳಿ–ಅರಜಂಬಗಾ ನಡುವೆ ರಸ್ತೆ ಸಂಪರ್ಕ ಕಡಿತಗೊಂಡಿದೆ. ಚಿಂಚೋಳಿ ತಾಲ್ಲೂಕಿನ ಪೋಲಕಪಳ್ಳಿ ಸೇತುವೆ ಮುಳುಗಡೆಯಾಗಿ ಅಣವಾರ–ಪೋಲಕಪಳ್ಳಿ ಸಂಚಾರ ಸ್ಥಗಿತಗೊಂಡಿದೆ. ಪಟಪಳ್ಳಿ-ಯಂಪಳ್ಳಿ ನಡುವಿನ ಸೇತುವೆ ಮುಳುಗಿದೆ.

ಬೀದರ್ ಜಿಲ್ಲೆಯಲ್ಲಿ ಹಳ್ಳ, ಕೊಳ್ಳಗಳು ತುಂಬಿ ಹರಿಯುತ್ತಿದ್ದು, ಕಾರಂಜಾ ಜಲಾಶಯಕ್ಕೆ ಅಪಾರ ಪ್ರಮಾಣದ ನೀರು ಹರಿದು ಬರುತ್ತಿದೆ.

ಬೆಳಗಾವಿ ಜಿಲ್ಲೆಯಲ್ಲಿ ಮಳೆ ತುಸು ಬಿಡುವು ನೀಡಿದೆ. ಆದರೆ, ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಧಾರಾಕಾರ ಮಳೆಯಾಗುತ್ತಿರುವ ಕಾರಣ ಕೃಷ್ಣಾ ಹಾಗೂ ಅದರ ಉಪನದಿಗಳಲ್ಲಿ ನೀರಿನ ಪ್ರಮಾಣ ಏರಿಕೆಯಾಗಿದೆ. ಜಿಲ್ಲೆಯ 83 ಮುಖ್ಯ ಸೇತುವೆಗಳ ಪೈಕಿ 16 ಜಲಾವೃತವಾಗಿವೆ.

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಣಕುಂಬಿ ಅರಣ್ಯದಲ್ಲಿ ಸುರಿದ ಧಾರಾಕಾರ ಮಳೆಯಿಂದ ಪಾರವಾಡ– ಕಣಕುಂಬಿ ಮಾರ್ಗಮಧ್ಯದ ಕಳಸಾ ಹಳ್ಳದ ಸೇತುವೆ ಶುಕ್ರವಾರ ಜಲಾವೃತಗೊಂಡಿತು ಚಿತ್ರ: ಪ್ರಸನ್ನ ಕುಲಕರ್ಣಿ

ಮಾಂಜರಿ– ಸವದತ್ತಿ, ಕುರಣಿ– ಕೋಚರಿ, ಖಾನಾಪುರ– ಹೆಮ್ಮಡಗಾ ಸೇರಿದಂತೆ ಕೆಳಹಂತದ 11 ಸೇತುವೆಗಳು ಮುಳುಗಿವೆ. ತಾತ್ಕಾಲಿಕವಾಗಿ ಈ ಮಾರ್ಗದ ಸಂಚಾರ ಬಂದ್ ಮಾಡಲಾಗಿದೆ.

ಚಿಕಲೆ, ಪಾರವಾಡ ಹಾಗೂ ಚಿಗುಲೆ ಜಲಪಾತಗಳನ್ನು ಹೊರತುಪಡಿಸಿ, ಖಾನಾಪುರ ತಾಲ್ಲೂಕಿನ ಎಲ್ಲ ಜಲಪಾತಗಳಿಗೆ ಸಾರ್ವಜನಿಕರ ಭೇಟಿ ನಿರ್ಬಂಧಿಸಲಾಗಿದೆ. ಖಾನಾಪುರ ತಾಲ್ಲೂಕಿನ ಪ್ರಾಥಮಿಕ, ಪ್ರೌಢಶಾಲೆಗಳಿಗೆ ಜುಲೈ 22ರಂದು ರಜೆ ಘೋಷಿಸಲಾಗಿದೆ.

ಉತ್ತರ ಕನ್ನಡ ಜೊಯಿಡಾ ಭಾಗದಲ್ಲಿ ಕಾಳಿನದಿ ನೀರಿನ ಹರಿವು ಹೆಚ್ಚಳವಾಗಿದೆ. ಕಾನೇರಿ ನದಿ ಉಕ್ಕೇರಿದ್ದರಿಂದ ಜೊಯಿಡಾ ತಾಲ್ಲೂಕಿನ ಕುಂಡಲ ಸೇತುವೆ ಮುಳುಗಡೆಯಾಗಿತ್ತು. ಹಳಿಯಾಳ, ದಾಂಡೇಲಿ ಭಾಗದಲ್ಲಿ ನಿರಂತರವಾಗಿ ಮಳೆ ಸುರಿಯಿತು.

ಚಿಕ್ಕಮಗಳೂರು ಜಿಲ್ಲೆಯ ಕಳಸ, ಮೂಡಿಗೆರೆ, ಆಲ್ದೂರು, ಕೊಪ್ಪ, ಶೃಂಗೇರಿ, ಎನ್.ಆರ್.ಪುರ, ಬಾಳೆಹೊನ್ನೂರು ಭಾಗದಲ್ಲೂ ಮಳೆ ಆರ್ಭಟಿಸಿತು.

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಸುಂಡೇಕೆರೆ ಬಳಿ ಆಟೋ ಮೇಲೆ ಮರ ಉರುಳಿ ಬಿದ್ದು, ಚಾಲಕನ ತಲೆಗೆ ಗಾಯವಾಗಿದೆ. ಅರಕಲಗೂಡು ತಾಲ್ಲೂಕಿನ ತೇಜೂರು ಗ್ರಾಮದಲ್ಲಿ ಅಡುಗೆ ಕೋಣೆಯ ಚಾವಣಿ ಕುಸಿದಿದೆ. ತಾಲ್ಲೂಕು ಕೇಂದ್ರದ ಸುಭಾಷ್ ನಗರದ ಜಮೀನಿನಲ್ಲಿರುವ ಮನೆಯ ಶೀಟ್‌ಗಳಿಗೆ ಹಾನಿಯಾಗಿದೆ.

ಕೊಡಗು ಜಿಲ್ಲೆಯಲ್ಲಿ ಮಳೆಗಿಂತ ಗಾಳಿಯ ಆರ್ಭಟ ಹೆಚ್ಚಾಗಿದ್ದು, ಮರಗಳು ಧರೆಗುರುಳುತ್ತಿವೆ. ಶುಕ್ರವಾರ ಒಂದೇ ದಿನ 52 ವಿದ್ಯುತ್ ಕಂಬಗಳು ನೆಲಕ್ಕುರುಳಿದ್ದು, ಹಲವೆಡೆ ವಿದ್ಯುತ್ ವ್ಯತ್ಯಯ ಉಂಟಾಗಿದೆ.

ಕುಶಾಲನಗರ ತಾಲ್ಲೂಕಿನ ಕೆದಕಲ್ ಗ್ರಾಮ ಪಂಚಾಯತಿಗೆ ಸೇರಿದ ಏಳನೇ ಮೈಲು ವಿಕ್ರಂ ಬಡಾವಣೆಯ ನಿವಾಸಿ ವಸಂತಿ ಅವರ ಮನೆ ಮೇಲೆ ಮರ ಉರುಳಿ ಹಾನಿಯಾಗಿದೆ. ಕಾರು ಜಖಂಗೊಂಡಿದೆ.

ಹರದೂರು ಗ್ರಾಮ ಪಂಚಾಯತಿಗೆ ಸೇರಿದ ಗರಗಂದೂರು ಮಲ್ಲಿಕಾರ್ಜುನ ಕಾಲೋನಿಯ ಮಧು ಅವರ ತೋಟದಲ್ಲಿ ಮರವು ಗಾಳಿಗೆ ಬಾಗಿ ವಿದ್ಯುತ್ ತಂತಿಗೆ ತಗುಲಿದ್ದರಿಂದ ಬೆಂಕಿ ಹೊತ್ತಿಕೊಂಡಿತ್ತು. ತಕ್ಷಣವೇ ಸೆಸ್ಕ್ ಸಿಬ್ಬಂದಿ ವಿದ್ಯುತ್ ಕಡಿತಗೊಳಿಸಿದ್ದರಿಂದ ಅನಾಹುತ ತಪ್ಪಿದೆ.

ನಾಪೋಕ್ಲು ಸಮೀಪದ ಕಕ್ಕಬೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಭಾರಿ ಗಾಳಿ, ಮಳೆಗೆ ಮನೆಯ ಚಾವಣಿ ಶೀಟ್‌ಗಳು ಹಾರಿಹೋಗಿವೆ. ಮಡಿಕೇರಿ ನಗರದಲ್ಲೂ ಬಿರುಗಾಳಿಯಿಂದ ಹಲವು ಮನೆಗಳ ಚಾವಣಿ ಶೀಟ್‌ಗಳು ತರಗಲೆಗಳಂತೆ ಹಾರಿ ಹೋಗುತ್ತಿದ್ದು, ಜನರಲ್ಲಿ ಆತಂಕ ಮೂಡಿಸಿದೆ.

ಶಿವಮೊಗ್ಗ ನಗರ, ತೀರ್ಥಹಳ್ಳಿ, ಶಿಕಾರಿಪುರ, ಭದ್ರಾವತಿ ಹಾಗೂ ಹೊಸನಗರದಲ್ಲಿ ಉತ್ತಮ ಮಳೆಯಾಗಿದೆ. ಆಗುಂಬೆಯಲ್ಲಿ ಗಾಳಿ ಸಹಿತ ಮಳೆ ಸುರಿದಿದೆ. ತುಂಗಾ ಜಲಾಶಯದಿಂದ ನಿಗದಿತ ಪ್ರಮಾಣದ ನೀರು ಹೊರ ಬಿಟ್ಟಿರುವುದರಿಂದ ತುಂಗೆಯೂ ಮೈದುಂಬಿದ್ದಾಳೆ. ಸಾವೇಹಕ್ಲು ಜಲಾನಯನ ಪ್ರದೇಶದಲ್ಲಿ 26 ಸೆಂ.ಮೀ ಮಳೆ ಸುರಿದಿದೆ. ದಾವಣಗೆರೆ ನಗರ, ಮಾಯಕೊಂಡ, ನ್ಯಾಮತಿ, ಹರಿಹರ ಹಾಗೂ ಚನ್ನಗಿರಿಯಲ್ಲೂ ಹದ ಮಳೆಯಾಗಿದೆ.

**ಗುಡುಗು ಸಹಿತ ಭಾರಿ ಮಳೆ ಸಾಧ್ಯತೆ:** ಕರಾವಳಿ ಮತ್ತು ಉತ್ತರ ಒಳನಾಡಿನ ಬಹುತೇಕ ಕಡೆ ಹಾಗೂ ದಕ್ಷಿಣ ಒಳನಾಡಿನ ಹಲವೆಡೆ ಶನಿವಾರವೂ ಗುಡುಗು ಸಹಿತ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಬೆಳಗಾವಿ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗೆ 'ಯೆಲ್ಲೋ ಅಲರ್ಟ್' ನೀಡಲಾಗಿದೆ.

ಸೊರಬ ತಾಲ್ಲೂಕಿನ ತವನಂದಿ ಗ್ರಾಮದ ಬಳಿ ರೈತರೊಬ್ಬರು ಭತ್ತ ನಾಟಿ ಮಾಡಲು ಗದ್ದೆಯ ಸಮತಟ್ಟು ಕಾರ್ಯದಲ್ಲಿ ತೊಡಗಿದ್ದರು.

### ಶೌಚಾಲಯ ಕುಸಿತ: ಮಹಿಳೆಯರಿಗೆ ಗಾಯ

ವಿಜಯಪುರ ತಾಲ್ಲೂಕಿನ ಜುಮನಾಳ ಗ್ರಾಮದಲ್ಲಿ ಜಿಟಿಜಿಟಿ ಮಳೆಗೆ ಶಿಥಿಲಗೊಂಡಿದ್ದ ಸಾರ್ವಜನಿಕ ಶೌಚಾಲಯ ಕುಸಿದು ಮೂವರು ಮಹಿಳೆಯರು ಗಾಯಗೊಂಡಿದ್ದಾರೆ. ಹುಬ್ಬಳ್ಳಿಯ ಉಣಕಲ್ ಕೆರೆ ಭರ್ತಿಯಾಗಿ ಕೋಡಿ ಹರಿದಿದೆ. ಹುಬ್ಬಳ್ಳಿನಗರ, ಧಾರವಾಡ ಜಿಲ್ಲೆಯಾದ್ಯಂತ ಜಿಟಿಜಿಟಿ ಮಳೆಯಾಗಿದೆ.

**ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)**

| ಜಲಾಶಯ | ಗರಿಷ್ಠ ಮಟ್ಟ (ಅಡಿಗಳಲ್ಲಿ) | ಇಂದಿನ ಮಟ್ಟ | ಒಳಹರಿವು (ಕ್ಯುಸೆಕ್‌ಗಳಲ್ಲಿ) | ಹೊರಹರಿವು (ಕ್ಯುಸೆಕ್‌ಗಳಲ್ಲಿ) |
|---|---|---|---|---|
| ಕೆ ಆರ್ ಎಸ್* | 124.80 | 90.80 | 4,336 | 405 |
| ಹಾರಂಗಿ | 2,859 | 2,852.09 | 4,994 | 50 |
| ಕಬಿನಿ | 2284.00 | 2,273.26 | 5,222 | 800 |
| ಹೇಮಾವತಿ | 2,922 | 2,896.90 | 10,664 | 200 |
| ಲಿಂಗನಮಕ್ಕಿ | 1,819 | 1,764.70 | 43,043 | 1,157.30 |
| ಸೂಪಾ (ಮೀ) | 564 | 532.70 | 35,712.84 | 91.29 |
| ಮಾಣಿ | 594 | 575.96 | 4,905 | - |
| ತುಂಗಭದ್ರಾ | 1,633 | 1,593.00 | 13,250 | 93 |
| ಮಲಪ್ರಭಾ | 2079.5 | 2047.60 | 7,509 | 194 |
| ಘಟಪ್ರಭಾ | 2175 | 2,109.86 | 23,948 | 98 |
| ಭದ್ರಾ | 186 | 143 | 7,734 | 165 |
| ಆಲಮಟ್ಟಿ (ಮೀ) | 519.6 | 513.70 | 8,919 | 15,675 |
| ನಾರಾಯಣಪುರ (ಮೀ) | 492.25 | 486.78 | 62 | 00 |

* ನೆಲಮಟ್ಟದಿಂದ

### ದೂಧ್‌ಸಾಗರ ಪ್ರವಾಸಕ್ಕೆ ನಿರ್ಬಂಧ

**ಬೆಳಗಾವಿ:** ಕರ್ನಾಟಕದ ಗಡಿಗೆ ಹೊಂದಿಕೊಂಡ ಗೋವಾ ರಾಜ್ಯದಲ್ಲಿ ಬರುವ ದೂಧ್‌ಸಾಗರ ಜಲಾಶಯ ವೀಕ್ಷಣೆಗೆ ತೆರಳುವುದನ್ನು ನಿರ್ಬಂಧಿಸಲಾಗಿದೆ. ಈ ಜಲಾಶಯ ಪ್ರದೇಶ ಈಗ ಅಪಾಯಕಾರಿ ಆಗಿದ್ದರಿಂದ ಗೋವಾ ಸರ್ಕಾರ ನಿರ್ಬಂಧ ಹೇರಿದೆ.

'ದೂಧ್‌ಸಾಗರ ಜಲಾಶಯಕ್ಕೆ ರೈಲು ಅಥವಾ ಕಾಲ್ನಡಿಗೆಯಲ್ಲಿ ಹೋಗುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ಈ ಮಾರ್ಗದಲ್ಲಿ ಗೋವಾಗೆ ಸಂಚರಿಸುವ ರೈಲು ಪ್ರಯಾಣಿಕರು ಕೂಡ ಜಲಪಾತದ ನಿಲ್ದಾಣದಲ್ಲಿ ಇಳಿಯದಂತೆ ರೈಲ್ವೆ ಪೊಲೀಸರು ಸೂಚನೆ ನೀಡಿದ್ದಾರೆ. ಈ ನಿಯಮ ಉಲ್ಲಂಘಿಸಿದವರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಎಸ್ಪಿ ಡಾ.ಸಂಜೀವ ಪಾಟೀಲ ತಿಳಿಸಿದ್ದಾರೆ.

---

ಡಿ.ಕೆ.ಶಿವಕುಮಾರ್, ಕೆ.ಎಚ್.ಪುಟ್ಟಸ್ವಾಮಿಗೌಡ, ಪ್ರಿಯಾಕೃಷ್ಣ ಗರಿಷ್ಠ ಸಂಪತ್ತಿನ ಶಾಸಕರು

## ಸಿರಿವಂತ ಶಾಸಕರು; ಚುನಾವಣೆಗೆ ಕಡಿಮೆ ವೆಚ್ಚ

• ಡಿ.ಎಂ.ಕುರ್ಕೆ ಪ್ರಶಾಂತ್

ಪ್ರಜಾವಾಣಿ ವಿಶೇಷ

**ಚಿಕ್ಕಬಳ್ಳಾಪುರ:** ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಮತ್ತು ನ್ಯಾಷನಲ್ ಎಲೆಕ್ಷನ್ ವಾಚ್ (ಎನ್‌ಇಡಬ್ಲ್ಯು) ವರದಿಗಳ ಪ್ರಕಾರ ದೇಶದಲ್ಲಿ ಗರಿಷ್ಠ ಸಂಪತ್ತು ಹೊಂದಿರುವ 20 ಶಾಸಕರ ಪಟ್ಟಿಯಲ್ಲಿ ರಾಜ್ಯದ 12 ಮಂದಿ ಶಾಸಕರು ಸ್ಥಾನ ಪಡೆದಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಗೌರಿಬಿದನೂರು ಕ್ಷೇತ್ರದ ಪಕ್ಷೇತರ ಶಾಸಕ ಕೆ.ಎಚ್.ಪುಟ್ಟಸ್ವಾಮಿಗೌಡ ಹಾಗೂ ಗೋವಿಂದರಾಜ ನಗರ ಶಾಸಕ ಪ್ರಿಯಾಕೃಷ್ಣ ಅವರ ಆಸ್ತಿ ಮೌಲ್ಯ ಸಾವಿರ ಕೋಟಿ ದಾಟಿದೆ. ಹೀಗೆ ಸಾವಿರ ಕೋಟಿಗಳ ಲೆಕ್ಕದಲ್ಲಿ ಬಾಳುವ ಈ ಕುಳಗಳು ವಿಧಾನಸಭೆ ಚುನಾವಣೆಯಲ್ಲಿ ಖರ್ಚು ಮಾಡಿದ್ದು ಲಕ್ಷಗಳಷ್ಟೇ!

ಚುನಾವಣಾ ಆಯೋಗ ಒಬ್ಬ ಅಭ್ಯರ್ಥಿ ವಿಧಾನಸಭೆ ಚುನಾವಣೆಯಲ್ಲಿ ಗರಿಷ್ಠ ₹40 ಲಕ್ಷದವರೆಗೆ ವೆಚ್ಚ ಮಾಡಲು ಮಿತಿ ವಿಧಿಸಿತ್ತು. ಚುನಾವಣೆ ನಂತರ ಅಭ್ಯರ್ಥಿಗಳು ಖರ್ಚು–ವೆಚ್ಚದ ಮಾಹಿತಿಯನ್ನು ಆಯೋಗಕ್ಕೆ ಸಲ್ಲಿಸಿದ್ದಾರೆ.

₹1,400ಕೋಟಿಗೂ ಹೆಚ್ಚು ಆಸ್ತಿ ಹೊಂದಿರುವ ಡಿ.ಕೆ.ಶಿವಕುಮಾರ್ ತಮ್ಮ ಚುನಾವಣಾ ವೆಚ್ಚ ₹18.29ಲಕ್ಷ ಎಂದು ಪ್ರಮಾಣ ಪತ್ರದಲ್ಲಿ ತಿಳಿಸಿದ್ದಾರೆ. ₹1,200ಕೋಟಿಗೂ ಹೆಚ್ಚು ಆಸ್ತಿ ಒಡೆಯ ಕೆ.ಎಚ್.ಪುಟ್ಟಸ್ವಾಮಿಗೌಡ ಅವರ ಚುನಾವಣಾ ವೆಚ್ಚ ₹10.78ಲಕ್ಷ. ₹1,100ಕೋಟಿಗೂ ಹೆಚ್ಚು ಆಸ್ತಿ ಹೊಂದಿರುವ ಪ್ರಿಯಾ ಕೃಷ್ಣ ₹2.06ಲಕ್ಷ ವ್ಯಯಿಸಿದ್ದಾರೆ. ಪ್ರಿಯಾ ಕೃಷ್ಣ ಅವರ ತಂದೆ ಹಾಗೂ ವಿಜಯನಗರ ಶಾಸಕ ಎಂ.ಕೃಷ್ಣಪ್ಪ ಕೂಡ ಸಿರಿವಂತ ಶಾಸಕರ ಪಟ್ಟಿಯಲ್ಲಿ ಇದ್ದಾರೆ. ಅವರ ಚುನಾವಣಾ ವೆಚ್ಚ ₹3.30ಲಕ್ಷ.

ಎಡಿಆರ್ ಮತ್ತು ಎನ್‌ಇಡಬ್ಲ್ಯು ವರದಿಯಲ್ಲಿರುವ ರಾಜ್ಯದ ಸಿರಿವಂತರ ಶಾಸಕರೆಲ್ಲರೂ ಚುನಾವಣೆಯಲ್ಲಿ ಲಕ್ಷಗಳನ್ನು ವೆಚ್ಚ ಮಾಡಿರುವುದಾಗಿ ಪ್ರಮಾಣ ಪತ್ರದಲ್ಲಿ ಘೋಷಿಸಿಕೊಂಡಿದ್ದಾರೆ.

ಪ್ರಚಾರ ಸಾಮಗ್ರಿಗಳಾದ ಧ್ವನಿವರ್ಧಕ ಸಾಧನಗಳು, ಬ್ಯಾನರ್, ಕರಪತ್ರ, ಭಿತ್ತಿಪತ್ರಗಳು, ವಾಹನಗಳ ಬಾಡಿಗೆ, ಊಟ, ವಸತಿ ವ್ಯವಸ್ಥೆ, ಪೀಠೋಪಕರಣಗಳ ದರ–ಹೀಗೆ ವೆಚ್ಚಗಳ ಮಾಹಿತಿಯನ್ನು ಆಯೋಗಕ್ಕೆ ಸಲ್ಲಿಸುವ ಪ್ರಮಾಣ ಪತ್ರದಲ್ಲಿ ದಾಖಲಿಸಬೇಕು.

ಚುನಾವಣೆ ಸಮಯದಲ್ಲಿ ಅಭ್ಯರ್ಥಿಗಳು ಕುಕ್ಕರ್, ಮಿಕ್ಸಿ ಹಂಚಿಕೆ, ಸ್ಟಾರ್ ನಟ ನಟಿಯರನ್ನು ಕರೆಸಿ ಪ್ರಚಾರ, ಪಕ್ಷದ ರಾಜ್ಯ ಮತ್ತು ಕೇಂದ್ರ ನಾಯಕರಿಂದ ರ‍್ಯಾಲಿ–ಹೀಗೆ ವಿವಿಧ ರೀತಿಯಲ್ಲಿ 'ದೊಡ್ಡ' ಪ್ರಚಾರ ನಡೆಸಿದ್ದರು.

## 'ಹುಲಿ ಸಂರಕ್ಷಿತ ಪ್ರದೇಶದಲ್ಲಿ ಉದ್ಯಾನ ಅಕ್ರಮ ನಿರ್ಮಾಣ'

### ಕೆ.ಟಿ.ಆರ್ ಕೋರ್ ಪ್ರದೇಶದಲ್ಲಿ ನಿಯಮ ಉಲ್ಲಂಘನೆ

ಪ್ರಜಾವಾಣಿ ವಾರ್ತೆ

**ಕಾರವಾರ:** ಕಾಳಿ ಹುಲಿ ಸಂರಕ್ಷಿತ ಪ್ರದೇಶದ (ಕೆಟಿಆರ್) ಕುಂಬಾರವಾಡಾ ವನ್ಯಜೀವಿ ವಲಯದ ಕೋರ್ ಪ್ರದೇಶದಲ್ಲಿ ಆರ್ಕಿಡ್ ಉದ್ಯಾನ ನಿರ್ಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಅರಣ್ಯ ಸಚಿವರಿಗೆ ದೂರು ಸಲ್ಲಿಕೆಯಾಗಿದೆ.

ನುಜ್ಜಿ ನದಿ ದಡದ ಬಳಿ ಮರಗಳನ್ನು ಕಡಿದು ಲಕ್ಷಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಆರ್ಕಿಡ್ ಉದ್ಯಾನ ಕಳೆದ ಫೆಬ್ರವರಿಯಲ್ಲಿ ಉದ್ಘಾಟನೆಗೊಂಡಿದ್ದು, 40ಕ್ಕೂ ಹೆಚ್ಚು ಬಗೆಯ ಆರ್ಕಿಡ್‌ಗಳನ್ನು ಸಂರಕ್ಷಿಸಲಾಗುತ್ತಿದೆ.

'ಆರ್ಕಿಡ್ ಉದ್ಯಾನದ ಅಭಿವೃದ್ಧಿಗೆ ₹ 35 ಲಕ್ಷ ಮಂಜೂರು ಮಾಡಲು ಉಪ ಅರಣ್ಯ ಸಂರಕ್ಷಣಾಧಿಕಾರಿಯು (ಡಿಸಿಎಫ್) ಹುಲಿ ಸಂರಕ್ಷಣಾ ಪ್ರತಿಷ್ಠಾನದ ಕ್ರಿಯಾಯೋಜನೆಯ ಅನುಮೋದನೆಗೆ ಪ್ರಸ್ತಾವ ಸಲ್ಲಿಸಿದ್ದರು. ಇದರ ಅನುಮೋದನೆಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಸಿಎಫ್) ಕೆ.ವಿ.ವಸಂತ ರೆಡ್ಡಿ 13ನೇ ರಾಜ್ಯ ಹುಲಿ ಸಂರಕ್ಷಣಾ ಪ್ರತಿಷ್ಠಾನ ನಿಧಿಯ ಆಡಳಿತ ಮಂಡಳಿ ಸಭೆಯಲ್ಲಿ ಶಿಫಾರಸ್ಸು ಮಾಡಿದ್ದರು. ಆದರೆ, ಆರ್ಕಿಡ್ ಉದ್ಯಾನ ನಿರ್ಮಾಣವೇ ಕಾನೂನು ಬಾಹಿರ. ಇದಕ್ಕೆ ಲಕ್ಷಾಂತರ ವೆಚ್ಚ ಮಾಡಿದ್ದು ತಪ್ಪು' ಎಂದು ಪರಿಸರವಾದಿಯೊಬ್ಬರು ದೂರಿದ್ದರು.

'ಬಂಡೀಪುರ ಹುಲಿ ಸಂರಕ್ಷಣಾ ಪ್ರತಿಷ್ಠಾನದ ನಿಧಿಯನ್ನು ನಿರ್ದೇಶಕ ರಮೇಶ್ ಕುಮಾರ್ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಆರೋಪಗಳ ಕುರಿತು ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಹಾಗೂ ಅರಣ್ಯ ಸಚಿವರು ಆದೇಶಿಸಿದ್ದಾರೆ. ಇದರ ಬೆನ್ನಲ್ಲೆ ಕೆಟಿಆರ್ ಕೋರ್ ಪ್ರದೇಶದ ವ್ಯಾಪ್ತಿಯಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ಅವಕಾಶ ಇರದಿದ್ದರೂ ನಿಯಮಾವಳಿ ಉಲ್ಲಂಘನೆಯಾಗಿದ್ದರ ಬಗ್ಗೆ ಅರಣ್ಯ ಸಚಿವರಿಗೆ ದೂರು ಕೊಡಲಾಗಿದೆ' ಎಂದರು.

'ನೀರಿನ ಟ್ಯಾಂಕ್ ಸಂರಕ್ಷಣೆ ನೆಪದಲ್ಲಿ ಲಕ್ಷಾಂತರ ಮೌಲ್ಯದ ಮರಗಳನ್ನು ಕಡಿದು ಹಾಕಿದ್ದ ಅಧಿಕಾರಿಗಳು ಬಳಿಕ ಅದೇ ಜಾಗದಲ್ಲಿ ಆರ್ಕಿಡ್ ಕಟ್ಟಡ ನಿರ್ಮಿಸಿದ್ದರು. ಈ ಬಗ್ಗೆ ಪಿಸಿಸಿಎಫ್‌ಗೂ ದೂರು ಸಲ್ಲಿಸಲಾಗಿತ್ತು. ಕಡಿದು ಹಾಕಿದ್ದ ಮರಗಳು ಇದ್ದ ಜಾಗದಲ್ಲಿಯೇ ಇವೆ. ತಪ್ಪೆಸಗಿದ ಅಧಿಕಾರಿಗಳ ವಿರುದ್ಧ ಕ್ರಮವಾಗದ್ದಕ್ಕೆ ಪುನಃ ಆಕ್ಷೇಪಣೆ ಸಲ್ಲಿಸಲಾಗಿದೆ' ಎಂದು ಕಾಳಿ ಬ್ರಿಗೇಡ್ ಸಂಚಾಲಕ ರವಿ ರೇಡ್ಕರ್ ಹೇಳಿದರು.

**'ಕೋರ್ ಪ್ರದೇಶದಲ್ಲಿ ಅವಕಾಶವಿದೆ'**

'ಹುಲಿ ಸಂರಕ್ಷಿತಾರಣ್ಯ ವ್ಯಾಪ್ತಿಯ ಕೋರ್ ಪ್ರದೇಶದಲ್ಲಿ ಕೆಲ ಯೋಜನೆ ಕೈಗೊಳ್ಳಲು ನಿಯಮಗಳಲ್ಲಿ ಅವಕಾಶವಿದೆ. ಈ ಹಿಂದೆ ಸಸ್ಯೋದ್ಯಾನ ಇದ್ದ ಸ್ಥಳದಲ್ಲಿ ಆರ್ಕಿಡ್ ಉದ್ಯಾನ ರೂಪಿಸಲಾಗಿದೆ. ವನ್ಯಜೀವಿಗಳಿಗೆ ಅಡ್ಡಿಪಡಿಸದೆ ಅರಣ್ಯದಲ್ಲಿ ಬಿದ್ದ ಆರ್ಕಿಡ್ ಬಳ್ಳಿಗಳನ್ನು ಸಂಗ್ರಹಿಸಿ ತಂದು ಇಲ್ಲಿ ಸಂರಕ್ಷಿಸಲಾಗುತ್ತಿದೆ' ಎಂದು ಕುಂಬಾರವಾಡಾ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ಅಮರಾಕ್ಷರ ವಿ.ಎಂ ತಿಳಿಸಿದರು.

**ಪಶ್ಚಿಮ ಘಟ್ಟದ ಅಪರೂಪದ ಆರ್ಕಿಡ್‌ಗಳ ಸಂರಕ್ಷಣೆ ಮತ್ತು ಜನರಿಗೆ ಆರ್ಕಿಡ್‌ಗಳನ್ನು ಪರಿಚಯಿಸಲು ನಿಯಮಾನುಸಾರ ಆರ್ಕಿಡ್ ಉದ್ಯಾನ ನಿರ್ಮಿಸಲಾಗಿದೆ.**

**ಕೆ.ವಿ.ವಸಂತ ರೆಡ್ಡಿ,** ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಉತ್ತರ ಕನ್ನಡ ಜಿಲ್ಲೆ

## ಮತೀಯ ಗೂಂಡಾಗಿರಿ: ಬಜರಂಗದಳದ ಮೂವರ ಗಡಿಪಾರಿಗೆ ಕ್ರಮ ಆರಂಭ

ಪ್ರಜಾವಾಣಿ ವಾರ್ತೆ

**ಮಂಗಳೂರು:** ಮತೀಯ ಗೂಂಡಾಗಿರಿಯಲ್ಲಿ ತೊಡಗಿದ ಆರೋಪದ ಮೇರೆಗೆ ಬಜರಂಗದಳದ ಮೂವರನ್ನು ಗಡಿಪಾರು ಮಾಡುವ ಪ್ರಕ್ರಿಯೆಯನ್ನು ಮಂಗಳೂರು ನಗರ ಪೊಲೀಸರು ಆರಂಭಿಸಿದ್ದಾರೆ.

'ನಮ್ಮ ಕಾರ್ಯಕರ್ತರಾದ ಬಾಲಚಂದ್ರ ಅತ್ತಾವರ, ಗಣೇಶ್ ಅತ್ತಾವರ, ಜಯಪ್ರಶಾಂತ್ ಎಂಬುವವರಿಗೆ ಪೊಲೀಸ್ ಇಲಾಖೆ ನೋಟಿಸ್ ಜಾರಿಗೊಳಿಸಿದೆ. ಇವರ ಮೇಲೆ ಯಾವುದೇ ಕೊಲೆ ಅಥವಾ ಕೊಲೆಯತ್ನ ಪ್ರಕರಣಗಳು ಇಲ್ಲ. ಪೊಲೀಸರು ಕೋಮುದ್ವೇಷ ನಿಗ್ರಹ ಘಟಕದ ಕಾರ್ಯಚಟುವಟಿಕೆ ತೋರಿಸಲು ನಮ್ಮ ಕಾರ್ಯಕರ್ತರನ್ನು ಗುರಿ ಮಾಡುತ್ತಿದ್ದಾರೆ. ಬಜರಂಗದಳ ಕಾರ್ಯಕರ್ತರನ್ನು ಗಡಿಪಾರು ಮಾಡುವ ಮೂಲಕ ಹಿಂದುತ್ವದ ಹೋರಾಟವನ್ನು ಹತ್ತಿಕ್ಕಲು ಸಾಧ್ಯವಿಲ್ಲ' ಎಂದು ವಿಶ್ವ ಹಿಂದೂ ಪರಿಷತ್ ಮುಖಂಡ ಶರಣ್ ಪಂಪ್‌ವೆಲ್ ಕಿಡಿಕಾರಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಪ್ರತಿಕ್ರಿಯಿಸಿದ ನಗರ ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಜೈನ್, 'ಮತೀಯ ಗೂಂಡಾಗಿರಿಯಲ್ಲಿ ಪದೇ ಪದೇ ಭಾಗಿಯಾಗುವ ಆರೋಪಿಗಳ ವಿರುದ್ಧ ರೌಡಿ ಪಟ್ಟಿ ತೆರೆದು ಕ್ರಮ ಜರುಗಿಸಲಾಗುತ್ತಿದೆ. ಅವರು ಯಾವ ಸಂಘಟನೆಗೆ ಸೇರಿದವರು ಎಂಬುದು ಮುಖ್ಯವಲ್ಲ. ನಮಗೆ ಅವರು ಆರೋಪಿಗಳು ಮಾತ್ರ. ಒಂದು ವರ್ಷದಲ್ಲಿ ಇಂತಹ 62 ರೌಡಿಗಳ ಗಡಿಪಾರಿಗೆ ಕ್ರಮವಹಿಸಲಾಗಿದೆ. ಈ ಮೂವರ ಮೇಲೆ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿದ್ದು, ಸಂಬಂಧಿಸಿದ ಠಾಣೆಯಿಂದ ಗಡಿಪಾರಿಗೆ ಪ್ರಸ್ತಾವ ಬಂದ ಹಿನ್ನೆಲೆಯಲ್ಲಿ ಪೂರಕ ಕ್ರಮ ವಹಿಸಲಾಗುತ್ತಿದೆ' ಎಂದರು.

## ಲಂಚ: ಲೋಕಾಯುಕ್ತ ಬಲೆಗೆ ಶಿಕ್ಷಣ ಇಲಾಖೆ ಉಪನಿರ್ದೇಶಕ

**ಹಾವೇರಿ:** ನಿವೃತ್ತ ಶಿಕ್ಷಕರೊಬ್ಬರಿಂದ ಲಂಚ ಪಡೆಯುತ್ತಿದ್ದ ಆರೋಪದ ಮೇಲೆ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಅಂದಾನಪ್ಪ ವಡಗೇರಿ ಮತ್ತು ದ್ವಿತೀಯ ದರ್ಜೆ ಸಹಾಯಕ ದತ್ತಾತ್ರೇಯ ಕುಂಟೆ ಎಂಬುವರನ್ನು ಶುಕ್ರವಾರ ಲೋಕಾಯುಕ್ತ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಅಂದಾನಪ್ಪ

ದತ್ತಾತ್ರೇಯ

'ರಟ್ಟೀಹಳ್ಳಿಯ ಸರ್ಕಾರಿ ಉರ್ದು ಶಾಲೆಯ ನಿವೃತ್ತ ಶಿಕ್ಷಕ ಮಹಮ್ಮದ್ ಗೌಸ್ ಎಂಬುವರು ತಮ್ಮ ನಿವೃತ್ತಿ ವೇತನಕ್ಕಾಗಿ ಅಗತ್ಯ ದಾಖಲಾತಿಗಳನ್ನು ನೀಡಿ ಅದನ್ನು ಸಂಬಂಧಪಟ್ಟ ಇಲಾಖೆಗೆ ಕಳುಹಿಸಲು ಕೋರಿದ್ದರು. ಅದಕ್ಕಾಗಿ ಅಂದಾನಪ್ಪ ₹7 ಸಾವಿರ ಲಂಚ ಕೇಳಿದ್ದರು. ಕಾರ್ಯಾಚರಣೆ ನಡೆಸಿ, ಇಬ್ಬರನ್ನೂ ವಶಕ್ಕೆ ಪಡೆಯಲಾಗಿದೆ' ಎಂದು ಲೋಕಾಯುಕ್ತ ಡಿವೈಎಸ್ಪಿ ಚಂದ್ರಶೇಖರ್ ತಿಳಿಸಿದ್ದಾರೆ.

## 'ಸ್ಫೋಟದ ಟ್ರಿಗರ್'

ಒಂದನೇ ಪುಟದಿಂದ

'ಆರ್.ಟಿ.ನಗರದಲ್ಲಿ ನಡೆದಿದ್ದ ಕೊಲೆ ಪ್ರಕರಣದಲ್ಲಿ ಬಂಧಿತನಾಗಿದ್ದ ಜುನೈದ್ ಹಾಗೂ ಈತನ 20 ಮಂದಿ ಸಹಚರರು, ಬಾಂಬ್ ಸ್ಫೋಟದ ಪ್ರಮುಖ ಆರೋಪಿ ಟಿ. ನಾಸೀರ್ ಜೊತೆ ಸಂಪರ್ಕದಲ್ಲಿದ್ದರು. 21 ಮಂದಿ ಪೈಕಿ ಸೈಯದ್ ಸುಹೇಲ್ ಖಾನ್, ಜಾಹೀದ್ ತಬ್ರೇಜ್, ಸೈಯದ್ ಮುದಾಸೀರ್ ಪಾಷಾ, ಮಹಮ್ಮದ್ ಫೈಜಲ್ ರಬ್ಬಾನಿ ಹಾಗೂ ಮೊಹಮ್ಮದ್ ಉಮರ್‌ನನ್ನು ಬಂಧಿಸಲಾಗಿದೆ. ಜುನೈದ್, ಹೊರ ದೇಶದಲ್ಲಿದ್ದಾನೆ. ಉಳಿದಂತೆ 15 ಮಂದಿ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಅರ್ಜಿ ಪಡೆದು 7 ತಿಂಗಳಾದರೂ ರೈತರಿಗೆ ಸಿಗದ ಸಾಲ

## ಋಣಭಾರ ಹಾಕಿ ಹಣ ನೀಡದ ಬ್ಯಾಂಕ್

• ಓಂಕಾರ ಬಿರಾದಾರ

**ಕಲಬುರಗಿ:** ಇಲ್ಲಿನ ಕಲಬುರಗಿ–ಯಾದಗಿರಿ ಜಿಲ್ಲಾ ಸಹಕಾರ ಕೇಂದ್ರ (ಡಿಸಿಸಿ) ಬ್ಯಾಂಕ್ ರೈತರಿಗೆ ಶೂನ್ಯ ಬಡ್ಡಿದರದ ಸಾಲ ಮಂಜೂರು ಮಾಡಿ ಜಮೀನಿನ ಮೇಲೆ ಋಣಭಾರ ನಮೂದಿಸಿ ಏಳು ತಿಂಗಳಾದರೂ ಸಾಲದ ಹಣ ಪಾವತಿಸಿಲ್ಲ. ಜಮೀನಿನ ಮೇಲೆ ಋಣಭಾರ ಇರುವುದರಿಂದ ರಾಷ್ಟ್ರೀಕೃತ ಹಾಗೂ ಖಾಸಗಿ ಬ್ಯಾಂಕ್‌ಗಳಲ್ಲೂ ಸಾಲ ಸಿಗದೆ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಜಿಲ್ಲೆಯಲ್ಲಿ ಡಿಸಿಸಿ ಬ್ಯಾಂಕ್ ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ 1100ಕ್ಕೂ ಹೆಚ್ಚು ರೈತರು ಈ ಸಮಸ್ಯೆ ಎದುರಿಸುತ್ತಿದ್ದಾರೆ.

ರೈತರು ಸಾಲಕ್ಕಾಗಿ ಅರ್ಜಿ ಸಲ್ಲಿಸಿದ ನಂತರ ಋಣಭಾರ ದಾಖಲಿಸಲಾಗಿದೆ. ಕೆಲ ರೈತರಿಗೆ ಸಾಲದ ಹಣ ಪಾವತಿಗೆ ಚೆಕ್‌ಗಳನ್ನು ನೀಡಲಾಗಿದೆ. ಆದರೆ, ಹಣ ಬಿಡುಗಡೆ ಮಾಡದಿರುವುದರಿಂದ ರೈತರು ಬ್ಯಾಂಕ್‌ಗೆ ಕೊಟ್ಟ ಚೆಕ್‌ಗಳು ಬೌನ್ಸ್ ಆಗಿವೆ.

ಬ್ಯಾಂಕ್‌ನಿಂದ ಹಣ ಸಿಗುವ ನಿರೀಕ್ಷೆಯಲ್ಲಿರುವ ರೈತರು ಖಾಸಗಿಯಾಗಿ ಸಾಲ ಮಾಡಿ ಹಣ ಬಳಕೆ ಮಾಡಿಕೊಂಡಿದ್ದಾರೆ. ಆದರೆ, ಏಳು ತಿಂಗಳಾದರೂ ಹಣ ಬಾರದಿರುವುದು ರೈತರಲ್ಲಿ ಆತಂಕ ಮೂಡಿಸಿದೆ.

ಜಿಲ್ಲಾ ಸಹಕಾರ ಬ್ಯಾಂಕ್ ಹಾಗೂ ಕೃಷಿ ಪತ್ತಿನ ಸಹಕಾರ ಬ್ಯಾಂಕ್‌ಗಳ ಸಹಯೋಗದಲ್ಲಿ ಹೈನುಗಾರಿಕೆ ಪ್ರೋತ್ಸಾಹ ನೀಡಲು ಪ್ರತಿ ಸಂಘದಿಂದ ಅರ್ಜಿ ಆಹ್ವಾನ ಮಾಡಲಾಗಿದೆ. ಆದರೆ ಶೇ 20ರಷ್ಟು ಫಲಾನುಭವಿಗಳಿಗೆ ಮಾತ್ರ ಹಣ ಒದಗಿಸಲಾಗಿದೆ. ಉಳಿದ ರೈತರ ಅರ್ಜಿ ವಿಲೇವಾರಿ ಮಾಡಿ, ಸಾಲ ನೀಡಿಲ್ಲ. ಇದರಿಂದ ಹೈನುಗಾರಿಕೆ ಮಾಡಿ ಜೀವನ ಸಾಗಿಸುವ ಬಡವರ ಕನಸಿಗೂ ತಣ್ಣೀರು ಎರಚಿದಂತಾಗಿದೆ. ರಾಜ್ಯ ಸರ್ಕಾರವು ಪೂರಕ ಬಜೆಟ್‌ನಲ್ಲಿ ₹ 5 ಲಕ್ಷದವರೆಗೆ ಬಡ್ಡಿರಹಿತ ಸಾಲ ನೀಡುವುದಾಗಿ ಘೋಷಿಸಿದೆ. ಅದರಂತೆ ಅರ್ಜಿ ಪಡೆದು ಹೊಸ ಸಾಲ ಮಂಜೂರು ಮಾಡುವ ಮೂಲಕ ಸಂಕಷ್ಟ ನಿವಾರಿಸಬೇಕು ಎಂದು ರೈತರು ಒತ್ತಾಯಿಸಿದ್ದಾರೆ.

**'₹5 ಕೋಟಿ ಹಣ ಪಾವತಿ ಬಾಕಿ'**



ಸುರೇಶ ಸಜ್ಜನ

'ಅಪೆಕ್ಸ್ ಬ್ಯಾಂಕ್‌ನಿಂದ ಹಣ ಬಿಡುಗಡೆಯಾಗಬಹುದು ಎಂಬ ಭರವಸೆ ಮೇಲೆ ರೈತರಿಂದ ಅರ್ಜಿ ಪಡೆದು ಸಾಲ ನೀಡಲು ಮುಂದಾಗಿದ್ದೆವು. ಹಣ ಬಿಡುಗಡೆಯಾಗದಿರುವುದರಿಂದ ಸಮಸ್ಯೆಯಾಗಿದೆ' ಎಂದು ಕಲಬುರಗಿ–ಯಾದಗಿರಿ ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ ಸುರೇಶ ಸಜ್ಜನ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಸಾಲ ಮಂಜೂರು ಮಾಡಲಾದ ರೈತರಿಗೆ ಒಟ್ಟು ₹5 ಕೋಟಿ ಹಣ ಪಾವತಿಸಬೇಕಾಗಿದೆ. ಈ ಕುರಿತು ನಿಯೋಗ ತೆಗೆದುಕೊಂಡು ಹೋಗಿ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರನ್ನು ಭೇಟಿ ಮಾಡಿದ್ದೇವೆ. ಹಣ ನೀಡುವ ಭರವಸೆ ನೀಡಿದ್ದಾರೆ. ಬಿಡುಗಡೆಯಾದ ತಕ್ಷಣವೇ ರೈತರ ಖಾತೆಗೆ ಹಣ ಜಮಾ ಮಾಡಲಾಗುವುದು' ಎಂದರು.

'ಜಿಲ್ಲೆಯ ಡಿಸಿಸಿ ಬ್ಯಾಂಕ್‌ಗೆ ಸರ್ಕಾರದಿಂದ ₹50 ಕೋಟಿ ಬಡ್ಡಿ ಸಬ್ಸಿಡಿ ಬಾಕಿ ಹಣ ಬರಬೇಕು. ಬ್ಯಾಂಕ್ ವ್ಯಾಪ್ತಿಯಲ್ಲಿ ₹25 ಕೋಟಿಕೂ ಅಧಿಕ ವಸೂಲಾಗದ ಸಾಲ ಇದೆ. ಇದರಿಂದಾಗಿ ರೈತರಿಗೆ ಹೊಸ ಸಾಲ ನೀಡಲು ಸಾಧ್ಯವಾಗುತ್ತಿಲ್ಲ' ಎಂದು ಅವರು ಮಾಹಿತಿ ನೀಡಿದರು.

**ಸಾಲ ನೀಡದೇ ಜಮೀನಿನ ಮೇಲೆ ಋಣಭಾರ ಹಾಕಿ, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬ್ಯಾಂಕ್‌ನವರು ಶೀಘ್ರವೇ ಸಾಲದ ಹಣ ನೀಡಬೇಕು.**

**ಶರಣಬಸಪ್ಪ ಮಮಶೆಟ್ಟಿ,** ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಅಧ್ಯಕ್ಷ

**ಸಾಲ ಮಂಜೂರಾಗಿದೆ ಎಂದು ಹೇಳಿ ನನ್ನ ಜಮೀನಿನ ಪಾಣಿಯಲ್ಲಿ ಋಣಭಾರ ಹಾಕಿದ್ದಾರೆ. ಇದರಿಂದ ಬೇರೆ ಬ್ಯಾಂಕ್‌ನಲ್ಲಿ ಸಹ ಸಾಲ ಪಡೆಯಲು ಸಾಧ್ಯವಾಗುತ್ತಿಲ್ಲ.**

**ಲಾಡ್ಲೇಸಾಬ ಕಡಣಿ,** ಕಡಣಿ ಗ್ರಾಮದ ರೈತ

### ಸಂಕ್ಷಿಪ್ತ ಸುದ್ದಿ

**ನೀಟ್: 24ರಿಂದ ದಾಖಲಾತಿ ಪರಿಶೀಲನೆ**

**ಬೆಂಗಳೂರು:** 'ನೀಟ್'ನಲ್ಲಿ ತೇರ್ಗಡೆ ಹೊಂದಿ ವೈದ್ಯಕೀಯ ವಿಜ್ಞಾನ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಅಭ್ಯರ್ಥಿಗಳ ದಾಖಲಾತಿ ಪರಿಶೀಲನಾ ಕಾರ್ಯ ಜುಲೈ 24ರಿಂದ ಆರಂಭವಾಗಲಿದೆ.

ವೈದ್ಯಕೀಯ, ದಂತ ವೈದ್ಯಕೀಯ, ಆಯುರ್ವೇದ, ಯುನಾನಿ, ಯೋಗ ಮತ್ತು ನ್ಯಾಚುರೋಪಥಿ ಕೋರ್ಸ್‌ಗಳಿಗೆ ಪ್ರವೇಶ ಬಯಸಿರುವ ಅಭ್ಯರ್ಥಿಗಳು ನಿಗದಿತ ದಿನಗಳಂದು ಪರಿಶೀಲನಾ ಕಾರ್ಯಕ್ಕೆ ಹಾಜರಾಗಬೇಕು. ವಿವರವನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಕಟಿಸಲಾಗಿದೆ. ಆ.1ರವರೆಗೆ ಪರಿಶೀಲನೆ ನಡೆಯಲಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ತಿಳಿಸಿದ್ದಾರೆ.

**ಕಲುಷಿತ ನೀರು: 14 ಜನ ಅಸ್ವಸ್ಥ**

**ಹರಪನಹಳ್ಳಿ (ವಿಜಯನಗರ ಜಿಲ್ಲೆ):** ತಾಲ್ಲೂಕಿನ ಕಣಿವಿಹಳ್ಳಿ ಗ್ರಾಮದಲ್ಲಿ ಗುರುವಾರ ಕಲುಷಿತ ನೀರು ಕುಡಿದು 14 ಜನರಿಗೆ ವಾಂತಿ ಭೇದಿಯಾಗಿದ್ದು, ತೀವ್ರ ಅಸ್ವಸ್ಥರಾದ ಒಬ್ಬರನ್ನು ದಾವಣಗೆರೆ ಆಸ್ಪತ್ರೆಗೆ ದಾಖಲಿಸಲಾಗಿದೆ.

'ನಂದಿಬೇವೂರು ಗ್ರಾಮ ಪಂಚಾಯಿತಿಗೆ ಒಳಪಡುವ ಕಣಿವಿಹಳ್ಳಿಯಲ್ಲಿ ಅಸ್ವಸ್ಥಗೊಂಡ ಜನರೆಲ್ಲ ಒಂದೇ ಓಣಿಯಲ್ಲಿದ್ದಾರೆ. ಆ ಪ್ರದೇಶಕ್ಕೆ ಪೂರೈಸುವ ನೀರಿನ ಪೈಪ್ ಒಡೆದು, ಚರಂಡಿ ನೀರು ಸೇರಿದ್ದರಿಂದ ವಾಂತಿ ಭೇದಿಯಾಗಿದೆ' ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

'ಕಲುಷಿತ ನೀರು ಕುಡಿದು ಅಸ್ವಸ್ಥಗೊಂಡವರಿಗೆ ಗ್ರಾಮದಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರ ತೆರೆಯಲಾಗಿದೆ ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸಲೀಂ ತಿಳಿಸಿದ್ದಾರೆ.

**ಡ್ರಗ್ ಪೆಡ್ಲರ್‌ಗಳ ಬಂಧನ: ಪಿಸ್ತೂಲ್ ವಶಕ್ಕೆ**

**ಮಂಗಳೂರು:** ನಗರದಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಮೂವರು ಡ್ರಗ್ ಪೆಡ್ಲರ್‌ಗಳನ್ನು ಸಿಸಿಬಿ ಪೊಲೀಸರು ಬಂಧಿಸಿ, ₹9 ಲಕ್ಷ ಮೌಲ್ಯದ 180 ಗ್ರಾಂ ಎಂಡಿಎಂಎ ವಶಪಡಿಸಿಕೊಂಡಿದ್ದಾರೆ.

ಮಂಗಳೂರು ಕೃಷ್ಣಾಪುರ ನಿವಾಸಿ ಮೊಹಮ್ಮದ್ ನಿಯಾಜ್ (28), ತಲಪಾಡಿಯ ನಿಷಾದ್ (31), ಮಹಮ್ಮದ್ ರಝೀನ್ (24) ಬಂಧಿತರು. ಆರೋಪಿಗಳು ಕಾರಿನಲ್ಲಿ ಬಂದು ಉಳ್ಳಾಲ ತಾಲ್ಲೂಕು ತಲಪಾಡಿ ಗ್ರಾಮದ ಪಿಲಿಕೂರಿನಲ್ಲಿ ಮಾದಕವಸ್ತು ಮಾರಾಟ ಮಾಡುತ್ತಿದ್ದಾಗ ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಜೈನ್ ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಂಧಿತರಿಂದ ಎರಡು ಸ್ವಿಫ್ಟ್ ಕಾರು, ನಾಲ್ಕು ಮೊಬೈಲ್ ಫೋನ್‌ಗಳು, ₹22 ಸಾವಿರ ನಗದು, ಒಂದು ಪಿಸ್ತೂಲ್, ಒಂದು ಸಜೀವ ಗುಂಡು, ಎರಡು ಚೂರಿಗಳು, ಡಿಜಿಟಲ್ ತೂಕ ಮಾಪನ ವಶಪಡಿಸಿಕೊಳ್ಳಲಾಗಿದೆ ಎಂದರು.

ಮುಂಬೈ, ಗೋವಾದಿಂದ ಮಾದಕ ವಸ್ತುಗಳನ್ನು ತಂದು ಮಾರಾಟ ಮಾಡುತ್ತಿದ್ದರು ಎಂಬ ಸಂಗತಿ ತನಿಖೆಯಲ್ಲಿ ಗೊತ್ತಾಗಿದೆ. ಇನ್ನಷ್ಟು ಹೆಚ್ಚಿನ ತನಿಖೆ ನಡೆಸಬೇಕಾಗಿದೆ ಎಂದು ಅವರು ಹೇಳಿದರು.

**ರೌಡಿ ಮುಜ್ಜು ಹತ್ಯೆ**

**ಭದ್ರಾವತಿ (ಶಿವಮೊಗ್ಗ):** ಇಲ್ಲಿನ ಬೊಮ್ಮನಕಟ್ಟೆ ಬಡಾವಣೆಯಲ್ಲಿ ಗುರುವಾರ ತಡರಾತ್ರಿ ರೌಡಿಶೀಟರ್‌ವೊಬ್ಬನನ್ನು ಆತನ ಮನೆಯ ಎದುರೇ ಹತ್ಯೆ ಮಾಡಲಾಗಿದೆ.

ಮುಜಾಹಿದ್ದಿನ್ ಅಲಿಯಾಸ್ ಮುಜ್ಜು (35) ಕೊಲೆಯಾದ ರೌಡಿ. ಈತ ಬೊಮ್ಮನಕಟ್ಟೆ ಬಡಾವಣೆಯಲ್ಲಿರುವ ತನ್ನ ಎರಡನೇ ಪತ್ನಿ ಮನೆಯಲ್ಲಿ ಇದ್ದ. ತಡರಾತ್ರಿ ಮನೆಯ ಹತ್ತಿರ ಬಂದಿದ್ದ ದುಷ್ಕರ್ಮಿಗಳು 'ನಿನ್ನ ಜೊತೆ ಮಾತನಾಡುವುದಿದೆ. ಹೊರಗೆ ಬಾ' ಎಂದು ಕರೆದಿದ್ದಾರೆ. ಆತ ಗೇಟ್ ಬಳಿ ಹೋಗುತ್ತಿದ್ದಂತೆ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿ ಪರಾರಿಯಾಗಿದ್ದಾರೆ. ಮುಜ್ಜು ವಿರುದ್ಧ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ಕೊಲೆ, ಕೊಲೆಯತ್ನ ಸೇರಿದಂತೆ ನಾಲ್ಕು ಪ್ರಕರಣಗಳು ದಾಖಲಾಗಿದ್ದವು. ಪೇಪರ್ ಟೌನ್ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

'ಕೊಲೆ ಮಾಡಿದವರು ಯಾರು, ಕೊಲೆಗೆ ಏನು ಕಾರಣ ಎಂಬುದು ಗೊತ್ತಾಗಿಲ್ಲ. ತನಿಖೆ ನಡೆಸಲಾಗಿದ್ದು, ಆರೋಪಿಗಳ ಪತ್ತೆಗೆ ಬಲೆ ಬೀಸಲಾಗಿದೆ' ಎಂದು ಎಸ್ಪಿ ಜಿ.ಕೆ.ಮಿಥುನ್ ಕುಮಾರ್ ತಿಳಿಸಿದ್ದಾರೆ.

**ಲಾ ಸ್ಕೂಲ್ ಮೌಲ್ಯಮಾಪನಕ್ಕೆ ಆಯೋಗ**

**ಬೆಂಗಳೂರು:** 'ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ'ಯ 2023-24ನೇ ಸಾಲಿನ ಸಮಗ್ರ ಮೌಲ್ಯಮಾಪನಕ್ಕಾಗಿ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು 'ಪರಿಶೀಲನಾ ಆಯೋಗ'(ಎಸ್‌ಆರ್‌ಸಿ) ನೇಮಿಸಿದ್ದಾರೆ.

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ತಿಮೋತಿ ಎಂಡಿಕಾಟ್ ಅಧ್ಯಕ್ಷರಾಗಿ, ಬೊನಾವೆರೊ ಇನ್‌ಸ್ಟಿಟ್ಯೂಟ್ ಆಫ್ ಹ್ಯೂಮನ್ ನಿರ್ದೇಶಕ ಕ್ಯಾಥರೀನ್ ಒ'ರೇಗನ್, ಲೆಸ್ಟರ್ ಕಿಸ್ಸೆಲ್‌ನ ಕಾನೂನು ಪ್ರಾಧ್ಯಾಪಕ ಡೇವಿಡ್ ಬಿ. ವಿಲ್ಕಿನ್ಸ್ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ. ಚಂದ್ರಚೂಡ್ ಅವರು ರಾಜ್ಯ ಸರ್ಕಾರದೊಂದಿಗೆ ಸಮಾಲೋಚಿಸಿ ಈ ನಿರ್ಧಾರ ಕೈಗೊಂಡಿದ್ದಾರೆ.

ಕೊನೆಯ ಎರಡು ದಿನ ವಿರೋಧ ಪಕ್ಷಗಳ ಆಸನ ಖಾಲಿ • ಎದುರಾಳಿಗಳು ಇಲ್ಲದೆಯೂ ಸಿದ್ದರಾಮಯ್ಯ ಅಬ್ಬರ

# ವಿಪಕ್ಷ ನಾಯಕರಿಲ್ಲದೇ ಮುಗಿದ ಅಧಿವೇಶನ

ಪ್ರಜಾವಾಣಿ ವಾರ್ತೆ

ವಿಧಾನಸಭಾ ಕಲಾಪದಲ್ಲಿ ವಿರೋಧ ಪಕ್ಷದ ಸದಸ್ಯರು ಗೈರಾಗಿದ್ದರು

ವಿಧಾನಸಭೆಯ ಸ್ಪೀಕರ್ ಯು.ಟಿ ಖಾದರ್ ಅವರ ನಿರ್ಣಯದ ವಿರುದ್ಧ ಬಿಜೆಪಿ ಶಾಸಕರು ಮಹಾತ್ಮ ಗಾಂಧಿ ಪ್ರತಿಮೆ ಬಳಿ ಶುಕ್ರವಾರ ಪ್ರತಿಭಟನೆ ನಡೆಸಿದರು

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರ ಬಂದ ಬಳಿಕ ನಡೆದ ಮೊದಲ ಅಧಿವೇಶನ ಜಟಾಪಟಿ, ಆರೋಪ– ಪ್ರತ್ಯಾರೋಪಗಳಿಗೆ ಸಾಕ್ಷಿಯಾಯಿತು. ಸದನದಲ್ಲಿ ಎರಡನೇ ಅತಿ ಹೆಚ್ಚು ಸದಸ್ಯರನ್ನು ಹೊಂದಿದ್ದರೂ ವಿರೋಧ ಪಕ್ಷದ ನಾಯಕರನ್ನು ಬಿಜೆಪಿ ಆಯ್ಕೆ ಮಾಡದೇ ಇದ್ದುದರಿಂದ ನಿರ್ದಿಷ್ಟ ಆಸನ ಕಲಾಪದುದ್ದಕ್ಕೂ ಖಾಲಿಯೇ ಉಳಿದಿತ್ತು.

ಕೊನೆಯ ಎರಡು ದಿನ ಬಿಜೆಪಿ, ಜೆಡಿಎಸ್ ಸದಸ್ಯರು ಕಲಾಪ ಬಹಿಷ್ಕರಿಸಿದ್ದರಿಂದಾಗಿ, ವಿರೋಧ ಪಕ್ಷದ ಆಸನಗಳು ಖಾಲಿ ಹೊಡೆಯುತ್ತಿದ್ದವು. ವಿಧಾನಸಭೆಯಲ್ಲಿ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಏಕೈಕ ಸದಸ್ಯ ಜಿ. ಜನಾರ್ದನ ರೆಡ್ಡಿ ಮಾತ್ರ ಇದ್ದರು. ವಿಧಾನಪರಿಷತ್ತಿನಲ್ಲಿ ಬಿಜೆಪಿಯ ಎಚ್.ವಿಶ್ವನಾಥ್ ಹಾಗೂ ಜೆಡಿಎಸ್‌ನ ಮರಿತಿಬ್ಬೇಗೌಡ ಇದ್ದರು.

ವಿಧಾನಸಭೆಯಲ್ಲಿ ಸಭಾಧ್ಯಕ್ಷರ ಪೀಠಕ್ಕೆ ಬಿಜೆಪಿ ಸದಸ್ಯರು ಕಾಗದ ಚೂರುಗಳನ್ನು ಎಸೆದು ಗದ್ದಲ ಎಬ್ಬಿಸಿದ್ದು, ಅದರ ಬೆನ್ನಲ್ಲೇ, 10 ಸದಸ್ಯರನ್ನು ಈ ಅಧಿವೇಶನದ ಅವಧಿಗೆ ಅಮಾನತು ಮಾಡಿದ್ದಕ್ಕೂ ಈ ಬಾರಿಯ ಕಲಾಪ ಸಾಕ್ಷಿಯಾಯಿತು. ಅಧಿವೇಶನವನ್ನು ಶುಕ್ರವಾರ ಅನಿರ್ದಿಷ್ಟ ಅವಧಿಗೆ ಮುಂದೂಡಲಾಯಿತು. ಒಟ್ಟು 15 ದಿನಗಳ ಕಾಲ 78 ಗಂಟೆಗಳ ಅವಧಿ ನಡೆಯಿತು.

ವಿರೋಧಪಕ್ಷದ ನಾಯಕರನ್ನು ಆಯ್ಕೆ ಮಾಡಲಾಗದ ಬಿಜೆಪಿ ಸದಸ್ಯರನ್ನು ಆಡಳಿತ ಪಕ್ಷದ ನಾಯಕರು, ಸದಸ್ಯರು ಪದೇ ಪದೇ ಕುಟುಕಿ, ಕೆಣಕಿದರು. ಸರ್ಕಾರವನ್ನು ಅನೇಕ ಬಾರಿ ಇಕ್ಕಟ್ಟಿಗೆ ಸಿಲುಕಿಸಿದ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ವಿರೋಧ ಪಕ್ಷದ ನಾಯಕನ ಸ್ಥಾನವನ್ನು ತುಂಬುವ ಯತ್ನ ಮಾಡಿದರು.

ಮೊದಲ ದಿನದಿಂದಲೇ ಆಡಳಿತ ಮತ್ತು ವಿರೋಧ ಪಕ್ಷಗಳ ಮಧ್ಯೆ ಕಾವೇರಿದ ವಾತಾವರಣದಲ್ಲೇ ಆರೋಪ– ಪ್ರತ್ಯಾರೋಪಗಳು ನಡೆದವು. ಬಿಜೆಪಿ ಸದಸ್ಯರು ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಸದನದ ಒಳಗೆ ಹೆಚ್ಚು ಆಕ್ರಮಣಕಾರಿ ಧರಣಿ ಮತ್ತು ಪ್ರತಿಭಟನೆ ನಡೆಸಿದರು.

ಹಲವು ಪ್ರಮುಖ ಮಸೂದೆಗಳ ಪರ್ಯಾಲೋಚನೆ ಸಂದರ್ಭದಲ್ಲಿ ಚರ್ಚೆಯೇ ನಡೆಯಲಿಲ್ಲ. ಆಡಳಿತ ಸದಸ್ಯರು ತಿದ್ದುಪಡಿಗಳ ಗುಣಗಾನ ಮಾಡಿ, ಮಸೂದೆಗಳಿಗೆ ಅನುಮೋದನೆಯನ್ನು ನೀಡಿದರು.

ಎಪಿಎಂಸಿ ತಿದ್ದುಪಡಿ ಮಸೂದೆ ವಿಧಾನಪರಿಷತ್ತಿನಲ್ಲಿ ಮತ ವಿಭಜನೆಯಲ್ಲಿ ಸೋಲುಕಂಡಿದ್ದರಿಂದಾಗಿ, ಸರ್ಕಾರ ಮುಖಭಂಗ ಅನುಭವಿಸಿತು.

## ಲಕ್ಷ್ಮಣ ರೇಖೆ ದಾಟಿಲ್ಲ: ಸಭಾಧ್ಯಕ್ಷ ಯು.ಟಿ. ಖಾದರ್

‘ನಾನು ಯಾವುದೇ ಒತ್ತಡದಲ್ಲಿ ಕೆಲಸ ಮಾಡಿಲ್ಲ. ಉಪಸಭಾಧ್ಯಕ್ಷರ ಮುಖಕ್ಕೆ ಕಾಗದ ಎಸೆದು ಅಶಿಸ್ತು ತೋರಿದಾಗ, ಅಂತಹ ಸದಸ್ಯರ ವಿರುದ್ಧ ಕನಿಷ್ಠ ಕ್ರಮ ತೆಗೆದುಕೊಂಡಿದ್ದೇನೆ. ಅದು ಶಿಕ್ಷೆ ಅಲ್ಲ’ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ಕಲಾಪವನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ನಾನು ಲಕ್ಷ್ಮಣ ರೇಖೆಯನ್ನು ದಾಟಿಲ್ಲ’ ಎಂದರು.

‘ಸದನವನ್ನು ಉತ್ತಮವಾಗಿ ನಡೆಸುವುದು ನನ್ನೊಬ್ಬನ ಜವಾಬ್ದಾರಿ ಅಷ್ಟೇ ಅಲ್ಲ. ಎಲ್ಲ ಸದಸ್ಯರ ಜವಾಬ್ದಾರಿಯೂ ಹೌದು. ಪಕ್ಷಕ್ಕೂ ಕರ್ತವ್ಯಕ್ಕೂ ಸಂಬಂಧ ಇಲ್ಲ. ಪಕ್ಷಾತೀತನಾಗಿ ನಡೆದುಕೊಂಡಿದ್ದೇನೆ. ಸದನದ ಗೌರವಕ್ಕೆ ಚ್ಯುತಿ ತಂದಾಗ ಕರ್ತವ್ಯವನ್ನು ನೋವಿನಿಂದಲೇ ನಿರ್ವಹಿಸಿದ್ದೇನೆ’ ಎಂದು ಖಾದರ್ ಹೇಳಿದರು.

‘ಸಭಾಧ್ಯಕ್ಷರು ಯಾವಾಗಲೂ ಪ್ರತಿಪಕ್ಷಗಳ ಮಿತ್ರ. ಆದರೂ ನನ್ನ ಮೇಲೆ ಅವರಿಗೆ ಸಂಶಯ. ಹೀಗಾಗಿ ನನ್ನ ಮೇಲೆ ಆರೋಪ ಮಾಡುತ್ತಾರೆ. ಇದು ಪ್ರಜಾಪ್ರಭುತ್ವದ ಸೌಂದರ್ಯ’ ಎಂದರು.

‘ಇನ್ನು ಮುಂದೆ ಅಧಿವೇಶನದ ವೇಳೆ ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳು ಕಲಾಪ ವೀಕ್ಷಣೆಗೆ ಬಂದಾಗ ಬಿಸಿಲಿನಲ್ಲಿ ನಿಲ್ಲಿಸಬಾರದು ಎಂದು ಸೂಚಿಸಲಾಗಿದೆ. ಅವರಿಗೆ ಒಳಗೆ ನೆಲಹಾಸು ಹಾಕಿಸಿ ಕೂರಿಸುವ ವ್ಯವಸ್ಥೆ ಮಾಡಲಾಗುವುದು. ಶಾಲೆಗಳು ಡಿಡಿಪಿಐ ಮೂಲಕ ಇಮೇಲ್ ಮಾಡಿದರೆ ಕಲಾಪ ವೀಕ್ಷಣೆಗೆ ದಿನಾಂಕ ಮತ್ತು ಸಮಯ ನಿಗದಿ ಮಾಡಲಾಗುವುದು. ಆ ಸಮಯಕ್ಕೆ ಬಂದರೆ ಸಾಕು’ ಎಂದು ಖಾದರ್ ಹೇಳಿದರು.

## ಸುದ್ದಿ 2 ನಿಮಿಷ

### ‘ಯುಪಿಎಸ್‌ಸಿ: ಒಬಿಸಿ ವಿದ್ಯಾರ್ಥಿಗಳಿಗೆ ಉಚಿತ ವಸತಿ’

**ಬೆಂಗಳೂರು:** ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ಪರೀಕ್ಷೆಗೆ ಸಿದ್ಧತೆ ನಡೆಸುವ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಬೆಂಗಳೂರು ಹಾಗೂ ದೆಹಲಿಯಲ್ಲಿ ಉಚಿತ ವಸತಿ ವ್ಯವಸ್ಥೆ ಕಲ್ಪಿಸುವ ಬಗ್ಗೆ ಕ್ರಮ ವಹಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ್ ತಂಗಡಗಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶುಕ್ರವಾರ ವಿವಿಧ ನಿಗಮದ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ದೆಹಲಿ ಮತ್ತು ಬೆಂಗಳೂರಿನಲ್ಲಿ ಪ್ರತ್ಯೇಕ ವಸತಿ ವ್ಯವಸ್ಥೆ ಕಲ್ಪಿಸುವಂತೆ ಮನವಿ ಮಾಡಿ ಬೇಡಿಕೆ ಸಲ್ಲಿಸಿದ್ದಾರೆ. ಅವರಿಗೆ ಅನುಕೂಲವಾಗುವಂತೆ ವ್ಯವಸ್ಥೆ ಕಲ್ಪಿಸಬೇಕು. ಸಂಬಂಧ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಿ, ವರದಿ ಸಿದ್ಧಪಡಿಸುವಂತೆ ನಿರ್ದೇಶನ ನೀಡಿದರು.

ಬಜೆಟ್‌ನಲ್ಲಿ ಇಲಾಖೆಗೆ ನೀಡಲಾಗಿರುವ ಹಣವನ್ನು ಸೂಕ್ತವಾಗಿ ಬಳಸಿಕೊಳ್ಳಬೇಕು. ಮಾರ್ಚ್ ವೇಳೆಗೆ ಶೇ 100ರಷ್ಟು ಗುರಿ ಸಾಧಿಸಬೇಕು. ಮಾರ್ಚ್ ತಿಂಗಳವರೆಗೆ ಹಣ ಉಳಿಸಿಕೊಂಡು ತರಾತುರಿಯಲ್ಲಿ ಹಣ ವ್ಯಯಿಸುವ ಕೆಲಸ ಆಗಬಾರದು. ಅವಧಿಗೂ ಮುನ್ನ ಬಳಕೆ ಮಾಡಿದರೆ ಮುಖ್ಯಮಂತ್ರಿಗಳ ಬಳಿ ಹೆಚ್ಚಿನ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಗಳ ಆಯ್ಕೆ ಪಟ್ಟಿಯನ್ನು ಪ್ರಸ್ತುತ ಕ್ಷೇತ್ರದಲ್ಲಿ ಆಯಾ ಶಾಸಕರು ಕಳುಹಿಸುತ್ತಿರುವುದು ತಡವಾಗುತ್ತಿದೆ ಎಂದು ಅಧಿಕಾರಿಗಳು ಸಚಿವರ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ‘ನವೆಂಬರ್ ಒಳಗೆ ಯೋಜನೆಯ ಫಲಾನುಭವಿಗಳ ಆಯ್ಕೆ ಪಟ್ಟಿ ಸಿದ್ಧಪಡಿಸಿ ಕಳುಹಿಸುವಂತೆ ಶಾಸಕರಿಗೆ ಪತ್ರ ಬರೆಯಿರಿ’ ಎಂದು ಸಲಹೆ ನೀಡಿದರು.

### ಮದ್ಯದ ದರ ಹೆಚ್ಚಳ ಜಾರಿ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜುಲೈ 7ರಂದು ಮಂಡಿಸಿದ್ದ ಬಜೆಟ್‌ನಲ್ಲಿನ ಘೋಷಣೆಯಿಂದ ಮದ್ಯದ ದರ ಹೆಚ್ಚಳ ಗುರುವಾರದಿಂದಲೇ(ಜುಲೈ 20) ಜಾರಿಯಾಗಿದೆ.

ಐದು ಗ್ಯಾರಂಟಿಗಳ ಅನುಷ್ಠಾನಕ್ಕೆ ಬೇಕಿರುವ ಹೆಚ್ಚುವರಿ ಸಂಪನ್ಮೂಲ ಸಂಗ್ರಹಿಸಲು ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಶೇಕಡ 20ರಷ್ಟು ಮತ್ತು ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯನ್ನು ಶೇಕಡ 10ರಷ್ಟು ಹೆಚ್ಚಳ ಮಾಡಲಾಗಿದೆ. ಮಿಲಿಟರಿ ಕ್ಯಾಂಟೀನ್ ಹೊರತುಪಡಿಸಿ ಎಲ್ಲ ಮದ್ಯದಂಗಡಿಗಳಿಗೂ ಪರಿಷ್ಕೃತ ದರ ಹೆಚ್ಚಳವಾಗಲಿದೆ. 2020ರಿಂದ ಜಾರಿಯಲ್ಲಿರುವ ದರಕ್ಕೆ ಹೋಲಿಸಿದರೆ ಪ್ರತಿ ಪೆಟ್ಟಿಗೆಗೆ ₹ 449 ಘೋಷಿತ ದರ ಹೊಂದಿರುವ ಬಲ್ಕ್ ಲೀಟರ್ ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯಲ್ಲಿ ₹ 55ರಷ್ಟು ಹೆಚ್ಚಳವಾಗಲಿದೆ.

ಒಟ್ಟು 18 ಸ್ಲ್ಯಾಬ್‌ಗಳಲ್ಲಿ ಮದ್ಯದ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆ ಏರಿಕೆ ಮಾಡಲಾಗಿದೆ. ಕೊನೆಯ ಹಂತದಲ್ಲಿ ಪ್ರತಿ ಬಲ್ಕ್ ಲೀಟರ್‌ಗೆ ₹ 15,001 ಅಥವಾ ಅದಕ್ಕಿಂತ ಹೆಚ್ಚಿನ ಘೋಷಿತ ದರ ಹೊಂದಿರುವ ಮದ್ಯದ ಪೆಟ್ಟಿಗೆ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆಯಲ್ಲಿ ₹ 893ರಷ್ಟು ಹೆಚ್ಚಳವಾಗಲಿದೆ.

ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ತೆರಿಗೆ ಪ್ರಮಾಣ ಶೇ 175ರಷ್ಟು ಇತ್ತು. ಅದನ್ನು ಶೇ 185ಕ್ಕೆ ಏರಿಕೆ ಮಾಡಲಾಗಿದೆ.

# ಮಣಿಪುರ ಘಟನೆ: ತ್ವರಿತ ಕ್ರಮಕ್ಕೆ ದೇವೇಗೌಡ ಒತ್ತಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಣಿಪುರ ಪ್ರಕರಣ ಕುರಿತು ಕಳವಳ ವ್ಯಕ್ತಪಡಿಸಿರುವ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ, ಈಶಾನ್ಯ ರಾಜ್ಯ ಮಣಿಪುರ ಸೇರಿದಂತೆ ರಾಷ್ಟ್ರದ ಜನರ ವಿಶ್ವಾಸ ಮರುಸ್ಥಾಪಿಸುವಂತಹ ಕ್ರಮಗಳನ್ನು ಕೇಂದ್ರ ಸರ್ಕಾರ ತ್ವರಿತವಾಗಿ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಈ ಕುರಿತು ಶನಿವಾರ ಟ್ವೀಟ್ ಮಾಡಿರುವ ಅವರು, ಮಣಿಪುರ ಘಟನೆಯಂತಹ ವಿಕೃತಿಗಳು ದೇಶದ ಇತರೆಡೆ ಹಬ್ಬುವ ಲಕ್ಷಣಗಳು ಗೋಚರಿಸುವ ಮೊದಲು ಕಠಿಣ ಕ್ರಮಗಳನ್ನು ಆರಂಭಿಸಬೇಕು. ಹಿಂಸಾಚಾರ ಮತ್ತು ಸಾವುಗಳ ಸರಣಿ ಕೊನೆಗಾಣಿಸಬೇಕು ಎಂದಿದ್ದಾರೆ.

‘ನಾನು ಪ್ರಧಾನಿಯಾದ ದಿನಗಳಿಂದಲೂ ಈಶಾನ್ಯ ಜನರ ಬಗ್ಗೆ ವಿಶೇಷ ಪ್ರೀತಿ ಇದೆ. ಒಬ್ಬ ನಾಗರಿಕನಾಗಿ ಈಶಾನ್ಯದಲ್ಲಿ ಶಾಂತಿ ಮೂಡುವುದನ್ನು ಬಯಸುತ್ತೇವೆ’ ಎಂದು ಹೇಳಿದ್ದಾರೆ.

# ‘ಗೋಡ್ಸೆ ಪ್ರತಿಮೆ ಮುಂದೆ ಬಿಜೆಪಿ ಧರಣಿ ನಡೆಸಲಿ’

## ₹ 170 ಲಕ್ಷ ಕೋಟಿ ಸಾಲ ಮಾಡಿದ್ದೇ ಮೋದಿ ಸಾಧನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು – ಪ್ರಜಾವಾಣಿ ಚಿತ್ರ

**ಬೆಂಗಳೂರು:** ‘ಬೇಜವಾಬ್ದಾರಿ, ಸುಳ್ಳುಗಾರ ಬಿಜೆಪಿ ಶಾಸಕರು ಗಾಂಧಿ ಪ್ರತಿಮೆ ಬದಲು ಗೋಡ್ಸೆ ಪ್ರತಿಮೆ ಮುಂದೆ ಧರಣಿ ನಡೆಸಲಿ. ಎರಡು ವರ್ಷ ಶುಚಿ ಯೋಜನೆಯ ಕಿಟ್ ನೀಡದ ನೀಚರು ಅವರು...’

ವಿಧಾನಪರಿಷತ್‌ನಲ್ಲಿ ಬಜೆಟ್ ಮೇಲಿನ ಚರ್ಚೆಗೆ ಶುಕ್ರವಾರ ಸರ್ಕಾರದ ಪರವಾಗಿ ಉತ್ತರ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಗ್ದಾಳಿ ನಡೆಸಿದ ಪರಿ ಇದು.

ಎರಡೂವರೆ ಗಂಟೆಗಳಿಗೂ ಹೆಚ್ಚು ಕಾಲ ಉತ್ತರ ನೀಡಿದ ಸಿದ್ದರಾಮಯ್ಯ, ಬಹುತೇಕ ಸಮಯವನ್ನು ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿಗೆ ಮೀಸಲಿಟ್ಟರು. ಕಲಾಪ ಬಹಿಷ್ಕರಿಸಿದ ಬಿಜೆಪಿ, ಜೆಡಿಎಸ್ ಸದಸ್ಯರನ್ನು ತೀವ್ರ ತರಾಟೆಗೆ ತೆಗೆದುಕೊಂಡ ಅವರು, ರಾಜ್ಯದಲ್ಲಿನ ಹಣಕಾಸು ಪರಿಸ್ಥಿತಿ, ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ತೆರಿಗೆ ಪಾಲು, ‘ಗ್ಯಾರಂಟಿ’ ಯೋಜನೆಗಳಿಗೆ ಮೀಸಲಿಟ್ಟ ಅನುದಾನ ಮತ್ತು ಸಂಪನ್ಮೂಲ ಕ್ರೋಡಿಕರಣಕ್ಕೆ ಕೈಗೊಂಡ ಕ್ರಮಗಳನ್ನು ವಿವರವಾಗಿ ಬಿಚ್ಚಿಟ್ಟರು.

‘ವಿರೋಧ ಪಕ್ಷಗಳ ಗೈರು ಹಾಜರಿಯಲ್ಲಿ ಉತ್ತರ ನೀಡುತ್ತಿರುವುದು ಇದೇ ಮೊದಲು. ಬಿಜೆಪಿಯವರ ಈ ವರ್ತನೆ ಉದ್ಧಟತನದ ಪರಮಾವಧಿ. ಸಾಮರಸ್ಯ ಹಾಳು ಮಾಡುವುದು ಮತ್ತು ಬೆಂಕಿ ಹಚ್ಚುವುದೇ ಬಿಜೆಪಿಯವರ ಕೆಲಸ. ಇಂತವರಿಗೆ ಶಾಂತಿ ಮತ್ತು ಸತ್ಯಕ್ಕಾಗಿ ಹೋರಾಟ ನಡೆಸಿದ ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಧರಣಿ ನಡೆಸುವ ನೈತಿಕತೆಯೂ ಇಲ್ಲ’ ಎಂದು ಕಿಡಿಕಾರಿದರು.

‘ದೇಶದ ಒಟ್ಟು ಸಾಲ 2014–15ರಲ್ಲಿ ₹53.11 ಲಕ್ಷ ಕೋಟಿ ಇತ್ತು. ನರೇಂದ್ರ ಮೋದಿ ಅವರು ಅಧಿಕಾರಕ್ಕೆ ಬಂದ ನಂತರ ₹170 ಲಕ್ಷ ಕೋಟಿಗೆ ಹೆಚ್ಚಿದೆ. ಕಳೆದ 10 ವರ್ಷಗಳಲ್ಲಿ ಅತಿ ಹೆಚ್ಚು ಸಾಲ ಮಾಡಿದ್ದೇ ಮೋದಿ ಸಾಧನೆ. ದೇಶವನ್ನು ಸಾಲದಲ್ಲಿ ಮುಳುಗಿಸಿದ್ದೇ ಮೋದಿ ಅವರ ಕೊಡುಗೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ನಮ್ಮ ಸರ್ಕಾರ ಜನರ ಜೇಬಿಗೆ ದುಡ್ಡು ಹಾಕಿದರೆ, ಕೇಂದ್ರ ಸರ್ಕಾರ ಬಡವರ ಜೇಬಿನಿಂದ ಕಿತ್ತುಕೊಳ್ಳುತ್ತದೆ. ಕೇಂದ್ರ ಸರ್ಕಾರವು ಕಾರ್ಪೊರೇಟ್ ಸಂಸ್ಥೆಗಳಿಗೆ ವಿಧಿಸುವ ತೆರಿಗೆಯನ್ನು ಶೇ 30ರಿಂದ ಶೇ 22ಕ್ಕೆ ಇಳಿಸಿತು. ಇದರಿಂದ ಪ್ರತಿ ವರ್ಷ ಕೇಂದ್ರಕ್ಕೆ ₹2 ಲಕ್ಷ ಕೋಟಿ ನಷ್ಟವಾಗುತ್ತಿದೆ. ಜತೆಗೆ ಕಾರ್ಪೊರೇಟ್ ಸಂಸ್ಥೆಗಳು ಮತ್ತು ಉದ್ಯಮಿಗಳ ₹12 ಲಕ್ಷ ಕೋಟಿ ಸಾಲ ಮನ್ನಾ ಮಾಡಲಾಗಿದೆ. ಮೋದಿ ಅವರ ಇಂತಹ ಕ್ರಮಗಳಿಂದ ದೇಶ ಆರ್ಥಿಕವಾಗಿ ದಿವಾಳಿಯಾಗುತ್ತಿದೆ’ ಎಂದರು.

‘ಕರ್ನಾಟಕದಲ್ಲಿ 2018ರ ಮಾರ್ಚ್‌ವರೆಗೆ ₹2.45 ಲಕ್ಷ ಕೋಟಿ ಸಾಲವಿತ್ತು. ಈ ವರ್ಷದ ಮಾರ್ಚ್ ಅಂತ್ಯಕ್ಕೆ ₹5.71 ಲಕ್ಷ ಕೋಟಿಗೆ ಹೆಚ್ಚಳವಾಗಲಿದ್ದು, ಬಿಜೆಪಿ ಸರ್ಕಾರ ದುಪ್ಪಟ್ಟು ಸಾಲ ಮಾಡಿದೆ. ಈ ವರ್ಷ ರಾಜ್ಯದಿಂದ ವಿವಿಧ ತೆರಿಗೆಗಳ ರೂಪದಲ್ಲಿ ಕೇಂದ್ರಕ್ಕೆ ₹4 ಲಕ್ಷ ಕೋಟಿ ನೀಡಲಾಗುತ್ತಿದೆ. ಅದರಲ್ಲಿ ತೆರಿಗೆ ಪಾಲು ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಸೇರಿ ಕೇವಲ ₹50,257 ಕೋಟಿ ರಾಜ್ಯಕ್ಕೆ ದೊರೆಯುತ್ತಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

### ಕಿಡಿಕಾರಿದ ಸಿ.ಎಂ

- ಹಗರಣಗಳ ತನಿಖೆ ಆರಂಭಿಸಿರುವುದು ಬಿಜೆಪಿಯವರಿಗೆ ಭಯ ತಂದಿದೆ. ಬಿಟ್ ಕಾಯಿನ್, ಪಿಎಸ್‌ಐ ನೇಮಕಾತಿ, ಕೋವಿಡ್–19 ಅವಧಿಯಲ್ಲಿನ ಖರೀದಿ ಕುರಿತು ತನಿಖೆ ನಡೆಸಲಾಗುತ್ತಿದೆ.
- ನಾವು ಬಿಜೆಪಿ ಮುಕ್ತ ಭಾರತ ಎಂದು ಹೇಳುವುದಿಲ್ಲ. ಆದರೆ, ಅವರು ಅಧಿಕಾರಕ್ಕೆ ಎಂದಿಗೂ ಬರಬಾರದು.
- ಬಿಜೆಪಿಯವರಿಗೆ ಧಮ್ಮೂ ಇಲ್ಲ, ತಾಕತ್ತೂ ಇಲ್ಲ. ಸದನದಲ್ಲಿ ಈ ಗಿರಾಕಿಗಳು ಪತ್ತೆಯೇ ಇಲ್ಲ.
- ಒಂದು ಕಾಳು ಅಕ್ಕಿ ಕಡಿಮೆಯಾದರು ಹೋರಾಟ ಮಾಡುವುದಾಗಿ ಹೇಳಿದ್ದ ಬಿ.ಎಸ್. ಯಡಿಯೂರಪ್ಪ ಅವರು ತಮ್ಮ ಅವಧಿಯಲ್ಲಿ 7 ಕೆಜಿ ಅಕ್ಕಿಯನ್ನು 4 ಕೆ.ಜಿ.ಗೆ ಇಳಿಸಿದ್ದರು. ಈಗ ನಮಗೂ ಅಕ್ಕಿ ಕೊಡುತ್ತಿಲ್ಲ.

# ‘ಬರ ಘೋಷಣೆಗೆ ಕೇಂದ್ರದ ಮಾರ್ಗಸೂಚಿ ಅಡ್ಡಿ’

ಪ್ರಜಾವಾಣಿ ವಾರ್ತೆ

ಕೃಷ್ಣ ಬೈರೇಗೌಡ

**ಬೆಂಗಳೂರು:** ‘ಕೇಂದ್ರ ಸರ್ಕಾರದ ಮಾರ್ಗಸೂಚಿಯಿಂದಾಗಿ ರಾಜ್ಯದಲ್ಲಿ ಬರಪೀಡಿತ ತಾಲ್ಲೂಕುಗಳ ಘೋಷಣೆಗೆ ಅಡಚಣೆ ಉಂಟಾಗಿದೆ. ಮಾರ್ಗಸೂಚಿಯಲ್ಲಿ ಬದಲಾವಣೆ ಮಾಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗುವುದು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ವಿಧಾನಸಭೆಯಲ್ಲಿ ನಿಯಮ 69ರ ಅಡಿಯಲ್ಲಿ ನಡೆದ ಚರ್ಚೆಗೆ ಶುಕ್ರವಾರ ಉತ್ತರ ನೀಡಿದ ಅವರು, ‘2016ರಲ್ಲಿ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಬರ ಘೋಷಣೆ ಕೈಪಿಡಿ ಪ್ರಕಾರ ರಾಜ್ಯಕ್ಕೆ ಹೆಚ್ಚು ಅಧಿಕಾರಗಳಿಲ್ಲ. ಶೇಕಡ 60ಕ್ಕಿಂತ ಹೆಚ್ಚಿನ ಮಳೆ ಕೊರತೆ ಇರುವ, ಮೂರು ವಾರಗಳಿಂದ ಸತತವಾಗಿ ಮಳೆಯಾಗದ ತಾಲ್ಲೂಕುಗಳನ್ನು ಮಾತ್ರವೇ ಬರಪೀಡಿತ ಎಂದು ಘೋಷಿಸಲು ಅವಕಾಶವಿದೆ’ ಎಂದರು.

ಮಾರ್ಗಸೂಚಿಗಳನ್ನು ಪರಿಷ್ಕರಿಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲು ಸಿ.ಎಂ ನಿರ್ಧರಿಸಿದ್ದಾರೆ. ಪತ್ರದ ಕರಡು ಕೂಡ ಸಿದ್ಧವಾಗಿದೆ. ಒಂದೆರಡು ದಿನಗಳಲ್ಲಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ಹೇಳಿದರು.

**ನೀರಿನ ಬಳಕೆಯಲ್ಲಿ ಅಶಿಸ್ತು:** ಕಳೆದ ವರ್ಷ ಹೆಚ್ಚಿನ ಮಳೆಯಾಗಿತ್ತು. ಡಿಸೆಂಬರ್‌ವರೆಗೂ ಜಲಾಶಯಗಳಿಗೆ ಒಳಹರಿವು ಇತ್ತು. ಆದರೆ, ಹಿಂದಿನ ಸರ್ಕಾರವು ಚುನಾವಣೆಗೂ ಮೊದಲು ನಾಲ್ಕು ತಿಂಗಳ ಕಾಲ ಜಲಾಶಯಗಳಲ್ಲಿ ಸಂಗ್ರಹವಾಗಿದ್ದ ನೀರಿನ ಬಳಕೆಯಲ್ಲಿ ಅಶಿಸ್ತು ಪ್ರದರ್ಶಿಸಿತ್ತು. ಇದರಿಂದ ರಾಜ್ಯದಲ್ಲಿ ಕುಡಿಯುವ ನೀರಿನ ಕ್ಷಾಮ ಎದುರಾಗುವ ಭೀತಿ ಇತ್ತು. ಈಗ ಮಳೆ ಬೀಳುತ್ತಿರುವುದರಿಂದ ಪರಿಸ್ಥಿತಿ ಸುಧಾರಿಸಿದೆ ಎಂದು ಕೃಷ್ಣ ಬೈರೇಗೌಡ ಹೇಳಿದರು.

‘ಮಳೆ ಕೊರತೆಯಿಂದ ರಾಜ್ಯದ ಹಲವು ತಾಲ್ಲೂಕುಗಳಲ್ಲಿ ಭೀಕರ ಬರದ ಪರಿಸ್ಥಿತಿ. ಇನ್ನೂ ವಿಳಂಬ ಮಾಡುವುದರಲ್ಲಿ ಅರ್ಥವಿಲ್ಲ. ತಕ್ಷಣವೇ ಬರಪೀಡಿತ ತಾಲ್ಲೂಕುಗಳ ಘೋಷಣೆ ಮಾಡಬೇಕು’ ಎಂದು ಕಾಂಗ್ರೆಸ್‌ನ ಎಂ.ವೈ. ಪಾಟೀಲ, ರಾಜು ಕಾಗೆ, ಬಿ.ಆರ್.ಪಾಟೀಲ, ಜೆ.ಟಿ. ಪಾಟೀಲ, ವಿಜಯಾನಂದ ಕಾಶಪ್ಪನವರ್ ಆಗ್ರಹಿಸಿದರು.

### ಅಂಕಿ ಅಂಶಗಳು

**29%** ರಷ್ಟು
ರಾಜ್ಯದಲ್ಲಿ ವಾಡಿಕೆಗಿಂತ ಮಳೆ ಕೊರತೆ

**110** ಗ್ರಾಮಗಳು
ಕುಡಿಯುವ ನೀರಿನ ಕೊರತೆ

ತಲಾ **₹1** ಕೋಟಿ
ಪ್ರತಿ ಜಿಲ್ಲೆಗೆ ಕುಡಿಯುವ ನೀರಿನ ಪೂರೈಕೆಗೆ ಅನುದಾನ

# ಜೆಡಿಎಸ್ ಬಲಪಡಿಸಲು 10 ತಂಡ ರಚನೆ

**ಬೆಂಗಳೂರು:** ರಾಜ್ಯದಲ್ಲಿ ಜೆಡಿಎಸ್ ಬಲಪಡಿಸಲು 10 ತಂಡಗಳನ್ನು ರಚಿಸಲಾಗುವುದು. ಪ್ರತಿ ಜಿಲ್ಲೆಯಲ್ಲೂ ಸರ್ಕಾರದ ವೈಫಲ್ಯಗಳ ವಿರುದ್ಧ ಹೋರಾಟ ನಡೆಸಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

‘ಶಾಸಕರು ಹಾಗೂ ನಾಯಕರ ನೇತೃತ್ವದಲ್ಲಿ ರಚಿಸಲಾಗುವ ತಂಡ ಎಲ್ಲ ಜಿಲ್ಲೆಗಳಿಗೂ ಭೇಟಿ ನೀಡಿ, ಪಕ್ಷದ ಸಮಸ್ಯೆಗಳನ್ನು ಆಲಿಸಲಿದೆ. ಪಕ್ಷ ಬಲಪಡಿಸಲು ಶ್ರಮಿಸಲಿದೆ. ಎಚ್.ಡಿ.ದೇವೇಗೌಡರು ಈಗಾಗಲೇ ಪಕ್ಷದ ಶಾಸಕರ ಜತೆ ಮಾತನಾಡಿದ್ದಾರೆ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಲು ಸೂಚಿಸಿದ್ದಾರೆ. ಎನ್‌ಡಿಎ ಹಾಗೂ ಇಂಡಿಯಾ ಎರಡರಿಂದಲೂ ಅಂತರ ಕಾಯ್ದುಕೊಳ್ಳಬೇಕು ಎನ್ನುವುದು ದೇವೇಗೌಡರ ನಿಲುವು. ರಾಜ್ಯ ಸರ್ಕಾರದ ವೈಫಲ್ಯಗಳ ವಿರುದ್ಧ ಬಿಜೆಪಿ ಜತೆ ಜಂಟಿ ಹೋರಾಟ ನಡೆಸಲಾಗುವುದು. ಪಕ್ಷಕ್ಕೆ ಅನುಕೂಲಕರ ನಿರ್ಧಾರ ತೆಗೆದುಕೊಳ್ಳುವ ಸಂಪೂರ್ಣ ಅಧಿಕಾರವನ್ನು ನನಗೆ ನೀಡಿದ್ದಾರೆ’ ಎಂದು ಹೇಳಿದರು.

# ಧರ್ಮಸ್ಥಳ: ಅವಹೇಳನ ವರದಿಗೆ ನಿರ್ಬಂಧ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಧರ್ಮಸ್ಥಳ ಹಾಗೂ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆಯವರ ವಿರುದ್ಧ ಯಾವುದೇ ಮಾಧ್ಯಮದ ಮೂಲಕ ಅವಹೇಳನಕಾರಿ ವರದಿ ಮಾಡದಂತೆ ಮತ್ತು ಈಗಾಗಲೇ ಸಾಮಾಜಿಕ ಮಾಧ್ಯಮಗಳೂ ಸೇರಿದಂತೆ ಇನ್ನಿತರೆ ಮಾಧ್ಯಮಗಳು ಮಾಡಿರುವ ಅವಹೇಳನಕಾರಿ ವರದಿಗಳನ್ನು ಅಳಿಸಿ ಹಾಕುವಂತೆ ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ಆದೇಶಿಸಿದೆ.

ಈ ಸಂಬಂಧ ವಾದಿಗಳಾದ ಶೀನಪ್ಪ ಮತ್ತಿತರರು ಸಲ್ಲಿಸಿರುವ ಅಸಲು ದಾವೆಯನ್ನು ಸಿಸಿಎಚ್–11ನೇ ನ್ಯಾಯಾಲಯ ವಿಚಾರಣೆ ನಡೆಸಿ ಇದೇ 19ರಂದು ಈ ಕುರಿತಂತೆ ಆದೇಶಿಸಿದೆ.

‘ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶರು ಶ್ರೀ ಕ್ಷೇತ್ರ ಧರ್ಮಸ್ಥಳ, ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ನಡೆಸುತ್ತಿರುವಂತಹ ಸಂಸ್ಥೆಗಳು ಹಾಗೂ ಅವರ ಕುಟುಂಬಸ್ಥರ ವಿರುದ್ಧ ಸಾಮಾಜಿಕ ಜಾಲತಾಣಗಳಾದ ವಾಟ್ಸ್ ಆ್ಯಪ್, ಫೇಸ್ ಬುಕ್, ಇನ್ಸ್ಟಾಗ್ರಾಮ್, ಯೂ–ಟ್ಯೂಬ್, ಟಿ.ವಿ.ಚಾನೆಲ್ ಹಾಗೂ ಇತರೆ ಯಾವುದೇ ರೀತಿಯ ಮಾಧ್ಯಮ ಪ್ರಕಾರಗಳಲ್ಲಿ ಸೌಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಅವಹೇಳನಕಾರಿ ವರದಿ ಅಥವಾ ಮಾತನಾಡಬಾರದು’ ಎಂದು ನಿರ್ಬಂಧಿಸಿ ಆದೇಶಿಸಿದೆ.

‘ಈಗಾಗಲೇ ಈ ಸಂಬಂಧ ಪ್ರಕಟಿಸಲಾಗಿರುವ ವರದಿಗಳನ್ನ ಅಳಿಸಿ ಹಾಕಬೇಕು’ ಎಂದು ಆದೇಶಿಸಿರುವ ನ್ಯಾಯಾಧೀಶರು, 61 ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿದ್ದು ವಿಚಾರಣೆ ಮುಂದೂಡಿದ್ದಾರೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ರಾಜಶೇಖರ ಎಸ್.ಹಿಲ್ಯಾರು ಮತ್ತು ಮಂಗಳೂರಿನ ಮಯೂರ ಕೀರ್ತಿ ವಾದ ಮಂಡಿಸಿದರು.

### ಅರ್ಜಿಯಲ್ಲಿ ಏನಿದೆ?

‘ಬೆಳ್ತಂಗಡಿ ತಾಲ್ಲೂಕು ಧರ್ಮಸ್ಥಳ ಗ್ರಾಮದ ಪಾಂಗಳದಲ್ಲಿ 2012ರಲ್ಲಿ ನಡೆದಿದ್ದ ಸೌಜನ್ಯ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳೀಯರಾದ ಮಹೇಶ್ ಶೆಟ್ಟಿ ತಿಮರೋಡಿ, ಜಗದೀಶ್, ಪ್ರಭಾ ಬೆಳಹೊಂಗಲ, ಸೋಮನಾಥ್ ನಾಯಕ್, ಬಿ.ಎಂ.ಭಟ್, ವಿಠ್ಠಲ ಗೌಡ ಅವರೆಲ್ಲ, ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಮತ್ತು ಅವರ ಕುಟುಂಬಸ್ಥರ ವಿರುದ್ಧ ಆರೋಪ ಗಳನ್ನು ಮಾಡುತ್ತಿದ್ದಾರೆ. ಈ ಸಂಬಂಧ ಕೆಲ ಮಾಧ್ಯಮಗಳು ಕ್ಷೇತ್ರ, ಕ್ಷೇತ್ರಾಧಿಕಾರಿ ಹಾಗೂ ಅವರ ಕುಟುಂಬದ ಸದಸ್ಯರ ವಿರುದ್ಧ ಅವಹೇಳನಕಾರಿಯಾಗಿ ವರದಿ ಮಾಡುತ್ತಿವೆ’ ಎಂದು ದಾವೆದಾರರು ಅರ್ಜಿಯಲ್ಲಿ ವಿವರಿಸಿದ್ದಾರೆ.

# ‘ಖಾಸಗಿ ಸಕ್ಕರೆ ಕಾರ್ಖಾನೆ ನಿಯಂತ್ರಣಕ್ಕೆ ಕಾನೂನು’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಖಾಸಗಿ ಸಕ್ಕರೆ ಕಾರ್ಖಾನೆಗಳನ್ನು ನಿಯಂತ್ರಣದಲ್ಲಿಡಲು ಮಹಾರಾಷ್ಟ್ರ ಮಾದರಿಯಲ್ಲಿ ಏಕರೂಪ ಕಾನೂನನ್ನು ಜಾರಿ ತರಲು ಚಿಂತನೆ ನಡೆಸಲಾಗಿದೆ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು

ವಿಧಾನಸಭೆಯಲ್ಲಿ ಶುಕ್ರವಾರ ನಿಯಮ 69ರಡಿ ಕಾಂಗ್ರೆಸ್‌ನ ಲಕ್ಷ್ಮಣ ಸವದಿ, ಜಿ.ಟಿ.ಪಾಟೀಲ, ಮಹೇಂದ್ರ ಕಲ್ಲಪ್ಪ ತಮ್ಮಣ್ಣವರ್ ಮತ್ತು ರಾಜು ಕಾಗೆ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರ ನೀಡಿದ ಅವರು, ‘ಖಾಸಗಿ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ತೂಕದಲ್ಲಿ ಮೋಸ ಮಾಡುತ್ತಿವೆ’ ಎಂದು ದೂರಿದರು.

‘ಮಹಾರಾಷ್ಟ್ರದಲ್ಲಿ ಖಾಸಗಿ ಸಕ್ಕರೆ ಕಾರ್ಖಾನೆಗಳಿಗೆ ನಿಯಂತ್ರಣ ವಿಧಿಸಲು ಕಾನೂನು ಜಾರಿ ಮಾಡಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿಯವರ ಜತೆ ಚರ್ಚಿಸಿ ನಮ್ಮಲ್ಲೂ ಜಾರಿ ಮಾಡಲಾಗುವುದು’ಎಂದರು.

ಯಾವುದೇ ಕಬ್ಬು ಬೆಳೆಗಾರ ಖಾಸಗಿ ಸಕ್ಕರೆ ಕಾರ್ಖಾನೆಗಳ ಮೇಲೆ ದೂರು ನೀಡಿದರೆ, ಆಗ ಕ್ರಮ ತೆಗೆದುಕೊಳ್ಳಬಹುದು. ದೂರು ಬರದೇ ಇದ್ದರೆ ಯಾವುದೇ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗದು. ತೂಕದಲ್ಲಿ ಮೋಸವನ್ನು ತಡೆಯಲು ಸರ್ಕಾರದ ವತಿಯಿಂದಲೇ ಎಲೆಕ್ಟ್ರಾನಿಕ್ ತೂಕದ ಯಂತ್ರ ಅಳವಡಿಸಲು ಕ್ರಮವಹಿಸಲಾಗುವುದು. ಅಲ್ಲಿಯವರೆಗೆ ಹಾಲಿ ತೂಕದ ಯಂತ್ರವನ್ನು ದೂರದಿಂದ ನಿಯಂತ್ರಿಸಿ ತೂಕದಲ್ಲಿ ಮೋಸ ಮಾಡುವುದನ್ನು ತಡೆಯಲು ಜಾಮರ್‌ಗಳನ್ನು ಅಳವಡಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

‘ಖಾಸಗಿ ಸಕ್ಕರೆ ಕಾರ್ಖಾನೆಗಳು ತೂಕದಲ್ಲಿ ಮಾಡುವ ಮೋಸಕ್ಕೆ ಸಂಬಂಧಿಸಿದಂತೆ ತೂಕ ಮತ್ತು ಅಳತೆ ಇಲಾಖೆಯವರು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಬೇಕು. ಆದರೆ, ಅವರು ಏನೂ ಮಾಡುತ್ತಿಲ್ಲ. ಅವರೇ ಶಾಮೀಲಾಗ್ತಾರೋ ಗೊತ್ತಿಲ್ಲ. ತೂಕ–ಅಳತೆ ನಮ್ಮ ಇಲಾಖೆಯ ನಿಯಂತ್ರಣಕ್ಕೆ ಬರುವುದಿಲ್ಲ. ಇವರು ದಕ್ಷತೆಯಿಂದ ಕೆಲಸ ಮಾಡಿದರೆ ಮೋಸ ಆಗುವುದಿಲ್ಲ’ ಎಂದು ತಿಳಿಸಿದರು.

ಲಕ್ಷ್ಮಣ ಸವದಿ ಮಾತನಾಡಿ, ‘ಖಾಸಗಿ ಸಕ್ಕರೆ ಕಾರ್ಖಾನೆಗಳಲ್ಲಿ ಹೆಚ್ಚಿನವರು ಕಬ್ಬು ಬೆಳೆಗಾರರಿಗೆ ತೂಕದಲ್ಲಿ ಮೋಸ ಮಾಡುತ್ತಿದ್ದಾರೆ. ಇದರಿಂದ ಕಬ್ಬು ಸಾಗಣೆದಾರರು, ಕಟಾವು ಮಾಡುವ ಕಾರ್ಮಿಕರು ಮತ್ತು ಸರ್ಕಾರಕ್ಕೂ ನಷ್ಟವಾಗುತ್ತಿದೆ. ಒಂದೊಂದು ಕಾರ್ಖಾನೆಯವರು ವರ್ಷಕ್ಕೆ 40,000ದಿಂದ 50,000 ಟನ್ ಕಬ್ಬು ಕದಿಯುತ್ತಿದ್ದಾರೆ. ಈ ಜಾಲ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ವ್ಯಾಪಿಸಿದೆ’ ಎಂದು ದೂರಿದರು.

### ‘ಸಕ್ಕರೆ ಕಾರ್ಖಾನೆ ನಡೆಸುವ ಮಂತ್ರಿಗಳನ್ನು ನಿಯಂತ್ರಿಸಲಾಗದು’

‘ಸಕ್ಕರೆ ಕಾರ್ಖಾನೆಗಳನ್ನು ನಡೆಸುವ ಮಂತ್ರಿಗಳನ್ನು ನನ್ನ ಕೈಯಲ್ಲಿ ನಿಯಂತ್ರಿಸಲು ಆಗುವುದಿಲ್ಲ’ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ಹೇಳಿದರು.

ಕಾಂಗ್ರೆಸ್‌ನ ರಾಜು ಕಾಗೆ ಅವರು, ‘ಖಾಸಗಿ ಸಕ್ಕರೆ ಕಾರ್ಖಾನೆಗಳನ್ನು ನಡೆಸುತ್ತಿರುವವರಲ್ಲಿ ಬಹುತೇಕರು ರಾಜಕಾರಣಿಗಳು ಮತ್ತು ಮಂತ್ರಿಗಳೇ ಇದ್ದಾರೆ. ನಾವು ಒಬ್ಬರು ಇಬ್ಬರು ಏನೂ ಮಾಡಲು ಆಗುವುದಿಲ್ಲ. ವ್ಯವಸ್ಥೆ ಹದಗೆಟ್ಟು ಹೋಗಿದೆ. ವ್ಯವಸ್ಥೆಯನ್ನು ಮೇಲಿನಿಂದಲೇ ಸರಿಪಡಿಸಬೇಕು. ಕಾರ್ಖಾನೆಗಳು ರೈತರನ್ನು ಲೂಟಿ ಮಾಡುತ್ತಿವೆ’ ಎಂದು ದೂರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಪಾಟೀಲ, ‘ ಸಚಿವರನ್ನು ಮುಖ್ಯಮಂತ್ರಿಯವರೇ ನಿಯಂತ್ರಣ ಮಾಡಬೇಕು. ನೀವೆಲ್ಲ ಸೇರಿ ಮುಖ್ಯಮಂತ್ರಿ ಬಳಿ ಹೋಗ’ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಯಾವುದೇ ಸಕ್ಕರೆ ಕಾರ್ಖಾನೆಗಳು ಕಬ್ಬು ನುರಿಸುವುದಕ್ಕೆ ಸಂಬಂಧಿಸಿದಂತೆ ಮುಂಚಿತವಾಗಿಯೇ ಲೆಕ್ಕವನ್ನು ಕೊಡಬೇಕು. ಆದರೆ ಅವರು ಮಾಹಿತಿಯನ್ನೇ ಕೊಡುವುದಿಲ್ಲ. 2020–21 ರಲ್ಲಿ ಅರೆದ ಕಬ್ಬಿನ ಪ್ರಮಾಣವನ್ನು ಇತ್ತೀಚೆಗೆ ಕಳುಹಿಸಿದ್ದಾರೆ ಎಂದು ಹೇಳಿದರು.

‘ದಳ’ ಕಚೇರಿಯಲ್ಲಿ ಎಚ್‌ಡಿಕೆ, ಬೊಮ್ಮಾಯಿ ಜಂಟಿ ಪತ್ರಿಕಾಗೋಷ್ಠಿ

# ‘ನೈಸ್’ ಯೋಜನೆ ವಶಕ್ಕೆ ಬಿಜೆಪಿ, ಜೆಡಿಎಸ್ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ನೈಸ್’ ಕಂಪನಿ ನಿರ್ವಹಿಸುತ್ತಿರುವ ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಯೋಜನೆಯನ್ನು ಸರ್ಕಾರದ ವಶಕ್ಕೆ ಪಡೆಯಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಒತ್ತಾಯಿಸಿದರು.

ಯೋಜನೆಯಲ್ಲಿ ಸಾಕಷ್ಟು ಹಗರಣಗಳು ನಡೆದಿವೆ. ಜನರ ಭೂಮಿ ಹಾಗೂ ಹಣವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ. 2016ರಲ್ಲಿ ರಚಿಸಿದ್ದ ಜಂಟಿ ಸದನ ಸಮಿತಿ ವರದಿಯಂತೆ ಯೋಜನೆಯನ್ನು ಸರ್ಕಾರದ ವಶಕ್ಕೆ ಪಡೆಯಬೇಕು. ಹಗರಣಗಳ ತನಿಖೆಯನ್ನು ಸಿಬಿಐಗೆ ವಹಿಸಬೇಕು ಎಂದು ಶುಕ್ರವಾರ ವಿಧಾನಸೌಧದ ಜೆಡಿಎಸ್ ಶಾಸಕಾಂಗ ಪಕ್ಷದ ಕಚೇರಿಯಲ್ಲಿ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

‘ರಾಜ್ಯದ ಮುಖ್ಯಮಂತ್ರಿ ಭ್ರಷ್ಟಾಚಾರದ ಬಗ್ಗೆ ಮಾತನಾಡುತ್ತಾರೆ. ಆದರೆ, ನೈಸ್ ರಸ್ತೆಯ ಅಕ್ರಮ ಕುರಿತು ಮೌನವಾಗಿದ್ದಾರೆ. ಒಪ್ಪಂದದಂತೆ 2012ರ ಒಳಗೆ ಕಾಂಕ್ರಿಟ್ ರಸ್ತೆ ಮಾಡಬೇಕಿತ್ತು. ಅಲ್ಲಿಯವರೆಗೂ ಟೋಲ್ ಸಂಗ್ರಹ ಮಾಡದಂತೆ ಸೂಚಿಸಲಾಗಿತ್ತು. ಆದರೂ, ಷರತ್ತು ಉಲ್ಲಂಘಿಸಿ ₹ 1,325 ಕೋಟಿ ರೂಪಾಯಿ ಟೋಲ್ ಸಂಗ್ರಹಿಸಿದ್ದರು. ಆ ಹಣವನ್ನು ಸರ್ಕಾರ ವಾಪಸ್ ಪಡೆಯಬೇಕು ಎಂದು ಸದನ ಸಮಿತಿ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಕಂಪನಿ ಸಾಕಷ್ಟು ವಂಚನೆ ಮಾಡಿದ್ದರೂ, ಕ್ರಮ ಸಾಧ್ಯವಾಗಿಲ್ಲ. ಎರಡು ವರ್ಷ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರ ಅವಧಿಯಲ್ಲಿ ಒಂದಷ್ಟು ಕ್ರಮಗಳಾಗಿವೆ. ನೈಸ್ ವಿರುದ್ಧದ ಪ್ರಕರಣದಲ್ಲಿ ರಾಜ್ಯ ಸರ್ಕಾರದ ಪರವಾಗಿ ಹಲವು ಆದೇಶಗಳು ಬಂದಿವೆ. ಹಾಗಾಗಿ, ಹಿಂದಿನ ಬಿಜೆಪಿ ಸರ್ಕಾರವನ್ನು ಅಭಿನಂದಿಸುವೆ’ ಎಂದು ಕುಮಾರಸ್ವಾಮಿ ಹೇಳಿದರು.

‘ಸದನದಲ್ಲಿ ಕಾಂಗ್ರೆಸ್ ಶಾಸಕ ಟಿ.ಬಿ. ಜಯಚಂದ್ರ ದನಿ ಎತ್ತಿದ್ದಾರೆ. ಚರ್ಚೆಗೆ ನಾವೂ ಅವಕಾಶ ಕೇಳಿದ್ದೆವು. ನಿಲುವಳಿ ಸೂಚನೆ ಮಂಡಿಸಿದ್ದೆವು. ಬಳಿಕ ಅದನ್ನು ನಿಯಮ 69ಕ್ಕೆ ಬದಲಾಯಿಸಿ, ಚರ್ಚೆಗೆ ಅವಕಾಶ ಕೊಡುವ ಭರವಸೆ ನೀಡಲಾಗಿತ್ತು. ಅವಕಾಶ ನೀಡಲೇ ಇಲ್ಲ. ಯೋಜನೆಯನ್ನು ವಶಕ್ಕೆ ಪಡೆಯದಿದ್ದರೆ ಈಸ್ಟ್ ಇಂಡಿಯಾ ಕಂಪನಿಯಂತಹ ಸಂಸ್ಥೆ ವಿರುದ್ಧ ನಿಲ್ಲುತ್ತೇವೆ. ಜನರ ಹಿತಾಸಕ್ತಿಗಾಗಿ ಜೆಡಿಎಸ್ ಹಾಗೂ ಬಿಜೆಪಿ ಸದನದ ಒಳಗೆ, ಹೊರಗೆ ಜಂಟಿ ಹೋರಾಟ ನಡೆಸಲಿವೆ ಎಂದರು.

ಬಸವರಾಜ ಬೊಮ್ಮಾಯಿ ಮಾತನಾಡಿ, ರಸ್ತೆ ಕಾಮಗಾರಿಗೆ ಹೆಚ್ಚುವರಿ ಭೂಮಿ ಪಡೆಯಲಾಗಿದೆ. ಈ ಹೆಚ್ಚುವರಿ ಭೂಮಿ ಮರುಬಳಕೆಯ ನಿರ್ಧಾರ ಸರ್ಕಾರಕ್ಕಿದೆ ಎಂದು ಸುಪ್ರೀಂಕೋರ್ಟ್ ಸಹ ಹೇಳಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ಉಪ ನಾಯಕಿ ಶಾರದಾ ಪೂರ್ಯಾನಾಯ್ಕ, ಶಾಸಕರಾದ ಆರಗ ಜ್ಞಾನೇಂದ್ರ, ನೇಮಿರಾಜ್ ನಾಯಕ್, ರಾಜೂಗೌಡ, ಕರೆಮ್ಮ ನಾಯಕ್, ಕೆ.ಎ. ತಿಪ್ಪೇಸ್ವಾಮಿ ಇದ್ದರು.

ವಿಧಾನಸೌಧದ ಜೆಡಿಎಸ್ ಶಾಸಕಾಂಗ ಪಕ್ಷದ ಕಚೇರಿಯಲ್ಲಿ ಶನಿವಾರ ಎಚ್.ಡಿ.ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ ಪತ್ರಿಕಾಗೋಷ್ಠಿ ನಡೆಸಿದರು

**ನೈಸ್ ಯೋಜನೆಗೆ ಸರ್ಕಾರ ನೀಡಿದ್ದ ಭೂಮಿ ರಿಯಲ್ ಎಸ್ಟೇಟ್ ದಂಧೆಗೆ ಬಳಕೆಯಾಗುತ್ತಿದೆ. ಸಂಪುಟ ಉಪ ಸಮಿತಿ ಶಿಫಾರಸಿನಂತೆ ಹೆಚ್ಚುವರಿ ಭೂಮಿಯನ್ನು ಸರ್ಕಾರ ವಾಪಸ್ ಪಡೆಯಬೇಕು**

**ಬಸವರಾಜ ಬೊಮ್ಮಾಯಿ,** ಬಿಜೆಪಿ ಶಾಸಕ

### ‘ನೈಸ್’ ವಶಕ್ಕೆ ಪಡೆದರೆ ₹30 ಸಾವಿರ ಕೋಟಿ ಲಭ್ಯ’

ನೈಸ್ ಯೋಜನೆಯನ್ನು ವಶಕ್ಕೆ ಪಡೆದರೆ ಸುಮಾರು ₹ 30 ಸಾವಿರ ಕೋಟಿ ರಾಜ್ಯದ ಬೊಕ್ಕಸಕ್ಕೆ ಸಿಗಲಿದೆ. ಈ ಹಣವನ್ನು ಗ್ಯಾರಂಟಿಗಳಿಗೆ ಬಳಸಬಹುದು ಎಚ್.ಡಿ. ಕುಮಾರಸ್ವಾಮಿ ಹೇಳಿದರು.

‘ಸದನ ಸಮಿತಿ ನೀಡಿದ ವರದಿ ಇಟ್ಟುಕೊಂಡು ಕುಳಿತರೆ ಯಾರಿಗೆ ಲಾಭ?. ಈಗ ‘ಬ್ರ್ಯಾಂಡ್’ ಬೆಂಗಳೂರು ಎಂದು ಜಪ ಮಾಡುತ್ತಿರುವವರು ಹಿಂದೆ ನೈಸ್ ಜೊತೆ ಸೇರಿಕೊಂಡು ಸಹಕಾರ ನೀಡಿದ್ದರು. ಈಗ ಅವರೇ ಅಧಿಕಾರದಲ್ಲಿ ಇದ್ದಾರೆ. ಅದಕ್ಕೆ ಎರಡೂ ಪಕ್ಷಗಳ ವತಿಯಿಂದ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ. ನೈಸ್ ರಸ್ತೆಯ ಸುತ್ತಮುತ್ತ ಯಾವುದೇ ಪಕ್ಷದ ರಾಜಕಾರಣಿಗಳ ಭೂಮಿ ಇದ್ದರೆ ಮುಟ್ಟುಗೋಲು ಹಾಕಿಕೊಳ್ಳಲಿ ಎಂದು ಸಲಹೆ’ ನೀಡಿದರು.

## ಜನರ ಸಮಸ್ಯೆ ಆಲಿಸಲು ಪೊಲೀಸರ ಸಭೆ

**ಬೆಂಗಳೂರು:** ನಗರದ ಕಾನೂನು ಸುವ್ಯವಸ್ಥೆ ಬಗ್ಗೆ ಜನರ ಸಮಸ್ಯೆಗಳನ್ನು ಆಲಿಸುವುದಕ್ಕಾಗಿ ಬೆಂಗಳೂರು ಪೊಲೀಸರು, ಹನುಮಂತ ನಗರದ ಶಂಕರನಾಗ್ ವೃತ್ತದಲ್ಲಿರುವ ತಿರುಪತಿ ಕನ್ವೆಷನ್ ಹಾಲ್‌ನಲ್ಲಿ ಶನಿವಾರ (ಜುಲೈ 22) ಜನ ಸಂಪರ್ಕ ಸಭೆ ಹಮ್ಮಿಕೊಂಡಿದ್ದಾರೆ.

ಕಮಿಷನರ್ ಬಿ. ದಯಾನಂದ್ ಸಮ್ಮುಖದಲ್ಲಿ ಬೆಳಿಗ್ಗೆ 11 ಗಂಟೆಯಿಂದ 1 ಗಂಟೆಯವರೆಗೆ ಸಭೆ ನಡೆಯಲಿದೆ.

'ಸಾರ್ವಜನಿಕರು ಸಭೆಯಲ್ಲಿ ಪಾಲ್ಗೊಳ್ಳಲು ಮುಕ್ತ ಅವಕಾಶವಿದೆ. ಪೊಲೀಸ್ ಕಮಿಷನರೇಟ್ ವ್ಯಾಪ್ತಿಗೆ ಸಂಬಂಧಪಟ್ಟ ಯಾವುದೇ ಸಮಸ್ಯೆ, ಸಲಹೆ ಬಗ್ಗೆ ಸಭೆಯಲ್ಲಿ ವಿಷಯ ಪ್ರಸ್ತಾಪಿಸಬಹುದು' ಎಂದು ಬಿ. ದಯಾನಂದ್ ತಿಳಿಸಿದ್ದಾರೆ.

ಕಾಮಾಕ್ಷಿಪಾಳ್ಯ, ವಿವೇಕ ನಗರ, ಎಚ್‌ಎಸ್‌ಆರ್ ಲೇಔಟ್, ಹೆಣ್ಣೂರು, ಕೆಂಗೇರಿ, ರಾಜಗೋಪಾಲನಗರ, ಕೋರಮಂಗಲ, ಚಿಕ್ಕಜಾಲ, ಮಹದೇವಪುರ ಠಾಣೆಗಳಲ್ಲಿಯೂ ಪ್ರತ್ಯೇಕವಾಗಿ ಜನ ಸಂಪರ್ಕ ಸಭೆ ನಡೆಯಲಿದೆ.

### ರಾಜ್ಯದಲ್ಲಿ ಐಎಸ್‌ಇಸಿ ಜನಸಂಖ್ಯಾ ಸಂಶೋಧನಾ ಕೇಂದ್ರದಿಂದ ಸಿದ್ಧತೆ

# ಕೋವಿಡ್ ಆರ್ಥಿಕ ಸಂಕಷ್ಟದ ಸಮೀಕ್ಷೆ

● ವರುಣ ಹೆಗಡೆ

**ಬೆಂಗಳೂರು:** ರಾಜ್ಯದಲ್ಲಿ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ (ಎನ್‌ಎಫ್‌ಎಚ್‌ಎಸ್‌–6) ನಡೆಸಲು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯ (ಐಎಸ್‌ಇಸಿ) ಜನಸಂಖ್ಯಾ ಸಂಶೋಧನಾ ಕೇಂದ್ರ ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಈ ಬಾರಿ ಕೋವಿಡ್ ಕಾಯಿಲೆ ಹಾಗೂ ಅದು ಉಂಟು ಮಾಡಿದ ಆರ್ಥಿಕ ಪರಿಣಾಮಗಳ ಬಗ್ಗೆಯೂ ಸಮೀಕ್ಷೆ ನಡೆಸಲಾಗುತ್ತದೆ.

2023–24ನೇ ಸಾಲಿನಲ್ಲಿ ಕೇಂದ್ರ ಆರೋಗ್ಯ ಸಚಿವಾಲಯವು ಈ ಸಮೀಕ್ಷೆಯನ್ನು ಹಮ್ಮಿಕೊಂಡಿದ್ದು, ಕರ್ನಾಟಕದ 15 ಜಿಲ್ಲೆಗಳಲ್ಲಿ ಜನಸಂಖ್ಯಾ ಸಂಶೋಧನಾ ಕೇಂದ್ರವು ಮಾದರಿ ಪ್ರಶ್ನಾವಳಿಯೊಂದಿಗೆ ಮುಂಬರುವ ಅಕ್ಟೋಬರ್ ತಿಂಗಳಿಂದ ಸಮೀಕ್ಷೆ ನಡೆಸಲಿದೆ. ಇದೇ ಮೊದಲ ಬಾರಿ ಕರ್ನಾಟಕ ಉತ್ತರ ಮತ್ತು ದಕ್ಷಿಣವೆಂದು ವಿಂಗಡಿಸಿ, ಸಮೀಕ್ಷೆ ನಡೆಸಲಾಗುತ್ತಿದ್ದು, ಉತ್ತರ ಭಾಗವನ್ನು ಗೋವಾಕ್ಕೆ ಸೇರ್ಪಡೆ ಮಾಡಲಾಗಿದೆ. ರಾಜ್ಯದಲ್ಲಿ 26,400 ಕುಟುಂಬಗಳು ಸಮೀಕ್ಷೆಗೆ ಒಳಪಡಲಿವೆ.

> **ಎನ್‌ಎಫ್‌ಎಚ್‌ಎಸ್ ಸಮೀಕ್ಷೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ. ವಿವಿಧ ಪರೀಕ್ಷೆಗಳನ್ನು ನಡೆಸಿ, ಮಾಹಿತಿ ಕಲೆಹಾಕುತ್ತೇವೆ.**
>
> **ಡಾ.ಸಿ.ಎಂ. ಲಕ್ಷ್ಮಣ,** ಐಎಸ್‌ಇಸಿ ಜನ ಸಂಖ್ಯಾ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ

ಅವುಗಳಲ್ಲಿ ದಕ್ಷಿಣ ಕರ್ನಾಟಕ ವ್ಯಾಪ್ತಿಗೆ 13,200 ಕುಟುಂಬಗಳು ಬರಲಿವೆ.

ಮಹಿಳೆಯರು ಮತ್ತು ಪುರುಷರಿಗೆ ಪ್ರತ್ಯೇಕ ಪ್ರಶ್ನಾವಳಿ ಇರಲಿದೆ. ಕುಟುಂಬದಲ್ಲಿನ 15ರಿಂದ 49 ವರ್ಷದ ಮಹಿಳೆಯರು ಹಾಗೂ 15ರಿಂದ 54 ವರ್ಷದೊಳಗಿನ ಪುರುಷರಿಂದ ಆರೋಗ್ಯ ಮಾಹಿತಿ ಕಲೆಹಾಕಲಾಗುತ್ತದೆ. ಈವರೆಗೆ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 5 ಸುತ್ತುಗಳಲ್ಲಿ ನಡೆದಿದೆ. 6ನೇ ಸುತ್ತಿನ ಸಮೀಕ್ಷೆಯಲ್ಲಿ ಇಡೀ ದೇಶವನ್ನು ಕಾಡಿದ ಕೋವಿಡ್ ಕಾಯಿಲೆಗೂ ಆದ್ಯತೆ ನೀಡಲಾಗುತ್ತಿದೆ. ಕೋವಿಡ್‌ನಿಂದ ಅಸ್ವಸ್ಥಗೊಂಡವರ ವಿವರ, ಚಿಕಿತ್ಸೆಗೆ ಮಾಡಲಾದ ವೆಚ್ಚ, ಆಸ್ಪತ್ರೆ ಅವಧಿ, ಮರಣ, ಈ ಕಾಯಿಲೆಯಿಂದ ಉಂಟಾದ ಆರ್ಥಿಕ ಹೊರೆ, ಲಸಿಕೆಯ ಪರಿಣಾಮದ ಬಗ್ಗೆಯೂ ಮಾಹಿತಿ ಕಲೆ ಹಾಕಿ, ವರದಿ ಸಿದ್ಧಪಡಿಸಲಾಗುತ್ತದೆ.

'ಪ್ರಶ್ನಾವಳಿಯನ್ನು ಮೂರು ಹಂತದಲ್ಲಿ ವಿಂಗಡಿಸಲಾಗಿದೆ. ಸಮೀಕ್ಷೆಗೆ ಏಳು ಮಂದಿಯ 15 ತಂಡಗಳನ್ನು ರಚಿಸಿಕೊಳ್ಳಲಾಗುತ್ತದೆ. 11 ತಿಂಗಳಲ್ಲಿ ಈ ಸಮೀಕ್ಷೆ ಪೂರ್ಣಗೊಳಿಸಿ, 'ಫ್ಯಾಕ್ಟ್ ಶೀಟ್' ಅನ್ನು ಆರೋಗ್ಯ ಸಚಿವಾಲಯಕ್ಕೆ ಒದಗಿಸುತ್ತೇವೆ. ಇದು ಮಹತ್ವದ ಸಮೀಕ್ಷೆಯಾಗಿದ್ದು, ಜನರ ಆರೋಗ್ಯದ ಸ್ಥಿತಿಗತಿ ತಿಳಿಯಲು ಸಹಕಾರಿಯಾಗಲಿದೆ. ಮಹಿಳೆಯರು ಮತ್ತು ಪುರುಷರ ಆರೋಗ್ಯದ ಬಗ್ಗೆಯೂ ಸ್ಪಷ್ಟ ಚಿತ್ರಣ ಸಿಗುತ್ತದೆ' ಎಂದು ಐಎಸ್‌ಇಸಿ ಜನ ಸಂಖ್ಯಾ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ ಹಾಗೂ ಸಮೀಕ್ಷೆಯ ಯೋಜನಾ ನಿರ್ದೇಶಕ ಡಾ.ಸಿ.ಎಂ. ಲಕ್ಷ್ಮಣ ತಿಳಿಸಿದರು.

### ಕುಟುಂಬದ ಸದಸ್ಯರಿಗೆ ವಿವಿಧ ಪರೀಕ್ಷೆ

ಸಮೀಕ್ಷೆಯಲ್ಲಿ ಪಾಲ್ಗೊಳ್ಳುವವರಿಗೆ 'ಕ್ಲಿನಿಕಲ್', 'ಆಂಥ್ರೊಪೊಮೆಟ್ರಿಕ್' ಹಾಗೂ 'ಬಯೋಕೆಮಿಕಲ್' ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಕುಟುಂಬಕ್ಕೆ ಸಂಬಂಧಿಸಿದ ಸಮೀಕ್ಷೆಯಲ್ಲಿ ಬಳಸುವ ನೀರು, ನೈರ್ಮಲ್ಯ, ಅಡುಗೆ ಎಣ್ಣೆ, ಕೈತೊಳೆಯುವ ವ್ಯವಸ್ಥೆ ಸೇರಿ ವಿವಿಧ ಮಾಹಿತಿ ಕಲೆಹಾಕಲಾಗುತ್ತದೆ.

ಮಹಿಳೆಯರಿಗೆ ಸಂಬಂಧಿಸಿದಂತೆ ಸುರಕ್ಷತೆ, ಆರ್ಥಿಕತೆ, ಕುಟುಂಬ ಯೋಜನೆ, ಪೌಷ್ಟಿಕತೆ ಒಳಗೊಂಡಂತೆ ವಿವಿಧ ವಿವರ ಸಂಗ್ರಹಿಸಲಾಗುತ್ತದೆ. ಅದೇ ರೀತಿ, ಪುರುಷರಿಗೆ ಮದ್ಯಪಾನ, ಧೂಮಪಾನ, ಸಾಂಕ್ರಾಮಿಕವಲ್ಲದ ರೋಗಗಳು ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತದೆ.

### ಮುಂದಿನ ವರ್ಷ ವರದಿ

ದೇಶದಲ್ಲಿ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯನ್ನು ನಿಯಮಿತವಾಗಿ ನಡೆಸಲಾಗುತ್ತಿದೆ. 1992–93ರಲ್ಲಿ ಮೊದಲ ಸಮೀಕ್ಷೆ ನಡೆಸಲಾಗಿತ್ತು. 2019–21ರಲ್ಲಿ ಐದನೇ ಸುತ್ತಿನ ಸಮೀಕ್ಷೆ ನಡೆದಿತ್ತು. ಈ ಸಮೀಕ್ಷೆಯು ದೇಶದ ಜನರ ಆರೋಗ್ಯ ಸ್ಥಿತಿಗತಿಯನ್ನು ಸೂಚಿಸಲಿದೆ. ಈ ದತ್ತಾಂಶವು ಸಂಶೋಧನೆಗಳಿಗೂ ಸಹಕಾರಿಯಾಗಲಿದೆ. ತಾಯಂದಿರ ಹಾಗೂ ಶಿಶು ಮರಣ, ಅಪೌಷ್ಟಿಕತೆ ಮತ್ತು ರಕ್ತ ಹೀನತೆ ತಗ್ಗಿಸಲು ಸಹ ಈ ಸಮೀಕ್ಷೆ ಪೂರಕವಾಗಲಿದೆ. ಆರೋಗ್ಯ ಸಚಿವಾಲಯವು ದೇಶದ ಎಲ್ಲಾ ರಾಜ್ಯಗಳಲ್ಲಿ ವಿವಿಧ ಹಂತಗಳಲ್ಲಿ ಸಮೀಕ್ಷೆ ಪೂರ್ಣಗೊಳಿಸಿ, ಮುಂದಿನ ವರ್ಷ ವರದಿ ಬಿಡುಗಡೆ ಮಾಡಲಿದೆ.

## ನಿವೃತ್ತ ಶಿಕ್ಷಕರಿಗೆ ಉಚಿತ ಕೀಲು ಬದಲಿ ಶಸ್ತ್ರಚಿಕಿತ್ಸೆ

**ಬೆಂಗಳೂರು:** ಇಲ್ಲಿನ ಸ್ಪರ್ಶ್ ಆಸ್ಪತ್ರೆಗಳ ಸಮೂಹವು ಸ್ಪರ್ಶ್ ಫೌಂಡೇಶನ್ ಮೂಲಕ ಗ್ರಾಮೀಣ ಹಿನ್ನೆಲೆಯ ನಿವೃತ್ತ ಶಿಕ್ಷಕರಿಗೆ ಉಚಿತ ಕೀಲು ಬದಲಿ ಶಸ್ತ್ರಚಿಕಿತ್ಸೆ ಹಮ್ಮಿಕೊಂಡಿದೆ.

ಇದು 'ಸ್ಪರ್ಶ್ ಗುರು ನಮನ' ಕಾರ್ಯಕ್ರಮದ ಭಾಗವಾಗಿದೆ. ಅರ್ಹ ನಿವೃತ್ತ ಶಿಕ್ಷಕರು ಯಾವುದೇ ವೆಚ್ಚವಿಲ್ಲದೆ ಕೀಲು ಬದಲಿ ಶಸ್ತ್ರ ಚಿಕಿತ್ಸೆಗೆ ಒಳಗಾಗಬಹುದು. ಶಸ್ತ್ರಚಿಕಿತ್ಸೆಯ ನಂತರ ಆರೈಕೆಯೂ ಉಚಿತವಾಗಿರುತ್ತದೆ. ಯಾವುದೇ ವೈದ್ಯಕೀಯ ವೆಚ್ಚವನ್ನು ಪಾವತಿಸಬೇಕಾದ ಅಗತ್ಯವಿಲ್ಲ ಎಂದು ಫೌಂಡೇಶನ್ ತಿಳಿಸಿದೆ.

'ಸ್ಪರ್ಶ್ ಗುರು ನಮನ' ಕಾರ್ಯಕ್ರಮವನ್ನು 2010ರಲ್ಲಿ ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮದಡಿ ಶಿಕ್ಷಕರನ್ನು ಆಯ್ಕೆ ಮಾಡಲು ಮುಖ್ಯ ಕಾರಣ ಅವರು ಕಡಿಮೆ ಸಂಭಾವನೆ ಪಡೆಯುತ್ತಾರೆ. ಹೀಗಾಗಿ, ಕೀಲು ಬದಲಿಯಂತಹ ಶಸ್ತ್ರಚಿಕಿತ್ಸೆಗಳ ವೆಚ್ಚ ಭರಿಸುವುದು ಅವರಿಗೆ ಕಷ್ಟವಾಗುತ್ತದೆ. ಶಿಕ್ಷಕರು ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಜೀವನದ ಮೇಲೆಯೂ ಆಳವಾದ ಪ್ರಭಾವ ಬೀರಿರುತ್ತಾರೆ. ಹೀಗಾಗಿ ಸ್ಪರ್ಶ ಗುರು-ನಮನ ಯೋಜನೆ ಮೂಲಕ ನಿವೃತ್ತ ಶಿಕ್ಷಕರಿಗೆ ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ಒದಗಿಸಿ, ಅವರಿಗೆ ಕೃತಜ್ಞತೆ ಸಲ್ಲಿಸಲಾಗುತ್ತದೆ. ಈ ಕಾರ್ಯಕ್ರಮವು ಸೆ.5ರಂದು ಆಚರಿಸುವ ಶಿಕ್ಷಕರ ದಿನಾಚರಣೆಯ ಭಾಗವಾಗಿದೆ ಎಂದು ಹೇಳಿದೆ.

ಉಚಿತ ಶಸ್ತ್ರಚಿಕಿತ್ಸೆಗೆ ಒಳಗಾಗಲು ನಿವೃತ್ತ ಶಿಕ್ಷಕರು ಕಡ್ಡಾಯವಾಗಿ ನೋಂದಣಿಯಾಗಬೇಕು. ಬೋಧನಾ ಪ್ರಮಾಣಪತ್ರದಂತಹ ಗುರುತಿನ ಪುರಾವೆಯನ್ನು ತೋರಿಸಬೇಕು. ಪೂರ್ವ ನೋಂದಣಿಯನ್ನು ಖಚಿತಪಡಿಸಿಕೊಳ್ಳಬೇಕು. ತಪಾಸಣೆ ಸಮಯದಲ್ಲಿ ವೈದ್ಯಕೀಯ ದಾಖಲೆಗಳನ್ನು ಕಡ್ಡಾಯವಾಗಿ ತರಬೇಕು. ಇದೇ 27 ಮತ್ತು 28ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯರವರೆಗೆ ಇನ್ಫೆಂಟ್ರಿ ರಸ್ತೆಯಲ್ಲಿರುವ ಸ್ಪರ್ಶ್ ಆಸ್ಪತ್ರೆಯಲ್ಲಿ ತಪಾಸಣೆ ಮಾಡಲಾಗುತ್ತದೆ ಎಂದು ತಿಳಿಸಿದೆ. ಸಂಪರ್ಕ ಸಂಖ್ಯೆ: 9900040368

# ಅವಧಿ ಮೀರಿದ ಆಹಾರ ಮಾರಾಟ: ಸಿಸಿಬಿ ದಾಳಿ

### ಡಿ.ಜೆ. ಹಳ್ಳಿ ಠಾಣೆಯಲ್ಲಿ ಪ್ರಕರಣ ● ₹ 50 ಲಕ್ಷ ಮೌಲ್ಯದ ವಸ್ತುಗಳು ಜಪ್ತಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

**ಬೆಂಗಳೂರು:** ಅವಧಿ ಮೀರಿದ ಆಹಾರ ವಸ್ತುಗಳನ್ನು ಹೊಸ ಪೊಟ್ಟಣಕ್ಕೆ ತುಂಬಿ ಸಾರ್ವಜನಿಕರಿಗೆ ಮಾರುತ್ತಿದ್ದ ಮಳಿಗೆ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ಮಳಿಗೆ ಮಾಲೀಕ ಸಿದ್ದಿಕ್ ಅಹಮ್ಮದ್ ಪಾಷಾನನ್ನು ಬಂಧಿಸಿದ್ದಾರೆ.

'ದೇವರಜೀವನಹಳ್ಳಿ (ಡಿ.ಜೆ.ಹಳ್ಳಿ) ಠಾಣೆ ವ್ಯಾಪ್ತಿಯ ಶ್ಯಾಂಪುರ ಮುಖ್ಯರಸ್ತೆಯಲ್ಲಿ ಮಳಿಗೆ ಇಟ್ಟುಕೊಂಡಿದ್ದ ಸಿದ್ದಿಕ್ ಅಹಮ್ಮದ್, ಹಲವು ವರ್ಷಗಳಿಂದ ಅವಧಿ ಮೀರಿದ ಆಹಾರ ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ದೊರೆಯುತ್ತಿದ್ದಂತೆ ದಾಳಿ ನಡೆಸಲಾಗಿದೆ. ₹ 50 ಲಕ್ಷ ಮೌಲ್ಯದ ಆಹಾರ ಹಾಗೂ ದಿನಬಳಕೆ ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ದಿನಸಿ, ಸೋಪು, ತಂಪು ಪಾನೀಯ, ಕೇಕ್, ಅಡುಗೆ ಎಣ್ಣೆ, ಸೌಂದರ್ಯ ವರ್ಧಕ, ಮಕ್ಕಳ ನ್ಯಾಪಕಿನ್, ವಿವಿಧ ಬಗೆಯ ಚಿಪ್ಸ್‌ಗಳು ಸೇರಿದಂತೆ ಹಲವು ವಸ್ತುಗಳು ಮಳಿಗೆಯಲ್ಲಿದ್ದವು. ಎಲ್ಲವನ್ನೂ ಆರೋಪಿ, ರಿಯಾಯಿತಿ ದರದಲ್ಲಿ ಮಾರುತ್ತಿದ್ದ.'

'ಕೆಲ ಆಹಾರದ ಪೊಟ್ಟಣಗಳನ್ನೇ ಆರೋಪಿ ಬದಲಾಯಿಸುತ್ತಿದ್ದ. ಇಂಥ ವಸ್ತುಗಳನ್ನು ಬಳಸುವ ಜನರು ನಾನಾ ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದರು' ಎಂದು ತಿಳಿಸಿದರು.

**ಶಿಡ್ಲಘಟ್ಟದ ಗೋದಾಮಿನಲ್ಲಿ ಸಂಗ್ರಹ:** 'ಪ್ರತಿಷ್ಠಿತ ಕಂಪನಿಗಳ ಉತ್ಪನ್ನಗಳನ್ನು ಅವಧಿ ಮೀರಿದ ನಂತರ ಖರೀದಿ ಮಾಡುತ್ತಿದ್ದ ಆರೋಪಿ, ಶಿಡ್ಲಘಟ್ಟದಲ್ಲಿರುವ ಗೋದಾಮಿನಲ್ಲಿ ಸಂಗ್ರಹಿಸಿಡುತ್ತಿದ್ದ. ಪೊಟ್ಟಣಗಳ ಮೇಲೆ ನಮೂದಿಸಲಾದ ದರದ ಶೇ 10ರಷ್ಟು ಹಣವನ್ನು ಮಾತ್ರ ನೀಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಶಿಡ್ಲಘಟ್ಟದ ಗೋದಾಮಿನಿಂದ ಅವಧಿ ಮೀರಿದ ವಸ್ತುಗಳು ಹಾಗೂ ಆಹಾರ ಪೊಟ್ಟಣವನ್ನು ಮಳಿಗೆಗೆ ತರುತ್ತಿದ್ದ ಆರೋಪಿ, ಶ್ಯಾಂಪುರ ಮುಖ್ಯರಸ್ತೆಯಲ್ಲಿರುವ ಮಳಿಗೆಯಲ್ಲಿ ಮಾರುತ್ತಿದ್ದನೆಂಬ ಸಂಗತಿ ತನಿಖೆಯಿಂದ ಗೊತ್ತಾಗಿದೆ' ಎಂದು ತಿಳಿಸಿದರು.

'ಹೋಲ್‌ಸೇಲ್ ದರದಲ್ಲಿ ಮಾರಾಟ ಮಾಡುತ್ತಿರುವುದಾಗಿ ಆರೋಪಿ ಜನರಿಗೆ ಸುಳ್ಳು ಹೇಳುತ್ತಿದ್ದ. ಕೆಲ ಹೋಟೆಲ್‌ಗಳಿಗೂ ಅವಧಿ ಮೀರಿದ ವಸ್ತುಗಳನ್ನು ಪೂರೈಕೆ ಮಾಡುತ್ತಿದ್ದನೆಂಬ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

### ಕಳವು: ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮಹಿಳೆಯರ ಸರಗಳವು ಪ್ರಕರಣದಲ್ಲಿ ಉಡುಪಿಯಲ್ಲಿ ಸೆರೆಸಿಕ್ಕಿದ್ದ ಇಬ್ಬರು ಆರೋಪಿಗಳನ್ನು ಮಲ್ಲೇಶ್ವರ ಠಾಣೆ ಪೊಲೀಸರು ಕಸ್ಟಡಿಗೆ ಪಡೆದಿದ್ದು, ಇವರಿಂದ ₹ 3 ಲಕ್ಷ ಮೌಲ್ಯದ 49 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿದ್ದಾರೆ.

'ಮೊಹಮ್ಮದ್ ರಫೀಕ್ ಹಾಗೂ ತೌಫಿಕ್ ಸಾಧಿಕ್ ಬಂಧಿತರು. ಇವರು ಬೆಂಗಳೂರು, ಮಂಗಳೂರು, ಉಡುಪಿ, ಶಿವಮೊಗ್ಗದಲ್ಲಿ ಸರಗಳವು ಮಾಡಿದ್ದರು. ಇತ್ತೀಚೆಗಷ್ಟೇ ಇವರನ್ನು ಉಡುಪಿ ಪೊಲೀಸರು ಬಂಧಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಲ್ಲೇಶ್ವರ ಠಾಣೆ ವ್ಯಾಪ್ತಿಯ ನಿವಾಸಿ ಶಾಂತಮ್ಮ (70) ಮೇ 27ರಂದು ನಡೆದು ಹೋಗುವಾಗ ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು ಚಿನ್ನದ ಸರ ಕಿತ್ತೊಯ್ದಿದ್ದರು. ಈ ಪ್ರಕರಣದ ತನಿಖೆ ಕೈಗೊಂಡಾಗ ಆರೋಪಿಗಳ ಸುಳಿವು ಸಿಕ್ಕಿತ್ತು' ಎಂದು ಮೂಲಗಳು ತಿಳಿಸಿವೆ.

# ಕಾಮಗಾರಿ ಮುಗಿಯದಿದ್ದಲ್ಲಿ ಅಧಿಕಾರಿಗಳೇ ಹೊಣೆ: ಸತೀಶ್ ರೆಡ್ಡಿ

ಪ್ರಜಾವಾಣಿ ವಾರ್ತೆ

**ಬೊಮ್ಮನಹಳ್ಳಿ:** ಬೊಮ್ಮನಹಳ್ಳಿ ವಲಯದಲ್ಲಿ ವಿಪತ್ತು ನಿರ್ವಹಣೆ ಹಾಗೂ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಮುಗಿಸದೇ ಇದ್ದರೆ ಅಧಿಕಾರಿಗಳನ್ನು ಹೊಣೆ ಮಾಡಲಾಗುವುದು ಎಂದು ಶಾಸಕ ಎಂ.ಸತೀಶ್ ರೆಡ್ಡಿ ಎಚ್ಚರಿಸಿದರು.

ಶುಕ್ರವಾರ ಬೊಮ್ಮನಹಳ್ಳಿ ಬಿಬಿಎಂಪಿ ಕಚೇರಿಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಬೊಮ್ಮನಹಳ್ಳಿಯಲ್ಲಿ ಪ್ರವಾಹ ಪೀಡಿತ ಸೂಕ್ಷ್ಮ ಪ್ರದೇಶಗಳಿವೆ. ಮುಂಜಾಗರೂಕತೆ ವಹಿಸಿ ಸಮಸ್ಯೆ ಬಗೆಹರಿಸಬೇಕು. ಕುಡಿಯುವ ನೀರಿನ ಸಮಸ್ಯೆ ಬಂದ ತಕ್ಷಣ ಬಗೆಹರಿಸಬೇಕು. ಒಳಚರಂಡಿಗಳಲ್ಲಿ ಹೂಳು ತೆಗೆಯಬೇಕು. ಕೆಟ್ಟಿರುವ ಕೊಳವೆಬಾವಿಗಳ ರಿಪೇರಿ ತ್ವರಿತ ಗತಿಯಲ್ಲಿ ಮಾಡಿಸಬೇಕು, ಜರಗನಹಳ್ಳಿಯಲ್ಲಿ ಸುಮಾರು 250 ಕಡೆ ಕೊಳವೆಬಾವಿ ಕೊರೆಸಲಾಗಿದ್ದರೂ

ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳು ಶಾಸಕ ಸತೀಶ್ ರೆಡ್ಡಿಯವರಿಗೆ ಮಾಹಿತಿ ನೀಡಿದರು. ಮುಖ್ಯ ಎಂಜಿನಿಯರ್ ಶಶಿಕುಮಾರ್, ಜಂಟಿ ಆಯುಕ್ತ ಎಂ. ಅಜಿತ್ ಇದ್ದಾರೆ.

ನೀರಿನ ಸಮಸ್ಯೆ ಬಗೆಹರಿದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮಳೆಗಾಲದಲ್ಲಿ ಸಾರ್ವಜನಿಕ ಆಸ್ತಿಗೆ ತೊಂದರೆ ಆಗದಂತೆ ಕ್ರಮವಹಿಸಬೇಕು, ಕೆರೆಗಳಿಗೆ ಕ್ರಸ್ಟ್ ಗೇಟ್ ಅಳವಡಿಸಬೇಕು. ಸಮಸ್ಯೆ ಹೊತ್ತು ಬರುವ ನಾಗರಿಕರ ಜೊತೆ ಸೌಜನ್ಯದಿಂದ ವರ್ತಿಸಬೇಕು ಎಂದು ಸೂಚನೆ ನೀಡಿದರು.

ಇಂದಿರಾ ಕ್ಯಾಂಟಿನ್‌ಗಾಗಿ ಸ್ಮಶಾನದ ಜಾಗ ಗುರುತಿಸಲಾಗಿದೆ. ಅದಕ್ಕೆ ನಿಬಂಧನೆ ಇರುವ ಕಾರಣ ಬೇರೆ ಜಾಗ ಗುರುತಿಸಿ ಎಂದು ಸೂಚಿಸಿದರು.

ಜಂಟಿ ಆಯುಕ್ತ ಎಂ.ಅಜಿತ್, ಮುಖ್ಯ ಎಂಜಿನಿಯರ್ ಶಶಿಕುಮಾರ್, ಕಾರ್ಯಪಾಲಕ ಎಂಜಿನಿಯರ್ ಪಾಪ ರೆಡ್ಡಿ, ಕಂದಾಯ ಅಧಿಕಾರಿ ಶ್ರೀನಿವಾಸ್ ಇದ್ದರು.

# ಕಾನ್‌ಸ್ಟೆಬಲ್ ಮುಖ, ಎದೆಗೆ ಗುದ್ದಿ ಹಲ್ಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಿಲುಗಡೆ ನಿಷೇಧ' ಸ್ಥಳದಲ್ಲಿ ನಿಲ್ಲಿಸಿದ್ದ ಕಾರಿಗೆ ವ್ಹೀಲ್ ಕ್ಲ್ಯಾಂಪ್ ಹಾಕಿದ್ದಕ್ಕೆ ಸಂಚಾರ ಪೊಲೀಸರ ಮೇಲೆ ಹಲ್ಲೆ ಮಾಡಿ ಜೀವ ಬೆದರಿಕೆಯೊಡ್ಡಿದ್ದ ಆರೋಪದಡಿ ಇಬ್ಬರು ಆರೋಪಿಗಳನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಗಳಾದ ಸುಲೇಮಾನ್ ಹಾಗೂ ಫಹಾದ್ ಬಂಧಿತರು. ಬಾಣಸವಾಡಿ ಸಂಚಾರ ಠಾಣೆ ಕಾನ್‌ಸ್ಟೆಬಲ್ ಉಮೇಶ್ ನೀಡಿದ್ದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಉಮೇಶ್ ಹಾಗೂ ಎಎಸ್‌ಐ ನಾರಾಯಣಸ್ವಾಮಿ ಅವರು ಜುಲೈ 19ರಂದು ಬೆಳಿಗ್ಗೆ ಕರ್ತವ್ಯದಲ್ಲಿದ್ದರು. ಎಚ್‌ಬಿಆರ್ ಬಡಾವಣೆಯ 5ನೇ ಮುಖ್ಯರಸ್ತೆಯಲ್ಲಿರುವ ಎಸ್‌ಬಿಐ ಎಟಿಎಂ ಮುಂಭಾಗದಲ್ಲಿರುವ ನಿಲುಗಡೆ ನಿಷೇಧ ಸ್ಥಳದಲ್ಲಿ ಕಾರು (ಕೆಎ 04 ಎಂ.ಎಲ್–7075) ನಿಲ್ಲಿಸಲಾಗಿತ್ತು. ಇದನ್ನು ನೋಡಿದ್ದ ಉಮೇಶ್, ಕಾರಿಗೆ ವ್ಹೀಲ್ ಕ್ಲ್ಯಾಂಪ್ ಹಾಕಿ ಹೋಗಿದ್ದರು.'

'ಕೆಲ ನಿಮಿಷಗಳ ನಂತರ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಕಾರಿಗೆ ಹಾಕಿದ್ದ ವ್ಹೀಲ್ ಕ್ಲ್ಯಾಂಪ್ ಗಮನಿಸಿದ್ದರು. ಪೊಲೀಸರಿಗೆ ಕರೆ ಮಾಡಿ ಸ್ಥಳಕ್ಕೆ ಕರೆಸಿಕೊಂಡಿದ್ದರು. ಉಮೇಶ್ ಹಾಗೂ ನಾರಾಯಣಸ್ವಾಮಿ, ವ್ಹೀಲ್ ಕ್ಲ್ಯಾಂಪ್ ತೆರೆಯುತ್ತಿದ್ದರು. ಅದೇ ಸಂದರ್ಭದಲ್ಲಿ ಆರೋಪಿಗಳು ಹಾಗೂ ಇಬ್ಬರು ಮಹಿಳೆಯರು, ಸಿಬ್ಬಂದಿಯನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. 'ಪೊಲೀಸರಿಗೆ ಒಂದು ಗತಿ ಕಾಣಿಸಿ' ಎಂದು ಮಹಿಳೆಯರು ಕೂಗಾಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸಿಬ್ಬಂದಿ ಮೇಲೆ ದಾಳಿ ಮಾಡಿದ್ದ ಆರೋಪಿಗಳು, ಮುಖ, ತಲೆ ಹಾಗೂ ಎದೆಗೆ ಹೊಡೆದಿದ್ದರು. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಹಲ್ಲೆಯಿಂದ ಗಾಯಗೊಂಡಿದ್ದ ಸಿಬ್ಬಂದಿ, ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಹಿರಿಯ ಅಧಿಕಾರಿಗಳಿಗೆ ವಿಷಯ ತಿಳಿಸಿ ಠಾಣೆಗೆ ದೂರು ನೀಡಿದ್ದಾರೆ' ಎಂದಿವೆ.

### ಆಸ್ಪತ್ರೆಗೆ ಮಹಿಳೆ ಕರೆತಂದಿದ್ದ ಆರೋಪಿಗಳು

'ಆರೋಗ್ಯ ಸಮಸ್ಯೆ ಎದುರಿಸುತ್ತಿದ್ದ ಮಹಿಳೆಯೊಬ್ಬರನ್ನು ಆರೋಪಿಗಳು, ಕಾರಿನಲ್ಲಿ ಆಸ್ಪತ್ರೆಗೆ ಕರೆತಂದಿದ್ದರು. ಇದೇ ಸಂದರ್ಭದಲ್ಲಿ, ನಿಲುಗಡೆ ನಿಷೇಧ ಸ್ಥಳದಲ್ಲಿ ಕಾರು ನಿಲ್ಲಿಸಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

# ವಾಹನ ಕಳವು, ಸುಲಿಗೆ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದ್ವಿಚಕ್ರ ವಾಹನ ಕಳ್ಳತನ ಹಾಗೂ ಸುಲಿಗೆ ಪ್ರಕರಣದಲ್ಲಿ ನಾಲ್ವರು ಆರೋಪಿಗಳನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಜಮೀರ್, ಅಫ್ನಾನ್, ಮಿಥುನ್ ಹಾಗೂ ಸಾಗರ್ ಅಲಿಯಾಸ್ ಶಕ್ತಿ ವೇಣು ಬಂಧಿತರು. ಇವರಿಂದ ₹ 11 ಲಕ್ಷ ಮೌಲ್ಯದ 11 ದ್ವಿಚಕ್ರ ವಾಹನ ಹಾಗೂ 24 ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮನೆ ಎದುರು ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳು ಕಳ್ಳತನವಾಗುತ್ತಿದ್ದವು. ಜೊತೆಗೆ, ರಸ್ತೆಯಲ್ಲಿ ನಡೆದುಕೊಂಡು ಹೋಗುವ ಜನರನ್ನು ಅಡ್ಡಗಟ್ಟಿ ಸುಲಿಗೆ ಮಾಡುತ್ತಿದ್ದ

ಪ್ರಕರಣಗಳು ವರದಿಯಾಗಿದ್ದವು. ಎರಡೂ ಕೃತ್ಯಗಳ ಬಗ್ಗೆ ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ, ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ತಿಳಿಸಿವೆ.

'ಆರೋಪಿಗಳಾದ ಜಮೀರ್ ಹಾಗೂ ಅಫ್ನಾನ್, ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದರು. ಕೆಲ ವಾಹನಗಳನ್ನು ಕಡಿಮೆ ಬೆಲೆಗೆ ಮಾರಿ ಹಣ ಪಡೆದು ದುಶ್ಚಟಗಳಿಗೆ ಖರ್ಚು ಮಾಡುತ್ತಿದ್ದರು. ಆರೋಪಿಗಳಾದ ಮಿಥುನ್, ಸಾಗರ್ ಸುಲಿಗೆ ಮಾಡಿ ಹಣ ಸಂಪಾದಿಸುತ್ತಿದ್ದರು' ಎಂದು ಮೂಲಗಳು ಹೇಳಿವೆ.

## ಬಾಲಕಿ ಮೇಲೆ ಅತ್ಯಾಚಾರ: 10 ವರ್ಷ ಶಿಕ್ಷೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ ಅಪರಾಧಿ ರವಿ ಅಲಿಯಾಸ್ ಕುಳ್ಳನಿಗೆ 10 ವರ್ಷಗಳ ಕಾರಾಗೃಹ ಶಿಕ್ಷೆ ಹಾಗೂ ₹ 10 ಸಾವಿರ ದಂಡ ವಿಧಿಸಿ ನಗರದ 4ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

2019ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ನಾಗರಾಜಪ್ಪ ಎ.ಕೆ. ಅವರು ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಆರ್. ರವಿಚಂದ್ರ ವಾದಿಸಿದ್ದರು.

ಕಾಡುಗೊಂಡಹಳ್ಳಿ (ಕೆ.ಜಿ. ಹಳ್ಳಿ) ಠಾಣೆ ವ್ಯಾಪ್ತಿಯಲ್ಲಿರುವ ಸಂಬಂಧಿಕರ ಮನೆಗೆ ಬಂದಿದ್ದ ಬಾಲಕಿ, ಮೂತ್ರ ವಿಸರ್ಜನೆಗೆಂದು ನಿರ್ಜನ ಪ್ರದೇಶಕ್ಕೆ ಹೋಗಿದ್ದರು. ಆಕೆಯನ್ನು ಹಿಂಬಾಲಿಸಿದ್ದ ಅಪರಾಧಿ ರವಿ, ಅತ್ಯಾಚಾರ ಎಸಗಿದ್ದ. ಈ ಸಂಬಂಧ ಪೋಷಕರು ದೂರು ನೀಡಿದ್ದರು.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದ ಅಂದಿನ ಇನ್‌ಸ್ಪೆಕ್ಟರ್ ಕಿಶೋರ್ ಭರಣಿ, ಅಪರಾಧಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಆಗಸ್ಟ್ 13ರಿಂದ 29ರವರೆಗೆ ನಡೆಯಲಿರುವ 'ಮಹಾರಾಜ ಟ್ರೋಫಿ–2023' ಕ್ರಿಕೆಟ್ ಪಂದ್ಯಾವಳಿಗಾಗಿ ಜಸ್ಟ್ ಕ್ರಿಕೆಟ್ ಅಕಾಡೆಮಿಯ ಆವರಣದಲ್ಲಿ ಆಯೋಜಿಸಿದ್ದ ಟ್ಯಾಲೆಂಟ್ ಹಂಟ್‌ನಲ್ಲಿ ಪಾಲ್ಗೊಂಡಿರುವ ಕ್ರಿಕೆಟ್ ಆಟಗಾರರು

# ಮಹಾರಾಜ ಟ್ರೋಫಿ ಕ್ರಿಕೆಟ್: ಟ್ಯಾಲೆಂಟ್ ಹಂಟ್

ಪ್ರಜಾವಾಣಿ ವಾರ್ತೆ

**ಯಲಹಂಕ:** 'ಮಹಾರಾಜ ಟ್ರೋಫಿ-2023' ಕ್ರಿಕೆಟ್ ಪಂದ್ಯಾವಳಿಗಾಗಿ ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯು ತನ್ನ ಮಾಲೀಕತ್ವದ 'ಮೈಸೂರು ವಾರಿಯರ್ಸ್' ತಂಡಕ್ಕಾಗಿ ಆಟಗಾರರನ್ನು ಆಯ್ಕೆಮಾಡಲು ಇಟಗಲ್‌ಪುರ ಬಳಿಯಿರುವ ಜಸ್ಟ್ ಕ್ರಿಕೆಟ್ ಅಕಾಡೆಮಿಯ ಆವರಣದಲ್ಲಿ ಟ್ಯಾಲೆಂಟ್ ಹಂಟ್ ನಡೆಸಿತು.

ಮಹಾರಾಜ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯು ಆಗಸ್ಟ್ 13ರಿಂದ 29ರವರೆಗೆ ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ. 6 ತಂಡಗಳು ಪಾಲ್ಗೊಳ್ಳಲಿವೆ. ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸುವ ಆಟಗಾರರನ್ನು ಆಯ್ಕೆಮಾಡಲು ಟ್ಯಾಲೆಂಟ್ ಹಂಟ್ ನಡೆಸಲಾಗುತ್ತಿದೆ. 271 ಆಟಗಾರರು ಭಾಗವಹಿಸಿ ಪ್ರತಿಭೆ ಪ್ರದರ್ಶಿಸಲಿದ್ದಾರೆ ಎಂದು ಮೈಸೂರು ವಾರಿಯರ್ಸ್ ತಂಡದ ವ್ಯವಸ್ಥಾಪಕ ಎಂ.ಆರ್.ಸುರೇಶ್ ಅವರು ತಿಳಿಸಿದರು.

ಮೈಸೂರು ವಾರಿಯರ್ಸ್ ತಂಡದ ಪ್ರಧಾನ ಕೋಚ್ ಆರ್.ಎಕ್ಸ್. ಮುರಳೀಧರ್, ಸಹಾಯಕ ಕೋಚ್‌ಗಳಾದ ವಿಜಯ್ ಮದ್ಯಾಲ್ಕರ್, ಆದಿತ್ಯ ಸಾಗರ್, ಅರ್ಜುನ್ ಹೊಯ್ಸಳ ತಂಡದ ಉಸ್ತುವಾರಿಯಲ್ಲಿ ಈ ಆಯ್ಕೆ ಪ್ರಕ್ರಿಯೆ ನಡೆದಿದೆ ಎಂದು ಮಾಹಿತಿ ನೀಡಿದರು.

# 'ಕ್ರೈಸ್ತರ ರಕ್ಷಣೆಗೆ ಸರ್ಕಾರ ಬದ್ಧ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಶಾಂತಿ ಪ್ರಿಯರಾದ ಕ್ರೈಸ್ತರ ಸೇವೆ ಸಮಾಜಕ್ಕೆ ಅತ್ಯಗತ್ಯ. ಕ್ರೈಸ್ತರ ರಕ್ಷಣೆಗೆ ಸರ್ಕಾರ ಬದ್ಧವಾಗಿದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕನ್ನಡ ಕ್ರೈಸ್ತರ ಪರವಾಗಿ ಕರ್ನಾಟಕ ಪ್ರಾಂತ್ಯ ಧರ್ಮಗುರುಗಳ ಭಗಿನಿಯರ ಮತ್ತು ಸಂಘ ಸಂಸ್ಥೆಗಳ ನಿಯೋಗದ ಸನ್ಮಾನ ಸ್ವೀಕರಿಸಿ, ಮಾತನಾಡಿದರು.

'ಕ್ರೈಸ್ತರು ಸಮಾಜಮುಖಿ ಕಾರ್ಯಗಳನ್ನು ಮುಂದುವರಿಸಬೇಕು. ಕ್ರೈಸ್ತರ ಸೇವಾ ಕಾರ್ಯಗಳಲ್ಲಿ ಸಮರ್ಪಣಾ ಭಾವ ಪ್ರಕಾಶಿಸುತ್ತದೆ. ಶಿಕ್ಷಣ, ಆರೋಗ್ಯ ಸೇರಿ ವಿವಿಧ ಸೇವಾ ಕ್ಷೇತ್ರಗಳಲ್ಲಿ ಕ್ರೈಸ್ತ ಸಮುದಾಯ ಸಲ್ಲಿಸಿರುವ ಸೇವೆ ಅವಿಸ್ಮರಣೀಯ. ಸಮುದಾಯಕ್ಕೆ ಅಗತ್ಯ ಸೌಲಭ್ಯ ಒದಗಿಸಲು ಸರ್ಕಾರ ಬದ್ಧವಾಗಿದೆ. ಸರ್ಕಾರದ ಜತೆಗೆ ಧರ್ಮಗುರುಗಳು, ಭಗಿನಿಯರು ಕೈಜೋಡಿಸಿದರೆ,

ಕ್ರೈಸ್ತರ ನಿಯೋಗವು ಡಿ.ಕೆ. ಶಿವಕುಮಾರ್ ಅವರನ್ನು ಸನ್ಮಾನಿಸಿತು.

ಸರ್ವಜನಾಂಗದ ಶಾಂತಿಯ ತೋಟವೆನಿಸಿರುವ ಕರ್ನಾಟಕದಲ್ಲಿ ಉತ್ತಮ ಜೀವನ ಸಾಧ್ಯ' ಎಂದು ಹೇಳಿದರು.

ನಿಯೋಗದಲ್ಲಿ ಬೆಂಗಳೂರು ಮಹಾಧರ್ಮ ಕ್ಷೇತ್ರದ ಗುರು ಸಿ. ಫ್ರಾನ್ಸಿಸ್, ಕರ್ನಾಟಕ ಕ್ರೈಸ್ತ ಧರ್ಮಗುರುಗಳು ಬಳಗದ ಅಧ್ಯಕ್ಷ ಎ. ಥಾಮಸ್, ಉಪಾಧ್ಯಕ್ಷ ಬಾರ್ತಲೋಮಿಯೊ, ಕಾರ್ಯದರ್ಶಿ ಪ್ರದೀಪ್ ಜಡ್, ಮೈಸೂರಿನ ಆರೋಗ್ಯಸ್ವಾಮಿ, ಚಿಕ್ಕಮಗಳೂರಿನ ಆಂಟೋನಿ ರಾಜು, ಅಖಿಲ ಕರ್ನಾಟಕ ಕೆಥೋಲಿಕ್ ಕ್ರೈಸ್ತರ ಕನ್ನಡ ಸಂಘದ ಅಧ್ಯಕ್ಷ ರಫಾಯಲ್ ರಾಜ್ ಇದ್ದರು.

## ತಿರುಪಾಳ್ಯ ಕೆರೆ ಏರಿಗೆ ಹಾನಿ: ಆರೋಪ

ಪ್ರಜಾವಾಣಿ ವಾರ್ತೆ

**ಆನೇಕಲ್ :** ತಾಲ್ಲೂಕಿನ ತಿರುಪಾಳ್ಯದಲ್ಲಿ ಅಭಿವೃದ್ಧಿಪಡಿಸಿದ್ದ ಕೆರೆ ಏರಿಯನ್ನು ಅಗೆದು ಸಾರ್ವಜನಿಕ ಆಸ್ತಿಗೆ ಹಾನಿ ಮಾಡಲಾಗಿದೆ ಎಂದು ಆರೋಪಿಸಿ ಕೆರೆಗಳ ಸಂರಕ್ಷಕ ಆನಂದ್ ಮಲ್ಲಿಗೆವಾಡ್ ಹೆಬ್ಬಗೋಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ವಿವಿಧ ಸಂಸ್ಥೆಗಳು ಮತ್ತು ಸ್ಥಳೀಯರ ಸಹಯೋಗದಲ್ಲಿ ಕೆರೆಯನ್ನು ಪುನಶ್ಚೇತನಗೊಳಿಸಲಾಗಿತ್ತು. ಕಲುಷಿತವಾಗಿದ್ದ ಕೆರೆಗೆ ಹೊಸ ರೂಪ ನೀಡಿ ವಾಕಿಂಗ್ ಪಾಥ್ ನಿರ್ಮಿಸಲಾಗಿದೆ.

ಆದರೆ, ಕೆರೆ ಏರಿಯ ಒಂದು ಭಾಗವನ್ನು ಚನ್ನಾರೆಡ್ಡಿ ಮತ್ತು ಮಧು ಎಂಬುವವರು ಕಾನೂನು ಬಾಹಿರವಾಗಿ ಜೆಸಿಬಿ ಮೂಲಕ ಕಿತ್ತು ಹಾಕಿದ್ದಾರೆ. ಇವರನ್ನು ವಿಚಾರಣೆ ಮಾಡಿ ಸಾರ್ವಜನಿಕರ ಆಸ್ತಿಗೆ ಆಗಿರುವ ನಷ್ಟ ಭರಿಸಬೇಕೆಂದು ದೂರಿನಲ್ಲಿ ಆಗ್ರಹಿಸಿದ್ದಾರೆ.

### ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರಿಂದ ಪ್ರತಿಭಟನೆ

# ತಹಶೀಲ್ದಾರ್ ಆಸ್ತಿ ಮುಟ್ಟುಗೋಲಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

**ಕೆ.ಆರ್.ಪುರ:** ತಹಶೀಲ್ದಾರ್ ಆಗಿದ್ದ ಅಜಿತ್ ಕುಮಾರ್ ರೈ ಗಳಿಸಿರುವ ಅಕ್ರಮ ಸಂಪತ್ತನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬೇಕು. ಅವರಿಗೆ ಶಿಕ್ಷೆ ನೀಡಬೇಕು ಎಂದು ಒತ್ತಾಯಿಸಿ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಕಾರ್ಯಕರ್ತರು ಕೆ.ಆರ್. ಪುರದ ತಾಲ್ಲೂಕು ಕಚೇರಿಯ ಅಂಬೇಡ್ಕರ್ ಪ್ರತಿಮೆ ಎದುರು ಧರಣಿ ನಡೆಸಿದರು.

ಅಜಿತ್ ಕುಮಾರ್ ಮನೆ ಮೇಲೆ ಲೋಕಾಯುಕ್ತರು ನಡೆಸಿದ ದಾಳಿ ವೇಳೆ ನೂರಾರು ಕೋಟಿ ರೂಪಾಯಿ ಬೆಲೆ ಬಾಳುವ ಅಕ್ರಮ ಸಂಪತ್ತು ಪತ್ತೆಯಾಗಿದೆ. ಈ ಅಧಿಕಾರಿ ವಿರುದ್ಧ ಉನ್ನತಮಟ್ಟದ ತನಿಖೆ ಆಗಬೇಕು ಎಂದು ಸಮಿತಿಯ ಉಪ ಪ್ರಧಾನ ಸಂಚಾಲಕ ಮಣಿಪಾಲ್ ರಾಜಪ್ಪ ಆಗ್ರಹಿಸಿದರು.

ತಹಶೀಲ್ದಾರ್ ಲೋಪದಿಂದ ಮೇಡಿ ಅಗ್ರಹಾರ ಗ್ರಾಮದ ಸರ್ವೆ 24ರಲ್ಲಿ 9ಎಕರೆ 12 ಗುಂಟೆ ಜಾಗದಲ್ಲಿ ಕರ್ನಾಟಕ ದಲಿತ ಕ್ರಿಯಾ ಸಮಿತಿ ಸದಸ್ಯರಿಗೆ ನಿವೇಶನ ಹಕ್ಕು ಪತ್ರ ಹಂಚಿಕೆ ಮಾಡಿರುವುದನ್ನು ರದ್ದುಪಡಿಸಿ ಮರು ಹಂಚಿಕೆ ಮಾಡುತ್ತಿರುವ ಕ್ರಮದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮೇಡಿ ಅಗ್ರಹಾರ ಗ್ರಾಮದಲ್ಲಿ ಬಡಾವಣೆ ನಕ್ಷೆ ಪ್ರಕಾರ ಹಂಚಿಕೆ ಮಾಡಿರುವ 206 ನಿವೇಶನಗಳಿಗೆ ಸರ್ಕಾರ ನಿಗದಿಪಡಿಸಿರುವ ಒಂದು ನಿವೇಶನಕ್ಕೆ ₹ 12 ಸಾವಿರ ಹಣ ಪಾವತಿಸಿದೆ. ಬಡಾವಣೆಯಲ್ಲಿ ವಿದ್ಯುತ್, ರಸ್ತೆ, ಚರಂಡಿ, ಕುಡಿಯುವ ನೀರು ಸೇರಿದಂತೆ ಯಾವುದೇ ಮೂಲ ಸೌಲಭ್ಯ ಒದಗಿಸಿಲ್ಲ ಈ ಕಾರಣಕ್ಕಾಗಿ ಮನೆ ನಿರ್ಮಿಸಲು ಸಾಧ್ಯವಾಗಿರಲಿಲ್ಲ. ಈಗ ನಿವೇಶನಗಳನ್ನು ಮರು ಹಂಚಿಕೆಗೆ ಜಿಲ್ಲಾಧಿಕಾರಿ ಅನುಮೋದನೆ ನೀಡಿರುವುದು ಸರಿಯಲ್ಲ ಎಂದು ನಗರ ಪ್ರಧಾನ ಸಂಚಾಲಕ ಮುನಿನಂಜಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಗೋವಿಂದ್ ಕುಮಾರ್, ನಾರಾಯಣಸ್ವಾಮಿ, ಭರತ್, ಕೈಕೊಂಡ್ರಹಳ್ಳಿ ನಾರಾಯಣಸ್ವಾಮಿ ಇದ್ದರು.

ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್‌ವಾದ ಕಾರ್ಯಕರ್ತರು ಕೆ.ಆರ್.ಪುರದ ತಾಲ್ಲೂಕು ಕಚೇರಿ ಎದುರಿನ ಅಂಬೇಡ್ಕರ್ ಪುತ್ಥಳಿ ಎದುರು ಧರಣಿ ನಡೆಸಿದರು

## ಅಜಿತ್ ಕುಮಾರ್ ರೈ ಜಾಮೀನು ಅರ್ಜಿ ವಜಾ

**ಬೆಂಗಳೂರು:** ಆದಾಯಕ್ಕಿಂತ ಹೆಚ್ಚು ಅಸ್ತಿ ಹೊಂದಿರುವ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಕೆ.ಆರ್. ಪುರ ತಾಲ್ಲೂಕಿನ ಹಿಂದಿನ ತಹಶೀಲ್ದಾರ್ ಅಜಿತ್ ಕುಮಾರ್ ರೈ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ ಶುಕ್ರವಾರ ಆದೇಶ ನೀಡಿದೆ.

ಲೋಕಾಯುಕ್ತ ಪೊಲೀಸರು ಜೂನ್ 28ರಂದು ಅಜಿತ್ ರೈ ಮನೆ ಮೇಲೆ ದಾಳಿಮಾಡಿ ಶೋಧ ನಡೆಸಿದ್ದರು. ವಿಚಾರಣೆಗೆ ಸಹಕರಿಸದ ಆರೋಪದ ಮೇಲೆ ಜೂನ್ 29ರಂದು ಬಂಧಿಸಲಾಗಿತ್ತು. ವಿಚಾರಣೆಗಾಗಿ ಕೆಲವು ದಿನಗಳ ಕಾಲ ತನಿಖಾ ತಂಡದ ವಶಕ್ಕೆ ನೀಡಲಾಗಿತ್ತು. ನಂತರ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಪ್ರಕರಣದಲ್ಲಿ ಜಾಮೀನು ನೀಡುವಂತೆ ಕೋರಿ ಅಜಿತ್ ರೈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ಆಕ್ಷೇಪಣೆ ಸಲ್ಲಿಸಿದ್ದ ಲೋಕಾಯುಕ್ತ ಪೊಲೀಸರು, 'ಆರೋಪಿ ವಿರುದ್ಧ ತನಿಖೆ ಬಾಕಿ ಇದೆ. ಬಹಳಷ್ಟು ದಿನಗಳ ಕಾಲ ತನಿಖೆ ನಡೆಯಬೇಕಿದೆ. ಹಲವು ಆಯಾಮಗಳಲ್ಲಿ ತನಿಖೆ ಮುಂದುವರಿಯುತ್ತಿದೆ. ಈ ಸಂದರ್ಭದಲ್ಲಿ ಜಾಮೀನು ಮಂಜೂರು ಮಾಡಿದರೆ ತನಿಖೆಗೆ ಹಿನ್ನಡೆ ಆಗುವ ಅಪಾಯವಿದೆ' ಎಂದು ಜಾಮೀನು ನೀಡುವುದನ್ನು ಬಲವಾಗಿ ವಿರೋಧಿಸಿದ್ದರು.

ಅರ್ಜಿದಾರರ ಪರ ವಕೀಲರು ಮತ್ತು ಲೋಕಾಯುಕ್ತ ಪೊಲೀಸರ ಪರ ಪಬ್ಲಿಕ್ ಪ್ರಾಸಿಕ್ಯೂಟರ್ ಅವರ ವಾದಗಳನ್ನು ಆಲಿಸಿದ್ದ ನ್ಯಾಯಾಧೀಶ ಎಸ್.ವಿ. ಶ್ರೀಕಾಂತ್ ಆದೇಶ ಕಾಯ್ದಿರಿಸಿದ್ದರು. ಶುಕ್ರವಾರ ಆದೇಶ ಪ್ರಕಟಿಸಿದ್ದು, ಜಾಮೀನು ಕೋರಿ ಅಜಿತ್ ರೈ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಿರುವುದಾಗಿ ತಿಳಿಸಿದರು.

'ನವೋದಯ' ಮಾದರಿಯಲ್ಲಿ ಆರಂಭ • ವಿಧಾನಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ

# 'ಪಂಚಾಯಿತಿ ಹಂತದಲ್ಲಿ ಜಾಗತಿಕ ಶಾಲೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜಾಗತಿಕ ಗುಣಮಟ್ಟದ ಶಾಲೆಯನ್ನು ತೆರೆಯಲು ಉದ್ದೇಶಿಸಲಾಗಿದೆ. ಈ ಕುರಿತು ನನ್ನ ಪರಿಕಲ್ಪನೆಯನ್ನು ಶಿಕ್ಷಣ ಸಚಿವರ ಜತೆ ಹಂಚಿಕೊಂಡಿದ್ದೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಧಾನಸಭೆಯಲ್ಲಿ ಶುಕ್ರವಾರ ಗಮನಸೆಳೆಯುವ ಸೂಚನೆಯ ಕಲಾಪದ ವೇಳೆಯಲ್ಲಿ ಈ ವಿಷಯ ತಿಳಿಸಿದರು.

'ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಈ ಅಂಶವನ್ನು ಪ್ರಸ್ತಾಪಿಸಿದ್ದೇವೆ. ನವೋದಯ ಶಾಲೆಯ ಮಾದರಿಯಲ್ಲಿ ಸಿಬಿಎಸ್‌ಇ ಗುಣಮಟ್ಟದ ಶಾಲೆಯನ್ನು ಆರಂಭಿಸಲಾಗುವುದು. ನಮ್ಮ ರಾಜ್ಯದ ಮಕ್ಕಳು ವಿಶ್ವಮಟ್ಟದಲ್ಲಿ ಸ್ಪರ್ಧಿಸುವಂತಾಗಬೇಕಾದರೆ ಜಾಗತಿಕ ಗುಣಮಟ್ಟದ ಶಾಲೆಗಳೇ ಬೇಕು. ಖಾಸಗಿ ಕಂಪನಿಗಳು ಒಂದೊಂದು ಶಾಲೆಯನ್ನು ದತ್ತು ತೆಗೆದುಕೊಂಡು ನಡೆಸಬೇಕು' ಎಂದರು.

**ಅನುದಾನಿತ ಶಾಲೆಗಳಿಗೆ ಶಿಕ್ಷಕರ ನೇಮಕ:** ಅನುದಾನಿತ ಶಾಲೆಗಳಿಗೆ ಶಿಕ್ಷಕರನ್ನು ನೇಮಕ ಮಾಡುವ ಸಂಬಂಧ ಹಣಕಾಸು ಇಲಾಖೆಗೆ 2016 ರಿಂದ 2020 ವರೆಗಿನ ಪ್ರಸ್ತಾವನೆ ಕಳುಹಿಸಲಾಗಿದೆ. ಉಳಿದ ಮೂರು ವರ್ಷಗಳ ಪ್ರಸ್ತಾವನೆಯನ್ನು ಕಳುಹಿಸಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಕಾಂಗ್ರೆಸ್‌ನ ಜಿ.ಎಸ್.ಪಾಟೀಲ ಅವರ ಗಮನಸೆಳೆಯುವ ಸೂಚನೆಗೆ ಉತ್ತರಿಸಿ ಅವರು ಈ ವಿಷಯ ತಿಳಿಸಿದರು. ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಮಾತನಾಡಿ, 'ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೂ ನೇಮಕ ಮಾಡಬೇಕು ಅನುದಾನಿತ ಶಾಲೆಗಳು ತುಂಬಾ ಸಂಕಷ್ಟದಲ್ಲಿವೆ' ಎಂದು ಹೇಳಿದರು.

ವಿಧಾನ ಮಂಡಲದಲ್ಲಿ

## ಪಿಟಿಸಿಎಲ್ ಮಸೂದೆಗೆ ಒಪ್ಪಿಗೆ

**ಬೆಂಗಳೂರು:** ಪರಿಶಿಷ್ಟ ಜಾತಿ/ ಪಂಗಡಗಳ ಭೂಮಿ ವರ್ಗಾವಣೆ ನಿಷೇಧ(ಪಿಟಿಸಿಎಲ್) ಮಸೂದೆಗೆ ಉಭಯ ಸದನಗಳು ಅನುಮೋದನೆ ದೊರೆತಿದ್ದು, ರಾಜ್ಯಪಾಲರ ಅಂಕಿತದ ಬಳಿಕ ಕಾಯ್ದೆ ರೂಪದಲ್ಲಿ ಜಾರಿಯಾಗಲಿದೆ.

ಪರಿಶಿಷ್ಟರ ಜಮೀನುಗಳ ಅಕ್ರಮ ಪರಭಾರೆಯನ್ನು ಪ್ರಶ್ನಿಸಿ ಅರ್ಜಿ ಸಲ್ಲಿಸುವುದಕ್ಕೆ ಕಾಲಮಿತಿಯನ್ನು ತೆಗೆದುಹಾಕಲು ಪಿಟಿಸಿಎಲ್ ತಿದ್ದುಪಡಿ ಮಸೂದೆಯನ್ನು ಮಂಡಿಸಿತ್ತು.

ವಿಧಾನಪರಿಷತ್‌ನಲ್ಲಿ ಮಸೂದೆ ಮಂಡಿಸಿ ಮಾತನಾಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು, 'ಪರಿಶಿಷ್ಟರಿಗೆ ಅನ್ಯಾಯ ಆಗುವುದನ್ನು ತಪ್ಪಿಸಲು ತಿದ್ದುಪಡಿ ತರಲಾಗುತ್ತಿದೆ. 1978ರಿಂದ ಈ ಕಾಯ್ದೆ ಜಾರಿಯಲ್ಲಿತ್ತು. ಆದರೆ, 2017ರಲ್ಲಿ ಪ್ರಕರಣವೊಂದರಲ್ಲಿ ತೀರ್ಪು ನೀಡಿದ ಸುಪ್ರೀಂ ಕೋರ್ಟ್, ಕಾಯ್ದೆಯಲ್ಲಿ ಅರ್ಜಿ ಸಲ್ಲಿಸುವುದಕ್ಕೆ ಕಾಲಮಿತಿ ಕುರಿತು ಸ್ಪಷ್ಟತೆ ಇಲ್ಲದ ಕಾರಣ ಗೊಂದಲವಿದೆ ಎಂದು ಹೇಳಿತ್ತು. ಅದರ ಆಧಾರದಲ್ಲೇ ಅರ್ಜಿಯನ್ನು ತಿರಸ್ಕರಿಸಿತ್ತು. ನಂತರ ಬಹುತೇಕ ಪ್ರಕರಣಗಳು ವಜಾಗೊಂಡಿದ್ದವು' ಎಂದು ವಿವರಿಸಿದರು.

'ಸರ್ಕಾರದ ಅನುಮತಿ ಪಡೆದು ಜಮೀನು ಪರಭಾರೆ ಮಾಡಬಹುದು. ಕೃಷಿಯೇತರ ಚಟುವಟಿಕೆಗೂ ಬದಲಾಯಿಸಲು ಅವಕಾಶ ಕಲ್ಪಿಸಲಾಗಿದೆ' ಎಂದು ತಿಳಿಸಿದರು.

ಪಿಟಿಸಿಎಲ್ ಮಸೂದೆಗೆ ತಿದ್ದುಪಡಿ ತಂದು, ಪರಿಶಿಷ್ಟ ಜಾತಿ, ಪಂಗಡದವರಿಗೆ ಸರ್ಕಾರ ಮಂಜೂರು ಮಾಡಿದ ಭೂಮಿಯ ಹಕ್ಕನ್ನು ಮತ್ತೆ ವಾಪಸ್ ಕೊಡಿಸಬೇಕು ಎಂದು ಈ ಸಮುದಾಯದ ಹಲವು ಸಂಘಟನೆಗಳನ್ನು ಹಲವು ಹಂತದಲ್ಲಿ ಹೋರಾಟ ನಡೆಸಿದ್ದವು. ಪಿಟಿಸಿಎಲ್ ಹೋರಾಟ ಸಮಿತಿ 150ಕ್ಕೂ ಹೆಚ್ಚು ದಿನ ಸತ್ಯಾಗ್ರಹ ನಡೆಸಿತ್ತು. ಅಧಿಕಾರಕ್ಕೆ ಬಂದರೆ, ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ ತರುವುದಾಗಿ ಕಾಂಗ್ರೆಸ್ ಪಕ್ಷ ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿತ್ತು. ಕಲಾಪ ನಡೆಯುವಾಗಲೇ, ವಿಶೇಷ ಸಚಿವ ಸಂಪುಟ ಸಭೆ ನಡೆಸಿದ್ದ ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಮಸೂದೆಗೆ ಒಪ್ಪಿಗೆಯನ್ನೂ ನೀಡಿತ್ತು.

## ಸುದ್ದಿ 2 ನಿಮಿಷ

### ಶೀಘ್ರ 150 ಪಿಡಿಒಗಳ ನೇಮಕಾತಿ: ಸಚಿವ ಪ್ರಿಯಾಂಕ್ ಖರ್ಗೆ

**ಬೆಂಗಳೂರು:** 'ರಾಜ್ಯದಲ್ಲಿ 660 ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ಹುದ್ದೆಗಳು ಖಾಲಿ ಉಳಿದಿದ್ದು, 150 ಹುದ್ದೆಗಳಿಗೆ ನೇರ ನೇಮಕಾತಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಪ್ರಶ್ನೋತ್ತರ ವೇಳೆಯಲ್ಲಿ ಶಶಿಲ್ ಜಿ. ನಮೋಶಿ ಪರವಾಗಿ ಮರಿತಿಬ್ಬೇಗೌಡ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಪಂಚಾಯಿತಿ ಕಾರ್ಯದರ್ಶಿ ಗ್ರೇಡ್–1 ವೃಂದದ 135 ಹುದ್ದೆಗಳು ಮತ್ತು ಕಾರ್ಯದರ್ಶಿ ಗ್ರೇಡ್–2 ವೃಂದದ 343 ಹುದ್ದೆಗಳಿಗೂ ನೇರ ನೇಮಕಾತಿ ಮಾಡುವ ಪ್ರಕ್ರಿಯೆ ನಡೆಯುತ್ತಿದೆ' ಎಂದು ವಿವರಿಸಿದರು.

'ಬೇರೆ ಇಲಾಖೆಗಳಿಗೆ ನಿಯೋಜನೆ ಮೇಲೆ ತೆರಳಿರುವವರನ್ನು ವಾಪಸ್ ಕರೆಯಿಸಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ. ಆದರೆ, ಕೆಲವರು ಶಾಸಕರು ಮತ್ತು ಸಚಿವರಿಂದ ಒತ್ತಡ ಹಾಕಿ ಅದೇ ಸ್ಥಳದಲ್ಲೇ ಮುಂದುವರಿಯುವ ಯತ್ನ ನಡೆಸುತ್ತಿದ್ದಾರೆ. ಸುಮಾರು 20 ಪಿಡಿಒಗಳು ಶಾಸಕರ ಆಪ್ತ ಕಾರ್ಯದರ್ಶಿಗಳಾಗಿದ್ದಾರೆ. ನನ್ನ ಮೇಲೆಯೇ ಹಕ್ಕುಚ್ಯುತಿ ಮಂಡಿಸಲೂ ಮುಂದಾಗಿದ್ದಾರೆ' ಎಂದು ತಿಳಿಸಿದರು.

'ಶಾಸಕರೇ ಒತ್ತಡ ತಂದು ವ್ಯವಸ್ಥೆಗೆ ಧಕ್ಕೆ ಮಾಡುತ್ತಿದ್ದಾರೆ. ಮುಖ್ಯಮಂತ್ರಿ ಜತೆ ಚರ್ಚಿಸಲು ವಿಧಾನಸಭಾಧ್ಯಕ್ಷರು ಸೂಚಿಸಿದ್ದಾರೆ. ಒಬ್ಬ ಪಿಡಿಒ ಮೂರ್ನಾಲ್ಕು ಪಂಚಾಯಿತಿಗಳನ್ನು ನಿರ್ವಹಿಸುವುದು ಕಷ್ಟವಾಗುತ್ತದೆ' ಎಂದು ಸಭಾಪತಿ ಮುಂದೆ ಸಚಿವರು ಅಳಲು ತೋಡಿಕೊಂಡರು.

### ಕೊಬ್ಬರಿಗೆ ಬೆಂಬಲ ಬೆಲೆ: ನೋಂದಣಿ ಅವಧಿ ವಿಸ್ತರಿಸಿ'

**ಬೆಂಗಳೂರು:** 'ಕೊಬ್ಬರಿಗೆ ಪ್ರತಿ ಕ್ವಿಂಟಲ್‌ಗೆ ₹16 ಸಾವಿರ ಬೆಂಬಲ ಬೆಲೆ ಘೋಷಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ' ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಕಾಂಗ್ರೆಸ್‌ನ ಎಸ್. ರವಿ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಕೇಂದ್ರ ಸರ್ಕಾರವು ಪ್ರತಿ ಕ್ವಿಂಟಲ್‌ಗೆ ₹11,750 ಸಾವಿರ ಬೆಂಬಲ ಬೆಲೆ ನೀಡಲು ತೀರ್ಮಾನಿಸಿದೆ. ರಾಜ್ಯ ಸರ್ಕಾರ ₹1,250 ನೀಡುತ್ತಿದೆ' ಎಂದು ತಿಳಿಸಿದರು.

'ಬೆಂಬಲ ಬೆಲೆಯಲ್ಲಿ ಕೊಬ್ಬರಿ ಖರೀದಿಗೆ ನೀಡಿರುವ ಅವಧಿಯನ್ನು ವಿಸ್ತರಿಸಬೇಕು ಮತ್ತು ರೈತರಿಗೆ ಹೊಸದಾಗಿ ನೋಂದಣಿಗೆ ಅವಕಾಶ ನೀಡಬೇಕು. ಇನ್ನೂ 1.50 ಲಕ್ಷ ರೈತರು ನೋಂದಣಿ ಮಾಡಿಸಿಕೊಂಡಿಲ್ಲ. ನೋಂದಣಿಗೂ ಕೇಂದ್ರ ಸರ್ಕಾರ ಅನುಮತಿ ನೀಡುತ್ತಿಲ್ಲ' ಎಂದು ದೂರಿದರು.

ರವಿ ಮಾತನಾಡಿ, 'ಕೇಂದ್ರ ಸರ್ಕಾರ ರೈತ ವಿರೋಧಿ ಧೋರಣೆ ಅನುಸರಿಸುತ್ತಿದೆ. ಮುಖ್ಯಮಂತ್ರಿ ಅವರು ಕೇಂದ್ರ ಸರ್ಕಾರದ ಗಮನ ಸೆಳೆಯಬೇಕು' ಎಂದು ಒತ್ತಾಯಿಸಿದರು.

## ಅಬ್ಬಿಗೆರೆಯಲ್ಲಿ ಬೆಂಗಳೂರು ಒನ್ ಕೇಂದ್ರ ಆರಂಭ

ಪ್ರಜಾವಾಣಿ ವಾರ್ತೆ

**ಪೀಣ್ಯ ದಾಸರಹಳ್ಳಿ:** ಸರ್ಕಾರದ ಜನೋಪಯೋಗಿ ಸೇವೆಗಳನ್ನು ಸಾರ್ವಜನಿಕರಿಗೆ ನೇರವಾಗಿ ತಲುಪಿಸಲು ಬೆಂಗಳೂರು ಒನ್ ಕೇಂದ್ರ ಪ್ರಾರಂಭಿಸಲಾಗಿದೆ ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಅಬ್ಬಿಗೆರೆಯಲ್ಲಿ ಬಿಬಿಎಂಪಿ ಕಚೇರಿಯಲ್ಲಿ ಬೆಂಗಳೂರು ಒನ್ ಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದರು.

ಸರ್ಕಾರಿ ಇಲಾಖೆಯ 40 ಸೌಲಭ್ಯಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಈ ಭಾಗದ ಕಮ್ಮಗೊಂಡನಹಳ್ಳಿ, ಅಬ್ಬಿಗೆರೆ, ಲಕ್ಷ್ಮಿಪುರ, ಕೆರೆಗುಡ್ಡದಹಳ್ಳಿ ಮುಂತಾದ ಗ್ರಾಮದ ಜನರ ಅನುಕೂಲಕ್ಕಾಗಿ ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

ಪಾಲಿಕೆ ಮಾಜಿ ಸದಸ್ಯ ಕೆ. ನಾಗಭೂಷಣ್ ಮಾತನಾಡಿದರು. ಅಬ್ಬಿಗೆರೆ ರಾಜಣ್ಣ, ದಾಸರಹಳ್ಳಿ ಬಿಜೆಪಿ ಮಂಡಲ ಅಧ್ಯಕ್ಷ ಸೋಮಶೇಖರ್, ಬಿಜೆಪಿ ಮುಖಂಡರಾದ ಅಬ್ಬಿಗೆರೆ ಲೋಕೇಶ್, ಹನಶ್ರೀ ಮಂಜಣ್ಣ, ಶ್ರೀಹರಿ, ಚಿಕ್ಕಬೈಲಪ್ಪ, ವಿನೋದ್ ಗೌಡ ಇದ್ದರು.

# ಡಿಕೆಶಿ ಪ್ರಕರಣ: 'ತನಿಖಾ ವಿಧಾನವೇ ಪ್ರಶ್ನಾರ್ಹ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧದ ಆದಾಯ ಮೀರಿ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ನಡೆಸುತ್ತಿರುವ ತನಿಖಾ ವಿಧಾನವೇ ಪ್ರಶ್ನಾರ್ಹವಾಗಿದೆ' ಎಂದು ಶಿವಕುಮಾರ್ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

'ಆದಾಯ ಮೀರಿದ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಸಿಬಿಐ ದಾಖಲಿಸಿರುವ ಎಫ್‌ಐಆರ್ ಮತ್ತು ಆ ಕುರಿತ ತನಿಖೆ ರದ್ದುಪಡಿಸಬೇಕು' ಎಂದು ಕೋರಿ ಡಿ.ಕೆ. ಶಿವಕುಮಾರ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಶಿವಕುಮಾರ್ ಪರ ವಾದ ಮಂಡಿಸಿದ ಹಿರಿಯ ವಕೀಲ ಸಂದೇಶ್ ಚೌಟ, 'ಪ್ರಕರಣದಲ್ಲಿ ಅರ್ಜಿದಾರರ ವಿರುದ್ಧ ಮಾತ್ರವಲ್ಲದೇ ಅವರ ಕುಟುಂಬದ ಸದಸ್ಯರ ಮೇಲೂ ಆರೋಪ ಹೊರಿಸಲಾಗಿದೆ. ಕುಟುಂಬದ ಸದಸ್ಯರು ಗಳಿಸಿರುವ ಆದಾಯವನ್ನೂ ಶಿವಕುಮಾರ್ ಅವರ ವೈಯಕ್ತಿಕ ಆದಾಯವೆಂದು ತನಿಖಾಧಿಕಾರಿಗಳು ಪರಿಗಣಿಸಿದ್ದಾರೆ. ಆ ಮೂಲಕ ಅರ್ಜಿದಾರರು ನಿಗದಿಗಿಂತ ಹೆಚ್ಚಿನ ಆದಾಯವನ್ನು ಸಂಪಾದನೆ ಮಾಡಿದ್ದಾರೆ ಎಂಬುದಾಗಿ ಹೇಳುತ್ತಿದ್ದಾರೆ. ಕುಟುಂಬ ಸದಸ್ಯರ ಆದಾಯವನ್ನು ಪರಿಗಣಿಸಲು ಆಗುವುದಿಲ್ಲ. ಹಾಗಾಗಿ, ಸಿಬಿಐ ತನಿಖಾ ವಿಧಾನವೇ ಪ್ರಶ್ನಾರ್ಹವಾಗಿದೆ' ಎಂದರು.

'ಸಿಬಿಐ ದಾಖಲಿಸಿದ ಎಫ್‌ಐಆರ್‌ನಲ್ಲಿ ಕುಟುಂಬದ ಸದಸ್ಯರ ಹೆಸರೇ ಇಲ್ಲ. ಸಾರ್ವಜನಿಕ ಸೇವಕನ ವೆಚ್ಚ ಯಾವುದು ಎಂಬೆಲ್ಲಾ ಅಂಶಗಳನ್ನು ಎಫ್‌ಐಆರ್‌ನಲ್ಲಿ ವಿವರಿಸಿಲ್ಲ. ಪ್ರಮುಖ ಆರೋಪಿಯ ಅವಲಂಬಿತರು ಯಾರು ಎಂಬುದನ್ನೂ ತಿಳಿಸಿಲ್ಲ. ವಿವರವಾದ ಅಂಶಗಳಿಲ್ಲದೇ ಎಫ್‌ಐಆರ್ ದಾಖಲಿಸಲು ಆಗುವುದಿಲ್ಲ' ಎಂದು ಬಲವಾಗಿ ಪ್ರತಿಪಾದಿಸಿದರು.

'ಆರೋಪಿಯ ಆದಾಯ ಪರಿಶೀಲನಾ ಅವಧಿ ಯಾವುದು, ಆ ಅವಧಿ ಯಾವಾಗ ಕೊನೆಗೊಂಡಿದೆ ಎಂಬುದೂ ಸೇರಿದಂತೆ ಇನ್ನಿತರೆ ಪ್ರಾಥಮಿಕ ಅಂಶಗಳು ತನಿಖಾ ವರದಿಯಲ್ಲಿ ಉಲ್ಲೇಖಗೊಂಡಿಲ್ಲ. ನಿಯಮಗಳ ಅನುಸಾರ ಈ ಪ್ರಕರಣದ ತನಿಖೆಯ ಜವಾಬ್ದಾರಿಯನ್ನು ಪೊಲೀಸ್ ವರಿಷ್ಠಾಧಿಕಾರಿ ಶ್ರೇಣಿಯ ಅಧಿಕಾರಿಗೆ ವಹಿಸಬೇಕು. ಆದರೆ, ಈ ಪ್ರಕರಣದಲ್ಲಿ ತನಿಖಾ ಅಧಿಕಾರವನ್ನು ಉಪ ಪೊಲೀಸ್ ವರಿಷ್ಠಾಧಿಕಾರಿಗೆ ನೀಡಲಾಗಿದೆ. ಇದು ಸಹ ಅನುಮಾನಸ್ಪದವಾಗಿದೆ. ಆದ್ದರಿಂದ, ಕೇಸ್ ಡೈರಿಯನ್ನು ನ್ಯಾಯಾಲಯ ತರಿಸಿಕೊಂಡು ಪರಿಶೀಲನೆ ನಡೆಸಬೇಕು' ಎಂದು ಕೋರಿದರು.

ಅರ್ಜಿದಾರರ ಈ ವಾದಾಂಶಗಳನ್ನು ಸಿಬಿಐ ಪರ ವಕೀಲ ಪಿ.ಪ್ರಸನ್ನಕುಮಾರ್ ಆಕ್ಷೇಪಿಸಿದರು. ದಿನದ ಕಲಾಪದ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ನ್ಯಾಯಪೀಠವು ವಿಚಾರಣೆಯನ್ನು ಇದೇ 26ಕ್ಕೆ ಮುಂದೂಡಿದೆ.

### ಸಿದ್ದರಾಮಯ್ಯ ಆಯ್ಕೆ ಅಸಿಂಧು ಕೋರಿ ಹೈಕೋರ್ಟ್‌ಗೆ ಅರ್ಜಿ

**ಬೆಂಗಳೂರು:** 'ವರುಣಾ ಕ್ಷೇತ್ರದಿಂದ ಶಾಸಕರಾಗಿರುವ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿಯೂ ಆಯ್ಕೆಯಾಗಿದ್ದು ಇವರ ಆಯ್ಕೆ ಕಾನೂನು ವಿರೋಧಿಯಾಗಿದೆ ಎಂದು ಆರೋಪಿಸಿ ಮತ್ತು ಇವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿ ಹೈಕೋರ್ಟ್‌ಗೆ ಚುನಾವಣಾ ತಕರಾರು ಅರ್ಜಿ ಸಲ್ಲಿಸಲಾಗಿದೆ.

ಮೈಸೂರಿನ ವರುಣಾ ಹೋಬಳಿಯ ಕೂಡನಹಳ್ಳಿ ನಿವಾಸಿ ಕೆ.ಎಂ. ಶಂಕರ್ ಈ ಅರ್ಜಿ ಸಲ್ಲಿಸಿದ್ದು, ಅರ್ಜಿಯು ಶುಕ್ರವಾರ ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ವಿಚಾರಣೆಗೆ ಬಂದಿತ್ತು. ಅರ್ಜಿಗೆ ಸಂಬಂಧಿಸಿದಂತೆ ಹೈಕೋರ್ಟ್ ದಸ್ತಾವೇಜು ಕಚೇರಿ ಎತ್ತಿರುವ ಹಲವು ಆಕ್ಷೇಪಣೆಗಳನ್ನು ನಿವಾರಿಸುವಂತೆ ಅರ್ಜಿದಾರ ಪರ ವಕೀಲರಿಗೆ ಸೂಚಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 28ಕ್ಕೆ ಮುಂದೂಡಿತು.

**ಕೋರಿಕೆ ಏನು?:** 'ಚುನಾವಣೆಗೂ ಮುನ್ನ ಕಾಂಗ್ರೆಸ್ ಪಕ್ಷವು ಮತದಾರರಿಗೆ ಗ್ಯಾರಂಟಿ ಕಾರ್ಡ್ ಯೋಜನೆಗಳ ಮೂಲಕ ಆಮಿಷ ಒಡ್ಡಿದೆ. ಈ ಗ್ಯಾರಂಟಿ ಯೋಜನೆಗಳನ್ನು ಸಿದ್ದರಾಮಯ್ಯ ಅವರ ಸಮ್ಮತಿಯೊಂದಿಗೇ ಪ್ರಕಟಿಸಲಾಗಿದೆ. ಇವು ವರುಣಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತಹಾಕಲು ಮತದಾರರನ್ನು ಪ್ರೇರೇಪಿಸಿದೆ. ಇದು ಲಂಚಕ್ಕೆ ಸಮವಾದುದು. ಪ್ರಜಾಪ್ರತಿನಿಧಿ ಕಾಯ್ದೆ–1951ರ ಕಲಂ 123 (1) ಪ್ರಕಾರ ಮತ್ತು ಕಲಂ 123 (2) ಪ್ರಕಾರ ಮತದಾರರ ಮೇಲೆ ಪ್ರಭಾವ ಬೀರುವ ಯತ್ನ. ಕಲಂ 123 (4)ರ ಪ್ರಕಾರ ಆಮಿಷವೊಡ್ಡಿ ಪ್ರಚಾರ ಮಾಡುವುದೂ ಅಪರಾಧ. ಆದ್ದರಿಂದ, ಅಕ್ರಮಗಳನ್ನು ಎಸಗುವ ಮೂಲಕ ಶಾಸಕರಾಗಿ ಆಯ್ಕೆಯಾಗಿರುವುದನ್ನು ಅಸಿಂಧುಗೊಳಿಸಬೇಕು' ಎಂದು ಕೋರಿದ್ದಾರೆ. ಅರ್ಜಿಯಲ್ಲಿ ಸಿದ್ದರಾಮಯ್ಯ ಅವರನ್ನು ಪ್ರತಿವಾದಿಯನ್ನಾಗಿ ಮಾಡಲಾಗಿದೆ.

## ಕುಂದಾಪ್ರ ಕನ್ನಡ ಹಬ್ಬ ನಾಳೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕುಂದಾಪ್ರ ಕನ್ನಡ ಪ್ರತಿಷ್ಠಾನವು ಜುಲೈ 23ರಂದು ಬೆಳಿಗ್ಗೆ 9ರಿಂದ ರಾತ್ರಿ 9ರವರೆಗೆ ಅತ್ತಿಗುಪ್ಪೆಯಲ್ಲಿರುವ ಬಂಟರ ಭವನದಲ್ಲಿ 'ಕುಂದಾಪ್ರ ಕನ್ನಡ ಹಬ್ಬ–2023' ಹಮ್ಮಿಕೊಂಡಿದೆ.

'ನಮ್ಮ ಕುಂದಕನ್ನಡದ ಮೇಲಿನ ಪ್ರೀತಿಯಿಂದ ಸಾಮಾಜಿಕ ಜಾಲತಾಣದಲ್ಲಿ ಹುಟ್ಟಿದ ಅಭಿಯಾನದ ಕಿಡಿಯೊಂದು ಇಂದು ವಿಶ್ವದಗಲ ಹರಡಿದೆ. ಭಾಷೆಯೊಂದರ ಅಪರಿಮಿತ ಸಾಧ್ಯತೆಯನ್ನು ಎತ್ತಿ ಹಿಡಿದಿದೆ. ಇಲ್ಲಿಯವರೆಗೆ ಸಮಾನ ಮನಸ್ಕ ಗೆಳೆಯರ ಸಾರಥ್ಯದಲ್ಲಿ ಕಾರ್ಯಕ್ರಮ ಆಯೋಜನೆಗೊಳ್ಳುತ್ತಿತ್ತು. ಈ ಬಾರಿ ಕುಂದಾಪ್ರ ಕನ್ನಡ ಪ್ರತಿಷ್ಠಾನ ಆಯೋಜಿಸಿದೆ ಎಂದು ಪ್ರತಿಷ್ಠಾನದ ಗೌರವಾಧ್ಯಕ್ಷ ಪ್ರಮೋದಚಂದ್ರ ಭಂಡಾರಿ, ಅಧ್ಯಕ್ಷ ದೀಪಕ್ ಶೆಟ್ಟಿ, ಕಾರ್ಯಾಧ್ಯಕ್ಷ ನರಸಿಂಹ ಬೀಜಾಡಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೆಂಗಳೂರಿನಲ್ಲಿ ನೆಲೆಸಿರುವ ಕುಂದಗನ್ನಡಿಗರ ಸಮ್ಮಿಲನಕ್ಕೆ ವೇದಿಕೆಯಾಗಲಿದೆ. ಕುಂದಾಪುರ ನೆಲಮೂಲದ ಭಾಷಾ ಸಂಪತ್ತು, ಆಚಾರ–ವಿಚಾರ, ಕಲೆ, ಕ್ರೀಡೆ, ಆಹಾರ ಅನಾವರಣಗೊಳ್ಳಲಿದೆ. ಕಂಬಳ ಕ್ಷೇತ್ರದ ಸಾಧಕ ಶಾಂತರಾಮ ಶೆಟ್ಟಿ ಬಾರ್ಕೂರು ಈ ಹಬ್ಬವನ್ನು ಉದ್ಘಾಟಿಸುವರು. ಶಾಸಕರಾದ ಕಿರಣ್ ಕೊಡ್ಗಿ, ಗುರುರಾಜ್ ಗಂಟಿಹೊಳೆ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಂಜೆ 4.30ಕ್ಕೆ ನಡೆಯುವ ಸಮಾರೋಪದಲ್ಲಿ ಸಿ.ಎಂ. ಸಿದ್ದರಾಮಯ್ಯ, ಶಾಸಕ ಎಂ. ಕೃಷ್ಣಪ್ಪ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ. ಜಯಪ್ರಕಾಶ ಹೆಗ್ಡೆ, ಬೆಂಗಳೂರು ಬಂಟರ ಸಂಘದ ಅಧ್ಯಕ್ಷ ಎಂ. ಮುರಳೀಧರ ಹೆಗ್ಡೆ, ಭಾಗವಹಿಸುವರು. ಕುಂದಾಪುರದ ಹಿರಿಮೆ ವಿಸ್ತರಿಸಿದ ಎ.ವಿ. ನಾವಡ, ಸಂಗೀತ ನಿರ್ದೇಶಕ ರವಿ ಬಸ್ರೂರು ಅವರನ್ನು ಸನ್ಮಾನಿಸಲಾಗುವುದು. ನಟರಾದ ರಿಷಬ್ ಶೆಟ್ಟಿ, ಪ್ರಮೋದ್ ಶೆಟ್ಟಿ ಕಾರ್ಯಕ್ರಮಕ್ಕೆ ಮೆರುಗು ನೀಡಲಿದ್ದಾರೆ ಎಂದು ಕಾರ್ಯದರ್ಶಿ ರಾಘವೇಂದ್ರ ಕಾಂಚನ್, ಕೋಶಾಧಿಕಾರಿ ವಿಜಯ್ ಶೆಟ್ಟಿ ಹಾಲಾಡಿ, ಕಾರ್ಯದರ್ಶಿ ಅಜಿತ್ ಶೆಟ್ಟಿ ಹೇಳಿದರು.

ಕಳೆದ 20 ದಿನಗಳಲ್ಲಿ ಪ್ರಕರಣಗಳ ಹೆಚ್ಚಳ

## ಡೆಂಗಿ: 1,330 ಪ್ರಕರಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಡೆಂಗಿ ಪ್ರಕರಣಗಳ ಸಂಖ್ಯೆ ದಿಢೀರ್ ಹೆಚ್ಚಳವಾಗಿದ್ದು, ಕಳೆದ 20 ದಿನಗಳಲ್ಲಿ 1,330 ಮಂದಿಗೆ ಡೆಂಗಿ ದೃಢಪಟ್ಟಿದೆ.

ಬಿಸಿಲು ಮಳೆಯಿಂದಾಗಿ ಈ ಜ್ವರಕ್ಕೆ ಅಧಿಕ ಮಂದಿ ಒಳಪಡುತ್ತಿದ್ದಾರೆ. ರಾಜ್ಯದಲ್ಲಿ ಈ ವರ್ಷ 4,053 ಡೆಂಗಿ ಪ್ರಕರಣಗಳು ವರದಿಯಾಗಿವೆ. ಇವುಗಳಲ್ಲಿ ಅರ್ಧಕ್ಕೂ ಅಧಿಕ ಪ್ರಕರಣಗಳು ಬೆಂಗಳೂರಿನಲ್ಲಿಯೇ ದೃಢಪಟ್ಟಿವೆ. ನಗರದಲ್ಲಿ ಈವರೆಗೆ 2,078 ಡೆಂಗಿ ಪ್ರಕರಣಗಳು ವರದಿಯಾಗಿವೆ. ಇವುಗಳಲ್ಲಿ 1,047 ಪ್ರಕರಣಗಳನ್ನು ಬಿಬಿಎಂಪಿ ತಡವಾಗಿ ವರದಿ ಮಾಡಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಈ ವರ್ಷ ಬಿಬಿಎಂಪಿ ವ್ಯಾಪ್ತಿಯಲ್ಲಿ 4,742 ಮಂದಿ ಡೆಂಗಿ ಶಂಕಿತರನ್ನು ಗುರುತಿಸಿ, ಅವರಲ್ಲಿ 3,457 ಮಂದಿಯ ರಕ್ತದ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಈವರೆಗೆ ಒಟ್ಟು 2,062 ಪ್ರಕರಣಗಳು ದೃಢಪಟ್ಟಿವೆ. ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 64 ಮಂದಿ ಶಂಕಿತರನ್ನು ಗುರುತಿಸಿ, 32 ಮಂದಿಯ ರಕ್ತದ ಮಾದರಿಯನ್ನು ಪರೀಕ್ಷಿಸಲಾಗಿದೆ. ಅವರಲ್ಲಿ 16 ಮಂದಿಯಲ್ಲಿ ಈವರೆಗೆ ಜ್ವರ ದೃಢಪಟ್ಟಿದೆ. ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ.

ಕಳೆದ ವರ್ಷ ಈ ವೇಳೆ ಬಿಬಿಎಂಪಿ ವ್ಯಾಪ್ತಿಯಲ್ಲಿ 723 ಹಾಗೂ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 33 ಡೆಂಗಿ ಪ್ರಕರಣಗಳು ದೃಢಪಟ್ಟಿದ್ದವು.

ಚಿಕೂನ್‌ಗುನ್ಯಾ ಜ್ವರಕ್ಕೆ ಸಂಬಂಧಿಸಿದಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ 415 ಮಂದಿ ರೋಗ ಡಶಂಕಿತರನ್ನು ಗುರುತಿಸಿ, 75 ಮಂದಿಗೆ ರಕ್ತದ ಮಾದರಿಯನ್ನು ಪರೀಕ್ಷಿಸಲಾಗಿದೆ. ಈವರೆಗೆ 34 ಚಿಕೂನ್‌ಗುನ್ಯಾ ಪ್ರಕರಣಗಳು ದೃಢಪಟ್ಟಿವೆ. ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 162 ಮಂದಿ ರೋಗ ಶಂಕಿತರನ್ನು ಗುರುತಿಸಿ, 58 ಮಂದಿಯ ರಕ್ತದ ಮಾದರಿಯನ್ನು ಪರೀಕ್ಷಿಸಲಾಗಿದೆ. 29 ಪ್ರಕರಣಗಳು ದೃಢಪಟ್ಟಿವೆ. ಕಳೆದ ವರ್ಷ ಈ ವೇಳೆ ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 25 ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ 8 ಪ್ರಕರಣಗಳು ದೃಢಪಟ್ಟಿದ್ದವು.

### 'ಸ್ವ ಉದ್ಯೋಗಾಧಾರಿತ ತರಬೇತಿ ಅಗತ್ಯ'

**ನೆಲಮಂಗಲ:** ಮಹಿಳೆಯರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು, ಸಶಕ್ತಗೊಳ್ಳಲು ಸ್ವ ಉದ್ಯೋಗಾಧಾರಿತ ತರಬೇತಿಗಳು ಅಗತ್ಯವಿದೆ. ಅಂತಹ ತರಬೇತಿಗಳನ್ನು ರುಡ್‌ಸೆಟ್ ಸಂಸ್ಥೆಯು ಉಚಿತವಾಗಿ ನೀಡುತ್ತಿದೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಯ ಯೋಜನಾ ನಿರ್ದೇಶಕ ವಿಠ್ಠಲ್ ಕಾವಳೆ ತಿಳಿಸಿದರು.

ತಾಲ್ಲೂಕಿನ ಅರಿಶಿಣಕುಂಟೆಯ ರುಡ್‌ಸೆಟ್ ಸಂಸ್ಥೆಯಲ್ಲಿ ನಡೆದ ಘನ ತ್ಯಾಜ್ಯ ವಿಲೇವಾರಿ ಘಟಕದ ನಿರ್ವಹಣೆಗೆ ಆಯ್ಕೆಯಾದ ಮಹಿಳಾ ಫಲಾನುಭವಿಗಳಿಗೆ ಹಮ್ಮಿಕೊಳ್ಳಲಾಗಿದ್ದ 30 ದಿನಗಳ ಉಚಿತ ಲಘು ವಾಹನ ಚಾಲನಾ ತರಬೇತಿಯ ಸಮಾರೋಪದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಪ್ರಮಾಣಪತ್ರ ವಿತರಿಸಿ ಅವರು ಮಾತನಾಡಿದರು.

ರುಡ್‌ಸೆಟ್ ಸಂಸ್ಥೆಯ ನಿರ್ದೇಶಕ ರವಿ ಕುಮಾರ ಮಾತನಾಡಿದರು. ನಿರ್ದೇಶಕ ಜೆ. ಆನಂದ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕಿ ಮಂಜುಳಾ, ಜಿಲ್ಲಾ ವ್ಯವಸ್ಥಾಪಕ ಅಶೋಕ್ ಇತರರಿದ್ದರು.

## ಚಿತ್ರಾವಳಿ

ಬ್ಯಾಂಕ್ ಆಫ್ ಬರೋಡ ಬೆಂಗಳೂರು ವಲಯವು ಬ್ಯಾಂಕಿನ 116ನೇ ಸಂಸ್ಥಾಪನಾ ದಿನವನ್ನು ಬೆಂಗಳೂರಿನ ಟ್ರಿನಿಟಿ ಸರ್ಕಲ್ ವಿಜಯ ಟವರ್‌ನಲ್ಲಿರುವ ವಲಯ ಕಚೇರಿಯಲ್ಲಿ ಆಚರಿಸಿತು. ವಲಯ ಮುಖ್ಯಸ್ಥ ದೇಬಬ್ರತ ದಾಸ್, ಮಹಾ ಪ್ರಬಂಧಕ ವಿವೇಕ್ ಕುಮಾರ್ ಚೌಧರಿ, ಉಪ ವಲಯ ಮುಖ್ಯಸ್ಥರಾದ ಮಾನಸ್ಮಿಶ್ರಾ, ಚಿತ್ರನಟ ಪ್ರಕಾಶ್ ಬೆಳವಾಡಿ ಇದ್ದರು

ನಗರದಲ್ಲಿ ಶುಕ್ರವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘವು ಆಯೋಜಿಸಿದ್ದ ಸುದ್ದಿಮನೆಯಿಂದ ವಿಧಾನಸೌಧದ ವರೆಗೆ ಕಾರ್ಯಕ್ರಮದಲ್ಲಿ ಮಾಧ್ಯಮ ಕ್ಷೇತ್ರದಲ್ಲಿದ್ದು ಶಾಸಕರಾಗಿ ಆಯ್ಕೆಯಾದ ರವಿಕುಮಾರ್‌ಗೌಡ ಗಣಿಗ ಹಾಗೂ ಪ್ರದೀಪ್ ಈಶ್ವರ್ ಅವರನ್ನು ಸನ್ಮಾನಿಸಲಾಯಿತು. ಸಂಘದ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರು, ಸಿ.ಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಉಪ ಮುಖ್ಯಮಂತ್ರಿ ಮಾಧ್ಯಮ ಸಂಯೋಜಕ ಪಿ.ತ್ಯಾಗರಾಜ್ ಮೊದಲಾದವರು ಇದ್ದರು

## ನಗರದಲ್ಲಿ ಇಂದು

**'ಸುಸ್ವರ ಚಿಂತನ' ಸಂಗೀತ ಕಛೇರಿ:** **ಗಾಯನ:** ಮನಾಲಿ ಬೋಸ, ಬಾನ್ಸುರಿ: ಷಡ್ಜ ಗೋಡ್ಖಿಂಡಿ, ತಬಲಾ: ಕಿರಣ ಗೋಡ್ಖಿಂಡಿ, ಹಾರ್ಮೋನಿಯಂ: ರವೀಂದ್ರ ಕಾಟೋಟಿ, ತಬಲಾ: ಕೇಶವ ಜೋಶಿ, ಆಯೋಜನೆ: ಸಂಜೋಗ ಬೆಂಗಳೂರು, ನಟರಾಜ ಸಂಗೀತ ವಿದ್ಯಾಲಯ ಹಾಗೂ ಕಲಾ ಸಂಘ, ಸ್ಥಳ: ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 9.45

**ಆರು ಪುಸ್ತಕಗಳು ಬಿಡುಗಡೆ:** ವಿಶ್ವೇಶ್ವರ ಭಟ್ ಅವರ 'ಸಂಪಾದಕರ ಸದ್ಯಶೋಧನೆ' ಮೂರು ಭಾಗಗಳು, ಕಿರಣ್ ಉಪಾಧ್ಯಾಯ ಅವರ 'ಹೊರದೇಶವಾಸಿ', ರೂಪಾ ಗುರುರಾಜ್ ಅವರ 'ಒಂದೊಳ್ಳೆ ಮಾತು–2', ಶಿಶಿರ್ ಹೆಗಡೆ ಅವರ 'ಶಿಶಿರ ಕಾಲ', ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಮುಖ್ಯ ಅತಿಥಿಗಳು: ಬಸವರಾಜ ಬೊಮ್ಮಾಯಿ, ಪ್ರದೀಪ್ ಈಶ್ವರ್, ಆಯೋಜನೆ: ವಿಶ್ವವಾಣಿ ಪುಸ್ತಕ, ಸ್ಥಳ: ಪುರಭವನ, ಜೆ.ಸಿ ರಸ್ತೆ, ಬೆಳಿಗ್ಗೆ 10.30

**ಅನ್ವರ್ ಅಹ್ಮದ್ ಅವರ ವ್ಯಂಗ್ಯಚಿತ್ರ ಪ್ರದರ್ಶನ:** ಉದ್ಘಾಟನೆ: ರಾಮಚಂದ್ರ ಗುಹಾ, ಮುಖ್ಯ ಅತಿಥಿ: ರೀತು ಗೈರಿಲಾ ಖಂಡೂರಿ, ಆಯೋಜನೆ: ಭಾರತೀಯ ವ್ಯಂಗ್ಯಚಿತ್ರಕಾರರ ಸಂಸ್ಥೆ, ಸ್ಥಳ: ಭಾರತೀಯ ವ್ಯಂಗ್ಯಚಿತ್ರ ಗ್ಯಾಲರಿ, ಮಿಡ್‌ಫೋರ್ಡ್ ಹೌಸ್, ಟ್ರಿನಿಟಿ ವೃತ್ತ, ಎಂ.ಜಿ. ರಸ್ತೆ, ಬೆಳಿಗ್ಗೆ 10.30

**'ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ ದತ್ತಿ ಪ್ರಶಸ್ತಿ' ಪ್ರದಾನ:** ಮನು ಬಳಿಗಾರ್, ಪ್ರಶಸ್ತಿ ಪುರಸ್ಕೃತರು: ಹಂ.ಪ. ನಾಗರಾಜಯ್ಯ, ಮುಖ್ಯ ಅತಿಥಿ: ಪದ್ಮರಾಜ ದಂಡಾವತಿ, ಉಪಸ್ಥಿತಿ: ಕೆ.ಜೆ. ಪಾರ್ಶ್ವನಾಥ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30



ಹಂ.ಪ. ನಾಗರಾಜಯ್ಯ

**'ಸಂಕಲ್ಪ' ಕೈಗಾರಿಕಾ ಸಮಾವೇಶ–2023:** ವಿಚಾರ ಸಂಕಿರಣ: ಮನು ಪ್ರಸಾದ್, ಸ್ವರೂಪ್ ವಿ., ಮಾಲಿನಿ ನಾರಾಯಣಮೂರ್ತಿ, ವಿನಯ್ ಸಂಪತ್ ಕುಮಾರ್, ಶ್ರೀಕಾಂತ್ ಕೆ. ಅವಧಾನಿ, ಮುಖ್ಯ ಭಾಷಣಕಾರ: ಈಶ್ವರ್ ಎನ್. ಮಾನಯ್, ಅಧ್ಯಕ್ಷತೆ: ನಾರಾಯಣ ರಾವ್ ಆರ್. ಮಾನಯ್, ಆಯೋಜನೆ ಹಾಗೂ ಸ್ಥಳ: ಬಿ.ಎನ್.ಎಂ. ತಾಂತ್ರಿಕ ವಿದ್ಯಾಲಯ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10.30

**ರಾಜ್ಯ ಶ್ರೇಷ್ಠ ರಫ್ತು ಪ್ರಶಸ್ತಿಗಳ ಪ್ರದಾನ:** ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಎಂ.ಬಿ. ಪಾಟೀಲ, ಶರಣಬಸಪ್ಪ ದರ್ಶನಾಪುರ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಮಧ್ಯಾಹ್ನ 12

**ಸಂವಾದ:** 'ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿಯ ಇಕ್ಕಟ್ಟು–ಬಿಕ್ಕಟ್ಟು', ಅತಿಥಿಗಳು: ನ್ಯಾ.ಎಚ್.ಎನ್. ನಾಗಮೋಹನದಾಸ್, ಪೊನ್ನಣ್ಣ, ಕಾಂತರಾಜು, ಸಿ.ಎಸ್. ದ್ವಾರಕನಾಥ್, ಬಿ.ಎಸ್. ರಾಜಶೇಖರ್, ಕೆ.ಎಸ್. ಪ್ರಭಾಕರ್, ಕೆ.ಆರ್. ನಿರಂಜನ್, ಕೆ.ಎನ್. ಲಿಂಗಪ್ಪ, ಅಶೋಕ್ ರಾಮ್, ಲಕ್ಷ್ಮಣ ಕೊಡಸೆ, ಆಯೋಜನೆ: ಕರ್ನಾಟಕ ರಾಜ್ಯ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ, ಮಧ್ಯಾಹ್ನ 12

**ಬಹುಮಾನ ವಿತರಣೆ:** ಮುಖ್ಯ ಅತಿಥಿಗಳು: ಕೆ.ಸಿ. ವೀರಣ್ಣ, ಎಂ. ನಾರಾಯಣಸ್ವಾಮಿ, ಬಿ.ಆರ್. ಸಿದ್ದಪ್ಪ, ಕರ್ನಲ್ ಸುಬ್ಬಯ್ಯ, ಬಿ.ಸಿ. ರಾಮಕೃಷ್ಣ, ಉಪಸ್ಥಿತಿ: ಡಿ.ಟಿ. ಜಯರಾಮಯ್ಯ, ಆಯೋಜನೆ: ಕರುಣಾ ಪ್ರಾಣಿ ದಯಾ ಸಂಘ, ಸ್ಥಳ: ಕರುಣಾ ಆ್ಯನಿಮಲ್ ಶೆಲ್ಟರ್, ಪಶುವೈದ್ಯ ಕಾಲೇಜು, ಹೆಬ್ಬಾಳ, ಮಧ್ಯಾಹ್ನ 2

**ಕವಿಗೋಷ್ಠಿ:** ಆಶಯ ನುಡಿ: ಮೂಡ್ನಾಕೂಡು ಚಿನ್ನಸ್ವಾಮಿ, ಅಧ್ಯಕ್ಷತೆ: ಕೆ. ಶರೀಫಾ, ಭಾಗವಹಿಸುವವರು: ಎಚ್.ಎನ್. ಆರತಿ, ಪಿ. ಚಂದ್ರಿಕಾ, ಮಂಜುಳಾ ಹುಲಿಕುಂಟೆ, ಎಚ್. ಲಕ್ಷ್ಮೀನಾರಾಯಣಸ್ವಾಮಿ, ಗೋವಿಂದಪ್ಪ ಪಾವಗಡ, ಸುಜಾತಾ ಲಕ್ಷ್ಮೀಪುರ, ಶಿವಣ್ಣ ಹೆಂದೊರೆ, ಕೃಷ್ಣ ಕೆ.ಎನ್., ನಾಗೇಶ್ ಎನ್., ಎ.ಎಂ. ದೊರ್ಯ, ಮಮತಾ ಅರಸೀಕೆರೆ, ಕರಿಯಣ್ಣ ನಿಷಾದ, ಗಿರೀಶ್ ಹಂದಲಗೆರೆ, ಆಯೋಜನೆ: ಬಂಡಾಯ ಸಾಹಿತ್ಯ ಸಂಘಟನೆ, ಸ್ಥಳ: ಸಚಿವಾಲಯ ಕ್ಲಬ್ ಸಭಾಂಗಣ, ಕಬ್ಬನ್ ಉದ್ಯಾನ, ಸಂಜೆ 4.30

ಮೂಡ್ನಾಕೂಡು ಚಿನ್ನಸ್ವಾಮಿ

**ಪ್ರವಚನ ವಾಹಿನಿ:** 'ದೇವರ ನಾಮಗಳು' ಕುರಿತ ಉಪನ್ಯಾಸ: ಆರ್. ನಾಗರಾಜು ಮತ್ತು ವೃಂದ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30ರಿಂದ

**'ಹೋಂ ರೂಲು' ನಾಟಕ ಪ್ರದರ್ಶನ:** ನಿರ್ದೇಶನ: ವೈ.ವಿ. ಗುಂಡೂರಾವ್, ಆಯೋಜನೆ: ಅಂತರಂಗ, ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 7.15

**ಯಕ್ಷ ಸಂಕ್ರಾಂತಿ:** ಪೂರ್ಣರಾತ್ರಿ ತಾಳಮದ್ದಳೆ: 'ಕೃಷ್ಣ ಸಂಧಾನ', 'ಕರ್ಣಾರ್ಜುನ', ಜ್ಞಾನದಾಸೋಹಿಗಳು: ಜಬ್ಬಾರ್ ಸಮೋ, ವಾಸುದೇವ ರಂಗಭಟ್, ಸುಣ್ಣಂಬಳ ವಿಶ್ವೇಶ್ವರ ಭಟ್, ಸಂಕದಗುಂಡಿ ಗಣಪತಿ ಭಟ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 10

## ಜೈನಮುನಿ ಹತ್ಯೆ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಕೆ.ಆರ್.ಪುರ:** ಜೈನಮುನಿ ಕಾಮಕುಮಾರ ನಂದಿ ಮಹಾರಾಜರ ಹತ್ಯೆಯನ್ನು ಖಂಡಿಸಿ ಕುಂದಲಹಳ್ಳಿ ಸಿಗ್ನಲ್ ಬಳಿ ಜೈನ್ ಧರ್ಮದ ಸಂಘಟನೆಗಳ ಕಾರ್ಯಕರ್ತರು ಮಾನವ ಸರಪಳಿ ನಿರ್ಮಿಸುವ ಮೂಲಕ ಮೌನವಾಗಿ ಪ್ರತಿಭಟನೆ ಮಾಡಿದರು.

ಮಾಜಿ ಸಚಿವ ಅರವಿಂದ ಲಿಂಬಾವಳಿ ಮಾತನಾಡಿ, 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಾನೂನು ಸುವ್ಯವಸ್ಥೆಯು ಸಂಪೂರ್ಣ ನೆಲಕಚ್ಚಿದೆ. ಕೊಲೆ ಸುಲಿಗೆ ಹೆಚ್ಚಾಗಿದೆ. ಕಾಂಗ್ರೆಸ್ ಸರ್ಕಾರ ನೀಡುತ್ತಿರುವ ಪ್ರಚೋದನಕಾರಿ ಹೇಳಿಕೆಗಳಿಂದಲೇ ರಾಜ್ಯದಲ್ಲಿ ಅಪರಾಧ ಚಟುವಟಿಕೆಗಳು ಹೆಚ್ಚಾಗಿದೆ' ಎಂದು ಆರೋಪಿಸಿದರು.

ಅಹಿಂಸೆ ತತ್ವವನ್ನು ಸಾರುವ ಜೈನ ಮುನಿಗಳ ಬರ್ಬರ ಹತ್ಯೆಯಾಗಿರುವುದು ಖಂಡನೀಯ. ಈ ಕೃತ್ಯ ಎಸಗಿದವರನ್ನು ಬಂಧಿಸಲಾಗಿದೆ ಎಂದು ಸರ್ಕಾರ ಹೇಳುತ್ತಿದೆ. ಇದರ ಸತ್ಯಾಸತ್ಯತೆ ಹೊರಬರಬೇಕಾದರೆ ಪ್ರಕರಣವನ್ನು ಸಿಬಿಐ ವಹಿಸಬೇಕು ಎಂದು ಆಗ್ರಹಿಸಿದರು.

ಶಾಸಕಿ ಮಂಜುಳಾ ಅರವಿಂದ ಲಿಂಬಾವಳಿ ಮಾತನಾಡಿ, 'ಜೈನ ಮುನಿಗಳ ಹತ್ಯೆ ಮಾಡಿರುವ ಅಪರಾಧಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ಜೊತೆಗೆ ಸಕಲ ಜೈನ ಮುನಿ ವೃಂದಕ್ಕೆ ರಕ್ಷಣೆ ನೀಡಬೇಕು' ಎಂದು ಒತ್ತಾಯಿಸಿದರು.

ಸಂಸದ ಪಿ.ಸಿ. ಮೋಹನ್, ಕುಂದಲಹಳ್ಳಿ ಜ್ಞಾನೋದಯದ ಜೈನ ಸಂಘ, ಮಾರತ್ತಹಳ್ಳಿ ಶ್ರೀ ಜೈನಸಂಘ, ಎಚ್.ಎ.ಎಲ್. ಶ್ರೀ ಜೈನ ಸಂಘ ಪದಾಧಿಕಾರಿಗಳು ಇದ್ದರು.

ಮುಂಗಾರು ಅಧಿವೇಶನದಲ್ಲೇ ಬೇಡಿಕೆ ಈಡೇರಿಸಲು ಕೇಂದ್ರ ಸರ್ಕಾರಕ್ಕೆ ಆಗ್ರಹ

# ಇಪಿಎಸ್–95 ಪಿಂಚಣಿದಾರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಿವೃತ್ತ ನೌಕರರ ಬೇಡಿಕೆಗಳನ್ನು ಕೇಂದ್ರ ಸರ್ಕಾರವು ಮುಂಗಾರು ಅಧಿವೇಶನದಲ್ಲೇ ಈಡೇರಿಸಬೇಕು' ಎಂದು ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಸಂಘಟನೆ ಕಾರ್ಯಾಧ್ಯಕ್ಷ ನಂಜುಂಡೇಗೌಡ ಆಗ್ರಹಿಸಿದರು.

ನಗರದಲ್ಲಿ ನಡೆದ ಇಪಿಎಸ್–95 ಪಿಂಚಣಿದಾರರ ಬೃಹತ್ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.

'ಬೇಡಿಕೆ ಈಡೇರಿಸದಿದ್ದರೆ ಅದರ ಪರಿಣಾಮವನ್ನು ಸರ್ಕಾರವೇ ಎದುರಿಸಬೇಕಾದೀತು' ಎಂದು ಎಚ್ಚರಿಸಿದರು.

ಎನ್‌ಎಸಿ ರಾಜ್ಯ ಅಧ್ಯಕ್ಷ ಜಿ.ಎಸ್.ಎಂ.ಸ್ವಾಮಿ ಮಾತನಾಡಿ, 'ನಿವೃತ್ತ ನೌಕರರಲ್ಲಿ ಹೆಚ್ಚಿನವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಅವರಿಗೆ ಈಗ ನೀಡುತ್ತಿರುವ ಪಿಂಚಣಿಯಿಂದ ಜೀವನ ನಿರ್ವಹಣೆ ಕಷ್ಟವಾಗಿದೆ. ವೈದ್ಯಕೀಯ ಸೌಲಭ್ಯ ಸೇರಿದಂತೆ ಇತರೆ ಸವಲತ್ತುಗಳನ್ನು ನೀಡಬೇಕು' ಎಂದು ಆಗ್ರಹಿಸಿದರು.

ಇಪಿಎಸ್–95 ಪಿಂಚಣಿದಾರರ ಬೃಹತ್ ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡಿದ್ದ ನಿವೃತ್ತ ನೌಕರರು.

ಸಂಘಟನೆಯ ಅಧ್ಯಕ್ಷ ಶಂಕರ್ ಕುಮಾರ್ ಮಾತನಾಡಿ, 'ಎಲ್ಲ ನಿವೃತ್ತರೂ ಒಗ್ಗಟ್ಟಿನಿಂದ ನಡೆದರೆ ಗುರಿ ಮುಟ್ಟಲು ಸಾಧ್ಯವಿದೆ' ಎಂದು ಹೇಳಿದರು.

'ನಿವೃತ್ತರ ಬೇಡಿಕೆ ಈಡೇರಿಸದಿದ್ದರೆ ಮುಂದಿನ ಲೋಕಸಭೆ ಚುನಾವಣೆಯಲ್ಲಿ ಪಾಠ ಕಲಿಸುತ್ತೇವೆ' ಎಂದು ಎಚ್ಚರಿಸಿದರು.

ಸಂಘದ ಉಪಾಧ್ಯಕ್ಷ ಆರ್.ಸುಬ್ಬಣ್ಣ ಮಾತನಾಡಿ, 'ಹಲವಾರು ವರ್ಷಗಳಿಂದ ನಮ್ಮ ಸಂಘಟನೆ ವತಿಯಿಂದ ಪ್ರತಿಭಟನೆ ನಡೆಸಿದ್ದರೂ ಸಹ ಸರ್ಕಾರ ನಿರ್ಲಕ್ಷ್ಯ ವಹಿಸಿದೆ. ನಮ್ಮ ಬೇಡಿಕೆ, ಕನಿಷ್ಠ ಪಿಂಚಣಿ ನೀಡಲು ಸರ್ಕಾರಕ್ಕೆ ಹೆಚ್ಚಿನ ಹೊರೆ ಉಂಟಾಗುವುದಿಲ್ಲ' ಎಂದು ಹೇಳಿದರು.

'ನಾಯಕರು ನೀಡುವ ಸೂಚನೆ ಮೇರೆಗೆ, ಮುಂದಿನ ಹೋರಾಟಕ್ಕೆ ಸಿದ್ಧರಿದ್ದೇವೆ' ಎಂದು ಹೇಳಿದರು.

ಸ್ಥಳಕ್ಕೆ ಬಂದ ಪ್ರಾದೇಶಿಕ ಭವಿಷ್ಯ ನಿಧಿ ಅಧಿಕಾರಿಗಳು, ತಮ್ಮ ಮನವಿಯನ್ನು ಸಚಿವರ ಕಾರ್ಯಾಲಯಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗುವುದು' ಎಂದು ಹೇಳಿದರು.

ಪ್ರಧಾನ ಕಾರ್ಯದರ್ಶಿ ಡೋಲಪ್ಪ, ಖಜಾಂಚಿ ನಾಗರಾಜ, ಸಂಘಟನಾ ಕಾರ್ಯದರ್ಶಿ ಮನೋಹರ ಇದ್ದರು.

# ಕಂದಾಯ ಯೋಜನೆಗಳಿಗೆ ಪ್ರಚಾರದ ಕೊರತೆ: ಶಾಸಕ ಮುನಿರಾಜು

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಕಂದಾಯ ಇಲಾಖೆಯಿಂದ ನಾಗರಿಕರಿಗೆ ನೀಡುವ ಯೋಜನೆಗಳಿಗೆ ಪ್ರಚಾರದ ಕೊರತೆಯಿದೆ. ಅಧಿಕಾರಿಗಳು ಪ್ರಚಾರಕ್ಕೆ ಕ್ರಮ ವಹಿಸಬೇಕು' ಎಂದು ಶಾಸಕ ಎಸ್. ಮುನಿರಾಜು ಹೇಳಿದರು.

ಬಾಗಲಗುಂಟೆ ಬಿಬಿಎಂಪಿ ಕಚೇರಿ ಸಭಾಂಗಣದಲ್ಲಿ ಕಂದಾಯ ಇಲಾಖೆ ಹಾಗೂ ಬೆಂಗಳೂರು ನಗರ ಜಿಲ್ಲಾಡಳಿತ ವತಿಯಿಂದ ಹಮ್ಮಿಕೊಂಡಿದ್ದ ಪಿಂಚಣಿ ಅದಾಲತ್ ಕಾರ್ಯಕ್ರಮದಲ್ಲಿ ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ 1 ಮತ್ತು 2 ನಾಡಕಚೇರಿ ವ್ಯಾಪ್ತಿಯಲ್ಲಿ ವಿಧವಾ ವೇತನ, ವೃದ್ಧಾಪ್ಯ, ಸಂಧ್ಯ ಸುರಕ್ಷಾ, ಅಂಗವಿಕಲ ಪಿಂಚಣಿ ಯೋಜನೆಗಳಡಿ ಫಲಾನುಭವಿಗಳಿಗೆ ಪಿಂಚಣಿ ಪತ್ರಗಳನ್ನು ನೀಡಿ ಮಾತನಾಡಿದರು.

ಸರ್ಕಾರಿ ಯೋಜನೆಗಳ ಹಣ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಹೋಗುವುದರಿಂದ ಮಧ್ಯವರ್ತಿಗಳ ಹಾವಳಿ ತಪ್ಪಿದೆ. ಒಂದು ರೂಪಾಯಿ ಕೂಡಾ ಪೋಲಾಗದೆ ಫಲಾನುಭವುಗಳಿಗೆ ತಲುಪುತ್ತಿದೆ ಎಂದು ಅಭಿಪ್ರಾಯ ಪಟ್ಟರು.

ಪಿಂಚಣಿ ಅದಾಲತ್ ಮೂಲಕ ಅರ್ಹ ಫಲಾನುಭವಿಗಳ ಮನೆ ಬಾಗಿಲಿಗೆ ತೆರಳಿ ಪಿಂಚಣಿ ನೀಡಬೇಕು. ಕಾರ್ಮಿಕ ಇಲಾಖೆಯಲ್ಲಿ ನೀಡುವ ಕಾರ್ಮಿಕ ಕಾರ್ಡ್ ಹಾಗೂ ಆಯುಷ್ಮಾನ್ ಕಾರ್ಡ್‌ಗಳನ್ನು ಅರ್ಹರು ಪಡೆಯಬೇಕು ಎಂದು ಸಲಹೆ ನೀಡಿದರು.

# ಆಡಳಿತ ಮಂಡಳಿಗೆ ಆಯ್ಕೆ

ನೆಲಮಂಗಲ: ಕನಕ ಕ್ರೆಡಿಟ್ ಕೊ-ಆಪರೇಟಿವ್ ಸೊಸೈಟಿಯ ಆಡಳಿತ ಮಂಡಳಿ ನಿರ್ದೇಶಕರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಯಿತು.

ಕೆ.ಎಸ್. ಲೋಕೇಶ್, ಸಿದ್ದಗಂಗಯ್ಯ, ಬೈಲಮೂರ್ತಿ, ಕೆ. ರಾಜಪ್ಪ, ಉಮಾಪತಿ, ಡಿ. ಗಂಗಾಧರ್, ಜಿ. ಸುರೇಶ್‌ಮೂರ್ತಿ, ಬಿ.ಎಸ್. ಲೋಕೇಶ್, ಎನ್. ರಾಜಶೇಖರ್, ಬಿ.ವಿ. ಲತಾ, ಜಯಲಕ್ಷ್ಮಮ್ಮ, ಶ್ರೀನಿವಾಸ್, ಲಕ್ಷ್ಮೀನರಸಪ್ಪ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಕೆ.ವಿ. ಮಾಧವರೆಡ್ಡಿ ಘೋಷಿಸಿದರು.

# ಕೆಎಸ್‌ಸಿಎಸ್‌ಟಿ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು (ಕೆಎಸ್‌ಸಿಎಸ್‌ಟಿ) 2022 ಮತ್ತು 2023ನೇ ಸಾಲಿನ ವಿವಿಧ ವಾರ್ಷಿಕ ಪ್ರಶಸ್ತಿಗೆ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳಿಂದ ಅರ್ಜಿ ಆಹ್ವಾನಿಸಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಇಬ್ಬರು ಸಾಧಕರಿಗೆ ನೀಡುವ 'ಸರ್.ಎಂ. ವಿಶ್ವೇಶ್ವರಯ್ಯ ಹಿರಿಯ ವಿಜ್ಞಾನಿ ಪ್ರಶಸ್ತಿ'ಯು ತಲಾ ₹2 ಲಕ್ಷ ನಗದು, ನೆನಪಿನ ಕಾಣಿಕೆ ಒಳಗೊಂಡಿದೆ. ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳಿಗೆ ಈ ಪ್ರಶಸ್ತಿ ನೀಡಲಾಗುತ್ತದೆ.

₹1.50 ಲಕ್ಷ ನಗದು ಒಳಗೊಂಡಿರುವ 'ರಾಜಾ ರಾಮಣ್ಣ ಪ್ರಶಸ್ತಿ'ಯನ್ನು ಇಬ್ಬರಿಗೆ ನೀಡಲಾಗುತ್ತದೆ. ಐದು ವಿಜ್ಞಾನಿಗಳಿಗೆ 'ಸರ್. ಸಿ.ವಿ.ರಾಮನ್ ವಿಜ್ಞಾನಿ ಪ್ರಶಸ್ತಿ', ನಾಲ್ಕು ಎಂಜಿನಿಯರ್‌ಗಳಿಗೆ 'ಸತೀಶ್ ಧವನ್ ಎಂಜಿನಿಯರ್ ಪ್ರಶಸ್ತಿ', ಇಬ್ಬರು ಮಹಿಳಾ ಸಾಧಕರಿಗೆ 'ಕಲ್ಪನಾ ಚಾವ್ಲಾ ಮಹಿಳಾ ವಿಜ್ಞಾನಿ–ಎಂಜಿನಿಯರ್ ಪ್ರಶಸ್ತಿ' ನೀಡಲಾಗುತ್ತದೆ. ಈ 3 ಪ್ರಶಸ್ತಿಗಳು ತಲಾ ₹1 ಲಕ್ಷ ನಗದು, ನೆನಪಿನ ಕಾಣಿಕೆ ಹಾಗೂ ಪ್ರಶಸ್ತಿ-ಪತ್ರ ಒಳಗೊಂಡಿವೆ. ಅರ್ಜಿ ಸಲ್ಲಿಕೆಗೆ ಆ.21 ಕೊನೆ ದಿನ. ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ, ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಆವರಣ, ಬೆಂಗಳೂರು–560012 ಈ ವಿಳಾಸಕ್ಕೆ ಕಳುಹಿಸಬೇಕು. ವಿವರಗಳಿಗೆ ಮಂಡಳಿಯ ವೆಬ್‌ಸೈಟ್ www.kscst.org.in ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕ ಸಂಖ್ಯೆ:080–23341652 ಅಥವಾ 23348848

# ಕೆಆರ್‌ಎಸ್‌ನಿಂದ ನೀರು ಬಿಡುಗಡೆ ಇಂದು

ಮಂಡ್ಯ: ಕೆಆರ್‌ಎಸ್ ಜಲಾಶಯದಿಂದ ನಾಲೆಗಳಿಗೆ ಶನಿವಾರದಿಂದ (ಜುಲೈ 22) ನೀರು ಹರಿಸಲಾಗುವುದು ಎಂದು ಕಾವೇರಿ ನೀರಾವರಿ ನಿಗಮ ತಿಳಿಸಿದೆ.

ಜನ–ಜಾನುವಾರುಗಳಿಗೆ ಕುಡಿಯುವ ಉದ್ದೇಶಕ್ಕೆ ಮಾತ್ರವೇ ಬಳಸಲು 10 ದಿನಗಳವರೆಗೆ ನೀರು ಹರಿಸಲಾಗುವುದು ಎಂದು ಹೇಳಿದೆ. ಅಚ್ಚುಕಟ್ಟು ಪ್ರದೇಶದಲ್ಲಿ ರೈತರು ಹೊಸ ಬೆಳೆ ಹಾಕಬಾರದು. ಸೂಚನೆ ನಡುವೆಯೂ ಬೆಳೆ ಹಾಕಿ, ಹಾನಿಯಾದಲ್ಲಿ ನಿಗಮ ಜವಾಬ್ದಾರಿಯಾಗಿರುವುದಿಲ್ಲ ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಪ್ರಜಾವಾಣಿ ಶನಿವಾರ, 22 ಜುಲೈ 2023 6

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

# ಸ್ವಾವಲಂಬಿ ಬದುಕು ಕಲಿಸಿದ ಮಲೆನಾಡು ಮೇಳ

ರಾಜೇಂದ್ರ ಹೆಗಡೆ

ಶಿರಸಿಯೆಂಬ ಮಲೆನಾಡ ಸೆರಗಿನ ಪುಟ್ಟ ಊರಲ್ಲಿ ಜಾಗತಿಕ ಆಹಾರ ಭದ್ರತೆ, ಸಾಮಾಜಿಕ ಬದಲಾವಣೆಯ ಸವಾಲುಗಳಿಗೆ ಸ್ಥಳೀಯ ಪರಿಸರ ವ್ಯವಸ್ಥೆಗಳಲ್ಲಿ ಪರಿಹಾರ ಕಂಡುಕೊಳ್ಳಲು 2001ರಲ್ಲಿ ಸ್ಥಾಪನೆಯಾಗಿದ್ದು ವನಸ್ತ್ರೀ ಎಂಬ ಸಂಸ್ಥೆ. ಇದು ನಾಟಿ ಬೀಜ ಸಂರಕ್ಷಣೆಯ ಸಂಕಲ್ಪದೊಂದಿಗೆ ಆರಂಭವಾದ ಮಹಿಳಾ ಸದಸ್ಯರೇ ಪ್ರಧಾನವಾಗಿರುವ ವಿಶಿಷ್ಟ ಸಂಸ್ಥೆ !

ಸಂಸ್ಥೆಯ ಕಾರ್ಯಚಟುವಟಿಕೆಯ ಭಾಗವಾಗಿ ಬೆಳೆದಿದ್ದು 'ಮಲೆನಾಡು ಮೇಳ'. ಆರಂಭವಾಗಿದ್ದು 2004ರಲ್ಲಿ. ಇತ್ತೀಚೆಗಷ್ಟೇ ಶಿರಸಿಯಲ್ಲಿ ಈ ವರ್ಷದ ಮೇಳ ನಡೆದಿದೆ. ಈ ಮೇಳ ನಾಟಿ ಅಥವಾ ದೇಸಿ ಬೀಜಗಳು ಮತ್ತು ಗೆಡ್ಡೆಗಳ ಸಂರಕ್ಷಣೆ ಜೊತೆಗೆ ವನಸ್ತ್ರೀ ಸಂಸ್ಥೆಯ ಸದಸ್ಯರ ಸಾಮಾಜಿಕ, ಆರ್ಥಿಕ ಭದ್ರತೆಗೆ ವೇದಿಕೆಯಾಗುವ ಜೊತೆಗೆ ಅವರಿಗೆ ಬಲ ನೀಡಿದೆ.

ಕಾಡುನಾಡಿನ ಬೀಜಗಳು ಇಲ್ಲಿನ ಸಾಮಾಜಿಕ ಮತ್ತು ಪರಿಸರ ಆರೋಗ್ಯದಲ್ಲಿ ನಿರ್ಣಾಯಕ ಪಾತ್ರವಹಿಸಿವೆ. ಈ ದೇಸಿ ಬೀಜ ಸಂಸ್ಕೃತಿ ಮಲೆನಾಡ ಮಹಿಳೆಯರ ಜೀವನದೊಂದಿಗೆ ಅಂತರ್ಗತ ಸಂಬಂಧಹೊಂದಿವೆ. ಇಂಥ ದೇಸಿ ಬೀಜಗಳ ಸಾಂಗತ್ಯವೇ ಇಂದು ಮಹಿಳೆಯರಿಗೆ ತಮ್ಮ ಸಾಮರ್ಥ್ಯವನ್ನು ಸ್ಪರ್ಧಾತ್ಮಕ ಪ್ರಪಂಚದೆದುರು ಸಮರ್ಥವಾಗಿ ಪ್ರದರ್ಶಿಸುವ ಶಕ್ತಿ ನೀಡಿವೆ. ಹಲವು ಮಹಿಳೆಯರು ಇಂದು ಕೇವಲ ಆರ್ಥಿಕ, ಸಾಮಾಜಿಕ ಸ್ವಾವಲಂಬನೆ ಮಾತ್ರವಲ್ಲದೇ ಮಾನಸಿಕ ವಾಗಿಯೂ ಸಬಲೀಕರಣಗೊಂಡಿದ್ದಾರೆ. ಈ ಎಲ್ಲ 'ಶಕ್ತಿ'ಗೂ ವನಸ್ತ್ರೀ ಸಂಸ್ಥೆಯ ಮಹಿಳೆಯರೇ ಹಾಕಿದ 'ಮಲೆನಾಡು ಮೇಳ' ಕಾರಣವಾಗಿದೆ.

> ನಾಟಿ ಬೀಜಗಳ ಉಡುಗೊರೆ ಮತ್ತು ವಿನಿಮಯವೆಂಬ ಸಾಮಾನ್ಯ ಸಂಗತಿ ಇಂದು ವನದೊಳಗಿನ ನೂರಾರು ಮಹಿಳೆಯರಿಗೆ 'ಸ್ವಾವಲಂಬನೆ' ಎಂಬ ಜಗತ್ತಿನ ಬಾಗಿಲು ತೆರೆದು ದೃಢವಾದ ಹೆಜ್ಜೆ ಊರಲು ಕಾರಣವಾಗಿದೆ. 'ಬೀಜ' ಕೇವಲ ವೃಕ್ಷವಾಗುವುದಷ್ಟೇ ಅಲ್ಲದೇ ತನ್ನ ನಂಬಿದವರ ಬದುಕಿನ ಕನಸಾಗಿ, ಅದರಾಚೆಗಿನ ಮನೋಬಲವಾಗಿ ಚಿಗುರುತ್ತದೆ.

## ವಿಭಿನ್ನ 'ಯಶೋಗಾಥೆ'ಗಳು:

ಮೇಳದ ಹಿರಿಯ ಸದಸ್ಯೆ ಬಕ್ಕಳದ ಫಣಿವೇಣಿ ಭಟ್ ಅವರು ತರಕಾರಿ ಬೀಜಗಳ ಜೊತೆ ಕಾಡಿನ ಬೀಜಗಳ ಸಂರಕ್ಷಣೆಗೂ ಆದ್ಯತೆ ನೀಡಿದ್ದಾರೆ. ಅವುಗಳನ್ನು ಆಯ್ದು, ಸೋಯಿಸಿ ಸುಂದರ ಹೂಬುಟ್ಟಿ, ಫ್ರೇಮ್, ಆರತಿ ತಾಟು ಮಾಡಿ ಮಾರುತ್ತಾರೆ. ಕೆಲಸಕ್ಕೆ ಸಮಯ ಹಿಡಿದರೂ ಮಾರುಕಟ್ಟೆಯಲ್ಲಿ ಉತ್ತಮ ದರ ಇವರ ಕೈ ಸೇರುತ್ತಿದೆ.

ವನಸ್ತ್ರೀ ವತಿಯಿಂದ ಮಹಿಳೆಯರಿಗೆ ಕಸಿ ಕಟ್ಟುವ ತರಬೇತಿ

ಮಲೆನಾಡು ಮೇಳದಲ್ಲಿ ಮಳಿಗೆಗಳ ಸಂಭ್ರಮ

'ಕಾಡು ಹರಟೆಗಿಂತ ಕಾಡು ಬೀಜದ ಸಾಂಗತ್ಯ ಖುಷಿ ಕೊಡುತ್ತದೆ' ಎನ್ನುತ್ತಾರೆ ಅವರು.

ಕಡಬಾಳದ ಶ್ರೀಮತಿ ಹೆಗಡೆ ಮತ್ತು ಪಾರ್ವತಿ ಹೆಗಡೆ ಕಡಬಾಳ ಚಪಾತಿ, ಪೂರಿ ಗೃಹೋದ್ಯಮದಲ್ಲಿ ಪಾಲುದಾರರಿದ್ದಾರೆ. ದಶಕಗಳಿಂದ ಮಲೆನಾಡು ಮೇಳದಲ್ಲಿ ವಿವಿಧ ತಳಿಗಳ ನಾಟಿ ಬೀಜಗಳನ್ನು ಮಾರಾಟ ಮಾಡುತ್ತಾ ಸಂಭ್ರಮಿಸಿದವರು. ಮೇಳದುದ್ದಕ್ಕೂ ಮಾರುಕಟ್ಟೆಯ ಆಂತರ್ಯ ಅಳೆದುತೂಗಿ 'ವಿಭಾ ಫುಡ್ ಟೆಕ್' ಆರಂಭಿಸಿ ರೆಡಿಮೇಡ್ ಚಪಾತಿ, ಪೂರಿಗಳನ್ನು ಮಾಡಿ ಹೊರಜಗತ್ತಿನ ಸವಾಲುಗಳನ್ನು ಮಣಿಸಿ ಸಾಗುತ್ತಿದ್ದಾರೆ. ಎಷ್ಟೇ ಬೆಳೆದರೂ ಬೀಜ, ಸಸಿಗಳ ಒಡನಾಟ ಇವರಿಂದ ದೂರಾಗಿಲ್ಲ. 'ಮೇಳವು ಮಹಿಳೆಗೆ ತನ್ನ ಸುತ್ತಮುತ್ತಲ ಜೈವಿಕ ಸಾಂಸ್ಕೃತಿಕ ಸಂಪತ್ತನ್ನು ಹೊರ ಜಗತ್ತಿಗೆ ಪರಿಚಯಿಸಲು ಪ್ರಮುಖ ಮಾರ್ಗವಾಗಿದೆ. ನಿರಂತರ ತೊಡಗಿಕೊಳ್ಳುವ ಪ್ರಕ್ರಿಯೆಯಿಂದ ಹಲವು ಅವಕಾಶಗಳ ಬಾಗಿಲು ತೆರೆಯುವಲ್ಲಿಯೂ ಇದು ಕೀಲಿಕೈ ಆಗಿದೆ' ಎಂದು ಹರ್ಷ ವ್ಯಕ್ತಪಡಿಸಿದರು.

ಕಲಗಾರಒಡ್ಡಿನ ಕುಸುಮ ಭಟ್ ಮೇಳದ ಹಳೆಯ ಸದಸ್ಯೆ. ಇವರು ಇತರರು ನಿರ್ಲಕ್ಷ್ಯ ಮಾಡಿದ ವಸ್ತುಗಳನ್ನು ತಾವು ಅಲಕ್ಷ್ಯಿಸದೇ ಅದನ್ನೇ ಬಂಡವಾಳ ಮಾಡಿ ಆರ್ಥಿಕ ಸ್ವಾವಲಂಬಿಯಾಗಿದ್ದಾರೆ. ತ್ಯಾಜ್ಯವಾಗುವ ಅಡಿಕೆ ಸಿಪ್ಪೆಗೂ ಕಲಾಸಿರಿವಂತಿಕೆಯ ಮೂಲಕ ಮರುಜೀವ ನೀಡಿ ಅತ್ಯಾಕರ್ಷಕ ಮಾಲೆ, ವಿವಿಧಾಕೃತಿಯ ಗಿಡಗಳನ್ನಾಗಿ ಮಾರ್ಪಡಿಸಿದ್ದಾರೆ. ಮಾತ್ರೆಗಳ ಹೊರ ಕವಚ ಬಳಸಿ ಮನಸ್ಸಿಗೆ ಮುದ ನೀಡುವ ಹೂವು, ಸಿಗರೇಟ್ ಪ್ಯಾಕ್‌ನಿಂದ ನಾಯಿ, ಹುಲ್ಲು ಕಡ್ಡಿಯಿಂದ ಹೂಬುಟ್ಟಿ, ಮಾಲೆ, ಬಟ್ಟಲು ಸೇರಿದಂತೆ ಗೀಚಿ ಬದಿಗೆಸೆದ ಬೆಂಕಿ ಕಡ್ಡಿಯಿಂದ ಕೊರಳ ಮಾಲೆ, ಕಸಗೆ ಹರಳಿನಿಂದ ಕುಕ್ಕೆ ಇಂಥ ಹಲವು ವಸ್ತುಗಳು ಇವರ ಬಳಿಯಿವೆ. ಬಹುಕಾಲದ ಇವರ ಕಸೂತಿಗಳಿಗೆ ಮೇಳವೇ ಪ್ರಥಮ ಮಾರುಕಟ್ಟೆಯಾಗಿತ್ತು ಎಂಬುದು ಗಮನಾರ್ಹ ಸಂಗತಿ.

ವಿಜಯಲಕ್ಷ್ಮಿ ಎಂಬುವವರು ವನಸ್ತ್ರೀ ತರಬೇತಿ ಪಡೆದು ಹಳ್ಳಿಯಲ್ಲಿ ಜೇನು ಕೃಷಿ ಮಾಡಿ ದೆಹಲಿಯಲ್ಲಿ ಅದರ ತುಪ್ಪ ಮಾರಿ ಗೆದ್ದಿದ್ದಾರೆ. ಗುಬ್ಬಿಗದ್ದೆಯ ರಂಜನಾ ಹೆಗಡೆ ಅವರು ಮೇಳದಲ್ಲಿ ಭಾಗಿಯಾಗಿ, ಕಲಿತು, ಗಾರ್ಡನಿಂಗ್ ಮಾಡಿ ಈಗ ತಮ್ಮದೇ ಆದ ಬ್ರ್ಯಾಂಡ್ ಮಾಡಿ ಗಿಡಗಳ ಮಾರಾಟ ಮಾಡುತ್ತಿದ್ದಾರೆ. ಸುವರ್ಣ ಶಿರಗೋಡಬೈಲ್ ಎಂಬುವವರು ಸಸ್ಯ ನರ್ಸರಿ, ಬೀಜ ಮಾರಾಟದ ಮೂಲಕ ಗುರುತಿಸಿಕೊಂಡು ಇಂದು ನಗರ ಪ್ರದೇಶದಲ್ಲಿ ತಾರಸಿ ತೋಟ ನಿರ್ಮಾಣ ಮಾರ್ಗದರ್ಶಕಿಯಾಗಿದ್ದಾರೆ.

ಮತ್ತಿಘಟ್ಟ ದಟ್ಟಾರಣ್ಯದಲ್ಲಿ ಕಾಡಿನ ಉತ್ಪನ್ನ, ಗಡ್ಡೆಗೆಣಸು ಬೆಳೆದು ಮೇಳದ ಮೂಲಕ ಲಕ್ಷ್ಮಕ್ಕನಾಗಿ ಚಿರಪರಿಚಿತರಾಗಿರುವ ಲಕ್ಷ್ಮೀ ಸಿದ್ದಿ ತನ್ನ ಕುಟುಂಬ ಗಟ್ಟಿಗೊಳಿಸಿಕೊಂಡಿದ್ದು ಮೇಳದ ಬಲದಿಂದ. ಇಂಥ ಹಲವು ಮಹಿಳೆಯರ ಯಶೋಗಾಥೆಯನ್ನು ಮಲೆನಾಡು ಮೇಳ ಹುಟ್ಟುಹಾಕಿದೆ. ಒಳ ಹಳ್ಳಿಗಳ ಹಲವು ಮಹಿಳೆಯರಿಗೆ ಹೊರ ಜಗತ್ತಿಗೆ ತೆರೆದುಕೊಳ್ಳಲು, ಅವಕಾಶಗಳ ಬಾಗಿಲು ಬಡಿಯಲೂ ಅವಕಾಶ ಇರುವುದಿಲ್ಲ. ಇಂಥ ಸಂದಿಗ್ದತೆಯಲ್ಲಿ ಇರುವವರಿಗೆ ಬದುಕಿನ ಭರವಸೆಯಾಗಿ, ಬೆಳಕಿನ ಬೀಜವಾಗಿ ವನಸ್ತ್ರೀ ಹಾಗೂ ಮಲೆನಾಡು ಮೇಳ ಕಾಣುತ್ತಿದೆ.

'ಬೀಜಗಳಿಗೆ ಯಾವುದೇ ಜಾತಿ, ಧರ್ಮವಿಲ್ಲ, ಅವು ಸಾರ್ವತ್ರಿಕ ಮತ್ತು ಜಾತ್ಯತೀತ. ಅವುಗಳನ್ನು ನಂಬಿದರೆ ಮೋಸವಿಲ್ಲ. ಪ್ರಾಮಾಣಿಕ ಪರಿಶ್ರಮ, ಆತ್ಮವಿಶ್ವಾಸವಿದ್ದರೆ ಗೆಲುವು ಸುಲಭ ಮತ್ತು ಸಾಧ್ಯ. ವನಸ್ತ್ರೀ ಹಾಗೂ ಮಲೆನಾಡು ಮೇಳ ವಿವಿಧ ಸಮುದಾಯಗಳೊಂದಿಗೆ ತನ್ನ ಕೆಲಸದಲ್ಲಿ ಈ ಭಾವನೆಯನ್ನು ಸದಾ ಕಾಲ ಬಲವಾಗಿ ಪೋಷಿಸುತ್ತದೆ' ಎಂಬುದು ದಶಕಗಳ ಕಾಲ ಮೇಳ ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿರುವ ಮನೋರಮಾ ಜೋಶಿ ಅಂತರಾಳದ ನುಡಿಯಾಗಿದೆ.

'ಬದುಕಿನ ಒಳ ಪ್ರಪಂಚದಲ್ಲಿ ಕಳೆದುಹೋದ ಮಹಿಳೆಯರಿಗೆ ಮಲೆನಾಡು ಮೇಳ ಹೊರ ಪ್ರಪಂಚಕ್ಕೆ ತೆರೆದ ಬಾಗಿಲಾಗಿದೆ. ಕೇವಲ ಆರ್ಥಿಕ ಸಬಲತೆ ಇಂದು ಬಲದ ಸಂಕೇತವಲ್ಲ. ಬದುಕಿನ ಏಕತಾನತೆಯನ್ನು ಮುರಿದು ಹೊಸ ಸಾಧ್ಯತೆಗಳತ್ತ ಯೋಚನೆ ಮಾಡುವುದೂ ಕೂಡ 'ಮಹಿಳಾ ಸ್ವಾವಲಂಬನೆ' ಒಂದು ಸ್ವರೂಪವಾಗಿದೆ. ಅದನ್ನು ವನಸ್ತ್ರೀ ಮತ್ತು ಮಲೆನಾಡು ಮೇಳ ಸಾಕ್ಷೀಕರಿಸುತ್ತಿದೆ' ಎಂಬುದು ಮೇಳದ ಸಂಘಟನಾ ಶಕ್ತಿಯಾದ ಶೈಲಜಾ ಗೋರ್ನಮನೆ ಮತ್ತು ಸುನೀತಾ ರಾವ್ ಮಾತಾಗಿದೆ.

'ದೇಸಿ ಬೀಜ ರಕ್ಷಣೆ' ಎನ್ನುವುದು ಮಹಿಳೆಯರಿಗೆ ಸ್ವಾಭಿಮಾನ, ಭದ್ರತೆ, ಸ್ವಾತಂತ್ರ್ಯ ಎಲ್ಲವನ್ನೂ ಕಲ್ಪಿಸಿದೆ. ❖

# ಬಗೆ ಬಗೆಯ ಬೀಟ್ರೂಟ್ ರೆಸಿಪಿ

ಬೀಟ್ರೂಟ್‌ನಲ್ಲಿ ರಕ್ತಹೀನತೆ, ಕಬ್ಬಿಣಾಂಶದ ಕೊರತೆಯನ್ನು ನೀಗಿಸುವ ಅಂಶಗಳಿವೆ. ಬೆಳಿಗ್ಗೆ ತಿಂಡಿಗೇನು, ಸಂಜೆ ಸ್ನ್ಯಾಕ್ಸ್‌ಗೇನು ಎಂದು ಯೋಚಿಸುತ್ತಿರುವಿರಾದರೆ **ನಳಿನ ಸೋಮಯಾಜಿ** ಅವರು ಪರಿಚಯಿಸಿರುವ ಈ ಬೀಟ್ರೂಟ್ ರೆಸಿಪಿಗಳನ್ನೊಮ್ಮೆ ಮಾಡಿ ನೋಡಿ.

ನಳಪಾಕ

## ಬೀಟ್ರೂಟ್ ರಸಂ

**ಬೇಕಾಗುವ ಪದಾರ್ಥಗಳು:** ಬೀಟ್ರೂಟ್: 1, ತೊಗರಿ ಬೇಳೆ- ಕಾಲು ಕಪ್ಪು, ಹುಣಸೆ ಹಣ್ಣು ದೊಡ್ಡ ನೆಲ್ಲಿ ಕಾಯಿಯ ಗಾತ್ರದ್ದು, ಸಾರಿನ ಪುಡಿ 3 ಟೀ ಚಮಚ, ಬೆಲ್ಲ: ಬೇಕೆನಿಸಿದರೆ ಮಾತ್ರ , ಉಪ್ಪು(ರುಚಿಗೆ ತಕ್ಕಷ್ಟು).

ಸ್ವಲ್ಪ ಕೊತ್ತಂಬರಿ ಸೊಪ್ಪು, ಒಗ್ಗರಣೆಗೆ- ಕೊಬ್ಬರಿ ಎಣ್ಣೆ 1 ದೊಡ್ಡ (ಟೇಬಲ್) ಚಮಚ, ಸಾಸಿವೆ ಅರ್ಧ ಚಮಚ, ಇಂಗು ಸ್ವಲ್ಪ, ಕರಿಬೇವು- 8 ರಿಂದ 10 ಎಸಳು(ಎಲೆಗಳು), ತೆಂಗಿನಕಾಯಿ ತುರಿ 2 ದೊಡ್ಡ ಚಮಚ.

**ಮಾಡುವ ವಿಧಾನ :** ಬೀಟ್ರೂಟ್ ಚೆನ್ನಾಗಿ ತೊಳೆದು ಕುಕ್ಕರ್ ನಲ್ಲಿ ಇಡೀ ಬೀಟ್ರೂಟ್ ಚೂರು ನೀರು ಹಾಕಿ ಬೇಯಿಸಿ. ಹಾಗೇ ತೊಗರಿ ಬೇಳೆ ತೊಳೆದು ಬೇಯಿಸಿಟ್ಟುಕೊಳ್ಳಿ. ಹುಣಸೆ ಹಣ್ಣನ್ನು ಸ್ವಲ್ಪ ನೀರು ಹಾಕಿ ಕಿವುಚಿ ಹುಣಿಸೆ ರಸ ತೆಗೆದಿಟ್ಟುಕೊಳ್ಳಿ. ಬೀಟ್ರೂಟ್ ಸಿಪ್ಪೆ ತೆಗೆದು ಹಾಕಿ. ಬೀಟ್ರೂಟ್ ಸಣ್ಣಗೆ ತುಂಡು ಮಾಡಿ.ಈಗ ಬೀಟ್ರೂಟಿನ ಹೋಳುಗಳು, ತುರಿದ ಎರಡು ಚಮಚೆ ತೆಂಗಿನ ತುರಿ, 3 ಸಣ್ಣ ಚಮಚೆ ಸಾರಿನ ಪುಡಿ ಇವೆಲ್ಲವನ್ನೂ ಸ್ವಲ್ಪ ನೀರಿನಲ್ಲಿ ಅರೆಯಿರಿ. ಒಲೆಯ ಮೇಲೆ ಒಂದು ಪಾತ್ರೆಯಲ್ಲಿ 2 ಕಪ್ಪು ನೀರು ಹಾಕಿ ಕುದಿಸಿ. ಬೇಯಿಸಿದ ಬೇಳೆಯನ್ನು ಚೆನ್ನಾಗಿ ಕಿವುಚಿ (ಮ್ಯಾಷ್) ಕುದಿಯುತ್ತಿರುವ ನೀರಿಗೆ ಹಾಕಿ. ಹಾಗೇ ಹುಣಿಸೆ ರಸ, ಚಿಟಿಕೆ ಅರಿಶಿನ ಹಾಕಿ ಕುದಿಸಿ. ಬೇಕಾದಲ್ಲಿ ಚೂರು ಬೆಲ್ಲ ಹಾಕಬಹುದು. ಈಗ ಅರೆದುಕೊಂಡ ಬೀಟ್ರೂಟ್‌ಗೆ ತೆಂಗಿನ ಮಿಶ್ರಣವನ್ನು ಹಾಕಿ. ಮಿಕ್ಸಿ ತೊಳೆದ ನೀರನ್ನೂ ಸೇರಿಸಿ. ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಎಲ್ಲವನ್ನೂ ಚೆನ್ನಾಗಿ ಮಿಶ್ರ ಮಾಡಿ. ಬೇಕಾದಲ್ಲಿ ಇನ್ನೂ ನೀರು ಸೇರಿಸಬಹುದು. ಚೆನ್ನಾಗಿ ಕುದಿಸಿ ಕೆಳಗಿಳಿಸಿ. ಕೊಬ್ಬರಿ ಎಣ್ಣೆಯಲ್ಲಿ ಸಾಸಿವೆ, ಇಂಗು, ಕರಿಬೇವಿನ ಒಗ್ಗರಣೆ ಮಾಡಿ ಹಾಕಿ. ಕೊತ್ತಂಬರಿ ಸೊಪ್ಪು ತೊಳೆದು ಕತ್ತರಿಸಿ ಸೇರಿಸಿ ಸವಿಯಿರಿ.

**ಸಾರಿನ ಪುಡಿ ಮಾಡುವ ವಿಧಾನ :** ಬಾಣಲೆ ಬಿಸಿ ಮಾಡಿ 1 ಚಮಚ ಕೊಬ್ಬರಿ ಎಣ್ಣೆ ಹಾಕಿ 4 ರಿಂದ 5 ಬ್ಯಾಡಗಿ ಮೆಣಸು ಹುರಿದು ತೆಗೆಯಿರಿ. ಅದೇ ಬಾಣಲೆಗೆ ಕಾಲು ಚಮಚ ಮೆಂತ್ಯೆ ಹಾಕಿ ಕಂದು ಬಣ್ಣವಾಗುವವರೆಗೆ (ಬ್ರೌನ್) ಹುರಿದು, 2 ದೊಡ್ಡ ಚಮಚ ಕೊತ್ತಂಬರಿ ಬೀಜ ಹಾಕಿ ಹುರಿಯಿರಿ. ನಂತರ ಜೀರಿಗೆ ಅರ್ಧ ಚಮಚ ಹಾಕಿ ಒಲೆ ಆರಿಸಿ. ಹುರಿದ ಮೆಣಸಿನಕಾಯಿ ಸೇರಿಸಿ. ಎಲ್ಲವನ್ನೂ ಮಿಶ್ರ ಮಾಡಿ ಚೂರು ಇಂಗು ಹಾಗೂ 4ರಿಂದ 5 ಕರಿಬೇವಿನ ಎಲೆ ಸೇರಿಸಿ. ತಣ್ಣಗಾದ ಮೇಲೆ ಡ್ರೈ ಗ್ರೈಂಡ್ ಮಾಡಿ. (ಒಣ ಹುಡಿ ಮಾಡುವ ಮಿಕ್ಸಿ ಜಾರ್ ಉಪಯೋಗಿಸಿ)

## ಬೀಟ್ರೂಟ್ ಬುಟ್ಟಿ

**ಬೇಕಾಗುವ ಸಾಮಗ್ರಿಗಳು:** ಬೀಟ್ರೂಟ್ ಎರಡು. ಕ್ಯಾರೆಟ್ ಮೂರು, ಕ್ಯಾಪ್ಸಿಕಂ ಮೂರು, ಸೌತೆಕಾಯಿ ಒಂದು.

ಹಸಿ ಮೆಣಸು ಒಂದು, ಕಾಳು ಮೆಣಸಿನ ಪುಡಿ ಅರ್ಧ ಚಮಚ, ಲಿಂಬೆ ರಸ ಒಂದು ಚಮಚ, ಉಪ್ಪು ರುಚಿಗೆ ತಕ್ಕಷ್ಟು, ಚಿಟಿಕೆ ಅರಿಶಿನ, ಒಗ್ಗರಣೆಗೆ: ಕೊಬ್ಬರಿ ಎಣ್ಣೆ 1 ಚಮಚ, ಜೀರಿಗೆ ಅರ್ಧ ಚಮಚ, ಒಂದು ಮುಷ್ಟಿ ಕೊತ್ತಂಬರಿ ಸೊಪ್ಪು, ಅರ್ಧ ಇಂಚು ಶುಂಠಿ

**ಮಾಡುವ ವಿಧಾನ:** ಬೀಟ್ರೂಟ್ ಚೆನ್ನಾಗಿ ತೊಳೆದು ಇಡೀ ಬೀಟ್ರೂಟ್ ಸ್ವಲ್ಪ ನೀರಲ್ಲಿ ಇಟ್ಟು ಪ್ರೆಷರ್ ಕುಕ್ಕರಿಗೆ ನೀರು ಹಾಕಿ ಬೇಯಿಸಿ. ತಣ್ಣಗಾದ ಮೇಲೆ ಸಿಪ್ಪೆ ತೆಗೆದು, ಎರಡು ಭಾಗ ಮಾಡಿ. ಈಗ ಬೀಟ್ರೂಟನ ಮಧ್ಯೆ ಭಾಗವನ್ನು ನಿಧಾನವಾಗಿ ಕೆತ್ತಿ ತೆಗೆದು ಬಟ್ಟಲಿನ ಆಕಾರ ಕೊಡಿ.ಅದನ್ನು ಪ್ಲೇಟಿನಲ್ಲಿ ಜೋಡಿಸಿ. ಈಗ, ಕ್ಯಾರೆಟ್ ತುರಿದು, ಕ್ಯಾಪ್ಸಿಕಂ, ಹಸಿ ಮೆಣಸು, ಕೊತ್ತಂಬರಿ ಸೊಪ್ಪು ಸಣ್ಣಗೆ ಹೆಚ್ಚಿಡಿ. ಬಾಣಲೆಯಲ್ಲಿ ಎಣ್ಣೆ ಕಾಯಿಸಿ, ಜೀರಿಗೆ ಹಾಕಿ ಹಸಿಮೆಣಸು ಸೇರಿಸಿ. ಹೆಚ್ಚಿದ ಕ್ಯಾಪ್ಸಿಕಂ ಹಾಕಿ ಚೂರು ಹುರಿದು, ತುರಿದ ಕ್ಯಾರೆಟ್ ಹಾಕಿ. ಎಲ್ಲವನ್ನೂ ಮಿಶ್ರ ಮಾಡಿ ಚೂರು ಬೇಯಿಸಿ. ಉಪ್ಪು ರುಚಿಗೆ ತಕ್ಕಷ್ಟು, ಚಿಟಿಕೆ ಅರಿಶಿನ ಹಾಕಿ. ಕಾಳು ಮೆಣಸಿನ ಪುಡಿ, ಚೂರು ಮಾವಿನ ಕಾಯಿಯ ಪುಡಿ (ಆಮ್ಚೂರ್ ಪುಡಿ) ಹಾಕಿ ಚೆನ್ನಾಗಿ ಮಿಶ್ರ ಮಾಡಿ. ಕೊತ್ತಂಬರಿ ಸೊಪ್ಪು ಸೇರಿಸಿ. ನೀರೆಲ್ಲಾ ಆರಿದು ನಂತರ ಒಂದು ಪಾತ್ರೆಗೆ ಹಾಕಿ. ಸೌತೆಕಾಯಿ ಸಿಪ್ಪೆ ತೆಗೆದು ಸಣ್ಣಗೆ ಹೆಚ್ಚಿಡಿ. ಈಗ ಬೀಟ್ರೂಟಿನ ಬಟ್ಟಲಿಗೆ ಚೂರು ಚಾಟ್ ಮಸಾಲೆ ಸವರಿ, ಮಾಡಿಟ್ಟ ಕ್ಯಾರೆಟ್ -ಕ್ಯಾಪ್ಸಿಕಂ ಪಲ್ಯ ಹಾಕಿ, ಮೇಲೆ ಸೌತೆಕಾಯಿ ಚೂರುಗಳನ್ನು ಇಟ್ಟು ಅಲಂಕರಿಸಿ ತಿನ್ನಲು ಕೊಡಿ. ಬೀಟ್ರೂಟ್ ಬೆಂದಿರುವುದರಿಂದ ತುಂಬಿದ ಈ ಬೀಟ್ರೂಟ್ ಬಟ್ಟಲು ರುಚಿಯಾಗಿಯೂ ಆರೋಗ್ಯಕರವಾಗಿಯೂ ಇರುತ್ತದೆ. ಈರುಳ್ಳಿ ಪ್ರಿಯರು ಈರುಳ್ಳಿ ಬಳಸಬಹುದು.

## ಬೀಟ್ರೂಟ್ ಚಪಾತಿ

**ಬೇಕಾಗುವ ಪದಾರ್ಥಗಳು:** ಬೀಟ್ರೂಟ್ ಒಂದು, ಗೋಧಿ ಹಿಟ್ಟು 2 ಕಪ್ಪು, ತುಪ್ಪ ಒಂದು ದೊಡ್ಡ ಚಮಚ, ಉಪ್ಪು ರುಚಿಗೆ ತಕ್ಕಷ್ಟು ಗರಂ ಮಸಾಲೆ ಪುಡಿ ಅರ್ಧ ಚಮಚ, ಮೆಣಸಿನ ಪುಡಿ ಅರ್ಧ ಚಮಚ, ಜೀರಿಗೆ ಪುಡಿ ಅರ್ಧ ಚಮಚ, ಕಾಳು ಮೆಣಸಿನ ಪುಡಿ ಅರ್ಧ ಚಮಚ, ಕೊತ್ತಂಬರಿ ಸೊಪ್ಪು ಅಥವಾ ಮೆಂತ್ಯೆ ಸೊಪ್ಪು ಒಂದು ಮುಷ್ಟಿ(ಎಲೆಗಳು ಮಾತ್ರ).

**ಮಾಡುವ ವಿಧಾನ:** ಬೀಟ್ರೂಟ್ ಚೆನ್ನಾಗಿ ತೊಳೆದು ಇಡೀ ಬೀಟ್ರೂಟ್ ಅನ್ನು ಕುಕ್ಕರಿನಲ್ಲಿಟ್ಟು ಬೇಯಿಸಿ. ತಣ್ಣಗಾದ ಮೇಲೆ ಸಿಪ್ಪೆ ತೆಗೆದು ತುರಿದಿಟ್ಟುಕೊಳ್ಳಿ. ಒಂದು ದೊಡ್ಡ ಪಾತ್ರೆಗೆ ಗೋಧಿ ಹಿಟ್ಟು, ತುಪ್ಪ, ಉಪ್ಪು ಹಾಕಿ ಚೆನ್ನಾಗಿ ಮಿಶ್ರ ಮಾಡಿ. ಅದಕ್ಕೆ ತೂರಿದ ಬೀಟ್ರೂಟ್, ಜೀರಿಗೆ ಪುಡಿ ಗರಂ ಮಸಾಲೆ ಪುಡಿ, ಮೆಣಸಿನ ಪುಡಿ, ಕಾಳುಮೆಣಸಿನ ಪುಡಿ ಹಾಗೂ ಸಣ್ಣಗೆ ಹೆಚ್ಚಿದ ಕೊತ್ತಂಬರಿ ಸೊಪ್ಪು ಎಲ್ಲವನ್ನೂ ಹಾಕಿ. ಚೆನ್ನಾಗಿ ಮಿಶ್ರ ಮಾಡಿ. ಚೂರು ಚೂರೇ ನೀರು ಹಾಕಿ ಚಪಾತಿ ಹಿಟ್ಟಿನ ಹದಕ್ಕೆ ಕಲೆಸಿ. ಚೆನ್ನಾಗಿ ನಾದಿ. ಸಣ್ಣ ಸಣ್ಣ ಉಂಡೆ ಮಾಡಿ, ಒಣ ಹಿಟ್ಟನ್ನು ಹಚ್ಚಿ ಚಪಾತಿ ಲಟ್ಟಿಸಿ. ಕಾದ ಹೆಂಚಿನ ಮೇಲೆ ಎಣ್ಣೆ ಹಾಕಿ ಎರಡೂ ಬದಿ ಬೇಯಿಸಿ. ನಿಮಗಿಷ್ಟವಾದ ಪದಾರ್ಥದೊಂದಿಗೆ ಸವಿಯಿರಿ. ಮೊಸರು, ಉಪ್ಪಿನ ಕಾಯಿ, ಚಟ್ನಿಪುಡಿಯೊಂದಿಗೆ ಬೀಟ್ರೂಟ್ ಚಪಾತಿ ಸೇವನೆ ಬಲು ರುಚಿಯಾಗಿರುತ್ತದೆ.

# ಆತಂಕವೇ ಹಲವು ಸಮಸ್ಯೆಗಳಿಗೆ ಕಾರಣ

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

**ನಾನು 14 ವರ್ಷದ 50 ಕೆಜಿ ತೂಕದ ಹುಡುಗ. ಒಂದು ವಾರದ ಹಿಂದೆ ಹಾಸಿಗೆಯ ಮೇಲೆ ಮೂತ್ರ ವಿಸರ್ಜಿಸಿದೆ. ಆಗಿನಿಂದ ಮೂತ್ರ ವಿಸರ್ಜಿಸಿದ 2-3 ನಿಮಿಷದ ನಂತರ ಮತ್ತೊಮ್ಮೆ ಒತ್ತಡವುಂಟಾದಂತೆ ಅನ್ನಿಸುತ್ತದೆ. ವಿಸರ್ಜಿಸಲು ಹೋದರೆ ಎರಡು ಹನಿ ಬರುತ್ತದೆ. ಇದು ನನ್ನನ್ನು ದಿನವಿಡೀ ಕಾಡುತ್ತಿದೆ. ಎಷ್ಟೇ ತಡೆಯಲು ನೋಡಿದರೂ ಕೂತಲ್ಲೇ ವಿಸರ್ಜನೆ ಮಾಡಿದ್ದೇನೆಯೋ ಅನ್ನಿಸುತ್ತದೆ. ಆದರೆ ವಿಸರ್ಜಿಸಿರುವುದಿಲ್ಲ. ಇದಕ್ಕೆ ಪರಿಹಾರ ತಿಳಿಸಿ.**

**ಹೆಸರು, ಊರು ತಿಳಿಸಿಲ್ಲ**

ಮಗೂ ಕೇವಲ 14 ವರ್ಷದವನಾಗಿರುವ ನೀನು ಎದುರಿಸುತ್ತಿರುವ ಸಮಸ್ಯೆಯ ಕುರಿತು ಸ್ಪಷ್ಟವಾಗಿ ಬರೆದಿದ್ದೀಯಾ ಮತ್ತು ಇದಕ್ಕಾಗಿ ಸಹಾಯ ಕೇಳಲು ಸಿದ್ಧನಾಗಿದ್ದೀಯಾ. ನಿನ್ನ ಈ ಎರಡು ಗುಣಗಳು ನನಗೆ ಬಹಳ ಮೆಚ್ಚುಗೆಯಾಗಿದೆ.

ನಿನಗೆ ಸಹಾಯ ಮಾಡಲು ಬೇಕಾದ ಎಲ್ಲಾ ಮಾಹಿತಿಗಳೂ ನಿನ್ನ ಪತ್ರದಲ್ಲಿಲ್ಲ. ನಿನ್ನ ಕುಟುಂಬದ ವಿವರಗಳು, ವಿದ್ಯಾಭ್ಯಾಸ, ನಿಮ್ಮ ಮನೆಯ ವಾತಾವರಣ ಇಂತಹ ಹಲವಾರು ಅಂಶಗಳಿಲ್ಲದೆ ನಿನ್ನ ಸಮಸ್ಯೆಯ ಹಿನ್ನೆಲೆ ಅರ್ಥಮಾಡಿಕೊಳ್ಳುವುದು ಕಷ್ಟ. ಮೊದಲು ತಜ್ಞವೈದ್ಯರಲ್ಲಿ ಸಂಪೂರ್ಣ ದೇಹದ ಪರೀಕ್ಷೆಯನ್ನು ಮಾಡಿಸಿಕೊಳ್ಳುವುದು ಒಳ್ಳೆಯದು.

ನನಗೇನೋ ದೊಡ್ಡ ಕಾಯಿಲೆಯಿದೆ, ನನ್ನ ಎಲ್ಲಾ ತೊಂದರೆಗಳಿಗೆ ನಾನೊಬ್ಬನೇ ಕಾರಣ ಎಂದು ಬೇಸರ ಮಾಡಿಕೊಳ್ಳಬೇಡ. ಮನೆ ಶಾಲೆ ಮತ್ತು ಸುತ್ತಲಿನ ಸಮಾಜದ ಸಾಕಷ್ಟು ಅಂಶಗಳ ಪ್ರಭಾವ ನಿನ್ನ ಮೇಲಿರುತ್ತದೆ. ನಿನ್ನ ಪೋಷಕರ ಬೆಂಬಲ ನಿನಗೆ ಅಗತ್ಯವಾಗಿ ಬೇಕಾಗಿರುತ್ತದೆ. ಹಾಗಾಗಿ ಇಲ್ಲಿ ಬರೆದಿರುವುದನ್ನು ನಿನ್ನ ಪೋಷಕರಿಗೆ ಓದಲು ಕೊಡು.

ವಯಸ್ಸಿನ ದೃಷ್ಟಿಯಿಂದ ನೋಡಿದರೆ ನಿನ್ನ ದೇಹದ ತೂಕ ಹೆಚ್ಚಾಗಿದೆ ಅನ್ನಿಸುತ್ತದೆ. ಜೊತೆಗೆ ಪದೇಪದೇ ಮೂತ್ರ ವಿಸರ್ಜಿಸಬೇಕೆಂಬ ಒತ್ತಡವುಂಟಾಗುತ್ತಿದೆ. ಈ ಎರಡು ಅಂಶಗಳಿಂದ ನೋಡಿದರೆ ನೀನು ಬಹಳ ಆತಂಕಕ್ಕೆ ಒಳಗಾಗಿದ್ದೀಯಾ ಎನ್ನುವುದು ಸುಸ್ಪಷ್ಟ. ಇಂತಹ ಆತಂಕಕ್ಕೆ ತಕ್ಷಣದ ಕಾರಣಗಳು ನಿನಗೆ ಗೊತ್ತಾಗದೆ ಇರಬಹುದು. ನಮ್ಮ ಮಿದುಳಿನಲ್ಲಿ ನಡೆಯುವ ಎಲ್ಲವೂ ನಮ್ಮ ಬುದ್ಧಿಗೆ ಅರ್ಥವಾಗಲೇಬೇಕೆಂದಿಲ್ಲ. ಆದರೆ ನಿನ್ನೊಳಗಿರುವ ಬೇಸರ ಆತಂಕ ಕೀಳರಿಮೆ ಮುಂತಾದವುಗಳು ನಿನ್ನ ಮಿದುಳು ನರಮಂಡಲಗಳನ್ನು ಕೆರಳಿಸಿ ಸದಾ ಎಚ್ಚರಿಕೆಯಲ್ಲಿರುವಂತೆ ಮಾಡುತ್ತದೆ. ಹೀಗೆ ನಮ್ಮೊಳಗೆ ಆಳವಾದ ಭಯ ಆತಂಕಗಳಿದ್ದಾಗ ಮಲಮೂತ್ರ ವಿಸರ್ಜನೆಯ ಮೇಲೆ ಹಿಡಿತ ಕಳೆದುಕೊಳ್ಳುವುದು, ಮತ್ತೆ ಮತ್ತೆ ವಿಸರ್ಜನೆ ಮಾಡಬೇಕೆನ್ನುವ ಒತ್ತಡವುಂಟಾದಂತೆ ಅನ್ನಿಸುವುದು ಇವೆಲ್ಲಾ ಸಹಜವಾದ ಸೂಚನೆಗಳಾಗಿ ಕಾಣಿಸಿಕೊಳ್ಳುತ್ತವೆ. ಇದಕ್ಕೆ ಪರಿಹಾರ ಹುಡುಕಬೇಕಾದರೆ ನೀನು ಅಪ್ಪ ಅಮ್ಮಂದಿರ ಜೊತೆಗೆ ಮನೋಚಿಕಿತ್ಸಕರ ಭೇಟಿಯಾಗಬೇಕು. ಪೋಷಕರ ಬೆಂಬಲವಿದ್ದರೆ ನಿನ್ನ ಆತಂಕಕ್ಕೆ ಪರಿಹಾರ ಹುಡುಕಿಕೊಳ್ಳುವುದು ಸುಲಭ.

ಸದ್ಯಕ್ಕೆ ಈ ಪ್ರಯೋಗವನ್ನು ಮಾಡು. ದಿನಕ್ಕೆ ಎರಡು ಬಾರಿ 10 ನಿಮಿಷಗಳ ಸಮಯವಿಟ್ಟುಕೊಂಡು ಒಬ್ಬನೇ ಕುಳಿತುಕೊ. ಬೆನ್ನನ್ನು ನೇರವಾಗಿಟ್ಟುಕೊಂಡು ನಿನ್ನ ದೇಹದ ಎಲ್ಲಾ ಭಾಗಗಳನ್ನು ಗಮನಿಸುತ್ತ ಹೋಗು. ನೋವು ಬಿಗಿತ ಇರುವ ಭಾಗಗಳತ್ತ ಹೆಚ್ಚು ಗಮನ ಹರಿಸು. ನಿಧಾನವಾಗಿ ದೇಹ ಸಡಿಲಾಗುತ್ತದೆ. 'ನನಗಿರುವುದು ಕಾಯಿಲೆಯಲ್ಲ, ಇದು ಆತಂಕದ ಸೂಚನೆ ಮಾತ್ರ, ಆತಂಕವನ್ನು ನಿಭಾಯಿಸಲು ನಾನು ಕಲಿಯಬೇಕು' ಎಂದು ನೆನಪು ಮಾಡಿಕೊ. ಯೋಚನೆಗಳನ್ನು ಬಲವಂತವಾಗಿ ಬದಲಾಯಿಸಬೇಡ. ಯೋಚನೆಗಳಿಗೆ ಪ್ರಾಮುಖ್ಯತೆ ನೀಡದೆ ದೇಹವನ್ನು ಸಡಿಲಬಿಡಲು ಕಲಿಯುತ್ತಾ ಹೋದರೆ ಆತಂಕ ಹಿಡಿತಕ್ಕೆ ಬರುತ್ತದೆ. ಮೂತ್ರ ವಿಸರ್ಜನೆಯ ಒತ್ತಡ ಉಂಟಾದ ಕೂಡಲೆ ನಿಧಾನವಾಗಿ ಆಳವಾಗಿ ಉಸಿರಾಡುತ್ತಾ ದೇಹವನ್ನು ಸಡಿಲ ಬಿಡಲು ಪ್ರಯತ್ನ ಮಾಡು. ಒಂದೆರಡು ನಿಮಿಷಗಳಲ್ಲಿ ಒತ್ತಡ ಕಡಿಮೆಯಾಗುತ್ತದೆ. ಈ ಪ್ರಯೋಗವನ್ನು ಮತ್ತೆ ಮತ್ತೆ ಮಾಡುತ್ತಲೇ ಇದ್ದರೆ ನಿಧಾನವಾಗಿ ಇದು ಹಿಡಿತಕ್ಕೆ ಬರುತ್ತದೆ.

ನಿನ್ನ ದೇಹದ ತೂಕವನ್ನು ಕಡಿಮೆ ಮಾಡಲು ಮತ್ತು ಇತರ ಎಲ್ಲಾ ತೊಂದರೆಗಳಿಗೆ ಪರಿಹಾರ ಹುಡುಕಲು ಕೆಲವು ತಿಂಗಳ ಮನೋಚಿಕಿತ್ಸೆಯ ಅಗತ್ಯವಿದೆ. ನಿಮ್ಮ ಊರಿನ ಸುತ್ತಲೂ ಅಂತವರ ಸೇವೆ ಲಭ್ಯವಿದ್ದರೆ ಪಡೆದುಕೊ. ಶುಭವಾಗಲಿ.

**ಏನಾದ್ರೂ ಕೇಳ್ಬೋದು**

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

# 'ಇಳಕಲ್ ಸೀರೆ'ಯಲ್ಲಿ ಕಲ್ಲಿನ ರಥ

ಕಲಾವತಿ ಬೈಚಬಾಳ

**300 ವರ್ಷಗಳ** ಇತಿಹಾಸವುಳ್ಳ 'ಇಳಕಲ್ ಸೀರೆ' ನಾರಿಯರಿಗೆ ಸರ್ವಕಾಲವೂ ಅಚ್ಚುಮೆಚ್ಚು. ಕಾಟನ್, ಸೆಮಿ ಕಾಟನ್, ಶುದ್ಧ ರೇಷ್ಮೆ ಜೊತೆಗೆ ವಿಶಿಷ್ಟ ವಿನ್ಯಾಸದ ಬಾರ್ಡರ್ ಮತ್ತು ಸೆರಗು ಇರುವುದು ಈ ಸೀರೆಯ ವಿಶೇಷ. ಒಂದರ್ಥದಲ್ಲಿ ಐಡೆಂಟಿಟಿಯೂ ಹೌದು!

ಒಂದೇ ತೆರನಾದ ಸೀರೆಗಳ ಬದಲು ವಿಭಿನ್ನ, ವಿಶಿಷ್ಟವಾದುದ್ದನ್ನು ನೀಡುವ ಪ್ರಯತ್ನ ನಡೆದಿದೆ. ಸ್ಕ್ರೀನ್ ಪ್ರಿಂಟಿಂಗ್, ವರ್ಲಿಯ ಸ್ಪರ್ಶವು ಇಳಕಲ್ ಸೀರೆಗೆ ಇನ್ನಷ್ಟು ಮೆರುಗು ತಂದಿದೆ. 'ಪೈಪೋಟಿ ಎಷ್ಟು ಇದ್ದರೇನು? ನಾವು ಹಿಂದೆ ಬಿದ್ದಿಲ್ಲ' ಎಂದು ಆ ಸೀರೆಗಳೇ ಸಾರಿ ಹೇಳುತ್ತವೆ.

ಜಿಐ (ಜಿಯೋಗ್ರಾಫಿಕಲ್ ಐಡೆಂಟಿಫಿಕೇಷನ್) ಟ್ಯಾಗ್ ಸಹ ಹೊಂದಿರುವ ಈ ಸೀರೆ ಉತ್ತರ ಕರ್ನಾಟಕ ಸೀಮೆಯ ಜೀವಾಳವೂ ಹೌದು. ಒಂದು ಮನೆಯಲ್ಲಿ ಕನಿಷ್ಠ ಒಂದು ಇಳಕಲ್ ಸೀರೆ ಇರದಿದ್ದರೆ, ಅಲ್ಲಿ ಬಟ್ಟೆಗಳ ಸಂಪತ್ತು ಅಪೂರ್ಣವೆಂದೇ ಅರ್ಥ.

ವಿಶ್ವ ಪಾರಂಪರಿಕ ತಾಣ ಹಂಪಿಯಲ್ಲಿ ಈಚೆಗೆ ನಡೆದ ಜಿ-20 ಶೇರ್ಪಾ 3ನೇ ಶೃಂಗಸಭೆಯಲ್ಲಿ ಜಿಐ ಟ್ಯಾಗ್ ಹೊಂದಿರುವ ಉತ್ಪನ್ನಗಳ ಮಾಲೀಕರಿಗೆ ಮಳಿಗೆಯಲ್ಲಿ ಅವಕಾಶ ಕಲ್ಪಿಸಲಾಗಿತ್ತು.

ಅಲ್ಲಿ 'ಕ್ರಾಫ್ಟ್ ಆಫ್ ಕರ್ನಾಟಕ' ಸಂಸ್ಥೆಯ ಸಹಯೋಗದಲ್ಲಿ ಇಳಕಲ್‌ನ ನೇಕಾರರಾದ ಜಗದೀಶ ಕಸ್ತೂರಿ ಅವರು ಇಳಕಲ್ ಸೀರೆಯಲ್ಲಿ ಹಂಪಿಯ ಕಲ್ಲಿನ ರಥದ ಚಿತ್ರವನ್ನು ಸ್ಕ್ರೀನ್ ಪ್ರಿಂಟ್ ಮಾಡಿದರು. ಇದಕ್ಕೆ ಡಿಪ್ಲೊಮಾ ಇನ್ ಆರ್ಟ್ಸ್ ಪದವೀಧರರಾದ ರಾಮಚಂದ್ರ ಸಾ ಮೇಘರಾಜ್ ಅವರ ಮಾರ್ಗದರ್ಶನ ಹಾಗೂ ಭಾಗ್ಯವತಿ ಸಪ್ಪರದ ಅವರ ಸಹಭಾಗಿತ್ವ ಜೊತೆಗಿತ್ತು.

ರಾಜ್ಯದ ವಿವಿಧ ಜಿಲ್ಲೆ, ತಾಲ್ಲೂಕು ಹಾಗೂ ಹೊರ ರಾಜ್ಯಗಳಲ್ಲಿ ಈ ಸೀರೆಗೆ ಬಹುಬೇಡಿಕೆ ಇದೆ. ಮೈಸೂರಿನ ಅರಮನೆ, ಉದ್ಯಾನದ ಚಿತ್ರಣ, ಸಾಂಪ್ರದಾಯಿಕ ಕಲೆಗಳು, ನಿಸರ್ಗದ ಚಿತ್ರಣ, ವರ್ಲಿ, ಕಲಂಕಾರಿ, ಗ್ರಾಮೀಣ ಭಾಗದ ರೈತರ, ಆದಿವಾಸಿ ಜನರ ಜೀವನ ಚಿತ್ರಣ ಈ ಸೀರೆ ಒಳಗೊಂಡಿದೆ.

ಇಳಕಲ್ ಪಾಲಿಸ್ಟರ್ ಬೈ ಕಾಟನ್ ಸೀರೆಯಲ್ಲಿ ಮೂಡಿ ಬಂದ ಮೈಸೂರು ಅರಮನೆ ಆವರಣದ ಚಿತ್ರಣ

ಇಳಕಲ್ ವಿಸ್ಕೋಸ್ ರೆಯಾನ್ ಬೈ ಕಾಟನ್ ಸೀರೆಯಲ್ಲಿ ಮೈದಳೆದ ಹಂಪಿ ಕಲ್ಲಿನ ರಥ

## ನೈಸರ್ಗಿಕ ಬಣ್ಣಗಳಿಗೆ ಆದ್ಯತೆ

ಸದ್ಯಕ್ಕೆ ಮ್ಯಾನುವೆಲ್ ಪ್ರಿಂಟಿಂಗ್ ಮೂಲಕ ಕಾರ್ಯನಿರ್ವಹಿಸುತ್ತಿರುವ ನೇಕಾರ ಜಗದೀಶ ಕಸ್ತೂರಿ ಅವರು, ಸ್ಕ್ರೀನ್ ಪ್ರಿಂಟಿಂಗ್‌ನಲ್ಲಿ ನೈಸರ್ಗಿಕ ಬಣ್ಣಗಳ ಬಳಕೆಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಈ ಸೀರೆಗಳನ್ನು ದಿನವೂ ಬಳಸಿದರೆ ಎರಡು ವರ್ಷ ಮತ್ತು ವಿಶೇಷ ಸಂದರ್ಭದಲ್ಲಿ ಬಳಸಿದರೆ, ಏಳೆಂಟು ವರ್ಷ ಬಾಳಿಕೆಗೆ ಬರುತ್ತದೆ. ಬಣ ಮಾಸುವುದಿಲ್ಲ. ಹಳತು ಅನ್ನಿಸುವುದಿಲ್ಲ.

5 ರಿಂದ 6 ಇಂಚಿನ ಬಾರ್ಡರ್, 21 ರಿಂದ 24 ಇಂಚಿನ ಸೆರಗು ಹಾಗೂ 6.20ರಿಂದ 7.5 ಮೀಟರ್ ಅಳತೆಯಲ್ಲೇ ಇಳಕಲ್ ಸೀರೆಗಳನ್ನು ಸಿದ್ಧಪಡಿಸಲಾಗುತ್ತದೆ.

ಸ್ಕ್ರೀನ್ ಪ್ರಿಂಟ್, ವರ್ಲಿ, ಇತ್ಯಾದಿ ಕಲೆಯುಳ್ಳ ಇಳಕಲ್ ಶುದ್ಧ ರೇಷ್ಮೆ ಸೀರೆ ಅಂದಾಜು 80 ರಿಂದ 90 ಗ್ರಾಂ ತೂಕ ಹೊಂದಿರುತ್ತದೆ. ಇದರ ಮೌಲ್ಯ ಸರಾಸರಿ ₹13,500. ಸೆಮಿ ಸಿಲ್ಕ್‌ಗೆ ₹4 ಸಾವಿರದಿಂದ ₹5 ಸಾವಿರ, ಹ್ಯಾಂಡ್ ಲೂಮ್ ಕಾಟನ್ ಸೀರೆಗೆ ₹2 ಸಾವಿರದಿಂದ ₹3 ಸಾವಿರ ವರೆಗೆ ದರವಿದೆ.

## ರೈತ ಮಹಿಳೆಯರ ಅಚ್ಚುಮೆಚ್ಚು..

ಫ್ಯಾಷನ್

ಮಹಾರಾಷ್ಟ್ರದಲ್ಲಿ ಈ ಸೀರೆಗೆ ಹೆಚ್ಚು ಬೇಡಿಕೆ ಇದೆ. ಅಲ್ಲಿನ ರೈತ ಮಹಿಳೆಯರು ಗದ್ದೆಗಳಲ್ಲಿ ಕೆಲಸ ಮಾಡುವಾಗ ಇಳಕಲ್ ಕಾಟನ್ ಸೀರೆಯನ್ನೇ ಧರಿಸುವುದು ರೂಢಿ. ಬೇಸಿಗೆಗೆ ತಣ್ಣನೆ ಹಿತಕೊಡುವ, ಮಳೆಗಾಲ ಮತ್ತು ಚಳಿಗಾಲದಲ್ಲಿ ಬೆಚ್ಚಗಿಡುವ ಗುಣ ಈ ಸೀರೆಯದ್ದು. ಹಾಗಾಗಿಯೇ ರೈತ ಮಹಿಳೆಯರಿಗೆ ಸದಾ ಅಚ್ಚುಮೆಚ್ಚು ಈ ಸೀರೆ.

'ಪಾರಂಪರಿಕ ಹಿನ್ನೆಲೆಯುಳ್ಳ ಇಳಕಲ್ ಸೀರೆಯಲ್ಲಿ ಈವರೆಗೆ ಸ್ಕ್ರೀನ್ ಪ್ರಿಂಟ್ ವಿನ್ಯಾಸ ಮಾಡಿರಲಿಲ್ಲ. ಮೊದಲ ಬಾರಿ ಇಂಥ ಪ್ರಯತ್ನ ನಡೆದಿದ್ದು, ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ' ಎಂದು ಜಗದೀಶ ಕಸ್ತೂರಿ ಹೇಳುತ್ತಾರೆ.

ಜಗದೀಶ ಕಸ್ತೂರಿ ಅವರ ದೂರವಾಣಿ ಸಂಖ್ಯೆ: 93410 22115 ❖

‘ಮೆಇರಾ ಪೈಬಿಸ್’ ರಕ್ಷಕರ ಹೆಸರಿನಲ್ಲಿ ದೌರ್ಜನ್ಯ, ಹಿಂಸಾಚಾರಕ್ಕೆ ನೆರವು: ಸೇನಾಧಿಕಾರಿಗಳ ಆರೋಪ

# ‘ರಕ್ಷಣೆಗೆ ಮೈತೇಯಿ ಮಹಿಳೆಯರ ಅಡ್ಡಿ’

**ಮುಖ್ಯಾಂಶಗಳು**

- ಮೈತೇಯಿ ಹಿಂದೂ ಮಹಿಳೆಯರ ಗುಂಪುಗಳಿಂದ ಕೃತ್ಯ: ಸೇನಾಧಿಕಾರಿ
- ಮೇ 30ರಂದು ಅಮಿತ್ ಶಾ ಜತೆ ಸಭೆ ನಡೆಸಿದ್ದ ಮೆಇರಾ ಪೈಬಿಸ್

**ಮಣಿಪುರ ಹಿಂಸಾಚಾರ**

ಇಂಫಾಲ್ (ಪಿಟಿಐ): ‘ಮಣಿಪುರದ ಮೈತೇಯಿ ಮಹಿಳಾ ಹೋರಾಟಗಾರರ ಗುಂಪು ‘ಮೆಇರಾ ಪೈಬಿಸ್’ನ ಸದಸ್ಯರು ಸೇನೆ ಮತ್ತು ಅರೆಸೇನಾ ಪಡೆಗಳ ಸಂಚಾರಕ್ಕೆ ತಡೆ ಒಡ್ಡುತ್ತಿದ್ದಾರೆ. ಮತ್ತು ಕುಕಿ ಜನರ ಮೇಲೆ ನಡೆಯುತ್ತಿರುವ ಅಪರಾಧ ಕೃತ್ಯಗಳಿಗೆ ನೆರವು ನೀಡುತ್ತಿದ್ದಾರೆ’ ಎಂದು ಅಸ್ಸಾಂ ರೈಫಲ್ಸ್‌ನ ಅಧಿಕಾರಿಗಳು ಆರೋಪಿಸಿದ್ದಾರೆ.

ಮೆಇರಾ ಪೈಬಿಸ್ ಸದಸ್ಯರು ಈ ರೀತಿ ಮಾಡುವುದನ್ನು ತಡೆದರೆ, ಹಿಂಸಾಚಾರವನ್ನು ನಿಯಂತ್ರಿಸಬಹುದು. ಆದರೆ ಈ ಮೈತೇಯಿ ಮಹಿಳೆಯರನ್ನು ನಿಗ್ರಹಿಸಲು ನಮ್ಮಲ್ಲಿ ಅಗತ್ಯ ಪ್ರಮಾಣದ ಮಹಿಳಾ ಸಿಬ್ಬಂದಿ ಮತ್ತು ಮಹಿಳಾ ತುಕಡಿ ಇಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ಈ ಮಹಿಳೆಯರು ಎಲ್ಲೆಡೆಯು ಸೇನೆ ಮತ್ತು ಅರೆಸೇನಾ ಪಡೆಯ ಓಡಾಟಕ್ಕೆ ತಡೆ ಒಡ್ಡುತ್ತಾರೆ. ತಡೆ ಒಡ್ಡಬೇಡಿ ಎಂದು ಭದ್ರತಾ ಸಿಬ್ಬಂದಿ ಹೇಳಿದರೆ, ‘ಬೆತ್ತಲಾಗುತ್ತೇವೆ’ ಎಂದು ಬೆದರಿಕೆ ಒಡ್ಡುತ್ತಾರೆ. ಎಲ್ಲಿಯೇ ಘರ್ಷಣೆ ನಡೆಯುತ್ತಿದ್ದರೂ, ಅಲ್ಲಿಗೆ ಸೇನಾ ತುಕಡಿ ಅಥವಾ ಅರೆಸೇನಾ ಪಡೆಗಳನ್ನು ಕಳುಹಿಸಲಾಗುತ್ತದೆ. ಆದರೆ, ಮೆಇರಾ ಪೈಬಿಸ್ ಸದಸ್ಯರು ಸೇನಾ ತುಕಡಿಗಳನ್ನು ತಡೆಯುತ್ತಾರೆ. ಭದ್ರತಾ ಸಿಬ್ಬಂದಿಯ ಗುರುತಿನ ಚೀಟಿಗಳನ್ನು ಕೇಳುತ್ತಾರೆ. ಈ ಮೂಲಕ ಘರ್ಷಣೆಯ ಸ್ಥಳಕ್ಕೆ ಸೇನಾ ಸಿಬ್ಬಂದಿ ಹೋಗುವುದನ್ನು ವಿಳಂಬ ಮಾಡುತ್ತಿದ್ದಾರೆ. ಹೋರಾಟಗಾರರ ಹೆಸರಿನಲ್ಲಿ, ದೌರ್ಜನ್ಯ ಎಸಗಲು ನೆರವು ನೀಡುತ್ತಿದ್ದಾರೆ’ ಎಂದು ಸೇನಾಧಿಕಾರಿಗಳು ಆರೋಪಿಸಿದ್ದಾರೆ.

**ಶಾ ಜತೆ ಮೆಇರಾ ಪೈಬಿಸ್ ಸಭೆ:** ಮೆಇರಾ ಪೈಬಿಸ್ ಸದಸ್ಯರ ಜೆತೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಇದೇ ಮೇ 30ರಂದು ಸಭೆ ನಡೆಸಿದ್ದರು. ಆನಂತರವೂ ಈ ಮಹಿಳೆಯರು ಸೇನೆ ಮತ್ತು ಅರೆಸೇನಾ ಕಾರ್ಯಾಚರಣೆಗಳಿಗೆ ತಡೆ ಒಡ್ಡುತ್ತಿದ್ದಾರೆ.

## ಸೇನೆಯ ಆರೋಪಗಳು

ಮೆಇರಾ ಪೈಬಿಸ್ ಹೆಸರಿನಲ್ಲಿ ಮೈತೇಯಿ ಮಹಿಳೆಯರು ರಕ್ಷಣಾ ಕಾರ್ಯಾಚರಣೆಗಳಿಗೆ ಅಡ್ಡಿಪಡಿಸುತ್ತಿದ್ದಾರೆ ಎಂದು ಜೂನ್ 26ರಂದು ಭಾರತೀಯ ಸೇನೆಯ ‘ಸ್ಪಿಯರ್ ಕೋರ್’ ಆರೋಪಿಸಿತ್ತು. ಮೈತೇಯಿ ಮಹಿಳೆಯರು ಅಡ್ಡಿಪಡಿಸಿದಂತಹ ಘಟನೆಗಳ ಹಲವು ದೃಶ್ಯಗಳನ್ನು ಒಳಗೊಂಡು ವಿಡಿಯೊ ಒಂದನ್ನೂ ಪಡೆಯು ಟ್ವೀಟ್ ಮಾಡಿತ್ತು

ಸೇನೆಯ ಸ್ಪಿಯರ್ ಕೋರ್ ಟ್ವೀಟ್ ಮಾಡಿರುವ ವಿಡಿಯೊದ ಸ್ಕ್ರೀನ್‌ಶಾಟ್

- ಸೇನಾ ಪಡೆ ಮತ್ತು ಅರೆಸೇನಾ ಪಡೆಗಳ ತುಕಡಿಗಳು ಇಂಫಾಲ್‌ನಲ್ಲಿಯೇ ಇರುತ್ತವೆ. ಗಲಭೆ ನಡೆದ ಸ್ಥಳಕ್ಕೆ ಹೋಗುತ್ತವೆ. ಆದರೆ, ಈ ಮಹಿಳೆಯರು ಜಿಲ್ಲೆಯ ಎಲ್ಲಾ ಪ್ರಮುಖ ರಸ್ತೆಗಳಲ್ಲಿ ನಿಂತು, ಸೇನಾ ಸಿಬ್ಬಂದಿಯ ಸಂಚಾರವನ್ನು ತಡೆಯುತ್ತಾರೆ. ಆ ಮೂಲಕ, ಗಲಭೆಕೋರರು ತಪ್ಪಿಸಿಕೊಳ್ಳಲು ಸಹಾಯ ಮಾಡುತ್ತಿದ್ದಾರೆ
- ಪೂರ್ವ ಇಂಫಾಲ್ ಜಿಲ್ಲೆಯಲ್ಲಿ ಇಥಾಮ್ ಗ್ರಾಮದಲ್ಲಿ ಜೂನ್ 24ರಂದು ಸೇನೆಯನ್ನು ತಡೆಯುವ ಮೂಲಕ ಗಲಭೆಕೋರರು ತಪ್ಪಿಸಿಕೊಳ್ಳಲು ಈ ಮಹಿಳೆಯರು ನೆರವಾಗಿದ್ದರು. ಜೂನ್ 23ರಂದು ಐಯಾನ್‌ಗೋಕ್‌ಪಿ ಗ್ರಾಮದಲ್ಲಿ ಇದೇ ರೀತಿ ಮಾಡಿದ್ದರು. ಸೇನಾ ಸಿಬ್ಬಂದಿಯನ್ನು ತಡೆದು ನಿಲ್ಲಿಸುವ ಮೂಲಕ ಶಸ್ತ್ರ-ಸಜ್ಜಿತ ಗಲಭೆಕೋರರು ಹತ್ತಾರು ವಾಹನಗಳಲ್ಲಿ ಪರಾರಿಯಾಗಲು ನೆರವಾಗಿದ್ದರು
- ಪೂರ್ವ ಇಂಫಾಲ್‌ನ ನಂಗ್‌ಶೂಕ್‌ನಲ್ಲಿ ಜೂನ್ 13ರಂದು ಇಡೀ ಗ್ರಾಮವನ್ನು ಈ ಮಹಿಳೆಯರು ಸುತ್ತುವರೆದಿದ್ದರು. ಗ್ರಾಮದಲ್ಲಿ ಗಲಭೆ ನಡೆಯುತ್ತಿತ್ತು, ಸೇನಾ ಸಿಬ್ಬಂದಿ ಒಳಹೋಗಲು ಬಿಡಲಿಲ್ಲ
- ಇಂಫಾಲ್‌ನಲ್ಲಿರುವ ಅಸ್ಸಾಂ ರೈಫಲ್ಸ್‌ನ ನೆಲೆಯ ಪ್ರವೇಶದ್ವಾರದಲ್ಲಿ ಈ ಮಹಿಳೆಯರು ದೊಡ್ಡ ಕಂದಕ ತೋಡಿದ್ದರು

ತಮಿಳುನಾಡು ಯುವ ಕಾಂಗ್ರೆಸ್ ಕಾರ್ಯಕರ್ತರು ಚೆನ್ನೈನಲ್ಲಿ ಶುಕ್ರವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು –ಪಿಟಿಐ ಚಿತ್ರ

## ಆರೋಪಿಗಳ ಮನೆಗೆ ಬೆಂಕಿ

- ಕುಕಿ–ಜೋ ಬುಡಕಟ್ಟು ಮಹಿಳೆಯರನ್ನು ಬೆತ್ತಲುಗೊಳಿಸಿ ಲೈಂಗಿಕ ದೌರ್ಜನ್ಯ ನಡೆಸಿದ ಪ್ರಕರಣದ ಇಬ್ಬರು ಆರೋಪಿಗಳ ಮನೆಗೆ, ಅವರದ್ದೇ ಗ್ರಾಮದ ಮಹಿಳೆಯರು ಬೆಂಕಿ ಹಚ್ಚಿದ್ದಾರೆ
- ‘ಮೈತೇಯಿ ಮಹಿಳೆಯರೇ ಪಾಳು ಮನೆಯೊಂದಕ್ಕೆ ಬೆಂಕಿ ಹಚ್ಚಿದ್ದಾರೆ’ ಎಂದು ಬುಡಕಟ್ಟು ಸಮುದಾಯಗಳು ಸಂಘಟನೆಗಳು ಆರೋಪಿಸಿವೆ
- ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿರುವ ನಾಲ್ವರು ಆರೋಪಿಗಳನ್ನು 11 ದಿನಗಳ ನ್ಯಾಯಾಂಗ ಬಂಧನಕ್ಕೆ ನೀಡಲಾಗಿದೆ
- ಕೃತ್ಯವನ್ನು ಖಂಡಿಸಿ ಮಣಿಪುರದ ಹಲವೆಡೆ ಶುಕ್ರವಾರವೂ ಪ್ರತಿಭಟನೆಗಳು ನಡೆದಿವೆ. ಕೃತ್ಯದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಸಂಸತ್ತಿನಲ್ಲಿ ಉತ್ತರ ನೀಡಬೇಕು ಎಂದು ವಿರೋಧ ಪಕ್ಷಗಳ ಸದಸ್ಯರು ಆಗ್ರಹಿಸಿದರು

# ಮೂಕ ಪ್ರೇಕ್ಷಕರಾದ ಪೊಲೀಸರು: ದೂರು

ನವದೆಹಲಿ (ಪಿಟಿಐ): ‘ಕುಕಿ–ಜೋಮಿ ಸಮುದಾಯದ ಮಹಿಳೆಯ ಮೇಲಿನ ಅತ್ಯಾಚಾರಗಳ ಬಗ್ಗೆ ಸರಿಯಾದ ವರದಿಗಳು ದಾಖಲಾಗುತ್ತಿಲ್ಲ. ಮಹಿಳೆಯರ ಮೇಲಿನ ದೌರ್ಜನ್ಯವನ್ನು ನಿರ್ಲಕ್ಷಿಸಲಾಗುತ್ತಿದೆ ಮತ್ತು ಈ ಕುರಿತು ಗಾಢವಾದ ಮೌನ ಇದೆ’ ಎಂದು ನಾರ್ಥ್ ಅಮೆರಿಕನ್ ಮಣಿಪುರ ಟ್ರೈಬಲ್ ಅಸೋಸಿಯೇಷನ್ ಹಾಗೂ ಸಾಮಾಜಿಕ ಕಾರ್ಯಕರ್ತರು ಮಹಿಳಾ ಆಯೋಗಕ್ಕೆ ಬರೆದ ದೂರಿನಲ್ಲಿ ಹೇಳಿದ್ದಾರೆ.

‘ದೊಡ್ಡ ಸಂಖ್ಯೆಯ ಗುಂಪುಗಳು ಮನೆಗಳನ್ನು ಸುಡುತ್ತಿದ್ದರೆ, ಗುಂಪು ಹಲ್ಲೆ ನಡೆಯುತ್ತಿದ್ದರೆ ಮಣಿಪುರ ಪೊಲೀಸರು ಮೂಕ ಪ್ರೇಕ್ಷಕರಾಗಿ ನಿಂತುಕೊಂಡಿರುತ್ತಾರೆ’ ಎಂದೂ ಹೇಳಿದ್ದಾರೆ. ‘ಜೀವ ಉಳಿಸಿಕೊಳ್ಳುವ ಸಲುವಾಗಿ ತುಂಬು ಗರ್ಭಿಣಿಯರು, ನಿರಾಶ್ರಿತ ಶಿಬಿರಗಳಲ್ಲೇ ಗರ್ಭಿಣಿಯರಿಗೆ ಸಿಸೇರಿಯನ್ ಶಸ್ತ್ರಚಿಕಿತ್ಸೆ ಆದವರು ರಸ್ತೆಗಳಲ್ಲಿ ಓಡುತ್ತಿದ್ದಾರೆ’ ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ನಮಗೆ ಸಂವಿಧಾನದಲ್ಲಿ ನಂಬಿಕೆ ಇದೆ. ಮಹಿಳಾ ಸಮಾನತೆ ದಕ್ಕಿಸಿ ಕೊಡಲು ಮಹಿಳಾ ಆಯೋಗಕ್ಕೆ ಅಗಾಧ ಶಕ್ತಿ ಇದೆ ಎಂದೂ ತಿಳಿಸಿದೆ. ನಾವು ನಿಮ್ಮಲ್ಲಿ ವಿನಮ್ರವಾಗಿ ಪ್ರಾರ್ಥಿಸುತ್ತೇವೆ. ತತ್‌ಕ್ಷಣದಲ್ಲಿ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಳ್ಳಿ. ತನಿಖಾ ಸಮಿತಿಯೊಂದನ್ನು ರಚಿಸಬೇಕು’ ಎಂದು ದೂರಿನಲ್ಲಿ ಕೋರಲಾಗಿದೆ.

### ದೂರಿನ ಇತರ ವಿವರ

- **ಮೇ 3:** ‘ಕುಕಿ ಮಹಿಳೆಯನ್ನು ಕೊಲ್ಲಿ’ ಎನ್ನುತ್ತಾ ವಿದ್ಯಾರ್ಥಿನಿಯರನ್ನು ನಿಂದಿಸಿ ವಿಶ್ವವಿದ್ಯಾಲಯಗಳ ಹಾಸ್ಟೆಲ್‌ಗಳಿಂದ ಓಡಿಸಲಾಗಿದೆ
- **ಮೇ 4:** ನರ್ಸಿಂಗ್ ಇನ್‌ಸ್ಟಿಟ್ಯೂಟ್‌ನ 22 ವರ್ಷದ ವಿದ್ಯಾರ್ಥಿನಿಯೊಬ್ಬರ ಮೇಲೆ 40 ಮಂದಿ ಇದ್ದ ಮೈತೇಯಿ ಗುಂಪು ದೌರ್ಜನ್ಯ ಎಸಗಿದೆ. ‘ಆಕೆಯನ್ನು ಅತ್ಯಾಚಾರ ಮಾಡಿ, ಆಕೆಗೆ ಹಿಂಸೆ ನೀಡಿ, ಆಕೆಯನ್ನು ಚೂರು ಚೂರುಗಳಾಗಿ ಕತ್ತರಿಸಿ’ ಎನ್ನುತ್ತಾ ಗುಂಪು ಹಲ್ಲೆ ನಡೆಸಲಾಗಿದೆ
- **ಮೇ 5:** 20 ವರ್ಷದ ಇಬ್ಬರು ಮಹಿಳೆಯ ಮೇಲೆ ಅತ್ಯಾಚಾರ ನಡೆಸಿ ಹತ್ಯೆ ಮಾಡಲಾಗಿದೆ. ಮೈತೇಯಿ ಗುಂಪು ಈ ಕೃತ್ಯ ನಡೆಸಿದೆ. ಮಹಿಳೆಯನ್ನು ದೂಡಿ, ಒಂದು ಕೋಣೆಯೊಳಗೆ ಎಳೆದುಕೊಂಡು ಹೋಗಿ ಎರಡು ಗಂಟೆಗಳ ಕಾಲ ಅವರ ಮೇಲೆ ಅತ್ಯಾಚಾರ ನಡೆಸಿ, ಹತ್ಯೆ ಮಾಡಲಾಗಿದೆ
- **ಮೇ 6:** ಮೈತೇಯಿ ಗುಂಪೊಂದು 45 ವರ್ಷದ ವಿಧವೆಯನ್ನು ಬರ್ಬರವಾಗಿ ಕೊಚ್ಚಿ, ಗುಂಡಿಕ್ಕಿ, ಬೆಂಕಿ ಹಚ್ಚಿ ಹತ್ಯೆ ಮಾಡಲಾಗಿದೆ
- 15 ವರ್ಷದ ಬಾಲಕಿಯನ್ನು ಅಪಹರಿಸಲಾಗಿತ್ತು. ನಂತರ ಆಕೆ ಸಿಕ್ಕಿದ್ದಳು. ಆಕೆಯ ಮೇಲೆ ಅತ್ಯಾಚಾರ ನಡೆದಿರುವುದು ವೈದ್ಯಕೀಯ ಪರೀಕ್ಷೆಯಲ್ಲಿ ದೃಢಪಟ್ಟಿತ್ತು

## ‘ದೇಶ ರಕ್ಷಿಸಿದೆ, ಆದರೆ ಪತ್ನಿಯನ್ನು ರಕ್ಷಿಸಿಕೊಳ್ಳಲಾಗಲಿಲ್ಲ’

ಕಾರ್ಗಿಲ್ ಯುದ್ಧದಲ್ಲಿ ನಾನು ದೇಶಕ್ಕಾಗಿ ಹೋರಾಡಿದ್ದೇನೆ. ಭಾರತದ ಶಾಂತಿ ಪಾಲನಾ ಪಡೆಯ ಭಾಗವಾಗಿ ನಾನು ಶ್ರೀಲಂಕಾದಲ್ಲೂ ಸೇವೆ ಮಾಡಿದ್ದೇನೆ. ಆದರೆ, ನನಗೆ ನನ್ನ ಮನೆಯನ್ನು, ಪತ್ನಿಯನ್ನು, ನನ್ನ ಗ್ರಾಮಸ್ಥರನ್ನು ರಕ್ಷಿಸಿಕೊಳ್ಳಲು ಸಾಧ್ಯವಾಗಲಿಲ್ಲ. ನಾನು ಹತಾಶನಾದೆ...

– ಇದು ಮೇ 4ರಂದು ಬೆತ್ತಲೆ ಮಾಡಿ ಮೆರವಣಿಗೆ ಮಾಡಿದ ಮಹಿಳೆಯೊಬ್ಬರ ಪತಿಯ ಮಾತು. ಇವರು ಅಸ್ಸಾಂ ರೆಜಿಮೆಂಟ್‌ನಲ್ಲಿ ಸುಬೇದಾರ್ ಆಗಿ ಸೇವೆ ಸಲ್ಲಿಸಿದ್ದರು.

‘ಅಂದು ಪೊಲೀಸರಿದ್ದರು. ಆದರೆ, ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಈ ಕೃತ್ಯದಲ್ಲಿ ಭಾಗಿಯಾದ, ಮನೆಗೆ ಬೆಂಕಿ ಇಟ್ಟ, ಹಿಂಸಾಚಾರ ನಡೆಸಿದ ಎಲ್ಲರಿಗೂ ಕಠಿಣ ಶಿಕ್ಷೆಯಾಗಬೇಕು’ ಎಂದರು.

### ರೇಖಾ ಶರ್ಮಾ ಹೇಳಿದ್ದು

- ಮಣಿಪುರದ ಅಧಿಕಾರಿಗಳು ನಿಮ್ಮ ಪ್ರಶ್ನೆಗೆ ಉತ್ತರಿಸದಿದ್ದರೆ, ನೀವು ಅವರಿಗೆ ಸಮನ್ಸ್ ನೀಡಬೇಕಿತ್ತು ಎಂದು ಪಿಟಿಐ ಪ್ರಶ್ನಿಸಿತು. ಇದಕ್ಕೆ ಪ್ರತಿಕ್ರಿಯಿಸಿ ರೇಖಾ, ‘ಯಾರಾದರು ಓಡಿ ಹೋಗುತ್ತಾರೆ ಎಂದು ಸಮನ್ಸ್ ನೀಡಬೇಕು. ಮಣಿಪುರದಲ್ಲಿ ಅಷ್ಟೆಲ್ಲಾ ನಡೆಯುತ್ತಿದೆ, ಅಧಿಕಾರಿಗಳು ಎಲ್ಲಿ ಓಡಿ ಹೋಗಲು ಸಾಧ್ಯ’ ಎಂದಿದ್ದಾರೆ
- ದೂರಿನಲ್ಲಿ ಹೇಳಿರುವ ಕುರಿತು ತನಿಖೆ ನಡೆಸಲು ನಾವು ಮಣಿಪುರಕ್ಕೆ ಹೋಗಬೇಕಿತ್ತು. ಆದರೆ, ಭದ್ರತೆಯ ಕಾರಣ ನಮಗೆ ಅಲ್ಲಿಗೆ ಹೋಗಲು ಸಾಧ್ಯವಾಗಲಿಲ್ಲ. ಬೇರೆ ರಾಜ್ಯಗಳ ರೀತಿ ಆಗಿದ್ದರೆ, ನಾನು ಖಂಡಿತ ಅಲ್ಲಿಗೆ ಹೋಗುತ್ತಿದ್ದೆ

# ‘ಮಹಿಳಾ ಆಯೋಗ ನಿಷ್ಕ್ರಿಯ’

ಒಂದನೇ ಪುಟದಿಂದ...

‘ಕುಕಿ–ಜೋಮಿ ಸಮುದಾಯದ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ ನಿರಂತರವಾಗಿ ನಡೆಯುತ್ತಿದೆ. ಅವರ ಮೇಲೆ ಅತ್ಯಾಚಾರಗಳಾಗುತ್ತಿದೆ, ಅವರನ್ನು ಬೆಂಕಿ ಇಟ್ಟು ಸುಡಲಾಗುತ್ತಿದೆ, ಅಪಹರಣ ಮಾಡಲಾಗುತ್ತಿದೆ. ಈ ಎಲ್ಲಾ ಕೃತ್ಯಗಳನ್ನು ಮೈತೇಯಿ ಸಮುದಾಯದ ಉದ್ರಿಕ್ತ ಪುರುಷರ ಗುಂಪುಗಳು ನಡೆಸುತ್ತಿವೆ’ ಎಂದೂ ದೂರಿನಲ್ಲಿ ಹೇಳಲಾಗಿತ್ತು. ಬೆತ್ತಲೆ ಮೆರವಣಿಗೆ ಸೇರಿದಂತೆ ಅತ್ಯಾಚಾರ, ಕೊಲೆ, ದೌರ್ಜನ್ಯದ ಒಟ್ಟು ಆರು ಪ್ರಕರಣಗಳನ್ನು ದೂರಿನಲ್ಲಿ ಸಂಸ್ಥೆ ಉಲ್ಲೇಖಿಸಿದೆ. ಪ್ರಕರಣದ ಎಲ್ಲಾ ಮಾಹಿತಿಯನ್ನೂ ಆಯೋಗಕ್ಕೆ ನೀಡಲಾಗಿದೆ. ದೂರಿನ ಪ್ರತಿ ಪಿಟಿಐಗೆ ಲಭ್ಯವಾಗಿದೆ.

ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ಅವರನ್ನು ದೂರಿನ ಕುರಿತು ಪಿಟಿಐ ಪ್ರಶ್ನೆ ಮಾಡಿದ್ದು, ಅತ್ಯಾಚಾರಗಳ ಕುರಿತು ದೂರು ಬಂದಿದ್ದು ನಿಜ ಎಂದು ರೇಖಾ ಒಪ್ಪಿಕೊಂಡಿದ್ದಾರೆ. ಆಯೋಗದ ನಿಷ್ಕ್ರಿಯತೆ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಆಕ್ರೋಶ ವ್ಯಕ್ತವಾಗಿದೆ.

## ರೇಖಾ ಶರ್ಮಾ ಸಮರ್ಥನೆ

ಒಂದನೇ ಪುಟದಿಂದ...

‘ಮೊದಲ ಪತ್ರವು ಒಂದು ಗುಂಪಿನಿಂದ ಬಂದಿತ್ತು. ಈ ಬಗ್ಗೆ ನಾವು ಮಣಿಪುರದ ಡಿಜಿ, ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿದ್ದೆವು. ನಂತರ, ಮತ್ತೊಂದು ದೂರು ಬಂದಿತು. ಈ ಬಗ್ಗೆ ಮೊತ್ತೊಮ್ಮೆ ಡಿಜಿ ಹಾಗೂ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದೆವು. ವಿಡಿಯೊ ಬಗ್ಗೆ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಳ್ಳುವ ಮೊದಲೂ ಸರ್ಕಾರಕ್ಕೆ ಪತ್ರ ಬರೆದಿದ್ದೆವು. ಆದರೆ, ಮಣಿಪುರ ಸರ್ಕಾರವು ಯಾವುದೇ ಪ್ರತಿಕ್ರಿಯೆ ನೀಡಿಲ್ಲ’ ಎಂದು ಅವರು ಉತ್ತರ ನೀಡಿದ್ದಾರೆ.

5 ವರ್ಷಗಳಲ್ಲಿ 27,528 ಮಕ್ಕಳು ನಾಪತ್ತೆ

# ಮಕ್ಕಳ ನಾಪತ್ತೆ: ರಾಜ್ಯಕ್ಕೆ 3ನೇ ಸ್ಥಾನ

ಪ್ರಜಾವಾಣಿ ವಾರ್ತೆ




ನವದೆಹಲಿ: ದೇಶದಲ್ಲಿ ಕಳೆದ ಐದು ವರ್ಷಗಳಲ್ಲಿ 2.75 ಲಕ್ಷಕ್ಕೂ ಹೆಚ್ಚು ಮಕ್ಕಳು ನಾಪತ್ತೆಯಾಗಿದ್ದಾರೆ ಎಂದು ಕೇಂದ್ರ ಸರ್ಕಾರವು ಲೋಕಸಭೆಗೆ ಶುಕ್ರವಾರ ತಿಳಿಸಿದೆ.

ಸಂಸದ ಬ್ರಿಜೇಂದ್ರ ಸಿಂಗ್ ಕೇಳಿರುವ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ, ‘ಮಕ್ಕಳ ನಾಪತ್ತೆ ಪ್ರಕರಣದಲ್ಲಿ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ರಾಜ್ಯದಲ್ಲಿ 27,528 ಮಕ್ಕಳು ನಾಪತ್ತೆಯಾಗಿದ್ದಾರೆ’ ಎಂದು ತಿಳಿಸಿದ್ದಾರೆ.

2018ರ ಜನವರಿ 1ರಿಂದ ಈ ವರ್ಷದ ಜೂನ್ 30ರ ವರೆಗೆ ದೇಶದಲ್ಲಿ 2.12 ಲಕ್ಷ ಹೆಣ್ಣು ಮಕ್ಕಳು ನಾಪತ್ತೆಯಾಗಿದ್ದರೆ, ಗಂಡು ಮಕ್ಕಳ ಸಂಖ್ಯೆ 62 ಸಾವಿರ. ಇದೇ ಅವಧಿಯಲ್ಲಿ 1.73 ಲಕ್ಷ ಹುಡುಗಿಯರು ಮತ್ತು 66 ಸಾವಿರ ಗಂಡು ಮಕ್ಕಳು ಸೇರಿದಂತೆ 2.4 ಲಕ್ಷ ಮಕ್ಕಳನ್ನು ರಕ್ಷಿಸಲಾಗಿದೆ. ಇದರಲ್ಲಿ 2018ಕ್ಕಿಂತ ಮೊದಲು ನಾಪತ್ತೆಯಾದ ಮಕ್ಕಳೂ ಸೇರಿದ್ದಾರೆ.

ಕರ್ನಾಟಕದಲ್ಲಿ 8,632 ಬಾಲಕರು ಹಾಗೂ 18,893 ಬಾಲಕಿಯರು ಕಾಣೆಯಾಗಿದ್ದಾರೆ. ಇದೇ ಸಮಯದಲ್ಲಿ 7,163 ಬಾಲಕರು, 14,649 ಬಾಲಕಿಯರು ಸೇರಿದಂತೆ ಒಟ್ಟು 21,817 ಮಕ್ಕಳನ್ನು ರಕ್ಷಿಸಲಾಗಿದೆ ಎಂದು ಅವರು ಹೇಳಿದ್ದಾರೆ.

‘ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಟ್ರ್ಯಾಕ್ ಚೈಲ್ಡ್ ಪೋರ್ಟಲ್ ಅಭಿವೃದ್ಧಿಪಡಿಸಿದೆ. ಇದು ಕಾಣೆಯಾದ ಮಕ್ಕಳನ್ನು ಪತ್ತೆಹಚ್ಚಲು ಅನುವು ಮಾಡಿಕೊಡುತ್ತದೆ’ ಎಂದು ಅವರು ತಿಳಿಸಿದ್ದಾರೆ.

## 24ಕ್ಕೆ ‘ಇಂಡಿಯಾ’ ಸದಸ್ಯರ ಧರಣಿ

ನವದೆಹಲಿ (ಪಿಟಿಐ): ಮಣಿಪುರದ ಪರಿಸ್ಥಿತಿ ಕುರಿತು ಸಂಸತ್ತಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ ನೀಡಬೇಕು ಎಂದು ಒತ್ತಾಯಿಸಿ, ವಿಪಕ್ಷಗಳ ಒಕ್ಕೂಟ ‘ಇಂಡಿಯಾ’ದ ಸದಸ್ಯರು ಮೊದಲ ಬಾರಿಗೆ ಫಲಕಗಳನ್ನು ಪ್ರದರ್ಶಿಸಿದ್ದಕ್ಕೆ ಲೋಕಸಭೆ ಶುಕ್ರವಾರ ಸಾಕ್ಷಿಯಾಯಿತು.

ಪ್ರತಿಪಕ್ಷಗಳ ಒಕ್ಕೂಟವು ಸಂಸತ್ತಿನ ಸಂಕೀರ್ಣದ ಬಳಿ ಇರುವ ಗಾಂಧಿ ಪ್ರತಿಮೆಯ ಬಳಿ ಸೋಮವಾರ ಜಂಟಿಯಾಗಿ ಧರಣಿ ನಡೆಸಲು ತೀರ್ಮಾನಿಸಿತು.

ಕಲಾಪ ಆರಂಭವಾಗುತ್ತಿದ್ದಂತೆಯೆ ಸ್ಪೀಕರ್ ಪೀಠದ ಮುಂದೆ ಜಮಾಯಿಸಿದ ಕಾಂಗ್ರೆಸ್, ಎಡಪಕ್ಷಗಳ ಸಂಸದರು, ‘ಇಂಡಿಯಾ’ ಉತ್ತರ ಬಯಸುತ್ತದೆ, ಮೌನವನ್ನಲ್ಲ’, ‘ಸಂಸತ್ತಿನಲ್ಲಿ ಪ್ರಧಾನಿ ಮಾತನಾಡಬೇಕೆಂದು ‘ಇಂಡಿಯಾ’ ಬಯಸುತ್ತದೆ’ ಎಂಬ ಫಲಕಗಳೊಂದಿಗೆ ಘೋಷಣೆ ಕೂಗಿದರು.

## ಮಮತಾ ನಿವಾಸ ಪ್ರವೇಶಕ್ಕೆ ಯತ್ನಿಸಿದ ವ್ಯಕ್ತಿ ಸೆರೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಕಾಳಿಘಾಟ್ ನಿವಾಸಕ್ಕೆ ಕಾರಿನಲ್ಲಿ ಶಸ್ತ್ರಾಸ್ತ್ರಗಳೊಂದಿಗೆ ಪ್ರವೇಶಿಸಲು ಪ್ರಯತ್ನಿಸಿದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

‘ಪೊಲೀಸ್’ ಸ್ಟಿಕ್ಕರ್ ಇರುವ ಕಾರಿನಲ್ಲಿ ಮಮತಾ ನಿವಾಸ ಪ್ರವೇಶಿಸಲು ಪ್ರಯತ್ನಿಸಿದ ಕಪ್ಪು ಕೋಟ್ ಮತ್ತು ಟೈ ಧರಿಸಿದ ಶೇಖ್ ನೂರ್ ಆಲಂ ಎಂಬ ವ್ಯಕ್ತಿಯನ್ನು ಬಂಧಿಸಲಾಗಿದೆ. ಕಾರನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಕೋಲ್ಕತ್ತ ಪೊಲೀಸ್ ಆಯುಕ್ತ ವಿನೀತ್ ಗೋಯಲ್ ತಿಳಿಸಿದ್ದಾರೆ. ಘಟನೆ ನಡೆದಾಗ ಮಮತಾ ನಿವಾಸದಲ್ಲಿ ಇದ್ದರು.

ಬಂಧಿತ ವ್ಯಕ್ತಿಯ ಕಾರಿನಲ್ಲಿ ಬಂದೂಕುಗಳು, ವಿವಿಧ ಸಂಸ್ಥೆಗಳ ಗುರುತಿನ ಚೀಟಿಗಳು ಇದ್ದವು.

# ರಾಜ್ಯದ 56 ರೈಲು ನಿಲ್ದಾಣಗಳ ಆಧುನೀಕರಣಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಮೃತ ಭಾರತ್ ನಿಲ್ದಾಣ ಅಭಿವೃದ್ಧಿ ಯೋಜನೆಯಡಿ ಕರ್ನಾಟಕದ 56 ರೈಲು ನಿಲ್ದಾಣಗಳನ್ನು ಆಧುನೀಕರಣಗೊಳಿಸಲು ರೈಲ್ವೆ ಇಲಾಖೆ ತೀರ್ಮಾನಿಸಿದೆ.

ಇದು ದೀರ್ಘಕಾಲದ ಯೋಜನೆಯಾಗಿದ್ದು, ಇದಕ್ಕಾಗಿ ಮಾಸ್ಟರ್ ಪ್ಲಾನ್ ರೂಪಿಸಲಾಗುತ್ತಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ರಾಜ್ಯಸಭೆಗೆ ಶುಕ್ರವಾರ ತಿಳಿಸಿದ್ದಾರೆ.

ನಿಲ್ದಾಣಗಳ ಮೂಲಸೌಕರ್ಯವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಲಾಗುತ್ತದೆ. ಈ ಯೋಜನೆಯಡಿ ದೇಶದ 1,309 ನಿಲ್ದಾಣಗಳನ್ನು ಅಭಿವೃದ್ಧಿ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಯಾವ ನಿಲ್ದಾಣಗಳ ಅಭಿವೃದ್ಧಿ: ಆಲಮಟ್ಟಿ, ಅಳ್ನಾವರ, ಅರಸೀಕೆರೆ, ಬಾದಾಮಿ, ಬಾಗಲಕೋಟೆ, ಬಳ್ಳಾರಿ, ಬೆಂಗಳೂರು ಕಂಟೋನ್ಮೆಂಟ್, ಬಂಗಾರಪೇಟೆ, ಬಂಟ್ವಾಳ, ಬೆಳಗಾವಿ, ಬೀದರ್, ವಿಜಯಪುರ, ಚಾಮರಾಜನಗರ, ಚನ್ನಪಟ್ಟಣ, ಚನ್ನಸಂದ್ರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಧಾರವಾಡ, ದೊಡ್ಡಬಳ್ಳಾಪುರ, ಗದಗ, ಗಂಗಾಪುರ ರಸ್ತೆ, ಘಟಪ್ರಭಾ, ಗೋಕಾಕ್ ರಸ್ತೆ, ಹರಿಹರ, ಹಾಸನ, ಹೊಸಪೇಟೆ, ಕಲಬುರ್ಗಿ, ಕೆಂಗೇರಿ, ಕೊಪ್ಪಳ, ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣ, ಕೆ.ಆರ್.ಪುರ, ಮಲ್ಲೇಶ್ವರ, ಮಾಲೂರು, ಮಂಡ್ಯ, ಮಂಗಳೂರು ಸೆಂಟ್ರಲ್, ಮಂಗಳೂರು ಜಂಕ್ಷನ್, ಮುನಿರಾಬಾದ್, ಮೈಸೂರು, ರಾಯಚೂರು, ರಾಮನಗರ, ರಾಣೆಬೆನ್ನೂರು, ಸಾಗರ ಜಂಬಗರು, ಸಕಲೇಶಪುರ, ಶಹಾಬಾದ್, ಶಿವಮೊಗ್ಗ, ಹುಬ್ಬಳ್ಳಿ ಜಂಕ್ಷನ್, ಸುಬ್ರಹ್ಮಣ್ಯ ರಸ್ತೆ, ತಾಳಗುಪ್ಪ, ತಿಪಟೂರು, ತುಮಕೂರು, ವಾಡಿ, ವೈಟ್‌ಫೀಲ್ಡ್, ಯಾದಗಿರಿ, ಯಶವಂತಪುರ, ಚಿಕ್ಕೋಡಿ ರಸ್ತೆ ಜಂಕ್ಷನ್.

## ಕಬ್ಬು ಬೆಳೆಗಾರರಿಗೆ ₹127 ಕೋಟಿ ಬಾಕಿ

ಕರ್ನಾಟಕದಲ್ಲಿ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ 2022–23ನೇ ಸಾಲಿನಲ್ಲಿ ₹127 ಕೋಟಿ ಬಾಕಿ ಉಳಿಸಿಕೊಂಡಿವೆ.

ಈ ಸಂಬಂಧ ಗ್ರಾಹಕ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ವಿತರಣಾ ಖಾತೆ ರಾಜ್ಯ ಸಚಿವೆ ಸಾಧ್ವಿ ನಿರಂಜನ್ ಜ್ಯೋತಿ ಅವರು ರಾಜ್ಯಸಭೆಯಲ್ಲಿ ಶುಕ್ರವಾರ ಲಿಖಿತ ಉತ್ತರ ನೀಡಿದ್ದಾರೆ. ಕಬ್ಬು ಪೂರೈಸಿದ ಬೆಳೆಗಾರರಿಗೆ ₹19,730 ಕೋಟಿ ಪಾವತಿಸಬೇಕಿತ್ತು. ಕಾರ್ಖಾನೆಗಳು ₹19,603 ಕೋಟಿ ಪಾವತಿಸಿವೆ. 2018–19ನೇ ಸಾಲಿನಲ್ಲಿ ₹4 ಕೋಟಿ ಬಾಕಿ ಉಳಿಸಿಕೊಂಡಿದ್ದವು. ಬಳಿಕ ಮೂರು ವರ್ಷ ಯಾವುದೇ ಬಾಕಿ ಉಳಿಸಿಕೊಂಡಿರಲಿಲ್ಲ ಎಂದು ಅವರು ಮಾಹಿತಿ ನೀಡಿದ್ದಾರೆ.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು
ಸಂ/ಕರಾಸಾ/ವಿನಿ/ಕೆಂಬನಿ/ವಾ/374/2023–24 ದಿನಾಂಕ: 21/07/2023
**ತಿದ್ದುಪಡಿ ಆದೇಶ**
ಕೆಂಪೇಗೌಡ ಬಸ್ ನಿಲ್ದಾಣದ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ/ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳಿಗೆ ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಣೆ ಸಂಖ್ಯೆ 01/330/2023–24 ದಿನಾಂಕ: 01.07.2023 ರನ್ವಯ 13 ಮಳಿಗೆಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯ ಕ್ರಮ ಸಂಖ್ಯೆ 11 ರ ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿರುವ ಮಳಿಗೆ ಸಂಖ್ಯೆ 01 (ತೆರೆದ ಸ್ಥಳ) (Tender Reference No KSRTC/2023-24/SEO146)ನ್ನು ಆಡಳಿತಾತ್ಮಕ ಕಾರಣಗಳಿಂದ ಟೆಂಡರ್ ಪ್ರಕ್ರಿಯೆಯಿಂದ ರದ್ದುಗೊಳಿಸಲಾಗಿರುತ್ತದೆ.
ಸಹಿ/–, ವಿಭಾಗೀಯ ನಿಯಂತ್ರಣಾಧಿಕಾರಿ, ಕೆಂಬನಿ ವಿಭಾಗ, ಬೆಂಗಳೂರು
ವಾಸಾಸಂಇ/ವಾಪ್ರ/ಎಲ್‌ಸಿ/632/2022–23

**ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ**
ನಂ.16, 2ನೇ ರಾಜಭವನ ರಸ್ತೆ, ಬೆಂಗಳೂರು–01
ದೂ: 080–22867369 ಇ–ಮೇಲ್: cgmksamb@gmail.com
ಸಂಖ್ಯೆ:ಕೃಮಾಮಂ/ವಾಕಾ/ಜಿಟಿಐ /ಯೋ/AUCTION/2703/APMC/2023-24/SE0073 ದಿನಾಂಕ: 21.07.2023
**ಇ–ಟೆಂಡರ್ ಪ್ರಕಟಣೆ**
ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಯ ವತಿಯಿಂದ e-procurement ಮೂಲಕ 2023ನೇ ಸಾಲಿಗೆ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಲೈಸೆನ್ಸ್ ಪಡೆದು ಕಾರ್ಯನಿರ್ವಹಿಸುತ್ತಿರುವ ನೊಂದಾಯಿತ ಶ್ರಮಿಕರಿಗೆ ಗುಂಪು ವಿಮಾ ಯೋಜನೆಯನ್ನು ಕಾರ್ಯಗತಗೊಳಿಸಲು, ಅಧಿಕೃತ ಆಸಕ್ತ ವಿಮಾ ಸಂಸ್ಥೆಗಳಿಂದ ಸ್ಪರ್ಧಾತ್ಮಕ ಇ–ಬಿಡ್ಡಿಂಗ್‌ನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ಮಾಹಿತಿಯನ್ನು www.eproc.karnataka.gov.in ವೆಬ್‌ಸೈಟ್‌ನ ಇಂಡೆಂಟ್ ಸಂಖ್ಯೆ: APMC/2023-24/SE0073 ರಲ್ಲಿ ದಿನಾಂಕ : 11.08.2023 ರೊಳಗೆ ಪಡೆಯಬಹುದಾಗಿದೆ.
ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು ಕ.ರಾ.ಕೃ.ಮಾ.ಮಂ., ಬೆಂಗಳೂರು.
ವಾಸಾಸಂಇ/ವಾ.ಪ್ರ/ಶಿರಡಿ ಸಾಯಿ/634/2023–24

**ತುಮಕೂರು ವಿಶ್ವವಿದ್ಯಾನಿಲಯ**
ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್.ರಸ್ತೆ. ತುಮಕೂರು–572 103,
ಸಂಖ್ಯೆ:ತುವಿ/ತಾವಿ/ಟೆಂ.ಪ್ರ/2023–24/68 ದಿನಾಂಕ: 18.07.2023.
**ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)**
ತುಮಕೂರು ವಿಶ್ವವಿದ್ಯಾನಿಲಯವು ವಿವಿಧ ಅಂದಾಜು ಮೊತ್ತದ (ಕನಿಷ್ಟ ರೂ.7.75 ಲಕ್ಷ ಹಾಗೂ ಗರಿಷ್ಟ ರೂ.98.00 ಲಕ್ಷ) ಒಟ್ಟು 10 ಕಾಮಗಾರಿಗಳಿಗೆ ಸಾಮಾನ್ಯ/ಮೀಸಲು ಅಡಿಯಲ್ಲಿ ನಿರ್ವಹಿಸಲು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳು ದಿನಾಂಕ:18.07.2023 ರಿಂದ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಲಭ್ಯವಿದ್ದು ಕೊನೆಯ ದಿನಾಂಕ:05.08.2023 ಆಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ನಲ್ಲಿ ಸಂಪರ್ಕಿಸಬಹುದು ಅಥವಾ ಈ ಕೆಳಕಂಡ ಅಧಿಕಾರಿಯ ಕಛೇರಿಯಲ್ಲಿ ಪಡೆಯಬಹುದಾಗಿದೆ.
ಸಹಿ/–ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, “ಸಂಪರ್ಕ ಸೌಧ”, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010. ಟೆಲಿಫ್ಯಾಕ್ಸ್: 080–22024000
ಇ–ಮೇಲ್: cekrdcl@gmail.com ವೆಬ್‌ಸೈಟ್: http://www.krdcl.in
**ಟೆಂಡರ್ ಪ್ರಕಟಣೆ**
ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಿದೆ.
1. ಪಿ.ಎಂ.ಸಿ. ಸಮಾಲೋಚಕರ ಸೇವೆಗಳು – ಟೆಂಡರ್ ಅಧಿಸೂಚನೆ ಸಂಖ್ಯೆ: ಕರಅನಿನಿ/ಐಎಫ್‌ಬಿ/2023–24/10 ದಿನಾಂಕ: 21–07–2023
ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕಿನ ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕಬಿನಿ ನದಿಗೆ ಅಡ್ಡಲಾಗಿ ಸರಗೂರು ಮತ್ತು ಹದಿನಾರು ಗ್ರಾಮವನ್ನು ಸೇರುವ ರಸ್ತೆಗೆ ಸೇತುವೆ ನಿರ್ಮಾಣ ಕಾಮಗಾರಿಗೆ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್, ಕನ್‌ಸ್ಟ್ರಕ್ಷನ್ ಸೂಪರ್‌ವಿಷನ್ ಮತ್ತು ಕ್ವಾಲಿಟಿ ಕಂಟ್ರೋಲ್ ಸೇವೆಗಳಿಗಾಗಿ ಸಮಾಲೋಚಕರನ್ನು ನೇಮಿಸಲು QCBS ಆಧಾರದ ಮೇಲೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: 07.08.2023ರ 17.30 ಗಂಟೆಯವರೆಗೆ ಇರುತ್ತದೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 09.08.2023ರ 11.30 ಗಂಟೆಗೆ ತೆರೆಯಲಾಗುತ್ತದೆ.
2. ರಸ್ತೆ ಬಳಕೆದಾರರ ಶುಲ್ಕ ಸಂಗ್ರಹಣೆಗಾಗಿ ಕಾಮಗಾರಿಗಳು – ಟೆಂಡರ್ ಅಧಿಸೂಚನೆ ಸಂಖ್ಯೆ: ಕರಅನಿನಿ/ಐಎಫ್‌ಬಿ/2023–24/11 ದಿನಾಂಕ: 21–07–2023
ಕೆಳಕಂಡ ಎರಡು ರಾಜ್ಯ ಹೆದ್ದಾರಿಗಳಲ್ಲಿ ರಸ್ತೆ ಬಳಕೆದಾರರ ಶುಲ್ಕ ಸಂಗ್ರಹಣೆಗಾಗಿ ಟೆಂಡರ್ ಆಹ್ವಾನಿಸಲಾಗಿದೆ.
1) ಗುಬ್ಬಿ–ಸಿ.ಎಸ್. ಪುರ – ಬೀರಗೊಂಡನಹಳ್ಳಿ ಹಾಗೂ 2) ಪಡುಬಿದ್ರಿ – ಕಾರ್ಕಳ ರಸ್ತೆ. ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: 05.08.2023ರ 17.30 ಗಂಟೆಯವರೆಗೆ ಇರುತ್ತದೆ. ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 07.08.2023ರ 16.00 ಗಂಟೆಗೆ ತೆರೆಯಲಾಗುತ್ತದೆ.
ಪ್ರಸ್ತಾಪಿತ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಕಪಿಪಿ ಪೋರ್ಟಲ್ ಮುಖಾಂತರ http://kppp.karnataka.gov.in ವೆಬ್‌ಸೈಟ್ ಮೂಲಕ ಡಾಕ್ಯುಮೆಂಟ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.
ಗಮನಿಸಿ: ಇನ್ನು ಮುಂದೆ ಈ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಆದರೆ ಮುಂದಿನ ಬದಲಾವಣೆಗಳನ್ನು ಕೇವಲ ಇ–ಪೋರ್ಟಲ್ / ಕರಅನಿನಿ ವೆಬ್‌ಸೈಟ್ http://www.krdcl.in ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.
ಸಹಿ/– ಮುಖ್ಯ ಅಭಿಯಂತರರು ಕರಅನಿನಿ, ಬೆಂಗಳೂರು
DIPR/CP/BCPL/636/2023-24

**ಮೈಸೂರು ಮಹಾನಗರ ಪಾಲಿಕೆ**
ಉಪ ಆಯುಕ್ತರು (ಆಡಳಿತ)
ಮೈಸೂರು ಮಹಾನಗರ ಪಾಲಿಕೆ, ಮೈಸೂರು.–570004
ಟೆಂಡರ್ ಪ್ರಕಟಣೆ ಸಂಖ್ಯೆ: ಮೈನಪಾ/ಉಪ(ಆ)/ಕೇ.ಉ.ಶಾ/ಟಿ.ಎನ್–01/2023–24 ದಿನಾಂಕ: 20–07–2023
**ಟೆಂಡರ್ ಪ್ರಕಟಣೆ**
**ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ**
ಮೈಸೂರು ಮಹಾನಗರ ಪಾಲಿಕೆಯ ಅನುದಾನದಲ್ಲಿ ಕೇಂದ್ರ ಉಗ್ರಾಣ ಶಾಖೆಗೆ ಸಂಬಂಧಿಸಿದ ಕೆಳಕಂಡ ಪಟ್ಟಿಯಲ್ಲಿರುವ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಟೆಂಡರನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್) ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಟೆಂಡರ್ ಹೆಸರು, ಟೆಂಡರ್‌ಗಿಟ್ಟ ಮೊತ್ತ ಹಾಗೂ ಇಂ.ಎಂ.ಡಿ ಮತ್ತು ಇನ್ನಿತರೇ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಚೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: 20–07–2023 ಸಂಜೆ 5.00 ನಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್) ವೆಬ್ ಸೈಟ್‌ನಲ್ಲಿ https://kppp.karnataka.gov.in ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ಬಿಡ್ಡನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸುವ ಕೊನೆಯ ದಿನಾಂಕ: 05–08–2023 ಸಂಜೆ 5.00 ಗಂಟೆಯ ವರೆಗೆ ಹಾಗೂ ಬಿಡ್ಡನ್ನು ತೆರೆಯುವ ದಿನಾಂಕ: 09–08–2023 ಬೆಳಿಗ್ಗೆ 11.00 ರ ನಂತರ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಛೇರಿ ವ್ಯವಸ್ಥಾಪಕರು ಕೇಂದ್ರ ಉಗ್ರಾಣ ಶಾಖೆ ದೂರವಾಣಿ ಸಂಖ್ಯೆ :9972912599 ಅಥವಾ ಕಛೇರಿಯಿಂದ ಪಡೆಯಬಹುದಾಗಿದೆ.

| ಕ್ರ.ಸಂ | ಟೆಂಡರ್‌ಗಳ ವಿವರ |
|---|---|
| 1 | ಪಾಲಿಕೆಯ ವಿವಿಧ ಮಾದರಿಯ ವಾಹನಗಳಿಗೆ ಅವಶ್ಯಕವಿರುವ ವಿವಿಧ ಮಾದರಿಯ ಇಂಜಿನ್ ಆಯಿಲ್ ಮತ್ತು ಕಾಟನ್ ವೇಸ್ಟ್‌ಗಳನ್ನು ಸರಬರಾಜು ಮಾಡುವ ಟೆಂಡರ್ |
| 2 | ಪಾಲಿಕೆಯ ವಿವಿಧ ಶಾಖೆಗಳಿಗೆ ಅವಶ್ಯಕವಿರುವ ಕಚೇರಿ ಪೀಠೋಪಕರಣಗಳನ್ನು ಸರಬರಾಜು ಮಾಡುವ ಟೆಂಡರ್ |
| 3 | ಪಾಲಿಕೆಯ ವಿವಿಧ ಶಾಖೆಗಳಿಗೆ ಅವಶ್ಯಕವಿರುವ ಕಚೇರಿ ಸಲಕರಣೆ ಮತ್ತು ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡುವ ಟೆಂಡರ್ |
| 4 | ಪಾಲಿಕೆಯ ಆರೋಗ್ಯ ಮತ್ತು ತೋಟಗಾರಿಕಾ ವಿಭಾಗದ ಸ್ವಚ್ಛತಾ ಕಾರ್ಯಕ್ಕೆ ಅವಶ್ಯಕವಿರುವ ಸಾಮಗ್ರಿಗಳನ್ನು ಸರಬರಾಜು ಮಾಡುವ ಟೆಂಡರ್ (ಸ್ವಚ್ಛತಾ ಸಾಮಗ್ರಿಗಳು ಪ್ಯಾಕೇಜ್–01) |
| 5 | ಪಾಲಿಕೆಯ ಆರೋಗ್ಯ ಮತ್ತು ತೋಟಗಾರಿಕಾ ವಿಭಾಗದ ಸ್ವಚ್ಛತಾ ಕಾರ್ಯಕ್ಕೆ ಅವಶ್ಯಕವಿರುವ ಸಾಮಗ್ರಿಗಳನ್ನು ಸರಬರಾಜು ಮಾಡುವ ಟೆಂಡರ್ (ಸ್ವಚ್ಛತಾ ಸಾಮಗ್ರಿಗಳು ಪ್ಯಾಕೇಜ್–02) |
| 6 | ಪಾಲಿಕೆಯ ಆರೋಗ್ಯ ವಿಭಾಗದ ಸ್ವಚ್ಛತಾ ಕಾರ್ಯಕ್ಕೆ ಅವಶ್ಯಕವಿರುವ ಕೈಗಾಡಿ, ಪುಷ್‌ಕಾರ್ಟ್ ಮತ್ತು ಇತರೇ ಸ್ವಚ್ಛತಾ ಸಾಮಗ್ರಿಗಳನ್ನು ಸರಬರಾಜು ಮಾಡುವ ಟೆಂಡರ್ (ಸ್ವಚ್ಛತಾ ಸಾಮಗ್ರಿಗಳು ಪ್ಯಾಕೇಜ್–03) |

ಉಪ ಆಯುಕ್ತರು (ಆಡಳಿತ), ಮೈಸೂರು ಮಹಾನಗರ ಪಾಲಿಕೆ, ಮೈಸೂರು.

**ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ**
ಕರ್ನಾಟಕ ಸರ್ಕಾರದ ಒಂದು ಉದ್ದಿಮೆ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ, ನಾಎದಂಕಾ, ವಿಭಾಗ
ರೋಡಲಬಂಡಾ–584127 ತಾ: ಲಿಂಗಸುಗೂರು ಜಿ: ರಾಯಚೂರು
ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/2023–24/505 ದಿನಾಂಕ:–19.07.2023
**ಕೊಟೇಶನ್ ಪ್ರಕಟಣೆ**
**(Through eprocurement portal only)**
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪರವಾಗಿ ಅಧಿಕೃತ ಡೀಲರಗಳು, ಪೂರೈಕೆದಾರರಿಂದ Consultancy Services for survey investigation, excavation of trial pit drilling of trial bores including Detailed Engineering Preparation of Designs Drawings Estimates Draft Tender Documents including preparation of necessary land acquisition proposals for implementation of MP model micro irrigation system for distribution networks (1,12,015.00 Ha) under Koppal lift Irrigation Scheme, KBJNL, UKP III Stage ಎಂಬ ಕಾಮಗಾರಿಗೆ ಸಂಬಂಧಿಸಿದಂತೆ, ಅಧಿಕೃತ ಏಜೆನ್ಸಿಯವರಿಂದ ಮಾತ್ರ ದರ ಪಟ್ಟಿ ಒದಗಿಸುವ ಕುರಿತು ಕೊಟೇಶನ್‌ನ್ನು www.kbjnl.karnataka.gov.in ಮೂಲಕ ಕರೆಯಲಾಗಿದೆ. ಸದರಿ ಕೊಟೇಶನ್‌ನ್ನು ಅರ್ಹ ಅಧಿಕೃತ ಡೀಲರಗಳು, ಪೂರೈಕೆದಾರರು ದಿನಾಂಕ 21.07.2023 ರಿಂದ 31.07.2023 ಮಧ್ಯಾಹ್ನ 2.00 ಗಂಟೆಯವರೆಗೆ www.kbjnl.karnataka.gov.in ನಲ್ಲಿ ವೀಕ್ಷಿಸಿ ಐಟಂವಾರು ದರಗಳನ್ನು ಮೋಹರ್ ಬಂದ್ ಲಕೋಟೆಯಲ್ಲಿ ಭರ್ತಿ ಮಾಡಿ ಈ ಕಚೇರಿಗೆ ಸಲ್ಲಿಸಬಹುದಾಗಿದೆ ಹಾಗೂ ಸದರಿ ಕಾಮಗಾರಿಗಳ ದರಪಟ್ಟಿಯನ್ನು ದಿ. 31.07.2023 ಮಧ್ಯಾಹ್ನ 3.00 ಗಂಟೆಗೆ ತೆರೆಯಲಾಗುವುದು.
ಆಸಕ್ತ ಅಧಿಕೃತ ಡೀಲರಗಳು, ಪೂರೈಕೆದಾರರಿಂದ ಹೆಚ್ಚಿನ ಮಾಹಿತಿಯನ್ನು ಕೃಭಾಜನಿನಿ ವೆಬ್‌ಸೈಟ್ www.kbjnl.karnataka.gov.in ನಲ್ಲಿ ಹಾಗೂ ಈ ಕೆಳ ಸಹಿ ಮಾಡಿರುವವರ ಕಚೇರಿಯಲ್ಲಿ, ಕಚೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರು, ಕೃಭಾಜನಿನಿ, ನಾಎದಂಕಾ ವಿಭಾಗ,ರೋಡಲಬಂಡಾ.
DIP/RCR/68/KSMC&A/Job No.64/2023-24

**D. DEVARAJ URS TRUCK TERMINALS LIMITED**
(An undertaking of Government of Karnataka)
3rd Floor, TTMC ‘B’ Block, K.H. Road, Shanthinagar, Bengaluru - 560027.
Phone No: 080-22223753/58 E-mail: dduttl.1980@gmail.com
ಸಂಖ್ಯೆ:ಡಿಡಿಯುಟಿಟಿಎಲ್/ತಾಂ.ವಿ/ಟೆಂಡರ್/2023–24/288 ದಿನಾಂಕ: 21–07–2023
**E-TENDER AND E-AUCTION NOTIFICATION**
(E-Procurement Mode Only)
D. Devaraj Urs Truck Terminals Ltd., (DDUTTL), Bengaluru - 27 has invited **1)** Tender and for Selection of an **Agency to Supply Manpower on Outsource Basis** to the Office of D. Devaraj Urs Truck Terminals Ltd., Bengaluru.
Last Date of Submission of Completed Tenders is on **05-08-2023 upto 5.00 PM.**
**2) DDUTTL invites quotes from the eligible scheduled commercial banks** i.e., Public Sector Banks, Rural Regional Banks and Private Scheduled Commercial Banks for investment by way of **deposit of surplus funds for a period of One year.**
**1)** Date of e-Auction Notification: **19-07-2023. 2)** Last Date to upload the eligibility criteria in Annexure-A and Declaration in Annexure-B in the e- Portal: **25-07-2023 upto 4.30 PM. 3)** Opening of Technical Bid: **27-07-2023 at 10.30 AM. 4)** Live Bidding: **Commences at 10.30 AM and concludes at 12.30 Noon on 28-07-2023.**
Interested bidders can access documents from Website: **https://kppp.karnataka.gov.in from 21st July 2023 onwards** by paying an application fee and EMD as per e-Procurement Portal.
Corrigendum / Addendum / Modifications / Corrections, if any will be published in Website e-Procurement Portal only.
Tenders shall be submitted electronically through new e-Procurement Portal on **https://kppp.karnataka.gov.in** of the Government of Karnataka. Further details & information can be obtained from the **Managing Director's Office, DDUTTL** during office hours.
Sd/- Managing Director DDUTTL
DIPR/CP/639/Adverto/2023-24

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ನಿಮ್ಮ ಸುತ್ತಮುತ್ತಲಿನ ವಾತಾವರಣ ಹೇಗೇ ಇರಲಿ, ನಿಮ್ಮ ಪ್ರಾಮಾಣಿಕತೆ ಹಾಗೂ ನೈತಿಕ ಮೌಲ್ಯಗಳನ್ನು ಕಾಯ್ದುಕೊಳ್ಳುವ ಅವಕಾಶ ನಿಮಗೆ ಇದ್ದೇ ಇರುತ್ತದೆ.

-ಎ.ಪಿ.ಜೆ. ಅಬ್ದುಲ್ ಕಲಾಂ

# ಮಣಿಪುರ ಹಿಂಸೆ: ಸರ್ಕಾರದ ಹೊಣೆಗೇಡಿತನ ಅಕ್ಷಮ್ಯ

**ಗುಡ್ಡಗಾಡು** ರಾಜ್ಯ ಮಣಿಪುರವು ಸುಮಾರು ಮೂರು ತಿಂಗಳಿನಿಂದ ಬುಡಕಟ್ಟು ಸಮುದಾಯಗಳ ನಡುವಣ ಸಂಘರ್ಷ ಮತ್ತು ಹಿಂಸಾಚಾರದಿಂದ ನಲುಗಿಹೋಗಿದೆ. ಕುಕಿ ಸಮುದಾಯದ ಇಬ್ಬರು ಮಹಿಳೆಯರನ್ನು ಬೆತ್ತಲು ಮಾಡಿ, ಬೀದಿಗಳಲ್ಲಿ ಮೆರವಣಿಗೆ ಮಾಡಿ, ಅವರ ಮೇಲೆ ಗುಂಪೊಂದು ಲೈಂಗಿಕ ದೌರ್ಜನ್ಯ ನಡೆಸಿದ ವಿಡಿಯೊವೊಂದು ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ. ಇದು ಮಣಿಪುರ ಹಿಂಸಾಚಾರದ ಆಘಾತಕರ ಮುಖವನ್ನು ತೆರೆದಿಟ್ಟಿದೆ. ಈ ಒಂದು ವಿಡಿಯೊ ಹಿಂಸಾಚಾರದ ಕರಾಳ ಮುಖವನ್ನು ಇಡೀ ದೇಶಕ್ಕೆ ತೋರಿದೆ. ಜನಾಂಗೀಯ ಹಿಂಸೆ, ಮಹಿಳೆಯರಿಗೆ ಯಾವ ಮಟ್ಟದ ಅವಮಾನ ಮಾಡುವುದಕ್ಕೂ ಹೇಸದ ಮನಃಸ್ಥಿತಿ, ಜನರ ಗುಂಪಿನ ಧಾರ್ಷ್ಟ್ಯ, ಪೊಲೀಸರು ಮತ್ತು ಅಧಿಕಾರ ಸ್ಥಾನದಲ್ಲಿ ಇರುವವರ ಅಸಡ್ಡೆ, ಹಿಂಸೆಗೆ ನೀಡಿದ ಕುಮ್ಮಕ್ಕು, ಮಧ್ಯಪ್ರವೇಶ ಮಾಡಲು ಕೇಂದ್ರ ಸರ್ಕಾರದ ಹಿಂದೇಟು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮಾನವೀಯತೆಯನ್ನೇ ಮರೆತಿರುವ ಸ್ಥಿತಿ ಎಲ್ಲದಕ್ಕೂ ಈ ವಿಡಿಯೊ ಕನ್ನಡಿ ಹಿಡಿದಿದೆ. ಮನೆಗಳು ಮತ್ತು ವಾಹನಗಳು ಉರಿಯುವ ಚಿತ್ರಗಳು, ಸಶಸ್ತ್ರ ಪಡೆಗಳ ಪಥಸಂಚಲನ, ಬಂಡುಕೋರರು ಮತ್ತು ಇತರರಿಂದ ಆದ ಹಿಂಸಾಚಾರ ಹಾಗೂ ಕಿರುಕುಳದ ಚಿತ್ರಗಳು ಆ ರಾಜ್ಯದಿಂದ ಪ್ರತಿದಿನವೂ ಬರುತ್ತಿದ್ದವು. ಆದರೆ, ಮಹಿಳೆಯರಿಗೆ ನೀಡಿದ ಹಿಂಸೆಯ ಈ ಕೃತ್ಯವು ಅವೆಲ್ಲವನ್ನೂ ಮರೆಸಿಹಾಕಿದೆ. ಮಣಿಪುರ ಮಾತ್ರವಲ್ಲ, ಇಡೀ ದೇಶ ಬೆಚ್ಚುವಂತೆ ಮಾಡಿದ ಈ ಘಟನೆಯ ಪೂರ್ಣ ಹೊಣೆಗಾರಿಕೆಯನ್ನು ಕೇಂದ್ರ ಸರ್ಕಾರ ಮತ್ತು ಮಣಿಪುರ ಸರ್ಕಾರವೇ ಹೊತ್ತುಕೊಳ್ಳಬೇಕು.

**ಇಡೀ ದೇಶ ಬೆಚ್ಚುವಂತೆ ಮಾಡಿದ ಈ ಘಟನೆಯ ಪೂರ್ಣ ಹೊಣೆಗಾರಿಕೆಯನ್ನು ಕೇಂದ್ರ ಸರ್ಕಾರ ಮತ್ತು ಮಣಿಪುರ ಸರ್ಕಾರವೇ ಹೊತ್ತುಕೊಳ್ಳಬೇಕು**

ಕಾನೂನಿನ ಆಡಳಿತಕ್ಕೆ ಒಳಪಟ್ಟ ಯಾವುದೇ ನಾಗರಿಕ ಸಮಾಜವು ಇಂತಹ ಹೀನ ಕೃತ್ಯ ಎಸಗಿದವರ ಮೇಲೆ ತಕ್ಷಣವೇ ಕ್ರಮ ಕೈಗೊಳ್ಳುತ್ತಿತ್ತು. ಮೇ ತಿಂಗಳಲ್ಲೇ ಎಫ್‌ಐಆರ್ ದಾಖಲಾಗಿದೆ ಮತ್ತು ಘಟನೆಯು ಹೇಗೆ ನಡೆದಿದೆ ಎಂಬ ವಿವರಣೆಯೂ ಅದರಲ್ಲಿ ಇದೆ. ವಿಡಿಯೊ ಕಳೆದ ವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವವರೆಗೆ ಯಾವುದೇ ತನಿಖೆ ನಡೆದಿರಲಿಲ್ಲ ಹಾಗೂ ಯಾರನ್ನೂ ಬಂಧಿಸಿಯೂ ಇರಲಿಲ್ಲ. ಮುಖ್ಯಮಂತ್ರಿ ಬಿರೇನ್ ಸಿಂಗ್ ಅವರು ತಪ್ಪಿತಸ್ಥರಿಗೆ ಗಲ್ಲು ಶಿಕ್ಷೆಯಾಗಬೇಕು ಎಂದು ಆಗ್ರಹಿಸಿದ್ದಾರೆ. ಜೊತೆಗೆ, ರಾಜ್ಯದಲ್ಲಿ ಇಂತಹ ಹಲವು ಘಟನೆಗಳು ನಡೆದಿವೆ ಎಂದೂ ಹೇಳಿದ್ದಾರೆ. ಈ ಘಟನೆ ಮತ್ತು ಮುಖ್ಯಮಂತ್ರಿಯವರೇ ಹೇಳಿದಂತೆ ರಾಜ್ಯದಲ್ಲಿ ನಡೆದ ಇಂತಹ ಇತರ ಘಟನೆಗಳ ಹೊಣೆಯನ್ನು ಅವರೇ ಹೊತ್ತುಕೊಳ್ಳಬೇಕು. ಮಣಿಪುರದಲ್ಲಿ ಮೂರು ತಿಂಗಳಿಂದ ನಡೆಯುತ್ತಿರುವ ಹಿಂಸಾಚಾರದ ಜವಾಬ್ದಾರಿಯೂ ಅವರದ್ದೇ ಆಗಿದೆ. ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದುಬಿದ್ದಿದೆ. ಪರಿಸ್ಥಿತಿ ನಿರ್ವಹಣೆಗೆ ಸಂಬಂಧಿಸಿ ಸರ್ಕಾರ ಸತತವಾಗಿ ಲೋಪಗಳನ್ನು ಎಸಗುತ್ತಲೇ ಬಂದಿದೆ. ಅಧಿಕಾರಸ್ಥರೇ ಶಾಮೀಲಾಗಿದ್ದಾರೆ ಎಂಬ ಶಂಕೆಯೂ ಇದೆ. ರಾಜಕೀಯ, ಸಾಮಾಜಿಕ ಮತ್ತು ಮಾನವ ಹಕ್ಕುಗಳಿಗೆ ಸಂಬಂಧಿಸಿ ಗಂಭೀರ ಪ್ರಶ್ನೆಗಳು ಹುಟ್ಟಲು ಈಗಿನ ಪರಿಸ್ಥಿತಿಯು ಕಾರಣವಾಗಿದೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು 'ಗಾಢ ಕಳವಳ' ವ್ಯಕ್ತಪಡಿಸಿದ್ದಾರೆ. ತಳಮಟ್ಟದಲ್ಲಿ ಏನನ್ನೂ ಮಾಡಲು ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ ಎಂದಾದರೆ ನ್ಯಾಯಾಲಯವು ಮಧ್ಯಪ್ರವೇಶಿಸಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನೂ ಅವರು ನೀಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರಕ್ಕೆ ಸಂಬಂಧಿಸಿದ ತಮ್ಮ ಸುದೀರ್ಘ ಮತ್ತು ನಿಗೂಢ ಮೌನವನ್ನು ಕೊನೆಗೂ ಮುರಿದಿದ್ದಾರೆ. ಮುಖ್ಯ ನ್ಯಾಯಮೂರ್ತಿಯವರ ಮಾತುಗಳು ಅಥವಾ ಜನರಲ್ಲಿ ಮೂಡುತ್ತಿರುವ ಆಕ್ರೋಶದಿಂದಾಗಿ ಅವರು ಮೌನ ಮುರಿದಿರಬಹುದು. ಇಡೀ ದೇಶವೇ ನಾಚಿಕೆಯಿಂದ ತಲೆ ತಗ್ಗಿಸುವಂತಾಗಿದೆ ಮತ್ತು ತಪ್ಪಿತಸ್ಥರನ್ನು ಸುಮ್ಮನೆ ಬಿಡುವುದಿಲ್ಲ ಎಂದು ಅವರು ಹೇಳಿದ್ದಾರೆ. ರಾಜ್ಯದಲ್ಲಿ ನಡೆಯುತ್ತಿರುವ ಹಿಂಸಾಚಾರದ ಕುರಿತು ಮಾತನಾಡಲು ಇಂತಹುದೊಂದು ಘೋರ ಕೃತ್ಯವು ನಡೆಯಬೇಕಾಗಿತ್ತೇ? ಮಣಿಪುರದ ಹಿಂಸಾಚಾರದ ಬಗ್ಗೆ ಮಾತನಾಡುವಾಗಲೂ ಕಾಂಗ್ರೆಸ್ ಆಳ್ವಿಕೆ ಇರುವ ಛತ್ತೀಸಗಢ ಮತ್ತು ರಾಜಸ್ಥಾನವನ್ನು ಉಲ್ಲೇಖಿಸಿ ಅವರು ಸಂವೇದನಾ ರಾಹಿತ್ಯವನ್ನು ತೋರಿದ್ದಾರೆ. ಇಂತಹ ಸನ್ನಿವೇಶದಲ್ಲಿಯೂ ತುಚ್ಛವಾದ ರಾಜಕಾರಣವನ್ನು ಮೀರಿ ನಿಲ್ಲಲು ಮೋದಿ ಅವರಿಗೆ ಸಾಧ್ಯವಾಗದಿರುವುದು ವಿಷಾದನೀಯ.

## ದಿನದ ಟ್ವೀಟ್

### ಅಳಿಯಲಾರದ ಘೋರಪಾಪ



**ಯಾರದೇ ಪದಚ್ಯುತಿ, ರಾಜೀನಾಮೆ, ಬೋಳೆ ಸಾಂತ್ವನ, ಮೊಸಳೆ ಕಣ್ಣೀರು, ಪ್ರತಿಭಟನೆ, ಹೇಳಿಕೆ, ಉಪವಾಸ, ಸೂಕ್ತ ಶಿಕ್ಷೆಗೆ ಆಗ್ರಹ... ಇಂಥ ಯಾವುವೂ ಈ ಘೋರಪಾಪವನ್ನು ಅಳಿಸಲಾರವು ಮತ್ತು ಈ ಕೊಳಕು ಕಲೆಯನ್ನು ತೊಳೆಯಲಾರವು. ಮಣಿಪುರದ ಸೋದರಿಯರಿಗೆ ಆದದ್ದು ನಮ್ಮೆಲ್ಲರನ್ನು ಶಿಲಾಯುಗಕ್ಕಿಂತ ಪೂರ್ವಕ್ಕೆ ಕರೆದೊಯ್ದಿದೆ.**

**ನಾಗತಿಹಳ್ಳಿ ಚಂದ್ರಶೇಖರ,** ಚಲನಚಿತ್ರ ನಿರ್ದೇಶಕ

## ಕಿಡಿನುಡಿ



**ಅಯ್ಯೋ ಅಂತಃಸಾಕ್ಷಿಯೇ! ಬ್ರಿಜ್ ಭೂಷಣ್ ಶರಣ್ ಜಾಮೀನು ಪ್ರಕರಣದಲ್ಲಿ ಪ್ರಾಸಿಕ್ಯೂಟರ್ ಅವರು ಪರವಾಗಿ ಅಥವಾ ವಿರುದ್ಧವಾಗಿ ಏನನ್ನೂ ಹೇಳುತ್ತಿಲ್ಲ. ನಾಚಿಕೆಗೇಡು! ಇದನ್ನು ನಿರೀಕ್ಷಿಸಿದ್ದೆ. ವಿಚಾರಣಾ ಪ್ರಕ್ರಿಯೆಯೇ ಬುಡಮೇಲಾದರೆ ಅಪರಾಧ ನ್ಯಾಯದಾನ ವ್ಯವಸ್ಥೆಯಿಂದ ಏನನ್ನು ನಿರೀಕ್ಷಿಸಲು ಸಾಧ್ಯ? ಪ್ರಾಸಿಕ್ಯೂಟರ್‌ರನ್ನು ಉಚ್ಚಾಟಿಸುವವರು ಯಾರು? ಆದರೆ, ನ್ಯಾಯಾಲಯಗಳು ಈ ಬಗ್ಗೆಯೂ ನಿರ್ಧಾರ ತೆಗೆದುಕೊಳ್ಳಬಹುದು.**

**ಯಶೋವರ್ಧನ್ ಝಾ ಆಜಾದ್**
ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

## 25 ವರ್ಷಗಳ ಹಿಂದೆ

ಬುಧವಾರ, 22-7-1998

**• ಬೆಳೆಹಾನಿಗೆ ಪರಿಹಾರ- 'ರಾಜ್ಯಗಳ ಹೊಣೆ'**

**ಹುಬ್ಬಳ್ಳಿ, ಜುಲೈ 21-** ರಾಜ್ಯದಲ್ಲಿ ಬೆಳೆಹಾನಿ ಅನುಭವಿಸಿರುವ ರೈತರಿಗೆ ಕೇಂದ್ರದಿಂದ ಯಾವುದೇ ರೀತಿಯ ವಿಶೇಷ ಪರಿಹಾರ ನೀಡಲು ಸಾಧ್ಯವಿಲ್ಲ ಎಂದು ಕೇಂದ್ರ ಗ್ರಾಮೀಣ ಖಾತೆ ರಾಜ್ಯ ಸಚಿವ ಬಾಬಾಗೌಡ ಪಾಟೀಲ ಅವರು ಇಂದು ಇಲ್ಲಿ ಸ್ಪಷ್ಟಪಡಿಸಿದರು.

ನರಗುಂದ, ನವಲಗುಂದದ ರೈತ ಹುತಾತ್ಮ ದಿನಾಚರಣೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ, 'ಪ್ರಸ್ತುತ ಸಾಲಿನಲ್ಲಿ ರೈತರ ಬೆಳೆಹಾನಿ ಕುರಿತಂತೆ ಹೆಚ್ಚಿನ ನೆರವು ಕೇಳಿ ರಾಜ್ಯ ಸರ್ಕಾರದಿಂದ ಮನವಿ ಬಂದಿದೆ. ಆದರೆ ಕೇಂದ್ರದಲ್ಲಿ ಇಂಥ ಸಂದರ್ಭ-ಗಳಲ್ಲಿ ಪರಿಹಾರ ಒದಗಿಸುವ ಯಾವ ಯೋಜನೆಗಳೂ ಇಲ್ಲ. ನೈಸರ್ಗಿಕ ಪ್ರಕೋಪ ಪರಿಹಾರಕ್ಕಾಗಿ ಕೇಂದ್ರವು ವಿವಿಧ ರಾಜ್ಯಗಳಿಗೆ ನಿಗದಿಪಡಿಸಿದ ನೆರವಿನ ಪರಿಧಿಯಲ್ಲಿಯೇ ಪರಿಹಾರ ನೀಡಬೇಕೇ ಹೊರತು ಇದಕ್ಕಾಗಿಯೇ ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಹಣಕಾಸು ಒದಗಿಸಲು ಕೇಂದ್ರಕ್ಕೆ ಆಗದು ಎಂದು ಸ್ಪಷ್ಟವಾಗಿ ನುಡಿದರು.

**• ಕೇಂದ್ರದ ವಿಳಂಬ ನೀತಿ: ನಂಜುಂಡಪ್ಪ ಕಳವಳ**

**ಬೆಂಗಳೂರು, ಜುಲೈ 21-** ರಾಜ್ಯದ ಕೊಜೆಂಟ್ರಿಕ್ಸ್, ದೇವನಹಳ್ಳಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ, ಸೀಬರ್ಡ್ ಯೋಜನೆಗಳಿಗೆ ಕೇಂದ್ರ ಸರ್ಕಾರ ಅನುಮತಿ ನೀಡುವಲ್ಲಿ ಅನುಸರಿಸುತ್ತಿರುವ ವಿಳಂಬ ನೀತಿ ಬಗ್ಗೆ ರಾಜ್ಯದ ಯೋಜನಾ ಮಂಡಳಿಯ ಉಪಾಧ್ಯಕ್ಷ ಡಾ. ಡಿ.ಎಂ.ನಂಜುಂಡಪ್ಪ ಇಂದು ಇಲ್ಲಿ ಕಳವಳ ವ್ಯಕ್ತಪಡಿಸಿದರು.

ಈ ರೀತಿಯ ಪ್ರಮುಖ ಯೋಜನೆಗಳನ್ನು ಮಂಜೂರು ಮಾಡುವಲ್ಲಿ ಆಗಿರುವ ಅನವಶ್ಯಕ ವಿಳಂಬವು ರಾಜ್ಯದ ಅಭಿವೃದ್ಧಿಯ ವೇಗವನ್ನು ಗಣನೀಯವಾಗಿ ಕುಂಠಿತಗೊಳಿಸಿದೆ ಎಂದು ಅವರು ಪತ್ರಿಕಾ-ಗೋಷ್ಠಿಯಲ್ಲಿ ಹೇಳಿದರು.

## 50 ವರ್ಷಗಳ ಹಿಂದೆ

ಭಾನುವಾರ, 22-7-1973

**• ಕಾರ್ಮಿಕರಲ್ಲಿ ಮುಷ್ಕರ ಪ್ರವೃತ್ತಿಗೆ ಮುಖ್ಯಮಂತ್ರಿ ಅರಸು ಖಂಡನೆ**

**ಬೆಂಗಳೂರು, ಜುಲೈ 21-** ಕೈಗಾರಿಕಾ ಕಾರ್ಮಿಕರಲ್ಲಿ ಎಲ್ಲಕ್ಕೂ ಮುಷ್ಕರ ಹೂಡುವ ಹಾಗೂ ಇನ್ನಿತರ ತಂತ್ರ ಅಳವಡಿಸುವ ಪ್ರವೃತ್ತಿ ಹೆಚ್ಚುತ್ತಿರುವುದನ್ನು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಚಿತ್ರದುರ್ಗದ ಬಳಿಯ ಇಂಗಳದ್ಹಾಳದಲ್ಲಿ ಇಂದು ಅತ್ಯುಗ್ರವಾಗಿ ಖಂಡಿಸಿದರು.

ಚಿತ್ರದುರ್ಗ ಕಾಪರ್ ಕಂಪನಿಯ ಇಂಗಳದ್ಹಾಳದಲ್ಲಿನ ಎರಡು ಕೋಟಿ ರೂಪಾಯಿ ವೆಚ್ಚದ ಕಾಪರ್ ಕಾನ್ಸಂಟ್ರೇಟ್ ಕಾರ್ಖಾನೆಯ ಆರಂಭೋತ್ಸವವನ್ನು ನೆರವೇರಿಸಿದ ಮುಖ್ಯಮಂತ್ರಿ ಅವರು, ಕಾರ್ಮಿಕರ ಈ ಪ್ರವೃತ್ತಿಯಿಂದ ಉತ್ಪಾದನೆ ಜತೆಗೆ ದುಡಿಮೆಯ ಕಾಲವೂ ನಷ್ಟವಾಗುತ್ತದೆ ಎಂದರು.

**• ತುರ್ತು ಸ್ಥಿತಿ ಸದ್ಯಕ್ಕೆ ರದ್ದಿಲ್ಲ**

**ನವದೆಹಲಿ, ಜುಲೈ 21-** ದೇಶದಲ್ಲಿ ಇನ್ನೂ ಬಿಕ್ಕಟ್ಟಿನ ವಾತಾವರಣ ಇರುವುದರಿಂದ, 1971ರಲ್ಲಿ ಭಾರತ- ಪಾಕಿಸ್ತಾನ ಸಮರ ಕಾಲದಲ್ಲಿ ಘೋಷಿಸಲಾದ ತುರ್ತು ಪರಿಸ್ಥಿತಿ ಮುಂದುವರಿಯುವುದೆಂದು ಕೇಂದ್ರ ಗೃಹ ಸಚಿವ ಉಮಾಶಂಕರ ದೀಕ್ಷಿತ್ ಅವರು ಇಂದು ಇಲ್ಲಿ ತಿಳಿಸಿದರು.

ಸಂಸತ್ ಸಮಾಲೋಚನಾ ಸಮಿತಿ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಅವರು ಇದನ್ನು ತಿಳಿಸಿದರು.

ಜಾತ್ಯತೀತ ಜನತಾದಳವನ್ನು ಜನ ಸೋಲಿಸಿದ್ದು ಅದರ ಉಳಿವಿಗಾಗಿ, ಅಳಿವಿಗಲ್ಲ

# ಜೆಡಿಎಸ್ ನಡೆ ಮತೀಯತೆಯೆಡೆಗಾದರೆ...

ಅನುರಣನ

ಎ.ನಾರಾಯಣ

**ಅದು,** 1999ನೇ ಇಸವಿ. ಕರ್ನಾಟಕದಲ್ಲಿ ಅವಿಭಜಿತ ಜನತಾದಳದ ಬಣರಾಜಕೀಯವು ತಾರಕಕ್ಕೇರಿದ್ದ ಸಮಯ. ಅಂದಿನ ಮುಖ್ಯಮಂತ್ರಿ ಜೆ.ಎಚ್.ಪಟೇಲ್ ಅವರು ಒಂದು ದಿನ ಬಿಜೆಪಿಯನ್ನು 'ಕ್ಯಾನ್ಸರ್' ಎಂದು ಕರೆದಿದ್ದರು. ಈಗಿನ ಪರಿಸ್ಥಿತಿಯಲ್ಲಾದರೆ ದೊಡ್ಡ ಪ್ರತಿಭಟನೆಗೆ ಕಾರಣವಾಗಿಬಿಡಬಹುದಾಗಿದ್ದ ಇಂತಹದ್ದೊಂದು ಮಾತನ್ನು ಆಡಿ ಅರಗಿಸಿಕೊಳ್ಳಲು ಪಟೇಲರಿಗೆ ಮಾತ್ರ ಸಾಧ್ಯವಿತ್ತು. ಅದೇನೇ ಇರಲಿ, ವಿಚಿತ್ರವೇನೆಂದರೆ, ಪಟೇಲ್ ಅವರಿದ್ದ ಬಣ ಮರುದಿನ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳಬೇಕು ಎಂದು ತೀರ್ಮಾನಿಸಿತು. 'ನಿನ್ನೆಯಷ್ಟೇ ಬಿಜೆಪಿಯನ್ನು ಕ್ಯಾನ್ಸರ್ ಎಂದು ಕರೆದಿದ್ದಿರಲ್ಲಾ' ಎಂಬ ಪ್ರಶ್ನೆಗೆ ಪಟೇಲ್ ಅವರು ಒಂದಿಷ್ಟೂ ವಿಚಲಿತರಾಗದೆ, 'ಕ್ಯಾನ್ಸರ್ ಕ್ಯಾನ್ ಬಿ ಕ್ಯೂರ್ಡ್' (ಕ್ಯಾನ್ಸರ್ ಅನ್ನು ಗುಣಪಡಿಸಬಹುದು) ಎಂದಿದ್ದರು.

ಗುಣಪಡಿಸುವ ವಿಚಾರ ಹಾಗಿರಲಿ, ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡ ಆ ಬಣ, ಅಂದರೆ ಜನತಾದಳ (ಸಂಯುಕ್ತ) ಕರ್ನಾಟಕದಲ್ಲಿ ಚುನಾವಣೆಯಿಂದ ಚುನಾವಣೆಗೆ ವಿನಾಶದತ್ತ ಸಾಗಿ ಈಗ ಹೆಸರಿಗಷ್ಟೇ ಉಳಿದುಕೊಂಡಿದೆ. ಅಂದು ಜನತಾದಳ (ಸಂಯುಕ್ತ) ಹೊರನಡೆದಾಗ ಮೂಲ ಜನತಾದಳದಲ್ಲೇ ಉಳಿದವರು ತಮ್ಮನ್ನು ತಾವು ಜನತಾದಳ (ಜಾತ್ಯತೀತ) ಎಂದು ಕರೆದುಕೊಂಡರು. ಇಂಗ್ಲಿಷ್‌ನಲ್ಲಿ ಜನತಾದಳ ಸೆಕ್ಯುಲರ್. ಇಂಗ್ಲಿಷ್‌ನ ಸೆಕ್ಯುಲರ್ ಎಂಬ ಪದಕ್ಕೆ ಜಾತ್ಯತೀತ ಎನ್ನುವುದು ಸರಿಯಾದ ಭಾಷಾಂತರ ಅಲ್ಲ. ಆ ಸೂಕ್ಷ್ಮ-ಗಳೆಲ್ಲಾ ಅಲ್ಲಿ ಮುಖ್ಯವಾಗಿರಲಿಲ್ಲ. ತಾನು ಬಿಜೆಪಿಯ ಜತೆಗೆ ಹೋಗಿಲ್ಲ ಮತ್ತು ಹೋಗುವ ಜಾಯಮಾನ ತನ್ನದಲ್ಲ ಎನ್ನುವುದನ್ನು ಸಾರುವ ಉದ್ದೇಶದಿಂದ ಮಾತ್ರ ಜಾತ್ಯತೀತ ಎನ್ನುವ ಪದ ಅಲ್ಲಿ ಬಳಕೆಯಾಗಿದ್ದು.

ಆ ನಿಲುವು ಫಲ ನೀಡಿತ್ತು. 2006ರಲ್ಲಿ ತನ್ನ ಜಾತ್ಯತೀತ ನಿಲುವಿನಲ್ಲಿ 180 ಡಿಗ್ರಿ ತಿರುವು ತೆಗೆದುಕೊಂಡು, 20 ತಿಂಗಳು ಬಿಜೆಪಿಯೊಂದಿಗೆ ಅಧಿಕಾರ ನಡೆಸುವತನಕ ಜಾತ್ಯತೀತ ಜನತಾದಳ ಅಥವಾ ಜೆಡಿಎಸ್‌ನ ರಾಜಕೀಯ ಗ್ರಾಫ್ ಮೇಲ್ಮುಖವಾಗಿಯೇ ಇತ್ತು. ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಸಮಾನ ಅಂತರ ಕಾಯ್ದುಕೊಂಡ ನಡುಪಂಥೀಯ ಪಕ್ಷವೊಂದು ತಮಗೆ ಬೇಕು ಎನ್ನುವುದು ಕರ್ನಾಟಕದ ಮತದಾರರ ಸ್ಪಷ್ಟ ಸಂದೇಶವಾಗಿತ್ತು. ಆದಕಾರಣ, ಯಾವತ್ತು ಬಿಜೆಪಿಯೊಂದಿಗೆ ಜಾತ್ಯತೀತ ಜನತಾದಳ ಮೈತ್ರಿ ಮಾಡಿಕೊಂಡಿತೋ ಅಲ್ಲಿಗೆ ಅದು ತನ್ನ ಮತದಾರರ ಜತೆಗಿನ ಒಂದು ಹಂತದ ಸಂಬಂಧ ಕಡಿದುಕೊಂಡಿತು. ಆನಂತರ ಅದು ಬಿಜೆಪಿಯೊಂದಿಗಿನ ಸಂಬಂಧ ಕಳಚಿಕೊಂಡರೂ ಅದರ ಚುನಾವಣಾ ಫಲಿತಾಂಶದ ಗ್ರಾಫ್ ಮುಂದಿನ ಚುನಾವಣೆಗಳಲ್ಲಿ ಇಳಿಮುಖವಾಗುತ್ತಲೇ ಬಂದಿತು.

ಈ ಚಾರಿತ್ರಿಕ ಸತ್ಯ ಎದುರಿಗಿರುವಾಗಲೇ ಈಗ ಜಾತ್ಯತೀತ ಜನತಾದಳ ಮತ್ತೆ ಬಿಜೆಪಿಯ ಜತೆ ಮೈತ್ರಿಗೋ ವಿಲೀನಕ್ಕೋ ಸಿದ್ಧವಾಗಿದೆ ಎನ್ನುವ ವರ್ತಮಾನ ಬರುತ್ತಿದೆ. ಅಂದರೆ ತನ್ನ 'ಜಾತ್ಯತೀತ' ನಿಲುವಿನಿಂದ ಸಂಪೂರ್ಣ 360 ಡಿಗ್ರಿ ತಿರುವಿಗೆ ಸಿದ್ಧವಾಗಿದೆ ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ. ಆ ಕುರಿತು ಬರುವ ಸಮಜಾಯಿಷಿಗಳಿಗೂ ಆ ಪಕ್ಷದ ನಾಯಕತ್ವದ ನಡೆಗೂ ತಾಳೆಯಾಗದ ಕಾರಣ, ಅಂತಹದ್ದೊಂದು ಯೋಚನೆ ಆ ಪಕ್ಷದಲ್ಲಿ ಇದೆ ಎಂಬ ಭಾವನೆ ಮೂಡುತ್ತದೆ.

ಚುನಾವಣಾ ಸೋಲಿನಿಂದ ದುರ್ಬಲವಾಗಿ-ರುವ ಪಕ್ಷವೊಂದು ತನ್ನ ಭವಿಷ್ಯದ ದೃಷ್ಟಿಯಿಂದ ಯಾವುದಾದರೂ ಒಂದು ನಿರ್ಧಾರಕ್ಕೆ ಬರುವುದಕ್ಕೆ ವ್ಯಾವಹಾರಿಕವಾದ ಸಾವಿರ ಕಾರಣಗಳಿರಬಹುದು. ಅದು ಆ ಪಕ್ಷದ ಆಂತರಿಕ ವ್ಯವಹಾರಗಳಿಗೆ ಸಂಬಂಧಿಸಿದ ವಿಚಾರ. ಸಾರ್ವಜನಿಕ ಹಿತಾಸಕ್ತಿಯ ಕಾರಣದಿಂದ ನೈತಿಕವಾಗಿ ಕೆಲವು ಪ್ರಶ್ನೆಗಳನ್ನು ಎತ್ತಬಹುದು. ಆದರೆ, ರಾಜಕೀಯ ಲಾಭ- ನಷ್ಟಗಳ ಲೆಕ್ಕಾಚಾರದಲ್ಲಿ ನೈತಿಕತೆಯ ವಿಚಾರಕ್ಕೆ ಅಷ್ಟೇನೂ ಮಹತ್ವದ ಸ್ಥಾನವನ್ನು ಯಾವ ಪಕ್ಷವೂ ನೀಡದೇ ಇರುವ ಕಾರಣ, ಜಾತ್ಯತೀತ ಜನತಾದಳ ಮಾತ್ರ ಆ ಭಾರವನ್ನು ಹೊತ್ತುಕೊಳ್ಳಬೇಕು ಎನ್ನುವುದರಲ್ಲಿ ಅರ್ಥವಿಲ್ಲ. ಹಾಗಾಗಿ, ಈ ವ್ಯಾವಹಾರಿಕ ಮತ್ತು ನೈತಿಕ ಎನ್ನಬಹುದಾದ ಪ್ರಶ್ನೆಗಳನ್ನು ಬದಿಗಿಟ್ಟು, ಒಂದು ವೇಳೆ ಜಾತ್ಯತೀತ ಜನತಾದಳವು ಬಿಜೆಪಿಯೊಂದಿಗೆ ಮೈತ್ರಿಗೋ ವಿಲೀನಕ್ಕೋ ಮುಂದಾದರೆ, ಅದರಿಂದಾಗಿ ಕರ್ನಾಟಕದ ರಾಜಕೀಯದ ಮೇಲೆ ಆಗಬಹುದಾದ ಪರಿಣಾಮಗಳ ಬಗ್ಗೆಯಷ್ಟೇ ಈ ಹಂತದಲ್ಲಿ ಏನನ್ನಾದರೂ ಹೇಳಬೇಕಾಗಿರುವುದು ಅಥವಾ ಹೇಳಬಹುದಾಗಿರುವುದು ಅಂತ ಅನ್ನಿಸುತ್ತದೆ.

ಇಲ್ಲೊಂದು ಮಹತ್ವದ ವಿಚಾರವಿದೆ. ಅದೇನೆಂದರೆ, 2023ರ ಚುನಾವಣೆಯಲ್ಲಿ ಜಾತ್ಯತೀತ ಜನತಾದಳವನ್ನು ಅಥವಾ ನಿರೀಕ್ಷಿತ ಮಟ್ಟದಲ್ಲಿ ಅದರ ಅಭ್ಯರ್ಥಿಗಳನ್ನು ಮತದಾರರು ಗೆಲ್ಲಿಸದೇ ಇದ್ದದ್ದಕ್ಕೆ ಕಾರಣ ಆ ಪಕ್ಷವನ್ನು ರಾಜ್ಯದಲ್ಲಿ ಉಳಿಸಿಕೊಳ್ಳಬೇಕು ಎಂಬುದಾಗಿತ್ತೇ ವಿನಾ ಅದನ್ನು ಕಳೆದುಕೊಳ್ಳಬೇಕು ಎಂಬುದಾಗಿರಲಿಲ್ಲ. ಉಳಿಸಿಕೊಳ್ಳಬೇಕೆಂದಿದ್ದರೆ ಮತ್ತೆ ಸೋಲಿಸಿದ್ದು ಯಾಕೆ ಎಂಬ ಪ್ರಶ್ನೆ ಸಹಜವಾಗಿಯೇ ಹುಟ್ಟುತ್ತದೆ. ಹೌದು, ಮತದಾರರು ಜಾತ್ಯತೀತ ಜನತಾದಳವನ್ನು ಉಳಿಸಿಕೊಳ್ಳಬೇಕೆಂದೇ ಅದನ್ನು ಸೋಲಿಸಿದ್ದು ಯಾಕೆ ಎಂದರೆ, ಆ ಪಕ್ಷಕ್ಕೆ ತಿಳಿಯದೇ ಹೋದ ಅಥವಾ ತಿಳಿದರೂ ಅದು ಒಪ್ಪಿಕೊಳ್ಳದೇ ಹೋದ ಸತ್ಯವೊಂದು ಮತದಾರರ ಸಮಷ್ಟಿ ಪ್ರಜ್ಞೆಗೆ ಹೊಳೆದಿತ್ತು. ಜಾತ್ಯತೀತ ಜನತಾ-ದಳವಾಗಲೀ ಅಥವಾ ಅದಕ್ಕಿಂತ ಜಾತ್ಯತೀತವಾದ ಇನ್ಯಾವುದೇ ಪಕ್ಷವಾಗಲೀ ಕರ್ನಾಟಕದಲ್ಲಿ ಉಳಿಯಬೇಕು ಎಂದಾದರೆ, ಮೊದಲು ಕರ್ನಾಟಕವನ್ನು ಉಳಿಸಿಕೊಳ್ಳ-ಬೇಕು ಎನ್ನುವುದಾಗಿತ್ತು ಆ ಸತ್ಯ.

ಹೆಬ್ಬಾವಿನಂತೆ ಇಡಿಯಾಗಿಯೇ ನುಂಗುವ, ಕಾರ್ಕೋಟಕದಂತೆ ವಿಷ ಉಗುಳಿ ಪ್ರತಿಸ್ಪರ್ಧಿಗಳನ್ನೆಲ್ಲಾ ವಿರೂಪಗೊಳಿಸುವ ವಿಲಕ್ಷಣ ರಾಜಕೀಯವೊಂದು ಕರ್ನಾಟಕವನ್ನು ಕರ್ನಾಟಕವಾಗಿ ಉಳಿಯಗೊಡುವುದಿಲ್ಲ ಎಂಬ ಸ್ಥಿತಿಯಲ್ಲಿ ಮತದಾರರು ಏನು ಮಾಡಬೇಕೋ ಅದನ್ನು ಮಾಡಿದರು. ಮತದಾರರ ಈ ನಿಲುವಿಗೆ ಜಾತ್ಯತೀತ ಜನತಾದಳದ ನಿರೀಕ್ಷೆಗಳು ತಲೆಕೆಳಗಾಗಿದ್ದು ಆಕಸ್ಮಿಕ ಮತ್ತು ತಾತ್ಕಾಲಿಕ. ಅದರ ಅಳಿದುಳಿದ ನಡುಪಂಥೀಯತೆಗೆ, ಸ್ಥಿತಿಸ್ಥಾಪಕ (ಎಲಾಸ್ಟಿಕ್) ಜಾತ್ಯತೀತತೆಗೆ ಕರ್ನಾಟಕದ ಜನಮನದಲ್ಲೊಂದು ಸ್ಥಾನ ಖಂಡಿತವಾಗಿಯೂ ಉಳಿದುಕೊಂಡಿತ್ತು. ಬಿಜೆಪಿಯ ಪಾಲಿಗೆ ಕರ್ನಾಟಕವು ದಕ್ಷಿಣದ ಹೆಬ್ಬಾಗಿಲಾಗಿ ಪೂರ್ಣ ಪ್ರಮಾಣದಲ್ಲಿ ತೆರೆದುಕೊಳ್ಳದೇ ಹೋಗಿದ್ದರೆ ಅದರಲ್ಲಿ ಜಾತ್ಯತೀತ ಜನತಾದಳದ ಪಾತ್ರವೂ ಇದೆ ಎಂಬ ಸತ್ಯವನ್ನು ರಾಜ್ಯದಲ್ಲಿ ಸಂವಿಧಾನವನ್ನು ನಂಬಿರುವ ಮತದಾರರು ಮರೆಯಲು ಸಾಧ್ಯವಿಲ್ಲ.

ಆದರೆ ಜಾತ್ಯತೀತ ಜನತಾದಳದ ಉದ್ದೇಶಿತ ನಡೆ ಈಗ ಬಿಜೆಪಿಯ ಕಡೆ ಎಂದಾದರೆ, ಅದು ಈತನಕ ಏನನ್ನು ಪ್ರತಿಪಾದಿಸುತ್ತಾ ಏನನ್ನು ಪ್ರತಿನಿಧಿಸುತ್ತಾ ಕರ್ನಾಟಕ ರಾಜಕೀಯ ಜೀವನಾಡಿಯ ಅವಿಭಾಜ್ಯ ಅಂಗವಾಗಿತ್ತೋ ಅದೆಲ್ಲವನ್ನೂ ಈಗ ಮೈತ್ರಿಬಂಧದ ಒತ್ತಡದಲ್ಲಿ ಕಳೆದುಕೊಳ್ಳಬೇಕಾಗುತ್ತದೆ. ಅದು 'ಉರಿಗೌಡ- ನಂಜೇಗೌಡ'ರನ್ನು ಚಾರಿತ್ರಿಕ ವ್ಯಕ್ತಿಗಳೆಂದು ಒಪ್ಪಬೇಕಾಗುತ್ತದೆ ಮತ್ತು ಮುಂಬರುವ ದಿನಗಳಲ್ಲಿ ಅಂತಹ ನೂರಾರು ಕೃತಕ ಸೃಷ್ಟಿ ಕಾರ್ಯದಲ್ಲಿ ಯಥಾಶಕ್ತಿ ದೇಣಿಗೆ ನೀಡಬೇಕಾಗುತ್ತದೆ. ಟಿಪ್ಪು ಸುಲ್ತಾನ್ ಮತಾಂಧ, ಭಾಷಾಂಧ ಎಂಬ ರಾಜಕೀಯಪ್ರೇರಿತ ವಾದವನ್ನು ಸ್ವೀಕರಿಸಬೇಕಾಗುತ್ತದೆ. ತಾನೇ ಹಿಂದೊಮ್ಮೆ ಪ್ರಸ್ತಾಪಿಸಿದ್ದ 'ಪೇಶ್ವಾ ಮನೋಸ್ಥಿತಿಯ' ವಿಚಾರದಲ್ಲಿ ರಾಜಿಯಾಗಬೇಕಾಗುತ್ತದೆ. ಮುಸ್ಲಿಮರಿಗೆ ತಾನೇ ನೀಡಿದ್ದ ಮೀಸಲಾತಿಯನ್ನು ತಪ್ಪು ಅಂತ ಒಪ್ಪಿಕೊಳ್ಳಬೇಕಾಗುತ್ತದೆ. ತಾನೇ ಖಂಡಿಸಿದ್ದ 'ಹಣ ರಾಜಕೀಯ'ಕ್ಕೆ ಹೆಗಲು ನೀಡಬೇಕಾಗುತ್ತದೆ. ಸಂವಿಧಾನವು ಕಟ್ಟಲು ಹೊರಟ ಸರ್ವರ ಭಾರತದ ಪರಿಕಲ್ಪನೆಯನ್ನು ಬದಿಗೆಸೆದು, ಮತೀಯವಾದಿಗಳು ಪ್ರತಿಪಾದಿಸುವ ವೈದಿಕ ಹಿಂದೂರಾಷ್ಟ್ರದ ಕನಸಿಗೆ ನೀರೆರೆಯಬೇಕಾಗುತ್ತದೆ. ಅನೈತಿಕ ಪೊಲೀಸ್‌ಗಿರಿ ಮತ್ತು ಗುಂಪುಕೊಲೆಗಳು 'ಕ್ರಿಯೆಗೆ ತಕ್ಕ ಪ್ರತಿಕ್ರಿಯೆ' ಎನ್ನುವ ಪ್ರತಿಪಾದನೆಯಲ್ಲಿ ಭಾಗೀದಾರ ಆಗಬೇಕಾಗುತ್ತದೆ.

ಯಾವ್ಯಾವ ಬೆಳವಣಿಗೆಗಳಿಂದಾಗಿ, ಕರ್ನಾಟಕ ಕಳೆದುಹೋಗುತ್ತದೆ ಎಂದು ಹೋದ ಚುನಾವಣೆಯ ಕಾಲದಲ್ಲಿ ಮತದಾರರು ಆತಂಕಗೊಂಡಿದ್ದರೋ ಅವೆಲ್ಲವುಗಳ ಮುಂದುವರಿಕೆಗೆ ಜಾತ್ಯತೀತ ಜನತಾದಳ ಕೈಜೋಡಿಸಿದರೆ, ಅದರಿಂದ ಆ ಪಕ್ಷಕ್ಕೆ ಒಳಿತಾಗುತ್ತದೋ ಕೆಡುಕಾಗುತ್ತದೋ ಎನ್ನುವ ವಿಚಾರ ಏನೇ ಇರಲಿ, ರಾಜ್ಯ ರಾಜಕಾರಣ ಪಡೆಯಬಾರದ ತಿರುವೊಂದನ್ನು ಪಡೆದುಕೊಳ್ಳುತ್ತದೆ.

## ಚುರುಮುರಿ

### ಬಿಸಿಬೇಳೆ ಬಾತ್

• ಆನಂದ

'ಇದ್ಯಾವದ್ರೀ ಇಂಡಿಯಾಕ್ಕೆ ಹೊಸ ಸ್ಪೆಲಿಂಗೂ' ಎಂದು ಮಡದಿ ಮಾತು ಪ್ರಾರಂಭಿಸಿದಳು.

'ಹೊಸ ಗ್ರಾಮರ್ ಮಾಸ್ತರ್ ಬಂದಾರೇನು?' ಎಂದೆ ಗಲಿಬಿಲಿಯಿಂದ.

'ಗೊತ್ತಿಲ್ಲ, ಟೀವೀಲಿ ಇಂಡಿಯಾ ಅನ್ನೋದಕ್ಕೆ ಮಾಮೂಲಿ ಐಎನ್‌ಡಿಐಎ ಬದಲು ಐ ಡಾಟ್ ಎನ್ ಡಾಟ್ ಡಿ ಡಾಟ್ ಐ ಡಾಟ್ ಎ ಅಂತ ಕೇಳಿಸಿತು'.

'ಅದು ಹೊಸ ಕಿಚಡಿ ಪ್ರಯತ್ನ'.

'ನಾನು ಹೊಸ ಸ್ಪೆಲಿಂಗ್ ಬಗ್ಗೆ ಕೇಳ್ತಿದ್ದರೆ ನೀವು ಹೊಸ ರೆಸಿಪಿ ಬಗ್ಗೆ ಮಾತಾಡ್ತಿದ್ದೀರಾ?'

'ನಿಜ, ಬೆಂಗಳೂರಿನಲ್ಲಿ ಒಂದು ಕಿಚಡಿ ಮಾಡೋದಿಕ್ಕೆ ಒಂದು ಗುಂಪು ರೆಡಿ ಆಗುತ್ತಿದ್ದಾಗ, ದೆಹಲಿಯಲ್ಲಿ, ಪ್ರವಾಹ ಬಂದಿದ್ದರೂ ಇನ್ನೊಂದು ಗುಂಪು ಮತ್ತೊಂದು ಕಿಚಡಿಗೆ ತಯಾರಿ ನಡೆಸುತ್ತಿತ್ತು'.

'ಅರ್ಥ ಆಗ್ತಿಲ್ಲ'.

'ನೀನು ಮೊದಲು ಹೇಳಿದ್ದು ಹೊಸ ಸ್ಪೆಲಿಂಗ್ ಅಲ್ಲ. 26 ಪಕ್ಷಗಳ ಹೊಸ ಮೈತ್ರಿಕೂಟ...'

'ಯುಪಿಎ ಬದಲು ಡಾಟ್ ಡಾಟ್ ಡಾಟ್...'

'ಕರೆಕ್ಟ್, ಹಾಗೇ ದೆಹಲೀಲಿ ಈ ಡಾಟ್‌ಗಳ ವಿರುದ್ಧ 38 ಪಕ್ಷಗಳು ಸೇರಿ ರಚಿಸಿರುವ ಘಟಬಂಧನ್. ಹಳೇಹೆಸರೇ ಎನ್‌ಡಿಎ'.

'ಇಲ್ಲಿ ಕಿಚಡಿ ಎಲ್ಲಿ ಬರುತ್ತೆ?'

'ಅಷ್ಟು ಜನ ಸೇರಿದರೆ ಕಿಚಡಿ ತಾನೆ ಆಗೋದು?'

'ನಿಮ್ಮ ಪಾಕಜ್ಞಾನ ಪೂರು ರೀ. ಅಷ್ಟು ಮಂದಿ ಸೇರಿದರೆ ಕಿಚಡಿ ಆಗದು. ಬಿಸಿಬೇಳೆ ಬಾತ್ ಆಗುತ್ತೆ'.

'ಹೇಗೆ?'

'ಕಿಚಡೀಗೆ ಅಕ್ಕಿ ಬೇಳೆ ಸಾಕು. ಬಿಸಿಬೇಳೆ ಬಾತ್‌ಗೆ ಅಕ್ಕಿ, ಬೇಳೆ, ವಿವಿಧ ತರಕಾರಿಗಳು, ಮಸಾಲೆ ಪುಡಿ, ಈ ಪುಡಿ ಮಾಡೋದಿಕ್ಕೆ ಸಂಬಾರ್ ಪದಾರ್ಥಗಳು ಎಲ್ಲ ಬೇಕು'.

'ಅಂದರೆ ಎರಡೂ ಮೈತ್ರಿಕೂಟಗಳು ಬಿಸಿಬೇಳೆ ಬಾತ್ ಮಾಡೋದಿಕ್ಕೆ ಹೊರಟಿವೆ ಅಂತೀಯ?'

'ಅಲ್ವೆ ಮತ್ತೆ? ಬೆಂಗಳೂರಿನ 26, ದೆಹಲಿಯ 38, ಒಟ್ಟು 64 ಮಂದಿ ಸೇರಿದರೆ ಇನ್ನೇನು ಆಗುತ್ತೆ?'

'ಟೂ ಮೆನಿ ಕುಕ್ಸ್ ಸ್ಪಾಯಿಲ್ ದಿ ಬ್ರಾತ್ ಆದರೆ?'

'ಮತದಾರ ರುಚಿ ಡಿಸೈಡ್ ಮಾಡ್ತಾನೆ'.

## ಸಂಗತ

# ನೆಡುತೋಪೇಕೆ? ಕಾಡು ಬೆಳೆಸೋಣ

### ಯಾವುದೇ ಏಕಜಾತಿಯ ನೆಡುತೋಪು ಪರಿಸರಕ್ಕೆ ಅಪಾಯಕಾರಿ

• ನಾಗರಾಜ ಕೂವೆ

**ಒಂದು** ಕಾಲದಲ್ಲಿ, ಪಶ್ಚಿಮ ಘಟ್ಟಗಳಲ್ಲಿನ ಹುಲ್ಲುಗಾವಲುಗಳನ್ನು 'ಹಸಿರು ಮರುಭೂಮಿ' ಎಂದು ತೀರ್ಮಾನಿಸಿದ್ದ ಅರಣ್ಯ ಇಲಾಖೆ, ಅಲ್ಲಿ ಅರಣ್ಯೀಕರಣ ಮಾಡಲು ಇನ್ನಿಲ್ಲದ ಪ್ರಯತ್ನ ಮಾಡುತ್ತಲೇ ಇತ್ತು. ಆದರೆ ಇಲಾಖೆಯು ಗಿಡ ನೆಟ್ಟ ಜಾಗದಲ್ಲಿ ಮಳೆಗಾಲದಲ್ಲಿ ಸೊಂಪಾಗಿ ಹುಲ್ಲು ಬೆಳೆದರೆ, ಬೇಸಿಗೆಯಲ್ಲಿ ಬೆಂಕಿ ಬಿದ್ದು, ನೆಟ್ಟಿದ್ದ ಸಸಿಗಳೆಲ್ಲಾ ಬೆಂದು ಹೋಗುತ್ತಿದ್ದವು. ಇದರಿಂದಾಗಿ ಪ್ರತಿವರ್ಷದ ಹುಲ್ಲುಗಾವಲಿನ ಅರಣ್ಯೀ-ಕರಣದ ಯಶಸ್ಸು ಶೇಕಡ 10 ಕೂಡಾ ದಾಟುತ್ತಿರಲಿಲ್ಲ. ಇದರಿಂದ ತೀವ್ರ ನಿರಾಶರಾಗಿದ್ದ ಅರಣ್ಯಾಧಿಕಾರಿಗಳಿಗೆ ಅಕೇಶಿಯಾ ವಿಸ್ಮಯದಂತೆ ಕಂಡಿತು.

ಹೆಚ್ಚೆಂದರೆ ಒಂದು ಮೀಟರ್ ಆಳಕ್ಕೆ ಮಾತ್ರ ಬೇರಿಳಿಸುವ, ತಾಯಿ ಬೇರೇ ಇಲ್ಲದ, ಅತಿ ಶೀಘ್ರವಾಗಿ ಬೆಳೆಯುವ ಅಕೇಶಿಯಾ ಎಲ್ಲರಿಗೂ ಸೋಜಿಗದಂತೆ ಕಂಡಿತು. ನೆಟ್ಟ ಸಸಿಗಳೆಲ್ಲಾ ಯಾವುದೇ ಅಡೆತಡೆಗಳಿಲ್ಲದೆ, ಯಾವ ಕಾಲಕ್ಕೂ ಜಗ್ಗದೆ, ಎಲ್ಲಾ ಪ್ರತಿಕೂಲ ಪರಿಸ್ಥಿತಿಯನ್ನು ಹಿಮ್ಮೆಟ್ಟಿಸಿ, ಮರಗಳಾಗುತ್ತಿದ್ದುದನ್ನು ಕಂಡು ಎಲ್ಲರೂ ಅಚ್ಚರಿಪಟ್ಟುಕೊಂಡರು. ಈ ಸಸಿನಾಟಿಯ ನಂತರ ಹುಲ್ಲಿನ ಬೆಳವಣಿಗೆ ನಿಯಂತ್ರಣಕ್ಕೆ ಬಂತು. ಅರಣ್ಯಕ್ಕೆ ಬೆಂಕಿ ಬೀಳುವುದು ಕಡಿಮೆ ಯಾಯಿತು. ತಮ್ಮ ಇಲ್ಲಿಯವರೆಗಿನ ಎಲ್ಲಾ ಸಮಸ್ಯೆಗಳಿಗೆ ಅಕೇಶಿಯಾ ಒಮ್ಮೆಲೇ ಪರಿಹಾರ ಒದಗಿಸಿತು ಎಂದು ಅರಣ್ಯಾಧಿಕಾರಿಗಳು ಹಿರಿಹಿರಿ ಹಿಗ್ಗಿದರು.

ವಿಶ್ವಬ್ಯಾಂಕ್, 1984ರಲ್ಲಿ ಅರಣ್ಯೀಕರಣಕ್ಕೆಂದು ₹ 55 ಕೋಟಿ ಮೊತ್ತದ ನೆರವನ್ನು ಕರ್ನಾಟಕ ಸರ್ಕಾರಕ್ಕೆ ನೀಡಿತು. ಅದು ನೀಡುವ ಧನಸಹಾಯದ ಶೇಕಡ 40ರಷ್ಟು ಹಣವನ್ನು ಉಷ್ಣವಲಯದ ನಿತ್ಯ-ಹರಿದ್ವರ್ಣ ಪ್ರದೇಶಗಳಲ್ಲಿ ಕೈಗಾರಿಕಾ ನೆಡುತೋಪು ಬೆಳೆಸಲು ಉಪಯೋಗಿಸಬೇಕೆಂಬ ಷರತ್ತು ಇತ್ತು. ಈ ಧನಸಹಾಯದ ಉದ್ದೇಶವೇ ನಗರವಾಸಿಗಳಿಗೆ ಅಗತ್ಯವಾದ ಉರುವಲು ಪೂರೈಸಲು ಉಪಯುಕ್ತ ಸಸ್ಯ ಬೆಳೆಸಬೇಕು ಎಂಬುದಾಗಿತ್ತು. ಇದು ಅಕೇಶಿಯಾ ಬೆಳೆಸಲು ಇನ್ನಷ್ಟು ಪ್ರೋತ್ಸಾಹ ಒದಗಿಸಿತು.

ಮೈಸೂರು ಕಾಗದ ಕಾರ್ಖಾನೆಗೆ 1981- 83ರಲ್ಲಿ ರಾಜ್ಯ ಸರ್ಕಾರ ಸರಿಸುಮಾರು 22,500 ಹೆಕ್ಟೇರ್ ಪ್ರದೇಶವನ್ನು 40 ವರ್ಷಗಳ ಕಾಲ ನೆಡುತೋಪು ಬೆಳೆಸಲು ಗುತ್ತಿಗೆಗೆ ಕೊಟ್ಟಿತ್ತು. ಅವರು ಹುಲ್ಲುಗಾವಲುಗಳಿಗೆಲ್ಲಾ ಬೆಂಕಿ ಕೊಟ್ಟು, ನೈಸರ್ಗಿಕ ಕಾಡುಗಳನ್ನೆಲ್ಲಾ ಬುಡಮಟ್ಟ ನಾಶ ಮಾಡಿ, ಅಲ್ಲೆಲ್ಲಾ ಅಕೇಶಿಯಾ ಹಬ್ಬಿಸಿದರು. ಅಂದು ಆ ಜಾಗದಲ್ಲಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸೂಚಿಸಿದ ಗಿಡ ಬೆಳೆಸಬೇಕು, ಉರುವಲಿಗಾಗಿ ಶೇಕಡ 5ರಷ್ಟು ಹೊಸ ಗಿಡ ನೆಡಬೇಕು, ಎಕರೆಗೆ ಕನಿಷ್ಠ 20 ಶ್ರೀಗಂಧದ ಗಿಡ ಬೆಳೆಸಬೇಕು. ಆ ಜಾಗದಲ್ಲಿ ಗಡಿಕಲ್ಲು ಹುಗಿಯಬೇಕು, ನಿಯಮ ಗಾಳಿಗೆ ತೂರಿ ಚಟುವಟಿಕೆ ಕೈಗೊಳ್ಳಬಾರದು, ಅಪ್ಪಿತಪ್ಪಿ ನಿಯಮ ಮೀರಿದರೆ ಸರ್ಕಾರ ಆ ಭೂಮಿಯನ್ನು ವಾಪಸ್ ಪಡೆಯಬಹುದು, ಇಲಾಖೆಯ ಪೂರ್ವಾನುಮತಿ ಇಲ್ಲದೆ ಸ್ಥಳೀಯ ಗಿಡ ಮರಗಳನ್ನು ಕತ್ತರಿಸಬಾರದು ಎಂದೆಲ್ಲಾ ನಿರ್ದೇಶನ-ಗಳೇನೋ ಇದ್ದವು. ಆದರೆ ಹಣದ ಮುಂದೆ ಅವೆಲ್ಲಾ ಬರೀ ಸೂಚನೆಗಳಾಗಿ ಮಾತ್ರ ಉಳಿದವು.

ಅಕೇಶಿಯಾದ ಬೀಜ ಮೊಳೆತ ಎರಡ್ಮೂರು ವಾರದಲ್ಲಿ ಸಸ್ಯಕ್ಕೆ ಗರಿಯಂತಹ ಎಲೆ ಮೂಡುತ್ತದೆ. ಅದು ಸಾಮಾನ್ಯವಾಗಿ ನಮ್ಮ 'ಮುಟ್ಟಿದರೆ ಮುನಿ' ಗಿಡದ ಎಲೆಗಳನ್ನು ಹೋಲುತ್ತದೆ. ಮತ್ತದು ಬರೇ ಒಂದು ತಿಂಗಳೊಳಗೆ ಮಾಯವಾಗಿ ಬಿಡುತ್ತದೆ! ಮುಂದೆ ಆ ಎಲೆಯ ತೊಟ್ಟು ಚಪ್ಪಟೆ ಆಕಾರ ಹೊಂದಿ ಹಸಿರು ಬಣ್ಣ ಬಳಿದುಕೊಂಡು ಎಲೆಯಂತೆ ವರ್ತಿಸುತ್ತದೆ. ನಾವೀಗ ಅಕೇಶಿಯಾ ಎಲೆ ಎಂದು ಏನನ್ನು ಹೇಳುತ್ತೇವೆಯೋ ಅದು ಎಲೆ ತೊಟ್ಟಿನ ಪರಿವರ್ತಿತ ರೂಪವೇ ವಿನಾ ಅದು ಅಸಲು ಅಕೇಶಿಯಾದ ಎಲೆಯಲ್ಲ. ಅಷ್ಟಕ್ಕೂ ನಾವಿಂದು ಎಲ್ಲೆಡೆ ನೋಡುತ್ತಿರುವ ಅಕೇಶಿಯಾ ಮರಕ್ಕೆ ಎಲೆಯೇ ಇಲ್ಲ! ಈಗ ನಾವೇನು ಎಲೆ ಎಂದು ಕರೆಯುತ್ತೇವೆಯೋ ಅದು ಹಸಿರಾಗಿದ್ದು ಎಲೆಯಂತೆ ವರ್ತಿಸುತ್ತದಷ್ಟೇ.

ನೀರು ಬಳಸಿ ಜೀವಿಸುವ ಈ ಗಿಡ, ತನ್ನೊಳಗಿನ ನೀರನ್ನು ವಾತಾವರಣಕ್ಕೆ ಬಿಟ್ಟುಕೊಡುವುದೇ ಇಲ್ಲ! ಚಪ್ಪಟೆ ತೊಟ್ಟಿನ ಹಸಿರು ಕವಚದ ರಕ್ಷಣೆಯಿಂದ ಇದು ತೀವ್ರ ಬರದಲ್ಲೂ, ಅತಿ ಹೆಚ್ಚು ಉಷ್ಣತೆಯಲ್ಲೂ ಬದುಕುತ್ತದೆ. ಅದರ ಎಲೆ(?) ನಮ್ಮ ಅರಣ್ಯದ ಬೇರೆ ಸಸ್ಯಗಳ ಎಲೆಗಳಿಗಿಂತ ಸಂಪೂರ್ಣ ಭಿನ್ನವಾಗಿದೆ. ಬೇಸಿಗೆಯಲ್ಲಿ ಗಿಡದಿಂದ ನೀರು ದೊಡ್ಡ ಪ್ರಮಾಣದಲ್ಲಿ ಆವಿಯಾಗದಂತೆ ತಡೆಯುವುದರಿಂದ ಅದರ ಬೆಳವಣಿಗೆ ತುಂಬಾ ಸುಲಭವಾಗಿದೆ. ಒಮ್ಮೆ ನೀರು ಸಿಕ್ಕಾಗ ಸಾಧ್ಯವಾದಷ್ಟು ಹೀರಿಕೊಂಡು ಬರದ ಸಂದರ್ಭದಲ್ಲೂ ಬದುಕುತ್ತದೆ. ಎಂತಹ ಬಿಕ್ಕಟ್ಟನ್ನೂ ಮೆಟ್ಟಿ ನಿಲ್ಲುವ ಸಾಮರ್ಥ್ಯ ಇರುವುದರಿಂದ ನೆಟ್ಟ ಬಹುಪಾಲು ಬದುಕಿ ಬೆಳೆಯುತ್ತವೆ.

ಇದಕ್ಕೆ ಪ್ರಾಣಿ, ಪಕ್ಷಿ, ಕೀಟ, ಹುಳುಗಳ ಕಾಟವಿಲ್ಲ, ರೋಗಬಾಧೆಯಂತೂ ಇಲ್ಲವೇ ಇಲ್ಲ. ಅದು ಅರಣ್ಯ ಇಲಾಖೆಯನ್ನು ಇನ್ನಿಲ್ಲದಂತೆ ಆಕರ್ಷಿಸಿ, ಅರಣ್ಯೀಕರಣ ಎಂದ ತಕ್ಷಣ ಅಕೇಶಿಯಾ ಎಂಬ ತೀರ್ಮಾನಕ್ಕೆ ಬರುವಂತೆ ಮಾಡಿದೆ.

ಅಕೇಶಿಯಾ ಮಾತ್ರವಲ್ಲ, ಯಾವುದೇ ಏಕಜಾತಿಯ ನೆಡುತೋಪು ಕೂಡಾ ಪರಿಸರಕ್ಕೆ ಅಪಾಯಕಾರಿ. ಪಶ್ಚಿಮಘಟ್ಟದ್ದಲ್ಲದ ಗಿಡಗಳನ್ನು ಇಲ್ಲಿ ತೋಪಿನ ರೂಪದಲ್ಲಿ ಬೆಳೆಸುವುದು ಕೂಡಾ ಹೊಸ ಸಮಸ್ಯೆಗಳನ್ನು ಆಹ್ವಾನಿಸುತ್ತದೆ. ಯಾವುದೇ ನೆಡುತೋಪು, ಅದು ಬೇಕಾದರೆ ಹಣ್ಣಿನ ಗಿಡದ್ದೇ ಆಗಿರಲಿ ಅದು ಎಂದಿಗೂ ಸಹಜ ಕಾಡಿಗೆ ಪರ್ಯಾಯ ಆಗಲಾರದು. ಕಾಡು ಎಂದರೆ ವೈವಿಧ್ಯ. ಎಲ್ಲಾ ವನ್ಯಜೀವಿಗಳು ಅಲ್ಲಿನ ಅವಿಭಾಜ್ಯ ಅಂಗ ಎಂಬುದು ಮನುಷ್ಯಕೇಂದ್ರಿತ ದೃಷ್ಟಿಕೋನದಲ್ಲಿ ಕಾಡನ್ನು ಕಾಣುವವರಿಗೆ ಅರ್ಥವಾಗಬೇಕಾದದ್ದು ಇಂದಿನ ಜರೂರತ್ತು.

ಮೈಸೂರು ಕಾಗದ ಕಾರ್ಖಾನೆ ಈಗ ಮುಚ್ಚಿದೆ. ಭೂಮಿಯ ಗುತ್ತಿಗೆ ಅವಧಿಯೂ ಮುಗಿದಿದೆ. ಹಿಂದೆ ಗುತ್ತಿಗೆ ನೀಡಿದ ಭೂಮಿಯನ್ನು ಈಗ ಅರಣ್ಯ ಇಲಾಖೆಗೆ ಹಸ್ತಾಂತರಿಸಿ ಅಲ್ಲಿ ಸಹಜ ಕಾಡು ಬೆಳೆಯಲು ಅನುವು ಮಾಡಿಕೊಡಬೇಕು ಎಂಬುದು ಮಲೆನಾಡಿನ ಗಟ್ಟಿ ಜನಾಭಿಪ್ರಾಯ. ಸರ್ಕಾರ ಇದನ್ನು ಗೌರವಿಸಲಿ ಎಂದು ಆಶಿಸೋಣ.

## ವಾಚಕರ ವಾಣಿ

### ಕೋರ್ಟ್ ತಪರಾಕಿ ತಾಕೀತೇ?!

ಮನ ವಿಹ್ವಲಗೊಂಡಿದೆ, ಕೈ ನಡುಗುತ್ತಿದೆ. ನೂರು ಜ್ಯೋತಿ ವರ್ಷಗಳ ಪರ್ಯಂತ ಯತ್ನಿಸಿದರೂ ಗಂಡು ಜಾತಿಗೆ ಹೆಣ್ಣು ಕುಲದ ಋಣ ತೀರಿಸಲಾಗದು. ಹೀಗಿರುವಾಗ, ಮಣಿಪುರದಲ್ಲಿ ಅದೆಂಥ ಹೇಯ ವಿದ್ಯಮಾನ! ಮಣಿಪುರ ಕಾದು ಕಾದು ಹೆಂಚಾಗುವವರೆಗೆ ಕಾಯ್ದ ಕೇಂದ್ರ ಸರ್ಕಾರದ ನಡೆ ಹಾಗೂ ಆ ರಾಜ್ಯ ಸರ್ಕಾರದ ಅಸಹಾಯಕ ಹೇಡಿತನ ಕ್ಷಮಾರ್ಹವಲ್ಲ. ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ತಪರಾಕಿ ತಾಕೀತೇ?! ಫ್ರಾನ್ಸ್, ಆಸ್ಟ್ರೇಲಿಯಾವು ಮಣಿಪುರಕ್ಕಿಂತಲೂ ಹತ್ತಿರದಲ್ಲಿವೆ ಎಂಬ ಸಂಗತಿ ನಮಗೆ ತಿಳಿದದ್ದೇ ನಮ್ಮ ಪ್ರಧಾನಿಯಿಂದ. ಇಡೀ ನಾಗರಿಕತೆ-ಯನ್ನೇ ತೊಟ್ಟಿಲು ಕಟ್ಟಿ ತೂಗುವ ಸ್ತ್ರೀಗೆ, ಇದು ನಾವು ನೀಡುವ ಉಪಚಾರ. ನಮ್ಮ ಗಂಡು ಜಾತಿಗೆ ಧಿಕ್ಕಾರವಿರಲಿ.

**ರಾಮಚಂದ್ರ ಎಸ್. ಕುಲಕರ್ಣಿ,** ಧಾರವಾಡ

### ಸಂಬಂಧಕ್ಕೆ ಮುಳುವಾಗದಿರಲಿ ತಾಂತ್ರಿಕತೆ

ಮಾಧ್ಯಮ ಲೋಕದಲ್ಲಿ ಸದ್ಯದ ಮಟ್ಟಿಗೆ ಹೆಚ್ಚು ಸದ್ದು ಮಾಡುತ್ತಿರುವ ಸಂಗತಿಯೆಂದರೆ, ಕೃತಕ ಬುದ್ಧಿಮತ್ತೆ (ಎಐ) ನಿರೂಪಕಿಯರು. ದೇಶದಲ್ಲಿ ಪ್ರಥಮ ಬಾರಿಗೆ ಒಡಿಶಾದ ಟಿ.ವಿ. ಚಾನೆಲ್ಲೊಂದು ಲೀಸಾ ಎಂಬ ಎ.ಐ ಆಧಾರಿತ ಸುದ್ದಿ ನಿರೂಪಕಿಯನ್ನು ಪರಿಚಯಿಸಿದ್ದೇ ತಡ, ವಿವಿಧೆಡೆ ಹಲವು ಮಾಧ್ಯಮ ಸಂಸ್ಥೆಗಳು ಈ ಪ್ರಯೋಗಕ್ಕೆ ಮುಂದಾದವು. ಎಷ್ಟರ-ಮಟ್ಟಿಗೆ ಎಂದರೆ, ರಾಜ್ಯದ ವಿಶ್ವವಿದ್ಯಾಲಯಗಳು ಸಹ ತಮ್ಮ ತಮ್ಮ ಎ.ಐ ನಿರೂಪಕರನ್ನು ಪರಿಚಯಿಸುತ್ತಿವೆ. ಕೃತಕ ಬುದ್ಧಿಮತ್ತೆಯ ದೆಸೆಯಿಂದ ಈ ತರಹದ ತಾಂತ್ರಿಕ ಅನ್ವೇಷಣೆಗೆ ಇಳಿದಿದ್ದು ಖುಷಿಯ ಸಂಗತಿ. ವಿದ್ಯಾರ್ಥಿಗಳು ಸಹ ತಮ್ಮ ಕಲಿಯುವಿಕೆಯ ಭಾಗವಾಗಿ ಇಂತಹ ತಾಂತ್ರಿಕ ಸಂಗತಿಗಳನ್ನು ಅರಿಯುವುದು ಅತಿ ಮಹತ್ವದ್ದಾಗಿದೆ.

ಈ ಬೆಳವಣಿಗೆ ಮುಂದೆ ಹಲವು ಕೆಲಸಗಳನ್ನು ಕಿತ್ತುಕೊಳ್ಳಲಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಹೀಗೆ ಅಂದುಕೊಳ್ಳುವುದು ಬಹುಶಃ ಉತ್ಪ್ರೇಕ್ಷೆಯಾದೀತು. ಒಬ್ಬ ನಿರೂಪಕ ಅಥವಾ ನಿರೂಪಕಿ ತಾನು ಓದುವ ಸುದ್ದಿಯ ಹಿಂದೆ ಅನೇಕ ಅಂಶಗಳನ್ನು ಹೆಣೆದುಕೊಂಡಿರುತ್ತಾರೆ. ಪದಗಳ ಹಿಂದಿನ ಅರ್ಥ, ಅವುಗಳ ಉಚ್ಚಾರಣೆ, ಅಲ್ಪಪ್ರಾಣ, ಮಹಾಪ್ರಾಣ, ಧ್ವನಿಯ ಏರಿಳಿತದಂತಹವು ಇದರಲ್ಲಿ ಸೇರಿರುತ್ತವೆ. ಈ ಎಲ್ಲದರಿಂದ ಕೂಡಿದ ಸುದ್ದಿಯನ್ನು ಪ್ರಸ್ತುತಪಡಿಸಿದಾಗಲೇ ನೋಡುಗರಲ್ಲಿಯೂ ಭಾವೋತ್ಪತ್ತಿ ಆಗುವುದು. ಇವೆಲ್ಲವನ್ನೂ ಬಿಟ್ಟು, ಕೊಟ್ಟ ಮಾಹಿತಿಯನ್ನಷ್ಟೇ ಸಂಗ್ರಹಿಸಿಕೊಂಡು, ಒಂದೇ ಸ್ವರದಲ್ಲಿ ಏಕತಾನತೆಯ ಶೈಲಿಯಲ್ಲಿ ಸುದ್ದಿಯನ್ನು ವ್ಯಾಖ್ಯಾನಿಸುವ ನಿರೂಪಕರಿಗೆ ಮನುಷ್ಯನ ಭಾವಲೋಕದಲ್ಲಿ ಆಪ್ತವಾದ ಸ್ಥಾನವಿಲ್ಲ. ಮೊಗ್ಗಾಗಿ ಅರಳಿದ ಹೂವಿಗೂ ಕೃತಕವಾಗಿ ತಯಾರಾದ ಹೂವಿಗೂ ತಾಜಾತನದಲ್ಲಿ ವ್ಯತ್ಯಾಸ ಇರುತ್ತದೆ. ಮೊದಲಿನಿಂದಲೂ ಅತಿಯಾದ ತಾಂತ್ರಿಕತೆ ಮನುಷ್ಯ ಸಂಬಂಧಗಳನ್ನು ಪಾತಾಳಕ್ಕೆ ಇಳಿಸಿದೆ. ಈ ಅಂಶವನ್ನು ತಲೆಯಲ್ಲಿ ಇಟ್ಟುಕೊಂಡು ಮುನ್ನಡೆಯುವುದು ಎಲ್ಲರಿಗೂ ಸೂಕ್ತ.

**ಆದಿತ್ಯ ಯಲಿಗಾರ,** ಧಾರವಾಡ

### ಏನು ನಿನ್ನ ಲೀಲೆ?!

ಆಗಾಗ ಕುಸಿದಾಗ ನಿನ್ನ ಬೆಲೆ
ಬೆಳೆಗಾರ ರಸ್ತೆಯಲಿ
ಚೆಲ್ಲಾಡಿದ್ದ...
ಮಾಡಿದ್ದ ನಿನ್ನ ಬೀದಿಪಾಲು...
ಓ ಟೊಮೆಟೊ, ಹೇಗಿದೆ
ನೋಡು
ಈಗಿನ ನಿನ್ನ ಜಮಾನ,
ಹಾಕಿಹನು ಬೆಳೆಗಾರ ನಿನಗೆ
ಸಿ.ಸಿ. ಟಿ.ವಿ ಕ್ಯಾಮೆರಾ
ಕಣ್ಗಾವಲು!

**ಮ.ಗು.ಬಸವಣ್ಣ**
ನಂಜನಗೂಡು

### ಸೇವಾ ನಿಯಮ ಉಲ್ಲಂಘನೆಯಲ್ಲದೆ ಬೇರೇನು?

'ಐಎಎಸ್ ಅಧಿಕಾರಿಗಳು ಗಣ್ಯರನ್ನು ಸ್ವಾಗತಿಸಿದರೆ ತಪ್ಪೇನು?' ಎಂದು ಎಎಪಿ ಸಂವಹನ ವಿಭಾಗದ ಮುಖ್ಯಸ್ಥ ಬ್ರಿಜೇಶ್ ಕಾಳಪ್ಪ ಪ್ರಶ್ನಿಸಿದ್ದಾರೆ (ಪ್ರ.ವಾ., ಜುಲೈ 21). ಇದಕ್ಕೆ ಉತ್ತರವಾಗಿ ಕೆಲವು ಮರುಪ್ರಶ್ನೆಗಳಿವೆ: 2024ರಲ್ಲಿ ಲೋಕಸಭೆಗೆ ನಡೆಯುವ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸುವ ಸಲುವಾಗಿ ಒಕ್ಕೂಟ ಬಲಪಡಿಸಿಕೊಳ್ಳುವ ಉದ್ದೇಶದಿಂದ ಅಲ್ಲವೇ ವಿರೋಧಪಕ್ಷಗಳ ಗಣ್ಯರು ಬೆಂಗಳೂರಿನ ಸಭೆಗೆ ಬಂದಿದ್ದು? ಇದರಲ್ಲಿ ಏನೇನೂ ತಪ್ಪಿಲ್ಲ. ಆದರೆ ಇದು ಬರೀ ರಾಜಕೀಯ ಸಭೆ ಆಗಿತ್ತು ಅಲ್ಲವೇ? ಸರ್ಕಾರದ ಆಡಳಿತಕ್ಕೆ ಸಂಬಂಧಿಸಿದಂತೆ ಈ ಗಣ್ಯರು ಚರ್ಚಿಸುವ ವಿಷಯ ಸಭೆಯ ಮುಂದೆ ಇರಲಿಲ್ಲ ಅಲ್ಲವೇ? ರಾಜಕೀಯ ಪಕ್ಷಗಳು ಒಂದು ರಾಜ್ಯದಲ್ಲಿ ಸಭೆ ಸೇರಿ ರಾಜಕೀಯಕ್ಕೆ ಸಂಬಂಧಿಸಿದ ವಿಷಯವನ್ನು ಚರ್ಚಿಸುವ ಉದ್ದೇಶ ಹೊಂದಿದ್ದು ಸ್ಪಷ್ಟವಿರುವಾಗ, ಅಲ್ಲಿ ಆ ರಾಜ್ಯ ಸರ್ಕಾರದ ಅಧಿಕಾರಿಗಳ ಪಾತ್ರ ಏನಿತ್ತು?

ರಾಜ್ಯ ಸರ್ಕಾರದ ಪರವಾಗಿ ಅಧಿಕಾರಿಗಳು ಗಣ್ಯರನ್ನು ಸ್ವಾಗತಿಸಿದರೇ? ಹಾಗಿದ್ದರೆ, ಬಂದಿದ್ದ ಗಣ್ಯರು ಸರ್ಕಾರದ ಅತಿಥಿಗಳೇ? ಐಎಎಸ್ ಅಧಿಕಾರಿಗಳನ್ನು ಈ ಕೆಲಸಕ್ಕೆ ನಿಯೋಜಿಸಿದ್ದನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಸಮರ್ಥಿಸುತ್ತಾರೆಯೇ? ಹೀಗೆ ಅಧಿಕಾರಿಗಳನ್ನು ನಿಯೋಜಿಸಿದವರು ಯಾರು? ಅದಕ್ಕೆ ಆದೇಶ ನೀಡಿದವರು ಯಾರು? ಆದೇಶದ ಒಕ್ಕಣೆ ಏನು? ರಾಜಕೀಯ ಪಕ್ಷಗಳು ನಡೆಸುವ ಸಭೆಗಳಿಗೆ ಸರ್ಕಾರಿ ಅಧಿಕಾರಿಗಳನ್ನು ನೇಮಿಸಿದ್ದು ಎಷ್ಟು ತಪ್ಪೋ, ಸರ್ಕಾರಿ ಸೇವೆಯಲ್ಲಿರುವ ಅಧಿಕಾರಿಗಳು ಅಂಥ ಸಭೆಗಳಿಗೆ ಹೋಗಿದ್ದೂ ಅಷ್ಟೇ ತಪ್ಪು. ಏಕೆಂದರೆ ಸರ್ಕಾರಿ ಅಧಿಕಾರಿಗಳ ನಿಷ್ಠೆ, ಬದ್ಧತೆಯು ಯಾವುದೇ ರಾಜಕೀಯ ಪಕ್ಷಕ್ಕಲ್ಲ. ಕೇಂದ್ರ ನಾಗರಿಕ ಸೇವಾ ನಿಯಮಗಳಿಗೆ ವಿರುದ್ಧವಾಗಿ ರಾಜ್ಯ ಸರ್ಕಾರದ ಐಎಎಸ್ ಅಧಿಕಾರಿಗಳು ಮೈತ್ರಿಕೂಟದ ಸಭೆಯ ಸಂದರ್ಭದಲ್ಲಿ ಸ್ವಾಗತಕಾರರಾಗಿ ಹೋಗಿದ್ದು, ಸೇವಾ ನಿಯಮಗಳ ಉಲ್ಲಂಘನೆಯಲ್ಲ ಎಂದು ಕಾಳಪ್ಪ ಅವರು ಹೇಗೆ ಹೇಳುತ್ತಾರೆ?

**ಸಾಮಗ ದತ್ತಾತ್ರಿ,** ಬೆಂಗಳೂರು

### ಶಿಕ್ಷಕರನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ

'ಗುರುವಿಗೆ ಗುರ್ರ್ ಎನ್ನುವ ಮುನ್ನ' ಎಂಬ ಲೇಖನದಲ್ಲಿ (ಸಂಗತ, ಜುಲೈ 19) ಸಮಾಜದಲ್ಲಿ ಗುರುವಿನ ಸ್ಥಾನದ ಬಗ್ಗೆ ಅರ್ಥಪೂರ್ಣ ವಿವರಣೆ ಇದೆ. ನಾನು ಕೂಡ ಒಬ್ಬ ಶಿಕ್ಷಕರ ಮಗ. ಊರ ದಾರಿಯಲ್ಲಿ ಅದೆಷ್ಟೋ ಬಾರಿ ಶಿಕ್ಷಕರು ಎದುರಿಗೆ ಸಿಕ್ಕಾಗ ಅವರನ್ನು ಕಂಡೂ ಕಾಣದಂತೆ ಮರೆಯಾಗುವುದೇ ಇಂದಿನ ಪೀಳಿಗೆಯ ಹವ್ಯಾಸವಾಗಿ ಬಿಟ್ಟಿದೆ. ಹೌದು, ಏರುಪೇರಾಗಿರುವ ಒಬ್ಬ ವಿದ್ಯಾರ್ಥಿಯ ಜೀವನದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುವವರೇ ಗುರುಗಳು. ಆದ್ದರಿಂದ ಇಂದಿನ ಪುಟಾಣಿಗಳು ನಾಳೆಯ ನಾಯಕರಾಗಿ ಬೆಳೆಯಬೇಕೆಂದರೆ, ಶಿಕ್ಷಕರನ್ನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

**ಶಮಿ,** ಉಪ್ಪಿನಂಗಡಿ

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

# ಟೆನಿಸ್‌ನ ಹೊಸ ಸಾಮ್ರಾಟ!

● ಪ್ರವೀಣ ಕುಲಕರ್ಣಿ

**ಮಣ್ಣಿನ ಅಂಕಣವೇ** ಆಗಿರಲಿ, ಹಾರ್ಡ್ (ಕಾಂಕ್ರೀಟ್) ಅಂಕಣವೇ ಆಗಿರಲಿ ಅಥವಾ ಹುಲ್ಲಿನ ಅಂಕಣವೇ ಆಗಿರಲಿ, ಟೆನಿಸ್‌ನಲ್ಲಿ ಈಗ ನಾನೇ ರಾಜ ಎನ್ನುತ್ತಾರೆ ಸ್ಪೇನ್‌ನ ಯುವ ಆಟಗಾರ ಕಾರ್ಲೊಸ್ ಅಲ್ಕರಾಜ್! ಕಳೆದ ವರ್ಷ ಯುಎಸ್ ಓಪನ್ ಟ್ರೋಫಿಯನ್ನು ಮುತ್ತಿಕ್ಕುವ ಮೂಲಕ ಗ್ರ್ಯಾನ್ ಸ್ಲಾಮ್ ಗೆದ್ದ ಜಗತ್ತಿನ ಕಿರಿಯ ಆಟಗಾರರಲ್ಲಿ ಒಬ್ಬರೆನಿಸಿದ ಅಲ್ಕರಾಜ್, ಈ ಬಾರಿ ವಿಂಬಲ್ಡನ್ ಅಂಗಳದಲ್ಲೂ ನಗು ಬೀರಿದ್ದಾರೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ ನಂ. 1 ಪಟ್ಟಕ್ಕೆ ಏರಿದ ಅತ್ಯಂತ ಕಿರಿಯ ಆಟಗಾರ ಎಂಬ ಹಿರಿಮೆಗೂ ಪಾತ್ರವಾಗಿರುವ ಅವರು, ಹೊಸ ತಲೆಮಾರಿನ ಮಿನುಗುತಾರೆಯಾಗಿದ್ದಾರೆ. ವಿಂಬಲ್ಡನ್‌ನಲ್ಲಿ ದೈತ್ಯ ಪ್ರತಿಭೆ ಎನಿಸಿದ, ಅಜೇಯರಾಗಿ ಉಳಿದಿದ್ದ ನೊವಾಕ್ ಜೊಕೊವಿಚ್ ಅವರಿಗೇ ಸೋಲಿನ ರುಚಿ ತೋರಿಸುವ ಮೂಲಕ ತಾವೊಬ್ಬ ಹೊಸ ಸಾಮ್ರಾಟ ಎಂದು ಸಾರಿದ್ದಾರೆ. ಟೆನಿಸ್ ಜಗತ್ತಿನ 'ಬಿಗ್ ಥ್ರೀ' (ನೊವಾಕ್, ರೋಜರ್ ಫೆಡರರ್ ಮತ್ತು ರಾಫೆಲ್ ನಡಾಲ್) ಅವರ ಸ್ಥಾನವನ್ನು ತುಂಬುವವರು ಯಾರು ಎಂಬ ಪ್ರಶ್ನೆಗೂ ಉತ್ತರವಾಗಿ ನಿಂತಿದ್ದಾರೆ. ಹುಲ್ಲಿನ ಅಂಗಳದಲ್ಲಿ ನಡೆದ ಮೊನ್ನೆಯ ಫೈನಲ್ ಅಂತೂ ಅಲ್ಕರಾಜ್ ರಾಕೆಟ್‌ನಿಂದ ಬರೆದ ಒಂದು ದೃಶ್ಯಕಾವ್ಯವೇ ಆಗಿತ್ತು. ಅತ್ಯಂತ ಅನುಭವಿ ಹಾಗೂ ಬಲಾಢ್ಯ ಆಟಗಾರನ ಎದುರು ನಾಲ್ಕು ಗಂಟೆ, 42 ನಿಮಿಷಗಳ ಸಮರದಲ್ಲಿ ನರ್ವಸ್ ಆಗದೆ, ತಾಳ್ಮೆ ಕಳೆದುಕೊಳ್ಳದೆ ಗೆಲ್ಲುವ ಛಲದಿಂದ ಆಡಿದ ಈ ಆಟಗಾರನಲ್ಲಿರುವುದು ಎಂತಹ ಸವಾಲನ್ನೂ ಮೆಟ್ಟಿನಿಲ್ಲುವ ಆತ್ಮವಿಶ್ವಾಸ.

ಟೆನಿಸ್‌ನ ಸಾರ್ವಕಾಲಿಕ ಶ್ರೇಷ್ಠ ಆಟಗಾರರಲ್ಲಿ ಒಬ್ಬರಾದ ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಅವರು ಕ್ರೀಡೆಗೆ ವಿದಾಯ ಹೇಳಿದ ಹೊತ್ತಿನಲ್ಲೇ ಮೊದಲ ಗ್ರ್ಯಾನ್ ಸ್ಲಾಮ್ ಗೆದ್ದಿದ್ದ ಈ ಆಟಗಾರ, ಮುಂದೆ ಅದೆಷ್ಟು ದಾಖಲೆಗಳನ್ನು ಬರೆಯಲಿದ್ದಾರೋ? ಅಲ್ಕರಾಜ್ ನಂ. 1 ಪಟ್ಟಕ್ಕೆ ಏರಿದಾಗ ಅವರಿಗೆ 19 ವರ್ಷ. ಟೆನಿಸ್ ಚರಿತ್ರೆಯಲ್ಲಿ ಈ ಹಿಂದೆ ಯಾವೊಬ್ಬ ಆಟಗಾರನೂ ಹದಿಹರೆಯದಲ್ಲಿ ಈ ಎತ್ತರಕ್ಕೆ ಏರಿರಲಿಲ್ಲ.

ಅಲ್ಕರಾಜ್ ಅವರ ಪಾದಚಲನೆ, ಮಿಂಚಿನ ವೇಗ, ಪ್ರತಿದಾಳಿ ನಡೆಸುವ ಸಾಮರ್ಥ್ಯದ ಕುರಿತು ಟೆನಿಸ್ ಪಂಡಿತರು ಮಾಡುತ್ತಿರುವ ವಿಶ್ಲೇಷಣೆಗಳಿಗೆ ಕೊನೆ-ಮೊದಲಿಲ್ಲ. ಸಂಶಯವೇ ಇಲ್ಲ, ಅವರೊಬ್ಬ ಆಲ್‌ರೌಂಡ್ ಆಟಗಾರ. ಅವರ ಬಲಶಾಲಿ ಬೇಸ್‌ಲೈನ್ ಮುಂಗೈ ಹೊಡೆತಗಳನ್ನು, ಅಷ್ಟೇ ಸೊಗಸಾದ ಹಿಂಗೈ ರಿಟರ್ನ್‌ಗಳನ್ನು ನೋಡುವ ಮಜವೇ ಬೇರೆ. ಆರು ಅಡಿ, ಒಂದು ಇಂಚು ಎತ್ತರದ ಅಲ್ಕರಾಜ್, ಒಬ್ಬ ಪರಿಪೂರ್ಣ ಅಥ್ಲೀಟ್. ಈ ಟೆನಿಸ್ ಆಟಗಾರನೊಳಗೆ ಒಬ್ಬ ರನ್ನರ್, ಜಿಮ್ನಾಸ್ಟಿಕ್ ಪಟು ಕೂಡ ಇರುವುದು ಸುಳ್ಳಲ್ಲ.

ಬ್ಯೋನ್ ಬೋರ್ಗ್, ಮ್ಯಾಟ್ಸ್ ವಿಲಾಂಡರ್, ಬೋರಿಸ್ ಬೆಕರ್, ಪೀಟ್ ಸಾಂಪ್ರಸ್ ಹಾಗೂ ಸ್ಪೇನ್‌ನವರೇ ಆದ ರಫೆಲ್ ನಡಾಲ್ ಎಲ್ಲರೂ 19ರ ಹರೆಯದಲ್ಲೇ ಮೊದಲ ಗ್ರ್ಯಾನ್ ಸ್ಲಾಮ್ ಗೆದ್ದವರು.

ಆದರೆ, ಯಾರೊಬ್ಬರೂ ಆ ಕಿರಿಯ ವಯಸ್ಸಿನಲ್ಲಿ ವಿಶ್ವದ ನಂ. 1 ಆಟಗಾರನ ಪಟ್ಟಕ್ಕೆ ಏರಿರಲಿಲ್ಲ. ಆ ದೃಷ್ಟಿಯಲ್ಲಿ ಅಲ್ಕರಾಜ್ ಅವರು ಎತ್ತಿ ಹಿಡಿದ ರಾಕೆಟ್ ತುಸು ಎತ್ತರದಲ್ಲೇ ಇದೆ. ಮಧ್ಯಮ ವರ್ಗದ ಕುಟುಂಬದಲ್ಲಿ ಬೆಳೆದ ಈ ಆಟಗಾರನಿಗೆ ಬಡತನದ ಕಷ್ಟವೂ ಗೊತ್ತು. ಯಶಸ್ಸಿನ ಹೆದ್ದಾರಿಯಲ್ಲಿ ಹೊರಟಿರುವ ಅಲ್ಕರಾಜ್, ತಾವು ಸವೆಸಿದ ಕಾಲುದಾರಿಯನ್ನು ಮರೆತಿಲ್ಲ. ದೈಹಿಕ ಸಾಮರ್ಥ್ಯದಷ್ಟೇ ಅವರ ಮಾನಸಿಕ ಶಕ್ತಿಯೂ ದೊಡ್ಡದು.

'ನಾನೇನು ವಿಶೇಷ ಆಟಗಾರನಲ್ಲ. ಆದರೆ, ವಿಶೇಷ ಸಾಧನೆಗೆ ಕಠಿಣ ಶ್ರಮ ಹಾಕುವ ಆಟಗಾರ' ಎಂದೆನ್ನುವ ಅಲ್ಕರಾಜ್ ಫಿಲಾಸಫಿಯಲ್ಲಿ ಎಲ್ಲರಿಗೂ ಪಾಠವಿದೆ.

# ಟೆನಿಸ್ ಅಂಗಣದ ಮಿನುಗು ತಾರೆಯರು

ಈ ಬಾರಿಯ ವಿಂಬಲ್ಡನ್ ಬಹಳ ವಿಶಿಷ್ಟವಾದುದಾಗಿತ್ತು. ಮಾರ್ಕೆತಾ ವೊಂಡ್ರೊಸೋವಾ ಮತ್ತು ಕಾರ್ಲಸ್ ಅಲ್ಕರಾಜ್ ಹೊಸ ತಾರೆಯರಾಗಿ ಹೊಳೆದರು. ಟ್ಯುನೇಷಿಯಾದ ಒನ್ಸ್ ಜಬೇರ್ ಅವರು ಸೋತರೂ ಟೆನಿಸ್ ಪ್ರಿಯರ ಮನಗೆದ್ದರು. ಜೊಕೊವಿಚ್ ಎಂಬ ವಿಸ್ಮಯ ಸೋತರೂ ಮನದಿಂದ ಮರೆಯಾಗುವುದಿಲ್ಲ ಎಂಬುದಕ್ಕೂ ಈ ಬಾರಿಯ ಟೂರ್ನಿ ಸಾಕ್ಷಿಯಾಯಿತು

## ಮಾರ್ಕೆತ ಅಸಾಧಾರಣ ಜಿಗಿತ

● ರಘುನಾಥ ಚ.ಹ.

**ಮಾರ್ಕೆತ ವೊಂಡ್ರೊಸೋವಾ.** ಜೆಕ್ ರಿಪಬ್ಲಿಕ್‌ನ 24ರ ತರುಣಿಯೀಗ ಟೆನಿಸ್ ಅಂಗಳದ ಹೊಸ ಸಂಚಲನ. ಎಡಗೈ ಆಟಗಾರ್ತಿಯ ಬಲಗೈ ಮೇಲೆ – 'ನೋ ರೈನ್, ನೋ ಫ್ಲವರ್ಸ್' ಎನ್ನುವ ಟ್ಯಾಟೂ. ಮಳೆಯಿಲ್ಲದಿದ್ದಲ್ಲಿ ಹೂಗಳೂ ಇಲ್ಲ ಎನ್ನುವ ಮಾತು, ಸ್ವತಃ ಆಕೆಯ ಸಾಧನೆಗೆ ಹೊಂದುವಂತಹದ್ದು. ವೊಂಡ್ರೊಸೋವಾಳ ಛಲ-ಶ್ರಮದ ಮಳೆಯೀಗ ವಿಂಬಲ್ಡನ್ ಪ್ರಶಸ್ತಿಯೆಂಬ ಹೂವನ್ನು ಅರಳಿಸಿದೆ.

'ಸೋಲುಗಳಿಲ್ಲದೆ ಗೆಲುವಿಲ್ಲ; ನಿಮ್ಮ ಪ್ರಯತ್ನದಲ್ಲಿ ಸೋತರೂ, ಸ್ವಸಾಮರ್ಥ್ಯದ ಬಗ್ಗೆ ನಂಬಿಕೆಯಿದ್ದರೆ ಪ್ರತಿಫಲ ನಿಶ್ಚಿತ' ಎನ್ನುವ ಅರ್ಥದ ಮಾತನ್ನು ಎರಡು ವರ್ಷಗಳ ಹಿಂದೆ ವೊಂಡ್ರೊಸೋವಾ ಆಡಿದ್ದರು. ಆ ಮಾತನ್ನೀಗ ಸಾಧಿಸಿ ತೋರಿಸಿದ್ದಾರೆ. ಟ್ಯುನೇಷಿಯಾದ ಒನ್ಸ್ ಜಬೇರ್ ಅವರನ್ನು 6-4, 6-4 ನೇರ ಸೆಟ್‌ಗಳಲ್ಲಿ ಮಣಿಸುವ ಮೂಲಕ, ವಿಂಬಲ್ಡನ್ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದ ಮೊದಲ ಶ್ರೇಯಾಂಕರಹಿತ ಆಟಗಾರ್ತಿ ಎನ್ನುವ ಅಗ್ಗಳಿಕೆ ಅವರದ್ದಾಗಿದೆ.

ವೊಂಡ್ರೊಸೋವಾ ಈ ಮೊದಲು ನಾಲ್ಕು ಸಲ ವಿಂಬಲ್ಡನ್ ಆಡಿದ್ದರೂ ಜಯಗಳಿಸಿದ್ದು ಒಂದು ಪಂದ್ಯದಲ್ಲಷ್ಟೇ. ಈ ವಿಂಬಲ್ಡನ್ ಋತುವಿನಲ್ಲಿ ಶ್ರೇಯಾಂಕ ಹೊಂದಿದ್ದ ನಾಲ್ವರು ಆಟಗಾರ್ತಿಯರನ್ನು ಮಣಿಸಿ ಚಾಂಪಿಯನ್ ಆದರು. 32 ಮೆಟ್ಟಿಲುಗಳ ಜಿಗಿತದೊಂದಿಗೆ 10ನೇ ಶ್ರೇಯಾಂಕ ಮುಟ್ಟಿದರು. 2019ರ ಫ್ರೆಂಚ್ ಓಪನ್ ಫೈನಲ್ಸ್‌ನಲ್ಲಿ ಆಡಿ ಸೋತು 14ನೇ ಶ್ರೇಯಾಂಕ ಗಿಟ್ಟಿಸಿದ್ದು ಹಾಗೂ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕಕ್ಕೆ ಮುತ್ತಿಕ್ಕಿದ್ದು ವೊಂಡ್ರೊಸೋವಾರ ಈ ಮೊದಲಿನ ಸಾಧನೆಗಳು.

ವೊಂಡ್ರೊಸೋವಾ ಅವರ ತಂದೆ ವಾಲಿಬಾಲ್ ಆಟಗಾರ. ತಾಯಿಯ ತಂದೆ-ಅಜ್ಜ- ಪೆಂಟಥ್ಲಾನ್‌ನಲ್ಲಿ ರಾಷ್ಟ್ರೀಯ ಚಾಂಪಿಯನ್, ಒಲಿಂಪಿಕ್‌ನಲ್ಲಿ ಬೆಳ್ಳಿ ಪದಕ ಪಡೆದ ಸಾಧಕ. ಟೆನಿಸ್ ಅಂಗಳದಲ್ಲಿ ಭವಿಷ್ಯ ಕಂಡುಕೊಳ್ಳಲು ನಿಶ್ಚಯಿಸುವ ಮುನ್ನ, ಫುಟ್‌ಬಾಲ್, ಟೇಬಲ್ ಟೆನಿಸ್ ಹಾಗೂ ಫ್ಲೋರ್‌ಬಾಲ್ ಆಟಗಳಲ್ಲೂ ವೊಂಡ್ರೊಸೋವಾ ಜಾಣೆ ಎನ್ನಿಸಿಕೊಂಡಿದ್ದರು.

ಮಗಳು ಮೂರು ವರ್ಷದವಳಿದ್ದಾಗಲೇ ವೊಂಡ್ರೊಸೋವಾ ಅಪ್ಪ-ಅಮ್ಮ ಬೇರಾದರೂ, ಮಗಳ ಭವಿಷ್ಯವನ್ನು ರೂಪಿಸುವಲ್ಲಿ ಹೆತ್ತವರ ಕಾಳಜಿಯಲ್ಲಿ ವ್ಯತ್ಯಾಸವಾಗಲಿಲ್ಲ. ಎಂಟರ ವಯಸ್ಸಿನಲ್ಲಿ ರಾಷ್ಟ್ರೀಯ ಟೂರ್ನಿಯಲ್ಲಿ ಮೊದಲ ಬಾರಿ ಆಡಿದಾಗ ವೊಂಡ್ರೊಸೋವಾ ಎಂಟರ ಹುಡುಗಿ. 12ರ ವಯಸ್ಸಿನಲ್ಲಿ ಅಮೆರಿಕದಲ್ಲಿ ನಡೆದ ಟೂರ್ನಿಯೊಂದನ್ನು ಗೆಲ್ಲುವ ಮೂಲಕ ಅಂತರ ರಾಷ್ಟ್ರೀಯ ಕಣದಲ್ಲೂ ಯಶಸ್ಸಿನ ರುಚಿ. ಜೂನಿಯರ್ ವಿಭಾಗದಲ್ಲಿ ಕೆಲಕಾಲ ವಿಶ್ವದ ಅಗ್ರಗಣ್ಯ ಆಟಗಾರ್ತಿ, ಡಬಲ್ಸ್‌ನಲ್ಲಿ ಎರಡು ಪ್ರಶಸ್ತಿ ಜಯಿಸಿದ ಸಾಧಕಿ.

ಗಾಯದಿಂದ ಆರು ತಿಂಗಳ ಕಾಲ ಅಂಗಳದಿಂದ ದೂರವಿದ್ದ ವೊಂಡ್ರೊಸೋವಾ, ಕಳೆದ ವಿಂಬಲ್ಡನ್ ನಲ್ಲಿ, ಮಣಿಕಟ್ಟಿಗೆ ಬ್ಯಾಂಡೇಜ್ ಧರಿಸಿಯೇ ಅಂಗಳಕ್ಕಿಳಿದು ನಿರಾಶೆ ಅನುಭವಿಸಿದ್ದರು. ಈ ಬಾರಿ ಪ್ರಶಸ್ತಿಯ ಕೊಯಿಲು. ಪ್ರಶಸ್ತಿ ಸ್ವೀಕರಿಸುವಾಗ ಈ ಡ್ರಾಪ್ ಶಾಟ್ ನಿಸ್ಸೀಮೆ ಉದ್ಗರಿಸಿದ್ದು: 'ಈಗೇನಾಗುತ್ತಿದೆ ಎನ್ನುವುದೇ ತಿಳಿಯುತ್ತಿಲ್ಲ'. ಆಟದ ಅಂಗಳ ಸೃಷ್ಟಿಸುವ ಅಚ್ಚರಿಗಳು ಒಂದೆರಡೇ. ಆದರೆ, ಅವರ ಪರಿಶ್ರಮದ ಹಾದಿಯನ್ನು ಗಮನಿಸಿದರೆ, ಆಕೆಯ ಸಾಧನೆ ಆಕಸ್ಮಿಕವೇನೂ ಅಲ್ಲ.

## ಸೋತು ಗೆದ್ದ ಒನ್ಸ್ ಜಬೇರ್

● ಪ್ರಮೋದ

**ಟೆನಿಸ್ ಲೋಕದ** ಪ್ರತಿಷ್ಠಿತ ಗ್ರ್ಯಾನ್‌ಸ್ಲಾಮ್ ಟೂರ್ನಿಗಳ ಮಹಿಳಾ ಸಿಂಗಲ್ಸ್‌ನಲ್ಲಿ ಹಿಂದೆ ಗೆದ್ದವರ ಪಟ್ಟಿಯನ್ನೊಮ್ಮೆ ನೋಡಿ. ಅದರಲ್ಲಿ ಮಾರ್ಗರೆಟ್ ಕೋರ್ಟ್, ಸೆರೆನಾ ವಿಲಿಯಮ್ಸ್, ಸ್ಟೆಫಿ ಗ್ರಾಫ್, ಮರಿಯಾ ಶರಪೋವಾ ಹೆಸರುಗಳು ಪದೇ ಪದೇ ರಾರಾಜಿಸುತ್ತಿದ್ದವು.

ಆದರೆ, ಇತ್ತೀಚೆಗಿನ ವರ್ಷಗಳಲ್ಲಿ ಗೆದ್ದವರ ಪಟ್ಟಿಯಲ್ಲಿ ಹೊಸಬರ ಹೆಸರು ಮಾತ್ರವಲ್ಲ, ರನ್ನರ್ ಅಪ್ ಆದವರಲ್ಲಿಯೂ ಹೊಸ ಪ್ರತಿಭೆಗಳು ಹೆಚ್ಚಾಗಿ ಕಾಣಿಸುತ್ತಿವೆ. ಇದರಲ್ಲಿ ಟ್ಯುನೀಷಿಯಾದ ಒನ್ಸ್ ಜಬೇರ್ ಹೆಸರು ಕೂಡ ಪ್ರಮುಖವಾದದ್ದು. 28 ವರ್ಷದ ಜಬೇರ್ 2019ರಲ್ಲಿ ಮೊದಲ ಬಾರಿಗೆ ವರ್ಷದ ನಾಲ್ಕೂ ಗ್ರ್ಯಾನ್ ಸ್ಲಾಮ್ ಟೂರ್ನಿಗಳಲ್ಲಿ ಆಡಿದ್ದರೂ ಗಮನ ಸೆಳೆಯಲಿಲ್ಲ.

ಜಬೇರ್ ಹಿಂದಿನ ಒಂದು ವರ್ಷದಲ್ಲಿ ಎರಡು ಬಾರಿ ವಿಂಬಲ್ಡನ್ ಮತ್ತು ಒಂದು ಸಲ ಯು.ಎಸ್. ಓಪನ್ ಟೂರ್ನಿಗಳಲ್ಲಿ ಫೈನಲ್ ತಲುಪಿದ್ದರು. ಇತ್ತೀಚೆಗೆ ವಿಂಬಲ್ಡನ್ ಟೂರ್ನಿಯಲ್ಲಿ ಜೆಕ್ ರಿಪಬ್ಲಿಕ್‌ನ ಶ್ರೇಯಾಂಕ ರಹಿತ ಆಟಗಾರ್ತಿ ಮಾರ್ಕೆತ ವೊಂಡ್ರೊಸೋವಾ ಎದುರು ರನ್ನರ್ ಅಪ್ ಸ್ಥಾನ ಪಡೆದರು. ಇದೇ ವರ್ಷ ಫ್ರೆಂಚ್ ಓಪನ್ ಮತ್ತು 2020ರಲ್ಲಿ ಆಸ್ಟ್ರೇಲಿಯಾ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದರು. ಈ ಎಲ್ಲಾ ಸಾಧನೆಗಳಿಂದಾಗಿ ಕಳೆದ ವರ್ಷದ ಜೂನ್‌ನಲ್ಲಿ ವಿಶ್ವ ಮಟ್ಟದ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನ ಗಳಿಸಿದ್ದರು.

**ಅಮ್ಮನ ಪ್ರೇರಣೆ:** ಮನರಂಜನೆ ಸಲುವಾಗಿ ಅಮ್ಮ ಆಡುತ್ತಿದ್ದ ಟೆನಿಸ್‌ನಿಂದಾಗಿ ಮಗಳಿಗೂ ಇದೇ ಕ್ರೀಡೆಯಲ್ಲಿ ಆಸಕ್ತಿ ಬಂದಿತು. ಮಗಳಿಗೆ ಮೂರನೇ ವರ್ಷದಿಂದ ಈ ಕ್ರೀಡೆಯ ಕುರಿತು ಅಮ್ಮ ಪಾಠ ಮಾಡಿದರು.

ಅರೇಬಿಕ್, ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡುವ ಜಬೇರ್ ತಮ್ಮ ಬಾಲ್ಯದ ದಿನಗಳಲ್ಲಿ ತಮ್ಮನ್ನು ತಾವೇ ರೋಜರ್ ಫೆಡರರ್ ಎನ್ನುವ ಉಪನಾಮದಿಂದ ಕರೆದುಕೊಳ್ಳುತ್ತಿದ್ದರು. ಅವರ ಆಟದಿಂದ ಪ್ರೇರಣೆ ಪಡೆದರು.

ಜಬೇರ್ ತಮ್ಮ 14ನೇ ವಯಸ್ಸಿನಲ್ಲಿ ಐಟಿಎಫ್ ಮಹಿಳಾ ಸರ್ಕಿಟ್ ಟೂರ್ನಿಯಲ್ಲಿ ಆಡಿದರು. 16ನೇ ವಯಸ್ಸಿನಲ್ಲಿ ಫ್ರೆಂಚ್ ಓಪನ್‌ನ ಎರಡು ಜೂನಿಯರ್ ಟೂರ್ನಿಗಳ ಸಿಂಗಲ್ಸ್‌ನಲ್ಲಿ ಫೈನಲ್ ತಲುಪಿ ಒಂದು ಬಾರಿ ಚಾಂಪಿಯನ್ ಆದರು. ಈ ಮೂಲಕ ಅವರು 1964ರ ಬಳಿಕ ಜೂನಿಯರ್ ವಿಭಾಗದ ಪ್ರಮುಖ ಟೂರ್ನಿಯಲ್ಲಿ ಗೆದ್ದ ಟ್ಯುನೀಷಿಯಾದ ಮೊದಲ ಆಟಗಾರ್ತಿ ಎನಿಸಿದರು. ಮೂರು ಬಾರಿ ಒಲಿಂಪಿಕ್ಸ್‌ನಲ್ಲಿ ದೇಶವನ್ನು ಪ್ರತಿನಿಧಿಸಿದ್ದಾರೆ.

ಆಟದ ಅನುಭವ ಹಾಗೂ ಕೌಶಲ ಪಕ್ವಗೊಂಡಂತೆಲ್ಲ ಡಬ್ಲ್ಯುಟಿಎ ಪ್ರಶಸ್ತಿ, ಡಬ್ಲ್ಯುಟಿಎ 1000 ಹಂತದ ಗರಿ, ಗ್ರ್ಯಾನ್ ಸ್ಲಾಮ್ ಟೂರ್ನಿಗಳಲ್ಲಿ ಫೈನಲ್ ಪ್ರವೇಶಿಸಿದ ಅರಬ್ ರಾಷ್ಟ್ರದ ಮೊದಲ ಆಟಗಾರ್ತಿ ಎನ್ನುವ ಗರಿಮೆಗೆ ಪಾತ್ರರಾದರು. 2019ರಲ್ಲಿ 'ವರ್ಷದ ಅರಬ್ ಮಹಿಳೆ' ಗೌರವ ಲಭಿಸಿತು.

ಇವುಗಳ ಪಟ್ಟಿಗೆ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ ಮೊದಲ ಅರಬ್ ಹಾಗೂ ಆಫ್ರಿಕಾ ಖಂಡದ ಮೊದಲ ಆಟಗಾರ್ತಿ ಎನಿಸುವ ಹಿರಿಮೆ ಮೂರನೇ ಬಾರಿಗೆ ಕೈ ತಪ್ಪಿದೆ. ಪ್ರತಿಷ್ಠಿತ ಟೂರ್ನಿಗಳಲ್ಲಿ ಸೋತಿದ್ದರೂ ಫೈನಲ್ ತಲುಪಿದ ಸಾಧನೆ ಅವರ ದೇಶದ ಜನರಲ್ಲಿ ಹೆಮ್ಮೆಯ ಭಾವ ಮೂಡಿಸಿದೆ. ಟ್ಯುನೀಷಿಯಾದ ಹಲವು ಮೊದಲುಗಳ ಒಡತಿಯಾದ ಜಬೇರ್‌ಗೆ ಆ ದೇಶದ 'ಟೆನಿಸ್ ರಾಣಿ' ಎನ್ನುವ ಗರಿಮೆಯಂತೂ ಇದ್ದೇ ಇದೆ.

## ಸೋಲುವ ಮುನ್ನ ಟೆನಿಸ್ ಜಗತ್ತು ಗೆದ್ದವ!

● ಕೆ.ಓಂಕಾರ ಮೂರ್ತಿ

**ಟೆನಿಸ್ ಜಗತ್ತಿನಲ್ಲಿ** ಒಬ್ಬ ಆಟಗಾರನಿಗೆ 36 ವರ್ಷವೆಂದರೆ 'ವಯಸ್ಸಾಯಿತು ಬೇರೆ ದಾರಿ ಕಂಡುಕೊಳ್ಳಬೇಕು' ಎಂಬ ಅರ್ಥವಿದೆ. ಇತರ ಹಲವು ಕ್ರೀಡೆಗಳಲ್ಲಿಯೂ ಈ ಮಾತು ಚಾಲ್ತಿಯಲ್ಲಿದೆ. ಇಷ್ಟು ವಯಸ್ಸಾದರೂ ಕಣಕ್ಕಿಳಿದು ಗೆಲ್ಲುತ್ತಿದ್ದರೆ ಅದು ಅದ್ಭುತವೇ ಸರಿ. ಗ್ರ್ಯಾನ್‌ಸ್ಲಾಮ್ ಗೆಲ್ಲುವ ತಾಕತ್ತು ಉಳಿಸಿಕೊಂಡಿದ್ದರೆ ಅದೊಂದು ವಿಸ್ಮಯ!

ಆ ವಿಸ್ಮಯವೇ ಸರ್ಬಿಯಾದ ನೊವಾಕ್ ಜೊಕೊವಿಚ್. ಇವರು ಮೊನ್ನೆ ವಿಂಬಲ್ಡನ್ ಫೈನಲ್‌ನಲ್ಲಿ ವಿರೋಚಿತ ಸೋಲು ಕಂಡಿರಬಹುದು. ಆ ಸೋಲಿಗೂ ಮುನ್ನ ಸತತವಾಗಿ 34 ಪಂದ್ಯ ಗೆದ್ದ ಆಟಗಾರ ಎಂದರೆ ಊಹಿಸಿಕೊಳ್ಳಿ. 2018ರಿಂದ 2022ರವರೆಗೆ ಇವರೇ ವಿಂಬಲ್ಡನ್ ಚಾಂಪಿಯನ್.

ಈಗ ಇಡೀ ಟೆನಿಸ್ ಲೋಕ 20ರ ಹರೆಯದ ಆಟಗಾರ, ನೂತನ ವಿಂಬಲ್ಡನ್ ಚಾಂಪಿಯನ್ ಸ್ಪೇನ್‌ನ ಕಾರ್ಲೊಸ್ ಅಲ್ಕರಾಜ್ ಹಿಂದೆ ಬಿದ್ದಿದೆ. ಆದರೆ, 23 ಗ್ರ್ಯಾಂಡ್‌ಸ್ಲಾಮ್ ಗೆದ್ದು ವಿಶ್ವ ದಾಖಲೆ ಬರೆದಿರುವ ನೊವಾಕ್ ಸಾಧನೆ ಮರೆಯುವಂತಿಲ್ಲ.

ಎಟಿಪಿ ಟೆನಿಸ್ ರ‍್ಯಾಂಕಿಂಗ್‌ನಲ್ಲಿ 378 ವಾರ ಕಾಲ ಅಗ್ರಸ್ಥಾನ ಕಾಪಿಟ್ಟುಕೊಂಡ ಏಕೈಕ ಟೆನ್ನಿಸಿಗ. ಬಹುಮಾನ ಮೊತ್ತದಿಂದಲೇ ₹1,390 ಕೋಟಿ ಸಂಪಾದಿಸಿರುವ ಚಾಂಪಿಯನ್.

ಟೆನಿಸ್ ದಿಗ್ಗಜರಾದ ಜಾನ್ ಮೆಕೆನ್ರೊ, ರಾಡ್ ಲೇವರ್, ಬ್ಯೋನ್ ಬೋರ್ಗ್, ಇವಾನ್ ಲೆಂಡ್ಲ್, ಬೋರಿಸ್ ಬೇಕರ್, ಪೀಟ್ ಸಾಂಪ್ರಾಸ್, ಆ್ಯಂಡ್ರೆ ಅಗಾಸ್ಸಿ, ರೋಜರ್ ಫೆಡರರ್, ರಫೆಲ್ ನಡಾಲ್ ಅಂಥವರ ಸಾಲಿನಲ್ಲಿ ನಿಲ್ಲುವ ಗಟ್ಟಿಗ. ಅಂಕಿಅಂಶಗಳ ಪ್ರಕಾರ ಟೆನಿಸ್ ಲೋಕದ ಸರ್ವಶ್ರೇಷ್ಠ ಆಟಗಾರ.

ಈಗ ಇವರಿಗೆ ವಯಸ್ಸು 36; ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ 35 ಬಾರಿ ಫೈನಲ್ ತಲುಪಿ 23ರಲ್ಲಿ ಚಾಂಪಿಯನ್ ಆಗಿದ್ದಾರೆ. ಈ ಹಾದಿಯಲ್ಲಿ ಹತ್ತಾರು ದಾಖಲೆ. 10 ಆಸ್ಟ್ರೇಲಿಯ ಓಪನ್, 7 ವಿಂಬಲ್ಡನ್, 3 ಫ್ರೆಂಚ್ ಓಪನ್, 3 ಅಮೆರಿಕ ಓಪನ್ ಟ್ರೋಫಿ ಇವರ ಜೋಳಿಗೆಯಲ್ಲಿವೆ.

ಸರ್ಬಿಯಾದ ಈ ಆಟಗಾರ ಹದಿನಾರನೇ ವಯಸ್ಸಿನಲ್ಲೇ ವೃತ್ತಿಪರ ಟೆನಿಸ್ ಆಡಲಾರಂಭಿಸಿದರು. 2005ರಲ್ಲಿ ಆಸ್ಟ್ರೇಲಿಯ ಓಪನ್ ಮೂಲಕ ಗ್ರ್ಯಾನ್‌ಸ್ಲಾಮ್ ಟೂರ್ನಿಗೆ ಪ್ರವೇಶ ಗಿಟ್ಟಿಸಿದರು. ಆಗಿನ್ನೂ ಅವರಿಗೆ 18 ವರ್ಷ. 2008ರಲ್ಲಿ ಮೊದಲ ಗ್ರ್ಯಾನ್‌ಸ್ಲಾಮ್ ಗೆದ್ದರು. ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆಲ್ಲಲು ಸಾಧ್ಯವಾಗಿಲ್ಲ ಎಂಬ ಕೊರಗು ಅವರಿಗಿದೆ. ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕವಷ್ಟೇ ಲಭಿಸಿದೆ.

ಮೊನ್ನೆಯ ಸೋಲು ನೊವಾಕ್ ಅವರನ್ನು ಹೆಚ್ಚಾಗಿ ಬಾಧಿಸಿದೆ. ಫೈನಲ್ ಬಳಿಕ ಅವರಿಗೆ ಸಂದರ್ಶಕಿ, 'ನಿಮ್ಮ ಕುಟುಂಬ ಗ್ಯಾಲರಿಯಲ್ಲಿ ಕುಳಿತು ಈ ಪಂದ್ಯ ವೀಕ್ಷಿಸಿದೆ. ಈ ಬಗ್ಗೆ ಹೇಳಿ' ಎಂದು ಕೇಳಿದ್ದಾರೆ. ಆಗ ನೊವಾಕ್, ಚಪ್ಪಾಳೆ ತಟ್ಟುತ್ತಿದ್ದ ಮಗನ ಮುಖ ನೋಡಿ ಭಾವುಕರಾಗಿ ಅಂಗಳದಲ್ಲೇ ಕಣ್ಣೀರಿಟ್ಟರು. ಬಾಲ್ಯದ ಗೆಳತಿ, ತಮ್ಮ ಅಭಿಮಾನಿ ಜೆಲೆನಾಳನ್ನು ಮದುವೆಯಾಗಿರುವ ಅವರಿಗೆ ಇಬ್ಬರು ಮಕ್ಕಳಿದ್ದಾರೆ.

'ಸೋಲನ್ನು ಅರಗಿಸಿಕೊಳ್ಳಲು ನನಗೆ ಕಷ್ಟ. ಆದರೆ, ಅಲ್ಕರಾಜ್ ಆಟ ಅದ್ಭುತ. ಆತನ ಆಟಕ್ಕೆ ತಲೆಬಾಗಲೇಬೇಕು' ಎಂಬ ಅದ್ಭುತ ಮಾತಿನಿಂದ ಮತ್ತೆ ಚಾಂಪಿಯನ್ ಆಗಿದ್ದಾರೆ.

ಅದೇನೇ ಇರಲಿ, 2003ರಿಂದ ಟೆನಿಸ್ ಜಗತ್ತು ಫೆಡರರ್, ನಡಾಲ್, ಜೊಕೊವಿಚ್ ಬಿಟ್ಟು ಹೊರಬಂದಿರಲಿಲ್ಲ. ಈ ಅವಧಿಯಲ್ಲಿ ಈ ಮೂವರೇ 65 ಗ್ರ್ಯಾನ್‌ಸ್ಲಾಮ್ ಟ್ರೋಫಿ ಹಂಚಿಕೊಂಡಿದ್ದಾರೆ. ಆದರೆ, ಅಲ್ಕರಾಜ್ ಉದಯದ ಬಳಿಕ ಹೊಸ ಗಾಳಿ ಬೀಸಿದಂತಿದೆ. ಹಾಗಂತ ಜೊಕೊವಿಚ್ ಕಾಲ ಮುಗಿಯಿತೇ? ಮುಂದಿನ ತಿಂಗಳು ಅಮೆರಿಕ ಓಪನ್ ನಡೆಯಲಿದೆ. ಅಲ್ಲಿಗೆ ಜೊಕೊವಿಚ್ ಕೂಡ ಬರಲಿದ್ದಾರೆ!

---

ನಾವು ನೋಡಿದ ಸಿನಿಮಾ

# ವಿಭಿನ್ನವಾಗಿದೆ ಹಾಸ್ಟೆಲ್ ಹುಡುಗರ ಹಾವಳಿ

**ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ**

- **ಕಥೆ, ಚಿತ್ರಕಥೆ ಮತ್ತು ನಿರ್ದೇಶನ:** ನಿತಿನ್ ಕೃಷ್ಣಮೂರ್ತಿ
- **ನಿರ್ಮಾಪಕ:** ವರುಣ್ ಗೌಡ ಮತ್ತು ಗುಲ್ಮೋಹರ್ ಫಿಲ್ಮ್ಸ್
- **ತಾರಾಗಣ:** ಪ್ರಜ್ವಲ್, ಮಂಜುನಾಥ್ ನಾಯಕ್, ನಿತಿನ್ ಕೃಷ್ಣಮೂರ್ತಿ, ಶ್ರೀವತ್ಸ ಶ್ಯಾಮ್, ಚೇತನ್ ದುರ್ಗ, ರಾಕೇಶ್ ರಾಜ್‌ಕುಮಾರ್, ರಿಷಬ್ ಶೆಟ್ಟಿ, ಪವನ್ ಕುಮಾರ್, ಶೈನ್ ಶೆಟ್ಟಿ, ದಿಗಂತ್ ಮತ್ತಿತರರು

**ಮೊದಲ ಮಳೆಗೆ** ಮಣ್ಣಿನ ಘಮ ಎದ್ದಂತೆ, ಹೊಸಬರ ಹೊಸತನ ಹೊಸ ಬಗೆಯ ಸಿನಿಮಾದ ಘಮ ನೀಡಿದೆ. ಪವರ್‌ಫುಲ್ ಹೀರೊ ಎಂಟ್ರಿ, ಡಂ ಡಂ ಎನ್ನುವ ಬಿಜಿಎಂ, ಫೈಟ್ ಎಂಬ ಸಿದ್ಧಸೂತ್ರ ಬಿಟ್ಟು ಹುಡುಗರು ಹಾರಿಬಿಟ್ಟಿರುವ ಹೊಸ 'ಬಾವುಟ' ಆಕಾಶದೆತ್ತರಕ್ಕೆ ಏರುವ ಮುನ್ಸೂಚನೆ ಇದೆ. ಹಾಸ್ಟೆಲ್ ಎನ್ನುವ ವಿಷಯವನ್ನಿಟ್ಟುಕೊಂಡು ಹೆಣೆದ 'ಚಿಚೋರೆ', 'ತ್ರಿ ಈಡಿಯಟ್ಸ್', 'ಕಿರಿಕ್ ಪಾರ್ಟಿ'ಯಂತಹ ಸಿನಿಮಾಗಳಿಗಿಂತ ಭಿನ್ನವಾಗಿ ಈ ಸಿನಿಮಾ ತೆರೆಮೇಲೆ ಬಂದಿದೆ.

ಹಾಸ್ಟೆಲ್ ಎಂಬುವುದು ಹಲವು ನೆನಪುಗಳ ತಾಣ. ಅದರಲ್ಲೂ ಹುಡುಗರ ಹಾಸ್ಟೆಲ್ ಎಂದರೆ ಅಲ್ಲಿ ತರಲೆ, ಗಲಾಟೆ, ತುಂಟಾಟಗಳು ಅಧಿಕ. ಅದಕ್ಕಾಗೇ ಅಲ್ಲೊಬ್ಬ ಕಟ್ಟುನಿಟ್ಟಿನ ವಾರ್ಡನ್ ಇದ್ದೇ ಇರುತ್ತಾರೆ. ಈ ಸಿನಿಮಾದಲ್ಲೂ ಅಷ್ಟೇ. ತರ್ಲೆ ಮಾಡೋ ಹುಡುಗರಿದ್ದಾರೆ. ಅವರಿಗೊಬ್ಬ 'ಕರಡಿ' ಅಲಿಯಾಸ್ ರಮೇಶ್ ಕುಮಾರ್ ಎಂಬ ಸ್ಟ್ರಿಕ್ಟ್ ವಾರ್ಡನ್ ಇದ್ದಾರೆ. ಇಲ್ಲಿರೋ ಹುಡುಗರಲ್ಲೊಬ್ಬ 'ಅಜಿತ್'(ಪ್ರಜ್ವಲ್) ಸಿನಿಮಾ ಕನಸು ಹೊತ್ತವ. ಈತ ಹೆಣೆದಿರುವ ಸ್ಕ್ರೀನ್‌ಪ್ಲೇ ಇಡೀ ಸಿನಿಮಾದ ಜೀವಾಳ. ಕಿರುಚಿತ್ರ ಮಾಡಲು ಹೊರಟ ಅಜಿತ್ ಸೃಷ್ಟಿಸುವ ಸನ್ನಿವೇಶಗಳೇ ಮನರಂಜನೆಯ ಈ ಪಯಣಕ್ಕೆ ಮುನ್ನುಡಿ. ಈತನ ಪಾತ್ರವನ್ನು ಸೃಷ್ಟಿಸಿ ನಿರ್ದೇಶಕ ನಿತಿನ್ ಹೆಣೆದಿರುವ ಕಥೆ ನೋಡುಗನನ್ನು ಪೂರ್ತಿ ಸಿನಿಮಾ ಹಿಡಿದಿಟ್ಟುಕೊಳ್ಳುವಲ್ಲಿ ಯಶಸ್ವಿಯಾಗುತ್ತದೆ.



ನೋಡುಗನನ್ನು ನಗಿಸುವುದೇ ಚಿತ್ರದ ಉದ್ದೇಶ. ಇದರಲ್ಲಿ ನಿರ್ದೇಶಕರು ಸಂಪೂರ್ಣ ಯಶಸ್ವಿಯಾಗಿದ್ದಾರೆ. ಇಲ್ಲಿ ಸಾಲು ಸಾಲು ಪಾತ್ರಗಳು ಬಂದರೂ ಕಥೆ ದಾರಿ ತಪ್ಪುವುದಿಲ್ಲ. ಸಂಭಾಷಣೆಗಳು ಹಾಸ್ಯಭರಿತವಾಗಿವೆ. ಒನ್‌ಲೈನರ್‌ಗಳು ಸಾಕಷ್ಟಿದ್ದು, ಪಾತ್ರಗಳಿಗೆ ಇವುಗಳೇ ಜೀವತುಂಬಿವೆ. ವಾರ್ಡನ್ ಪಾತ್ರದಲ್ಲಿನ ಮಂಜುನಾಥ್ ನಾಯಕ್ ಅವರ ನಟನೆ ಶ್ಲಾಘನೀಯ. ಚೇತನ್ ದುರ್ಗ, ಶ್ರೀವತ್ಸ ಸೇರಿದಂತೆ ಎಲ್ಲರ ನಟನೆಗೆ ಹೆಚ್ಚು ಅಂಕ. 'ಫನ್ ರೈಡ್'ಗೆ ರಿಷಬ್, ಪವನ್, ಶೈನ್ ಶೆಟ್ಟಿ ಚುಟುಕು ಪಾತ್ರಗಳು ಮತ್ತಷ್ಟು ವೇಗ ನೀಡಿವೆ. ಇಡೀ ಚಿತ್ರದ ಕಥೆ ಒಂದೇ ರಾತ್ರಿಯಲ್ಲಿ ನಡೆಯುವುದರಿಂದ ಹಾಸ್ಟೆಲ್ ಒಳಗಡೆಯೇ ಹೆಚ್ಚಿನ ಚಿತ್ರೀಕರಣವಾಗಿದೆ. ಇದೂ ನೋಡುಗನನ್ನು ಸೆಳೆಯುವಂತೆ ಚಿತ್ರಿಸಿದ್ದಾರೆ ಅರವಿಂದ್ ಎಸ್. ಕಶ್ಯಪ್. ತೆರೆಹಿಂದೆ ಕೆಲಸ ಮಾಡುವ ಛಾಯಾ-ಚಿತ್ರಗ್ರಾಹಕ ಅರವಿಂದ್ ಇಲ್ಲಿ ಒಂದು ಪಾತ್ರವಾಗಿ(ನಿಕ್ಕಿ) ಕ್ಯಾಮೆರಾ ಹಿಡಿದು ಇಡೀ ತಂಡದ ಪ್ರತಿ ಹೆಜ್ಜೆಯಲ್ಲೂ ಜೊತೆಯಾಗಿದ್ದಾರೆ. ಒಂದೆರಡು ಬಾರಿ ಕ್ಯಾಮೆರಾ ಮುಂದೆಯೂ ಬಂದಿದ್ದಾರೆ. ಇದು ಚಿತ್ರದ ಪ್ಲಸ್ ಪಾಯಿಂಟ್ ಎನ್ನಬಹುದು.

ನಗುವಿನ ಜೊತೆಗೆ ಕಣ್ಣು ತೇವಗೊಳಿಸುವ ಸನ್ನಿವೇಶಗಳನ್ನು ನಿತಿನ್ ಸಿನಿಮಾದಲ್ಲಿ ಕೆತ್ತಿದ್ದಾರೆ. ಇದು ಕಥೆಗೂ ಪೂರಕವಾಗಿದೆ. ಅನಗತ್ಯವಾಗಿ ಗ್ಲ್ಯಾಮರ್ ತುರುಕುವ ಸಾಹಸಕ್ಕೆ ನಿತಿನ್ ಕೈಹಾಕಿಲ್ಲ. ಆದರೆ ಎಡಿಟಿಂಗ್ ರೂಂನಲ್ಲಿ ಕೂತಿರುವ ಬಂಟಿ ಗೌಡ್ರು(ದಿಗಂತ್) ಬಿಡಬೇಕಲ್ವೇ! ಸ್ಯಾಂಡಲ್‌ವುಡ್ ಕ್ವೀನ್ ರಮ್ಯಾ ಅವರ 'ಕ್ಯಾಮಿಯೊ' ಹಿಂದೆ ಬಂಟಿ ಗೌಡ್ರ ಕೈವಾಡವಿದೆ! ಇದನ್ನು ಸಿನಿಮಾದಲ್ಲೇ ನೋಡಿ. 'ಹಾಸ್ಟೆಲ್..'ಗೆ ಹುಡುಗರಷ್ಟೇ ಅಲ್ಲ, ಹುಡುಗಿಯರೂ ಪ್ರವೇಶಿಸಬಹುದು. ಸಿನಿಮಾದ ಎರಡನೇ ಭಾಗದಲ್ಲಿ ರಿಷಬ್, ಪವನ್, ಶೈನ್ ಮುಖ್ಯಪಾತ್ರದಲ್ಲಿ ಬಂದರೆ 'ಹಾಸ್ಟೆಲ್' ಮತ್ತಷ್ಟು ಕಳೆಗಟ್ಟಲಿದೆ.

**ಅಭಿಲಾಷ್ ಪಿ.ಎಸ್.**

---

ಸಿನಿ ಬಿಟ್ಸ್

## ಡೈನಾಮಿಕ್ ಪ್ರಿನ್ಸ್‌ಗೆ ಕಲ್ಯೆ ಆ್ಯಕ್ಷನ್ ಕಟ್

**ನೃತ್ಯ ನಿರ್ದೇಶಕ** ಕಲ್ಯೆ ಅವರು ನಟ ಪ್ರಜ್ವಲ್ ದೇವರಾಜ್ ಅವರಿಗೆ ಆ್ಯಕ್ಷನ್ ಕಟ್ ಹೇಳಲು ಸಜ್ಜಾಗುತ್ತಿದ್ದಾರೆ. ರಾಜಲಕ್ಷ್ಮೀ ಎಂಟರ್ಟೈನ್ಮೆಂಟ್ ಲಾಂಛನದಲ್ಲಿ ಪ್ರತಿಭಾ ಅವರು ನಿರ್ಮಾಣ ಮಾಡುತ್ತಿರುವ ಹಾಗೂ ಕಲ್ಯೆ ನಿರ್ದೇಶಿಸುತ್ತಿರುವ ನೂತನ ಚಿತ್ರದ ಚಿತ್ರೀಕರಣ ಅಕ್ಟೋಬರ್‌ನಲ್ಲಿ ಆರಂಭವಾಗಲಿದೆ.

ಸಾಮಾಜಿಕ ಕಳಕಳಿಯ ಕಥಾಹಂದರದ ಈ ಚಿತ್ರದ ನಾಯಕನಾಗಿ ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್ ಅಭಿನಯಿಸುತ್ತಿದ್ದಾರೆ. ಕಲ್ಯೆ ಅವರ ನಿರ್ದೇಶನದ ಚೊಚ್ಚಲ ಚಿತ್ರವಿದು. ಕಳೆದ 23 ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಲ್ಯೆ, ಜನಪ್ರಿಯ ನಾಯಕರ 300ಕ್ಕೂ ಹೆಚ್ಚು ಹಾಡುಗಳಿಗೆ ನೃತ್ಯ ನಿರ್ದೇಶನ ಮಾಡಿದ್ದಾರೆ. ಚಿತ್ರೀಕರಣಕ್ಕೆ ಚಿತ್ರತಂಡ ಪೂರ್ವಸಿದ್ಧತೆ ಆರಂಭಿಸಿದ್ದು, 'ಹೆಚ್ಚಿನ ಭಾಗದ ಚಿತ್ರೀಕರಣ ಅದ್ದೂರಿ ಸೆಟ್‌ಗಳಲ್ಲೇ 80 ದಿನ ನಡೆಯಲಿದೆ. ಆರು ಸಾಹಸ ದೃಶ್ಯಗಳು ಹಾಗೂ ಆರು ಹಾಡುಗಳು ಈ ಚಿತ್ರದಲ್ಲಿದೆ' ಎಂದಿದ್ದಾರೆ ನಿರ್ದೇಶಕರು. ಶಂಕರ್ ಹಾಗೂ ಚಂದ್ರಮೌಳಿ(ಕೆ.ಜಿ.ಎಫ್ ಖ್ಯಾತಿ) ಈ ಚಿತ್ರಕ್ಕೆ ಸಂಭಾಷಣೆ ಬರೆಯುತ್ತಿದ್ದಾರೆ.

ಪ್ರಜ್ವಲ್ ದೇವರಾಜ್

---

## ಪದಬಂಧ 5387

– ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**

1.ನೇರವಲ್ಲದ ರಸ್ತೆಯಿದು (5)
4.ವಿಷ್ಣುವಿನ ದಶಾವತಾರಗಳಲ್ಲಿ ಐದನೆಯದು (3)
5.ರಾಯರಿಂದ ಬಂದಿರುವ ನಿರೂಪ (3)
6.ಭಾವ ಅಥವಾ ಮೈದುನನ ಹೆಂಡತಿ (3)
8.ನಶ್ವರವಾದದ್ದು,ಅಕ್ಷರದಲ್ಲಿದೆಯಲ್ಲಾ! (2)
9.ಹಸುಗೂಸಿನ ಹತ್ತಿರವಿರುವ ಆಕಳು (2)
11.ಹಾಡುವಿಕೆಯನ್ನು ಹೀಗೆನ್ನಿ (3)
14.ಹಾಸ್ಯ ಈ ವಿಧವಾಗಿ ಬಂದಿದೆ(3)
15.ಆಮೇಲೂ ಇಳಿಯದ ಮತ್ತು!(3)
16.ಬೆಂಗಳೂರಿನ ಭವ್ಯ ಸರ್ಕಾರಿ ಕಟ್ಟಡ (5)

**ಮೇಲಿಂದ ಕೆಳಕ್ಕೆ**

1.ಬಾಣಗಳನ್ನಿಡುವ ಕೋಶ (4)
2.ಅತ್ಯಂತ ಚಲುವಾದುದು (5)
3.ತಿರುಗಿ ಓಡಿಹೋಗುವಿಕೆ! (3)
4.ಒಳ್ಳೆಯ ಅಥವಾ ಕೆಟ್ಟ ನಾತ (3)
7.ಮೆಣಸು ಬಳ್ಳಿಯ ಹತ್ತಿರವಿರುವ ಕಂದಮೂಲ! (3)
8.ನಾಲ್ಕು ವರ್ಣಗಳಲ್ಲಿ ಇದೊಂದು(3)
9.ಕುದುರೆ ಮುಖವಿದು (5)
10.ಬಂಧದಲ್ಲಿ ಕೊನೆಗೊಂಡ ಸ್ನೇಹ (4)
12.ನಮ್ಮ ರಾಷ್ಟ್ರ ಪಕ್ಷಿ (3)
13.ಪದ ಹೇಳಿ ಪಡೆದಿರುವ ಡಿಗ್ರಿ (3)

| | | | | | | | | |
|---|---|---|---|---|---|---|---|---|
| 1 | | 2 | | 3 | ■ | 4 | | |
| | ■ | | ■ | 5 | | | ■ | ■ |
| | ■ | | ■ | | ■ | 6 | 7 | |
| | ■ | | ■ | ■ | ■ | ■ | | ■ |
| ■ | 8 | | ■ | ■ | ■ | 9 | | ■ |
| ■ | | ■ | ■ | ■ | ■ | | ■ | 10 |
| 11 | | 12 | ■ | 13 | ■ | | ■ | |
| ■ | ■ | 14 | | | ■ | | ■ | |
| 15 | | | ■ | 16 | | | | |

**5386ನೇ ಪದಬಂಧದ ಉತ್ತರ**

**ಎಡದಿಂದ ಬಲಕ್ಕೆ:**
1.ಕಳಸಿಗೆ
3.ಮೊಬಲಗು 5.ದಿವಸ
6.ಸುಭಾಷಿತ
8.ರುಧಿರ 10.ನಕುಲ
12.ತರತಮ 15.ವಕ್ತಾರ
16.ಪರಿಮಾಣ
17.ಗುಡಿಕಾರ

**ಮೇಲಿಂದ ಕೆಳಕ್ಕೆ:**
1.ಕಡಸು 2.ಗೆದಿತ
3.ಮೊಸರು 4.ಗುರಿ
7.ಭಾವಮೈದುನ
9.ರತ್ನಖಚಿತ 11.ಲವಣ
12.ತರಗು 13.ಮತ್ಸರ
14.ಕೂಪ

## ಸುಡೊಕು 5773

| | | | | | | | | |
|---|---|---|---|---|---|---|---|---|
| | 7 | 6 | | 4 | | | | 9 |
| 5 | | | 6 | | 9 | | | 2 |
| 2 | | | | 7 | | 3 | | |
| 7 | 8 | | | | | | 5 | |
| | | | 4 | 9 | | 6 | | 7 |
| 6 | | 5 | | 8 | | | 2 | |
| | | 7 | 2 | | | | 9 | 5 |
| | 5 | | | | 7 | | | |
| 9 | | | | 5 | | 2 | | 4 |

**5772 ಸುಡೊಕು**

| | | | | | | | | |
|---|---|---|---|---|---|---|---|---|
| 2 | 3 | 9 | 8 | 5 | 7 | 1 | 6 | 4 |
| 8 | 6 | 4 | 1 | 3 | 2 | 7 | 5 | 9 |
| 5 | 1 | 7 | 4 | 9 | 6 | 2 | 8 | 3 |
| 7 | 9 | 8 | 2 | 4 | 5 | 6 | 3 | 1 |
| 4 | 5 | 1 | 6 | 8 | 3 | 9 | 2 | 7 |
| 3 | 2 | 6 | 9 | 7 | 1 | 5 | 4 | 8 |
| 6 | 7 | 2 | 3 | 1 | 4 | 8 | 9 | 5 |
| 9 | 4 | 5 | 7 | 6 | 8 | 3 | 1 | 2 |
| 1 | 8 | 3 | 5 | 2 | 9 | 4 | 7 | 6 |

**ಆಡುವುದು ಹೇಗೆ?**

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜುಲೈ 22, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ:** ಅಧಿಕ ಶ್ರಾವಣ ಶುದ್ಧ ಚತುರ್ಥಿ ಗಂ. 09-27 ನಕ್ಷತ್ರ: ಪೂರ್ವಫಲ್ಗುನಿ ಗಂ. 16-59 ಯೋಗ: ವರಿಯಾನ್ ಗಂ. 13-24 ಕರಣ: ವಿಷ್ಟಿ ಗಂ. 09-27, ಕರ್ಕಾಟಕ ಮಾಸದ 05 ನೇ ದಿನ, ಮಳೆನಕ್ಷತ್ರ: ಪುಷ್ಯ 1. ರಾಹುಕಾಲ : ಬೆಳಿಗ್ಗೆ 09-00 - 10-30, ಸೂರ್ಯೋದಯ : 06-17 ಸೂರ್ಯಾಸ್ತ : 06-57 ಮುಸ್ಲಿಂ ದಿನಾಂಕ : 03 ಮೊಹರಮ್, ಅದೃಷ್ಟ ಸಂಖ್ಯೆ : 7, 1

**ಮೇಷ:** ಚರ್ಮಕ್ಕೆ ಸಂಬಂಧಿಸಿದ ಅಪರೂಪದ ಕಾಯಿಲೆ ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಗಾಬರಿಯಾಗದೆ ಸಮಸ್ಯೆಗೆ ಸಮಾಧಾನ ಹುಡುಕುವ ಕೆಲಸ ಮಾಡುವಿರಿ. ಮಕ್ಕಳ ಉನ್ನತಿ ಕಾಣುವಿರಿ.

**ವೃಷಭ:** ಉಳಿಸಿಕೊಂಡಿರುವ ಸರ್ಕಾರಿ ಕೆಲಸಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಿಕೊಳ್ಳುವ ಯೋಚನೆ ಮಾಡಿ. ಜವಳಿ ಮಾರಾಟಗಾರರು ಹೊಸ ದಾಸ್ತಾನು ತರಲು ಒಪ್ಪಂದ ಮಾಡಿಕೊಳ್ಳಬಹುದು.

**ಮಿಥುನ:** ವಾಹನ ಮಾರಾಟದ ಯೋಚನೆಯಲ್ಲಿರುವವರು ಆ ಯೋಚನೆಯನ್ನು ಸದ್ಯದ ಮಟ್ಟಿಗೆ ಕೈ ಬಿಡುವುದೇ ಸರಿಯಾದ ಮಾರ್ಗ. ರಾಜಕೀಯದಲ್ಲಿ ವಿಶೇಷ ಪ್ರಭಾವ ಗಳಿಸಿಕೊಳ್ಳುವಿರಿ. ಕಲಾವಿದರಿಗೆ ಸಂತಸದ ದಿನವಾಗುವುದು.

**ಕರ್ಕಾಟಕ:** ಹೊಸ ನಿರ್ಮಾಣ ಕಾರ್ಯದಂಥ ಯೋಜನೆಗಳು ನಿರಾತಂಕವಾಗಿ ಮುಂದುವರೆಯಲಿದೆ. ಮನೆಯಲ್ಲಿ ಸೌಹಾರ್ದಯುತವಾದ ವಾತಾವರಣ ಸೃಷ್ಟಿಯಾಗಲಿದೆ. ಉನ್ನತ ಅಧಿಕಾರಿಗಳ ಸಂಪರ್ಕ ಉಂಟಾಗುವುದು.

**ಸಿಂಹ:** ಪ್ರಯಾಣ ನೀವು ಅಂದುಕೊಂಡಂತೆ ಸುಗಮವಾಗಿರುವುದಿಲ್ಲ. ಆದ್ದರಿಂದ ರಾಹುಕಾಲದ ನಂತರದ ಸಮಯದಲ್ಲಿ ಸಂಚಾರ ಮಾಡಿ. ಪ್ರಾಧ್ಯಾಪಕರಿಗೆ ಮತ್ತು ತಾಂತ್ರಿಕ ವಿಷಯಗಳ ಸಲಹೆಗಾರರಿಗೆ ಇದು ಶುಭ ದಿನ.

**ಕನ್ಯಾ:** ನಿರುದ್ಯೋಗಿಗಳಿಗೆ ಸಾಧಾರಣ ಉದ್ಯೋಗ ದೊರಕಿದರೂ ಯಾವುದೇ ಕಾರಣಕ್ಕೂ ತಿರಸ್ಕರಿಸಬೇಡಿ. ವೈಯಕ್ತಿಕ ಮನೋಭಾವವನ್ನು ಬದಲಿಸಿಕೊಳ್ಳುವಂತೆ ಆಗಲಿದೆ. ಸರ್ಕಾರಿ ನೌಕರರಿಗೆ ಹೆಚ್ಚಿನ ಭತ್ಯೆ ದೊರೆಯಲಿದೆ.

**ತುಲಾ:** ವ್ಯವಹಾರದಲ್ಲಿ ಸಂಭವಿಸುವ ಲಾಭನಷ್ಟ ಸುಧಾರಿಸಿಕೊಂಡು ಹೋಗುವ ಮನಸ್ಸು ಬರಲಿದೆ. ವ್ಯವಸಾಯಗಾರರಿಗೆ ಹೆಚ್ಚಿನ ಬೆಳೆ ಕೈ ಸೇರುವ ನಿರೀಕ್ಷೆ ಇರುವುದು. ಲೇವಾದೇವಿ ವ್ಯವಹಾರಗಳು ಮುಂದುವರಿಯುವುದು.

**ವೃಶ್ಚಿಕ:** ಧಾರ್ಮಿಕ ಕಾರ್ಯದಲ್ಲಿ ಭಾಗವಹಿಸುವಿಕೆಯಿಂದ ಮಾನಸಿಕ ಶಾಂತಿ, ಜೀವನೋಲ್ಲಾಸ ಹೆಚ್ಚಾಗಲಿದೆ. ನಿಮ್ಮ ಕೆಲಸಗಳ ಬಗ್ಗೆ ಪುನಃಪುನಃ ಅವಲೋಕನ ಮಾಡುವಂತಹ ಪದ್ಧತಿಯನ್ನು ರೂಢಿಸಿಕೊಳ್ಳಿರಿ.

**ಧನು:** ಶ್ರೀ ವಿಷ್ಣುಸಹಸ್ರನಾಮದ ಪಠನೆಯು ಹೆಚ್ಚಿನ ಏಳಿಗೆ ಹಾಗೂ ನೆಮ್ಮದಿ ತರುವುದು. ಬಹುಜನರಲ್ಲಿ ಮಾಡಿದ ಸಾಲಗಳು ತೀರಿದ್ದರಿಂದ ಮನೆಯಲ್ಲಿ ನೆಮ್ಮದಿಯ ವಾತಾವರಣ ಸೃಷ್ಟಿಯಾಗಲಿದೆ. ವಿದೇಶ ಪ್ರವಾಸದ ಯೋಗವಿದೆ.

**ಮಕರ:** ಉಪಾಹಾರ ಮಂದಿರ, ಐಸ್‌ಕ್ರೀಮ್, ತಂಪುಪಾನೀಯದ ಅಂಗಡಿಯವರಿಗೆ ಈ ದಿನವು ಸುಗ್ಗಿ ಹಬ್ಬದಂತಾಗುವುದು. ಕಾರ್ಯರಂಗದಲ್ಲಿ ಅಪವಾದದ ಭೀತಿ ಕಳವಳ ಮೂಡಿಸಲಿದೆ. ಕುಟುಂಬದ ಸಂತೋಷ ವೃದ್ಧಿ.

**ಕುಂಭ:** ಇಂದು ರಾಜಕೀಯ ರಂಗದಲ್ಲಿ ಉತ್ತಮ ಅನುಕೂಲಗಳ ಸಂಭವವಿದೆ. ಓದಿನ ವಿಷಯದಲ್ಲಿ ಹೆಚ್ಚಿನ ಗಮನ ಕೊಡಿ. ಗುತ್ತಿಗೆ ವ್ಯವಹಾರಗಳಲ್ಲಿ ಎಡವಬಹುದು, ಜಾಗ್ರತರಾಗಿರಿ. ಸಂಬಂಧದಲ್ಲಿ ಬಾಂಧವ್ಯ ಹೆಚ್ಚುವುದು.

**ಮೀನ:** ಕೆಲಸವನ್ನು ಹುಡುಕುವ ಬದಲು ಉನ್ನತ ವಿದ್ಯಾಭ್ಯಾಸದ ಬಗ್ಗೆ ಒಲವು ತೋರಿಸುವುದು ಸೂಕ್ತವೆಂದು ಕಾಣುತ್ತದೆ. ಕುಟುಂಬ ಸಮೇತವಾಗಿ ಪ್ರವಾಸ ಮಾಡುವ ಸಾಧ್ಯತೆ ಇದೆ. ದೇವಾಲಯಗಳಿಗೆ ಭೇಟಿ ನೀಡುವ ಸಾಧ್ಯತೆ ಇದೆ.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

**ಏಲಕ್ಕಿ ಧಾರಣೆ**
**ಸಕಲೇಶಪುರ**

| | |
|---|---|
| ಕೂಳೆ | 500-550 |
| ನಡುಗೋಲು | 600-650 |
| ರಾಶಿ | 700-800 |
| ರಾಶಿ ಉತ್ತಮ | 900-950 |
| ಜರಡಿ | 1000-1050 |
| ಹೆರಕಿದ್ದು | 1300-1400 |
| ಹಸಿರು ಸಾಧಾರಣ | 1000-1100 |
| ಹಸಿರು ಉತ್ತಮ | 1250-1350 |
| ಹಸಿರು ಅತಿ ಉತ್ತಮ | 1600-1800 |
| **ಕಾಳುಮೆಣಸು -** | 505 |

**ಅಡಿಕೆ**
**ಕಾರ್ಕಳ**

| | |
|---|---|
| ಹಳೆಚಾಲಿ | 40000-49000 |
| ಹೊಸಚಾಲಿ | 30000-42500 |

**ಕುಂದಾಪುರ**

| | |
|---|---|
| ಹಳೆಚಾಲಿ | 43500-47000 |
| ಹೊಸಚಾಲಿ | 37000-41500 |

**ಕುಮಟಾ**

| | |
|---|---|
| ಚಿಪ್ಪು | 30509-34019 |
| ಕೋಕ | 22019-33899 |
| ಫ್ಯಾಕ್ಟರಿ | 14609-22789 |
| ಹಳೆಚಾಲಿ | 38899-41099 |
| ಹೊಸಚಾಲಿ | 37289-40509 |

**ಶಿವಮೊಗ್ಗ**

| | |
|---|---|
| ಬೆಟ್ಟೆ | 48499-53500 |
| ಗೊರಬಲು | 20109-43850 |
| ರಾಶಿ | 41100-55399 |
| ಸರಕು | 44400-79196 |

**ಸಿದ್ದಾಪುರ**

| | |
|---|---|
| ಬಿಳಿಗೋಟು | 31899-34659 |
| ಚಾಲಿ | 37809-40199 |
| ಕೋಕ | 30109-34319 |
| ರಾಶಿ | 48069-52469 |
| ತಟ್ಟಿಬೆಟ್ಟೆ | 41089-49599 |

**ಶಿರಸಿ**

| | |
|---|---|
| ಬೆಟ್ಟೆ | 41099-46099 |
| ಬಿಳಿಗೋಟು | 28709-36199 |
| ಚಾಲಿ | 34009-40901 |
| ಕೆಂಪುಗೋಟು | 25350-37299 |
| ರಾಶಿ | 44439-51898 |

**ಯಲ್ಲಾಪುರ**

| | |
|---|---|
| ಬಿಳಿಗೋಟು | 26899-36969 |
| ಚಾಲಿ | 37499-41069 |
| ಕೋಕ | 16099-35599 |
| ಕೆಂಪುಗೋಟು | 30119-37019 |
| ರಾಶಿ | 46100-54169 |
| ತಟ್ಟಿಬೆಟ್ಟೆ | 41800-48100 |

### ಕಾಫಿ (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | --- | 14000 | 13925 | 158.05ಸೆಂಟ್ಸ್ |
| ಎಸಿ | --- | 7000 | 7100 | |
| ಆರ್‌ಪಿ | --- | 10200 | 10200 | ಲಂಡನ್ |
| ಆರ್‌ಸಿ | --- | 238 | 5900 | 2536 ಡಾಲರ್ಸ್ |

## ಷೇರುಪೇಟೆ ವಹಿವಾಟು 887




## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 19,979 |
| ಇಂದಿನ ಅಂತ್ಯ | 19,745 |
| ▼ | 234 |
| ದಿನದ ಕನಿಷ್ಠ | 19,700 |

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

**ಬೆಂಗಳೂರು**

| | |
|---|---|
| 100 ಮೊಟ್ಟೆಗೆ | ₹485 |
| 12 ಮೊಟ್ಟೆಗೆ | ₹70 |

**ಮೈಸೂರು**

| | |
|---|---|
| 100 ಮೊಟ್ಟೆಗೆ | ₹487 |

## ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹279-471
ದ್ವಿತಳಿ (ಬಿ.ವಿ)
₹305-586

6 ದಿನಗಳ ಓಟಕ್ಕೆ ತಡೆ: ಒಂದೇ ದಿನ ₹2.44 ಲಕ್ಷ ಕೋಟಿ ಸಂಪತ್ತು ನಷ್ಟ

# ಐ.ಟಿ. ಕುಸಿತ; ಕರಡಿ ಕುಣಿತ

ಮುಂಬೈ (ಪಿಟಿಐ): ಐ.ಟಿ. ಕಂಪನಿಗಳ ಷೇರು ಮೌಲ್ಯ ಕುಸಿತ ಕಂಡಿದ್ದು ದೇಶದ ಷೇರುಪೇಟೆಗಳಲ್ಲಿ ಶುಕ್ರವಾರ ಕರಡಿ ಕುಣಿತಕ್ಕೆ ಕಾರಣವಾಯಿತು. ಇದರಿಂದಾಗಿ ಆರು ದಿನಗಳ ಗೂಳಿ ಓಟ ಕೊನೆಗೊಂಡಿತು.

ಇನ್ಫೊಸಿಸ್ ಕಂಪನಿಯು ಪೂರ್ತಿ ಹಣಕಾಸು ವರ್ಷಕ್ಕೆ ವರಮಾನ ಬೆಳವಣಿಗೆ ಮುನ್ನೋಟವನ್ನು ಭಾರಿ ಪ್ರಮಾಣದಲ್ಲಿ ಕಡಿತ ಮಾಡಿರುವುದು ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟಿಗೆ ಪ್ರಮುಖ ಕಾರಣ ಆಯಿತು. ಕಂಪನಿಯ ಷೇರು ಮೌಲ್ಯ ಶೇ 8ಕ್ಕೂ ಹೆಚ್ಚು ಇಳಿಕೆ ಕಂಡಿದ್ದು, ಸೂಚ್ಯಂಕಗಳನ್ನು ಇಳಿಕೆ ಹಾದಿಗೆ ದೂಡಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 887 ಅಂಶ ಕುಸಿತ ಕಂಡು 66,684 ಅಂಶಗಳಿಗೆ ತಲುಪಿತು. ನಾಲ್ಕು ತಿಂಗಳಿನಲ್ಲಿ ದಿನದ ವಹಿವಾಟೊಂದರಲ್ಲಿ ಸೂಚ್ಯಂಕ ಕಂಡಿರುವ ಗರಿಷ್ಠ ಇಳಿಕೆ ಇದಾಗಿದೆ. ವಹಿವಾಟಿನ ಒಂದು ಹಂತದಲ್ಲಿ ಸೆನ್ಸೆಕ್ಸ್ 1,038 ಅಂಶಗಳಷ್ಟು ಕುಸಿದಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 234 ಅಂಶ ಇಳಿಕೆ ಕಂಡು 19,745 ಅಂಶಗಳಿಗೆ ತಲುಪಿತು. ನಿಫ್ಟಿಯಲ್ಲಿ 36 ಷೇರುಗಳು ನಕಾರಾತ್ಮಕವಾಗಿ ವಹಿವಾಟು ಅಂತ್ಯಗೊಳಿಸಿದವು. ಇನ್ಫೊಸಿಸ್ ಕಂಪನಿಯು ವರಮಾನ ಗಳಿಕೆಯ ಮುನ್ನೋಟವನ್ನು ಭಾರಿ ಪ್ರಮಾಣದಲ್ಲಿ ಇಳಿಕೆ ಮಾಡಿರುವುದು ಭಾರತದ ಐ.ಟಿ. ವಲಯದ ಮುನ್ನೋಟದ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ. ಇದರಿಂದಾಗಿ ನಿಫ್ಟಿಯು 20 ಸಾವಿರದ ಗಡಿ ತಲುಪಲು ಸಾಧ್ಯವಾಗಲಿಲ್ಲ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಜಾಗತಿಕ ಮಟ್ಟದಲ್ಲಿ ಟೋಕಿಯೊ ಮತ್ತು ಶಾಂಘೈ ಮಾರುಕಟ್ಟೆಗಳು ಇಳಿಕೆ ಕಂಡರೆ, ಸೋಲ್ ಮತ್ತು ಹಾಂಗ್‌ಕಾಂಗ್ ಷೇರುಪೇಟೆಗಳ ವಹಿವಾಟು ಏರಿಕೆ ಕಂಡಿತು. ಯುರೋಪ್‌ನಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು.

ಬ್ರೆಂಟ್ ಕಚ್ಚಾ ತೈಲ ದರ ಶೇ 1.19ರಷ್ಟು ಹೆಚ್ಚಾಗಿ ಬ್ಯಾರಲ್‌ಗೆ 80.59 ಡಾಲರ್‌ಗೆ ತಲುಪಿತು.

ಬಿಎಸ್‌ಇ ಮಾರುಕಟ್ಟೆ ಮೌಲ್ಯ ಶುಕ್ರವಾರದ ವಹಿವಾಟಿನಲ್ಲಿ ₹304.53 ಲಕ್ಷ ಕೋಟಿಯಿಂದ ₹302.09 ಲಕ್ಷ ಕೋಟಿಗೆ ಇಳಿಕೆ ಕಂಡಿದೆ.




### ಇನ್ಫೊಸಿಸ್‌ಗೆ ₹49,159 ಕೋಟಿ ನಷ್ಟ

ನವದೆಹಲಿ: ಇನ್ಫೊಸಿಸ್ ಕಂಪನಿಯು ವರಮಾನ ಮುನ್ನೋಟ ತಗ್ಗಿಸಿದ್ದರಿಂದ ಷೇರುಮೌಲ್ಯವು ಬಿಎಸ್‌ಇನಲ್ಲಿ ಶುಕ್ರವಾರ ಶೇ 8.18ರಷ್ಟು ಇಳಿಕೆ ಕಂಡು ಪ್ರತಿ ಷೇರಿನ ಬೆಲೆ ₹1,330ಕ್ಕೆ ತಲುಪಿತು. ಎನ್‌ಎಸ್‌ಇನಲ್ಲಿ ಶೇ 7.73ರಷ್ಟು ಇಳಿಕೆ ಕಂಡು ₹1,337ಕ್ಕೆ ವಹಿವಾಟು ಅಂತ್ಯಗೊಂಡಿತು.

ಕಂಪನಿಯ ಮಾರುಕಟ್ಟೆ ಮೌಲ್ಯವು ₹49,159 ಕೋಟಿ ಕಡಿಮೆ ಆಗಿದ್ದು ₹5.52 ಲಕ್ಷ ಕೋಟಿಗೆ ತಲುಪಿತು.

ಹಿಂದುಸ್ತಾನ್ ಯೂನಿಲಿವರ್ ಷೇರು ಮೌಲ್ಯ ಶೇ 4ರಷ್ಟು ಇಳಿಕೆ ಕಂಡಿತು. ಇದರಿಂದಾಗಿ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯ ₹23,155 ಕೋಟಿ ಕಡಿಮೆ ಆಗಿದ್ದು, ಒಟ್ಟು ಮೌಲ್ಯವು ₹6.11 ಲಕ್ಷ ಕೋಟಿಗೆ ತಲುಪಿತು.

ಎಚ್‌ಸಿಎಲ್ ಟೆಕ್ನಾಲಜೀಸ್, ವಿಪ್ರೊ, ಟೆಕ್ ಮಹೀಂದ್ರ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಗಳ ಷೇರು ಮೌಲ್ಯವೂ ಇಳಿಕೆ ಕಂಡಿತು.

## ಕೊಬ್ಬರಿ ಧಾರಣೆ

| | ಕ್ವಿಂಟಲ್‌ಗೆ |
|---|---|
| ಅರಸೀಕೆರೆ | ₹7500-8766 |
| ಕೆ.ಆರ್‌.ಪೇಟೆ | ₹7727-7727 |
| ತುರುವೇಕೆರೆ | ₹8700-8700 |

## ಮುಂಬೈ ಧಾರಣೆ

**ಶೇಂಗಾ**
21-7-2023

| | |
|---|---|
| ಜಾವಾ 70/80(ಹೊಸ) | 12600-12700 |
| ಜಾವಾ 80/90(ಹೊಸ) | 12100-12200 |
| ದಪ್ಪ ಮಧ್ಯಪ್ರದೇಶ(ಹೊಸ) | 12100-12200 |
| ದಪ್ಪ ಗುಜರಾತ್(ಹೊಸ) | 12900-13000 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1850 (1825) |
| ಒಂದು ವಾರದ ಡೆಲಿವರಿ | 1845 (1820) |
| ಸೋಯಾ ಕಚ್ಚಾ | 920 (902) |
| ಪಾಮ್ ವಾರದ ಡೆಲಿವರಿ | 878 (873) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 900 (860) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
59,100 (59,700)
ಬೆಳ್ಳಿ ಕೆ.ಜಿ
74,600 (75,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

## ಎನ್.ಆರ್.ಪುರ ರಬ್ಬರ್

| | |
|---|---|
| ಆರ್‌ಎಸ್‌ಎಸ್-4 | ₹149 |
| ಆರ್‌ಎಸ್‌ಎಸ್-5 | ₹145 |
| ಗುಡ್ ಲಾಟ್ | ₹127 |

(ಪ್ರತಿ ಕೆ.ಜಿಗೆ)

## ಖಾದ್ಯ ತೈಲ ಮುಂಬೈ

| | (10 ಕೆಜಿಗೆ) |
|---|---|
| ಶೇಂಗಾ (ರಿಫೈನ್ಡ್) | 1840 (1815) |
| ಸೋಯಾ (ರಿಫೈನ್ಡ್) | ₹960 (952) |
| ಸೂರ್ಯಕಾಂತಿ (ರಿಫೈನ್ಡ್) | ₹965 (845) |
| ಪಾಮೋಲಿನ್ | ₹880 (875) |

## ಚಿನ್ನದ ದರ ₹350, ಬೆಳ್ಳಿ ₹750 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನದ ದರ 10 ಗ್ರಾಂಗೆ ₹350ರಷ್ಟು ಇಳಿಕೆ ಕಂಡು ₹60,450ರಂತೆ ಮಾರಾಟ ಆಯಿತು. ಬೆಳ್ಳಿ ಧಾರಣೆ ಕೆ.ಜಿಗೆ ₹750ರಷ್ಟು ಕಡಿಮೆ ಆಗಿ ₹77,200ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನ, ಬೆಳ್ಳಿ ದರ ಇಳಿಕೆ ಕಂಡಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಕಂಡುಬಂದಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಔನ್ಸ್‌ಗೆ 1,966 ಡಾಲರ್ ಮತ್ತು ಬೆಳ್ಳಿ ದರ ಒಂದು ಔನ್ಸ್‌ಗೆ (28.34 ಗ್ರಾಂ) 24.80 ಡಾಲರ್‌ನಂತೆ ಮಾರಾಟ ಆಯಿತು.

## ಸುದ್ದಿ 2 ನಿಮಿಷ

### ಗೋ ಫಸ್ಟ್ ಕಾರ್ಯಾಚರಣೆಗೆ ಷರತ್ತುಬದ್ಧ ಒಪ್ಪಿಗೆ: ಡಿಜಿಸಿಎ

ನವದೆಹಲಿ (ಪಿಟಿಐ): ಗೋ ಫಸ್ಟ್ ಕಂಪನಿಗೆ ಕೆಲವು ಷರತ್ತುಗಳೊಂದಿಗೆ ಮತ್ತೆ ಕಾರ್ಯಾಚರಣೆ ನಡೆಸಲು ಒಪ್ಪಿಗೆ ನೀಡಲಾಗಿದೆ ಎಂದು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ಶುಕ್ರವಾರ ತಿಳಿಸಿದೆ.

15 ವಿಮಾನಗಳೊಂದಿಗೆ ನಿತ್ಯವೂ 114 ಬಾರಿ ವಿಮಾನ ಹಾರಾಟ ನಡೆಸಲು ಕೆಲವು ಷರತ್ತುಗಳೊಂದಿಗೆ ಒಪ್ಪಿಗೆ ನೀಡಲಾಗಿದೆ ಎಂದು ಡಿಜಿಸಿಎ ಪ್ರಕಟಣೆ ತಿಳಿಸಿದೆ. ಮೇ 3ರಂದು ವಿಮಾನ ಸೇವೆ ನಿಲ್ಲಿಸಿರುವ ಕಂಪನಿಯು ದಿವಾಳಿ ಪ್ರಕ್ರಿಯೆಗೆ ಒಳಗಾಗಿದೆ.

ದೆಹಲಿ ಹೈಕೋರ್ಟ್ ಮತ್ತು ಎನ್‌ಸಿಎಲ್‌ಟಿನಲ್ಲಿ ಕಂಪನಿಗೆ ಸಂಬಂಧಿಸಿದ ಅರ್ಜಿಯ ವಿಚಾರಣೆ ಬಾಕಿ ಇದ್ದು, ಅಲ್ಲಿ ಹೊರಬೀಳುವ ತೀರ್ಪಿಗೆ ಈ ಒಪ್ಪಿಗೆಯು ಒಳಪಟ್ಟಿರಲಿದೆ ಎಂದು ಅದು ಹೇಳಿದೆ.

ಕಂಪನಿಯ ಬಳಿ ಇರುವ ಮಧ್ಯಂತರ ಬಂಡವಾಳದೊಂದಿಗೆ ಡಿಜಿಸಿಎ ಒಪ್ಪಿಗೆ ನೀಡುವ ವೇಳಾಪಟ್ಟಿಯಂತೆ ಕಾರ್ಯಚರಣೆ ಆರಂಭಿಸಬಹುದಾಗಿದೆ. ನಿಯಂತ್ರಣ ವ್ಯವಸ್ಥೆಗೆ ಸಂಬಂಧಿಸಿದ ಎಲ್ಲ ಕ್ರಮಗಳನ್ನು ಅನುಸರಿಸುವಂತೆ ಮತ್ತು ಕಾರ್ಯಾಚರಣೆ ನಡೆಸಲಿರುವ ವಿಮಾನಗಳು ಹಾರಾಟ ನಡೆಸಲು ಯೋಗ್ಯವಾಗಿವೆಯೇ ಎನ್ನುವುದನ್ನು ಪರಿಶೀಲಿಸಿಕೊಳ್ಳುವಂತೆಯೂ ಡಿಜಿಸಿಎ ನಿರ್ದೇಶನ ನೀಡಿದೆ.

### ವಿದೇಶಿ ವಿನಿಮಯ ಮೀಸಲು ಸಂಗ್ರಹ ₹1.04 ಲಕ್ಷ ಕೋಟಿ ಏರಿಕೆ

ಮುಂಬೈ (ಪಿಟಿಐ): ಭಾರತದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ಜುಲೈ 14ಕ್ಕೆ ಕೊನೆಗೊಂಡ ವಾರದಲ್ಲಿ ₹1.04 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದ್ದು, ಒಟ್ಟು ಮೀಸಲು ಸಂಗ್ರಹವು ₹49.93 ಲಕ್ಷ ಕೋಟಿಗೆ ತಲುಪಿದೆ. ಈಚಿನ ದಿನಗಳಲ್ಲಿ ವಾರದ ವಹಿವಾಟಿನೊಂದರಲ್ಲಿ ಆಗಿರುವ ಗರಿಷ್ಠ ಏರಿಕೆ ಇದಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಈ ಮಾಹಿತಿ ಬಿಡುಗಡೆ ಮಾಡಿದೆ. ಜುಲೈ 7ಕ್ಕೆ ಕೊನೆಗೊಂಡ ವಾರದಲ್ಲಿ ಮೀಸಲು ಸಂಗ್ರಹ ₹48.89 ಲಕ್ಷ ಕೋಟಿಯಷ್ಟು ಇತ್ತು.

ಮೀಸಲು ಸಂಗ್ರಹದಲ್ಲಿ ಅತಿ ಹೆಚ್ಚಿನ ಪಾಲು ಹೊಂದಿರುವ ವಿದೇಶಿ ಕರೆನ್ಸಿಗಳ ಸಂಗ್ರಹವು ಜುಲೈ 14ಕ್ಕೆ ಕೊನೆಗೊಂಡ ವಾರದಲ್ಲಿ ₹91,758 ಕೋಟಿ ಏರಿಕೆ ಕಂಡು ₹44.29 ಲಕ್ಷ ಕೋಟಿಗೆ ತಲುಪಿದೆ. ಇದರಿಂದಾಗಿ ಒಟ್ಟು ಮೀಸಲು ಸಂಗ್ರಹದಲ್ಲಿ ಏರಿಕೆ ಕಾಣುವಂತಾಯಿತು.

ಚಿನ್ನದ ಮೀಸಲು ಸಂಗ್ರಹವು ₹9,266 ಕೋಟಿ ಹೆಚ್ಚಾಗಿ ₹3.70 ಲಕ್ಷ ಕೋಟಿಗೆ ಏರಿಕೆ ಕಂಡಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿಯಲ್ಲಿನ (ಐಎಂಎಫ್) ಭಾರತದ ಮೀಸಲು ಸಂಘ್ರಹವು ₹1,295 ಕೋಟಿಯಷ್ಟು ಹೆಚ್ಚಾಗಿ ₹42,394 ಕೋಟಿಗೆ ತಲುಪಿದೆ ಎಂದು ಆರ್‌ಬಿಐ ತಿಳಿಸಿದೆ.

ತೈಲ ಸಂಸ್ಕರಣೆ, ಪೆಟ್ರೋಕೆಮಿಕಲ್ ವಹಿವಾಟು ಇಳಿಕೆ

# ಶೇ 11ರಷ್ಟು ತಗ್ಗಿದ ರಿಲಯನ್ಸ್ ಲಾಭ

ನವದೆಹಲಿ (ಪಿಟಿಐ): ದೇಶದ ಅತ್ಯಂತ ಮೌಲ್ಯಯುತ ಕಂಪನಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 11ರಷ್ಟು ಇಳಿಕೆ ಕಂಡು ₹16,011 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹17,955 ಕೋಟಿ ನಿವ್ವಳ ಲಾಭ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ಮಾರ್ಚ್ ತ್ರೈಮಾಸಿಕಕ್ಕೆ ಹೋಲಿಸಿದರೂ (₹19,299 ಕೋಟಿ) ಲಾಭದಲ್ಲಿ ಇಳಿಕೆ ಆಗಿದೆ.

ತೈಲ ಸಂಸ್ಕರಣೆ ಮತ್ತು ಪೆಟ್ರೋಕೆಮಿಕಲ್ ವಹಿವಾಟುಗಳು ಇಳಿಕೆ ಕಂಡಿರುವ ಜೊತೆಗೆ ಹಣಕಾಸು ಸೇವೆಗಳ ವೆಚ್ಚದಲ್ಲಿ ಏರಿಕೆ ಆಗಿರುವುದೇ ಲಾಭದಲ್ಲಿ ಇಳಿಕೆ ಕಾಣಲು ಕಾರಣವಾಗಿದೆ ಎಂದು ಕಂಪನಿ ಹೇಳಿದೆ.

ಬಡ್ಡಿದರ ಹೆಚ್ಚಿಗೆ ಇರುವುದು ಹಾಗೂ ಸಾಲ ಬಾಕಿಯಿಂದಾಗಿ ಹಣಕಾಸು ವೆಚ್ಚವು ಶೇ 46ರಷ್ಟು ಹೆಚ್ಚಾಗಿ ₹5,837 ಕೋಟಿಗೆ ತಲುಪಿದೆ.

### ಜಿಯೊ ಲಾಭ ಶೇ 12ರಷ್ಟು ಹೆಚ್ಚಳ

ರಿಲಯನ್ಸ್ ಜಿಯೊ ಕಂಪನಿಯು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹4,863 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಗಳಿಸಿದ್ದ ಲಾಭಕ್ಕೆ ಹೋಲಿಸಿದರೆ (₹4,335 ಕೋಟಿ) ಶೇ 12ರಷ್ಟು ಏರಿಕೆ ಆಗಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಕಂಪನಿಯ ಒಟ್ಟು ವರಮಾನವು ₹21,995 ಕೋಟಿಯಿಂದ ₹24,127 ಕೋಟಿಗೆ ಏರಿಕೆ ಕಂಡಿದೆ.

ಕಾರ್ಯಾಚರಣಾ ವರಮಾನ ಶೇ 9.9ರಷ್ಟು ಹೆಚ್ಚಾಗಿ ₹24,042 ಕೋಟಿಗೆ ತಲುಪಿದೆ. ಹಿಂದಿನ ಅವಧಿಯಲ್ಲಿ ₹21,873 ಕೋಟಿಯಷ್ಟು ಇತ್ತು ಎಂದು ಕಂಪನಿಯು ಮಾಹಿತಿ ನೀಡಿದೆ.

ಕಾರ್ಯಾಚರಣಾ ವರಮಾನ ₹2.22 ಲಕ್ಷ ಕೋಟಿಯಿಂದ ₹2.1 ಲಕ್ಷ ಕೋಟಿಗೆ ಇಳಿಕೆ ಕಂಡಿದೆ. ಕಚ್ಚಾ ತೈಲ ದರವು ಶೇ 31ರಷ್ಟು ಇಳಿಕೆ ಕಂಡಿರುವುದೇ ಇದಕ್ಕೆ ಕಾರಣ ಎಂದು ಹೇಳಿದೆ.

ಕಂಪನಿಯ ವಹಿವಾಟಿನ ಮುಖ್ಯ ಭಾಗವಾಗಿರುವ ತೈಲ ಸಂಸ್ಕರಣೆ ಮತ್ತು ಪೆಟ್ರೋಕೆಮಿಕಲ್ಸ್ ವಹಿವಾಟುಗಳ ಇಬಿಐಟಿಡಿಎ ಶೇ 23.2ರಷ್ಟು ಇಳಿಕೆ ಕಂಡಿದ್ದು ₹15,271 ಕೋಟಿಗೆ ತಲುಪಿದೆ.

ಆರ್ಥಿಕ ಹಿಂಜರಿತದ ಆತಂಕದಿಂದಾಗಿ ಕಂಪನಿಗಳು ದಾಸ್ತಾನು ಕಡಿಮೆ ಮಾಡಿಕೊಂಡಿದ್ದರಿಂದ ಹಾಗೂ ಬಡ್ಡಿದರ ಗರಿಷ್ಠ ಮಟ್ಟದಲ್ಲಿ ಇರುವುದು ಬೇಡಿಕೆ ಮೇಲೆ ಪರಿಣಾಮ ಬೀರಿದೆ ಎಂದು ಕಂಪನಿ ಹೇಳಿದೆ. ರಫ್ತು ಶೇ 28ರಷ್ಟು ಇಳಿಕೆ ಕಂಡಿರುವುದಾಗಿ ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

SAD DEMISE

5-2-1940 - 19-7-2023
Smt. M.R. VISHALAKSHI
W/o. Late. Sri. M.S. Radhakrishna Setty
No day passes without your thoughts.
We always cherish your Memory
Son & Daugther-In-Law
M.R. Gurudatt - M.G. Andal
Daugther & Son-In-Law
V.Radhika-K.Venkatasubramanian
Grand Daughter's & Grand Son's
M.G.Nandita Datt-Rakshith Arakotaram
Sharmada-Sribashyam,Sharanya-Sagar
Great Grand Children
Rinav Arakotaram, Suyodh,Sukrut,Kian

ಚಿರಸ್ಮರಣೆ

ಶ್ರೀಮತಿ|| ನಾಗಮ್ಮನವರು
(ದಿವಂಗತ ಶ್ರೀ ಜಿ. ರಾಮಕೃಷ್ಣಪ್ಪ ರೆಡ್ಡಿಯವರ ಧರ್ಮಪತ್ನಿ)
ನಿಧನ: 22.7.2010
ನೀವು ನಮ್ಮನ್ನಗಲಿ ಇಂದಿಗೆ 13 ವರ್ಷಗಳಾದರೂ ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯಾತ್ಮಕ್ಕೆ ಶಾಂತಿಯನ್ನು ಬಯಸುವ
ಸೊಸೆ: ಕೆ.ಜೆ.ಯಶೋದಾ
ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Wanted

ಎಂಎನ್ಸಿಗೆ &ಇತರೆ ಕಂಪನಿಗಳಿಗೆ ಡಿಪ್ಲೊಮಾ ಮೆಕ್ಯಾನಿಕಲ್ಸ್, ಎಲೆಕ್ಟ್ರಿಕಲ್ಸ್ /ಹೊರದೇಶದ ಕಂಪೆನಿಗಳಿಗೆ ಯುಕೆ ಯುಎಸ್‌ಎ ಕೆನಡಾ ಕೆಲಸಕ್ಕೆ ಬೇಕಾಗಿದ್ದಾರೆ: 8892501007/ 9606701007

ಬೇಕಾಗಿದ್ದಾರೆ: PUC, Degree or Double Graduation ಆದವರು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ: 6361093783, 6362922342, 9019976891

ರಿಯಲ್ ಎಸ್ಟೇಟ್ ಸೆಲ್ಲಿಂಗ್

House

Sadashiva Nagar

PROPERTY SALE. 2 'Hari Krupa' 3rd Cross Lower Palace Orchards. 1550 Sq ft. 9591932764

Sites

Mysore

PERIYAPATNA KHB (RAJAPURA) 2 Sites for Sale 30X40 North & 30X50 East Facing. Kumar 9945112279

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

100% ವಶೀಕರಣ ಸ್ಪೆಷಲಿಸ್ಟ್: ಪ್ರೀತಿಯಲ್ಲಿ ನಂಬಿಮೋಸ ಹೋದವರಿಗೆ ಕಲ್ಕತ್ತಾ ಕೊಳ್ಳೇಗಾಲದ ಪೂಜೆಯಿಂದ, ಗಂಡಹೆಂಡತಿ ಸಮಸ್ಯೆಗಳಿಗೆ 3ಗಂಟೆಗಳಲ್ಲಿ ಶೀಘ್ರ ಪರಿಹಾರ. 9448687421

ವೈಯಕ್ತಿಕ

Change of Name

ನಾನು ಮಂಗಳಗೌರಮ್ಮ, ಹನುಮಂತಪ್ಪ ನವರ ಮಗಳಾದ ,ನಂ. 65 ಸೋಮಶೇಟಿಹಳ್ಳಿ ಗ್ರಾಮ, ಚಿಕ್ಕಬಾಣವಾರ ಪೋಸ್ಟ್ ಬೆಂಗಳೂರು 560090 ನಲ್ಲಿ ವಾಸಿಸುತ್ತಿದೇನೇ. ಅಫೈಡಿವಿಕ್ಟ್ ನಲ್ಲಿ ಹೇಳಿದಂತೆ ನನ್ನ ಹೆಸರನ್ನು ಪುಟ್ಟಗೌರಮ್ಮ ಎಂದು ಬದಲಿಸಿದೇನೆ.

ಪ್ರವಾಸ

Travel

19.09.2023 17.11.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ,ಅಬುದಾಬಿ 5 ದಿನಗಳು. 11.10.2023 29.11.2023 ನೇಪಾಳ 9 ದಿನಗಳು. 11.09.2023 09.10.2023 17.11.2023 ಶ್ರೀಲಂಕಾ 6 ದಿನಗಳು. 19.09.2023 06.10.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 11.09.2023 09.10.2023 ಗುಜರಾತ್ 8 ದಿನಗಳು. 13.10.2023 25.11.2023 ರಾಜಸ್ಥಾನ್ 9 ದಿನಗಳು. 07.10.2023 11.11.2023 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

9 ದಿನಗಳ ಕಾಶಿ,ಗಯಾ ಅಲಹಾಬಾದ್. 8 ದಿನಗಳ ನೇಪಾಳ,ಮುಕ್ತಿನಾಥ ವಿಶೇಷ. 8 ದಿನಗಳ ಸಿಂಗಾಪುರ್ ಮಲೇಶಿಯಾ. 5 ದಿನಗಳ ಬಾಲಿ. ಹಾಗು ಇತರೆ ಪ್ರವಾಸಗಳಿಗೆ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9880079588 9900080796

8 ದಿನಗಳ ಕಾಶಿಯಾತ್ರೆ, 12ದಿನಗಳ ಚಾರ್‌ಧಾಮ್‌ಯಾತ್ರೆ, 12 ದಿನಗಳ ನೇಪಾಳ, ಮುಕ್ತಿನಾಥ್, 10 ದಿನಗಳ ಗುಜರಾತ್, ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ 9980270467, 9740228186

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

# ಬಾಂಧವ್ಯ ವೃದ್ಧಿಗೆ ದೂರದರ್ಶಿ ಯೋಜನೆ

## ಮೋದಿ –ಶ್ರೀಲಂಕಾ ಅಧ್ಯಕ್ಷ ವಿಕ್ರಮಸಿಂಘೆ ಮಾತುಕತೆ: 5 ಒಪ್ಪಂದಗಳಿಗೆ ಸಹಿ

ನವದೆಹಲಿ (ಪಿಟಿಐ): ಭಾರತ – ಶ್ರೀಲಂಕಾ ನಡುವೆ ಸಂಪರ್ಕ ವ್ಯವಸ್ಥೆ, ಆರ್ಥಿಕ ಬಾಂಧವ್ಯವನ್ನು ವೃದ್ಧಿಸಲು ದೂರದರ್ಶಿ ಯೋಜನೆಗೆ ಉಭಯ ರಾಷ್ಟ್ರಗಳು ಶುಕ್ರವಾರ ಸಮ್ಮತಿಸಿವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಶ್ರೀಲಂಕಾ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಈ ಸಂಬಂಧ ವಿಸ್ತೃತ ಚರ್ಚೆ ನಡೆಸಿದರು.

ಉಭಯ ನಾಯಕರು 5 ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಿದ್ದು, ಇದರಲ್ಲಿ ಶ್ರೀಲಂಕಾದಲ್ಲಿ ಯುಪಿಐ ಅಪ್ಲಿಕೇಷನ್‌ಗೆ ಮಾನ್ಯತೆಗೆ ಸಂಬಂಧಿಸಿದಂತೆ ಶ್ರೀಲಂಕಾ ಮತ್ತು ಎನ್‌ಪಿಸಿಐ ಇಂಟರ್ ನ್ಯಾಷನಲ್ ಪೇಮೆಂಟ್ ಲಿಮಿಟೆಡ್ (ಎನ್‌ಐಪಿಎಲ್) ಒಪ್ಪಂದ, ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಸಹಕಾರ ಒಪ್ಪಂದಗಳು ಸೇರಿವೆ.

ಈ ಕುರಿತ ಹೇಳಿಕೆಯಲ್ಲಿ ಮೋದಿ ಅವರು, ಉಭಯ ರಾಷ್ಟ್ರಗಳ ಅಭಿವೃದ್ಧಿ ಹಾಗೂ ರಕ್ಷಣೆಯು ಪರಸ್ಪರ ಬೆಸೆದುಕೊಂಡಿವೆ. ರಾಷ್ಟ್ರಗಳ ಭದ್ರತೆ ಹಾಗೂ ಸೂಕ್ಷ್ಮತೆಯನ್ನು ಅರಿತುಕೊಂಡು ಪರಸ್ಪರರು ಕಾರ್ಯನಿರ್ವಹಿಸುವುದು ಉತ್ತಮ ಎಂದು ಪ್ರತಿಪಾದಿಸಿರು.

**ತಮಿಳರಿಗೆ ಘನತೆಯ ಬದುಕು:** ‘ದ್ವೀಪರಾಷ್ಟ್ರದ ತಮಿಳು ಸಮುದಾಯದವರಿಗೆ ಘನತೆಯ ಬದುಕು ಕಲ್ಪಿಸಿ, ಅವರ ನಿರೀಕ್ಷೆಗಳಿಗೆ ಶ್ರೀಲಂಕಾ ಸರ್ಕಾರ ಸ್ಪಂದಿಸಲಿದೆ ಎಂದು ಆಶಿಸುತ್ತೇವೆ’ ಎಂದು ಪ್ರಧಾನಿ ಮೋದಿ ಶ್ರೀಲಂಕಾದ ಅಧ್ಯಕ್ಷರಿಗೆ ಅವರಿಗೆ ತಿಳಿಸಿದರು.

ಶ್ರೀಲಂಕಾ ಸಂವಿಧಾನದ 13ನೇ ತಿದ್ದುಪಡಿಯ ಅನುಷ್ಠಾನದ ಅಗತ್ಯವನ್ನು ಮೋದಿ ಪ್ರತಿಪಾದಿಸಿದರು. ಈ ತಿದ್ದುಪಡಿಯು ಅಧಿಕಾರ ವಿಕೇಂದ್ರೀಕರಣಕ್ಕೆ ಅವಕಾಶ ಕಲ್ಪಿಸಲಿದೆ. ಇದರ ಅನುಷ್ಠಾನಕ್ಕಾಗಿ ಅಲ್ಲಿನ ತಮಿಳು ಸಮುದಾಯ ಆಗ್ರಹಪಡಿಸುತ್ತಿದೆ.

ಶ್ರೀಲಂಕಾ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಅವರು ಶುಕ್ರವಾರ ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಚರ್ಚಿಸಿದರು –ಎಎಫ್‌ಪಿ ಚಿತ್ರ

### ಪ್ರಮುಖಾಂಶಗಳು

- ಭಾರತ–ಲಂಕಾ ರಾಜತಾಂತ್ರಿಕ ಬಾಂಧವ್ಯಕ್ಕೆ 75 ವರ್ಷ
- ಶ್ರೀಲಂಕಾದಲ್ಲಿ ಯುಪಿಐ ಅಪ್ಲಿಕೇಷನ್‌ಗೆ ಮಾನ್ಯತೆ ಸೇರಿ ಐದು ಒಪ್ಪಂದಗಳಿಗೆ ಸಹಿ
- ತಮಿಳುನಾಡಿನ ನಾಗರಪಟ್ಟಣಂ ಮತ್ತು ಶ್ರೀಲಂಕಾದ ಕಂಕೆಸಂತುರೈ ಮಧ್ಯೆ ಜಲಮಾರ್ಗದಲ್ಲಿ ಪ್ರಯಾಣಿಕರ ಸೇವೆಗೆ ನಿರ್ಧಾರ

## ಸಂಕ್ಷಿಪ್ತ ಸುದ್ದಿ

### ಅವಧಿ ಮುಗಿದ ನಂತರವೂ ಪಾಕ್ ಅಧ್ಯಕ್ಷರ ಸ್ಥಾನ ಅಬಾಧಿತ

ಇಸ್ಲಾಮಾಬಾದ್ (ಪಿಟಿಐ): ಹೊಸ ಅಧ್ಯಕ್ಷರ ಆಯ್ಕೆಗಾಗಿ ಚುನಾಯಿತ ಸರ್ಕಾರ ಅಸ್ತಿತ್ವದಲ್ಲಿ ಇಲ್ಲದ ಕಾರಣ, ಪಾಕಿಸ್ತಾನದ ಅಧ್ಯಕ್ಷ ಆರಿಫ್ ಅಲ್ವಿ ಅವರು ಸೆ.8ರಂದು ತಮ್ಮ ಅಧಿಕಾರವಧಿ ಪೂರ್ಣಗೊಳಿಸಿದ ನಂತರವೂ ಅಧ್ಯಕ್ಷರಾಗಿಯೇ ಮುಂದುವರಿಯುವ ಸಂಭವವಿದೆ.

ಸಂವಿಧಾನದ ಪ್ರಕಾರ, ಸಂಸತ್ತಿನ ಸದಸ್ಯರು, ಸೆನೆಟ್ ಸದಸ್ಯರು ಹಾಗೂ ವಿವಿಧ ಪ್ರಾಂತ್ಯಗಳ ವಿಧಾನಸಭೆಗಳ ಚುನಾಯಿತ ಸದಸ್ಯರು ಅಧ್ಯಕ್ಷರ ಆಯ್ಕೆಗೆ ಮತದಾನ ಮಾಡಬೇಕು. ಸದ್ಯ, ಪಂಜಾಬ್ ಮತ್ತು ಖೈಬೆರ್ ಪಖ್ತುಂಕ್ವಾ ಪ್ರಾಂತ್ಯಗಳ ವಿಧಾನಸಭೆ ವಿಸರ್ಜನೆಯಾಗಿದ್ದರೆ, ಉಳಿದವು ಮುಂದಿನ ತಿಂಗಳು ವಿಸರ್ಜನೆಗೊಳ್ಳಲಿವೆ.

ದೇಶದ ಸಾರ್ವತ್ರಿಕ ಚುನಾವಣೆಗೆ ಪೂರ್ವದಲ್ಲಿ ಈ ಪ್ರಕ್ರಿಯೆ ನಡೆಯಲಿದೆ. ಚುನಾಯಿತ ಸರ್ಕಾರಗಳಿಲ್ಲದ ಕಾರಣ ಅಲ್ವಿ ಅಧ್ಯಕ್ಷರಾಗಿಯೇ ಇರಬಹುದು ಎಂದು ಜಿಯೊ ನ್ಯೂಸ್ ವರದಿ ಮಾಡಿದೆ. 2018ರ ಸೆ. 9ರಂದು ಅಧ್ಯಕ್ಷರಾಗಿ ಅಲ್ವಿ ಆಯ್ಕೆಯಾಗಿದ್ದು, 5 ವರ್ಷಗಳ ಅವಧಿ ಸೆ. 8ಕ್ಕೆ ಪೂರ್ಣಗೊಳ್ಳಲಿದೆ.

### ಸ್ವೀಡನ್‌ನಲ್ಲಿ ಕುರಾನ್ ಗ್ರಂಥಕ್ಕೆ ಬೆಂಕಿ: ಮುಸ್ಲಿಂ ರಾಷ್ಟ್ರಗಳ ಆಕ್ರೋಶ

ಬಾಗ್ದಾದ್ (ಎಪಿ): ಸ್ವೀಡನ್‌ನಲ್ಲಿರುವ ಇರಾಕ್ ರಾಯಭಾರ ಕಚೇರಿ ಹೊರಗೆ ಮುಸ್ಲಿಮರ ಪವಿತ್ರ ಗ್ರಂಥ ಕುರಾನ್‌ಗೆ ಬೆಂಕಿ ಹಚ್ಚಿದ್ದನ್ನು ಖಂಡಿಸಿ ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರಗಳು ಶುಕ್ರವಾರ ತೀವ್ರ ಆಕ್ರೋಶ ವ್ಯಕ್ತಪಡಿಸಿವೆ. ಶುಕ್ರವಾರ ಮಧ್ಯಾಹ್ನದ ಪ್ರಾರ್ಥನೆಯ ಬಳಿಕ ಜನರು ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ.

ಇರಾಕ್, ಲೆಬನಾನ್ ಮತ್ತು ಇರಾನ್‌ಗಳಲ್ಲಿ ಪ್ರಾರ್ಥನೆಯ ಬಳಿಕ ಜನರು ಶಾಂತಿಯುತವಾಗಿ ಪ್ರತಿಭಟನೆ ನಡೆಸಿದರೆ, ಬಾಗ್ದಾದ್‌ನಲ್ಲಿ ಗುರುವಾರ ಪ್ರತಿಭಟನಕಾರರು ಸ್ವೀಡನ್ ರಾಯಭಾರ ಕಚೇರಿಯನ್ನು ಕೆಲಕಾಲ ವಶಪಡಿಸಿಕೊಂಡು ಆಕ್ರೋಶ ವ್ಯಕ್ತಪಡಿಸಿದರು. ಕೆಲವರು ಕಟ್ಟಡಕ್ಕೆ ಬೆಂಕಿ ಹಚ್ಚಿದರು. ಅಗ್ನಿಶಾಮಕ ಪಡೆಯಿಂದ ಕೂಡಲೇ ಅದನ್ನು ನಂದಿಸಲಾಯಿತು.

### ಟ್ರಂಪ್ ವಿಚಾರಣೆ ಮುಂದೂಡಿಕೆ

ವಾಷಿಂಗ್ಟನ್ (ಎಪಿ): ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನೂರಾರು ರಹಸ್ಯ ದಾಖಲೆಗಳನ್ನು ಅಕ್ರಮವಾಗಿ ಇಟ್ಟುಕೊಂಡಿದ್ದರು ಎಂಬ ಆರೋಪಕ್ಕೆ ಸಂಬಂಧಿಸಿದ ವಿಚಾರಣೆಯನ್ನು 2024ರ ಮೇ 20ಕ್ಕೆ ಮುಂದೂಡಿ ಫ್ಲಾರಿಡಾದ ನ್ಯಾಯಾಧೀಶರು ಆದೇಶ ನೀಡಿದ್ದಾರೆ. ಅಧ್ಯಕ್ಷೀಯ ಚುನಾವಣೆ ಬಳಿಕ ವಿಚಾರಣೆ ನಡೆಸುವಂತೆ ಎರಡೂ ಕಡೆಯ ವಕೀಲರು ಮನವಿ ಮಾಡಿದ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಮಾನನಷ್ಟ ಮೊಕದ್ದಮೆ: ಗುಜರಾತ್ ಸರ್ಕಾರ, ಅರ್ಜಿದಾರರಿಗೆ ನೋಟಿಸ್ ನೀಡಿದ 'ಸುಪ್ರೀಂ'

# ರಾಹುಲ್ ಅರ್ಜಿ ವಿಚಾರಣೆ ಆ.4ಕ್ಕೆ

ನವದೆಹಲಿ (ಪಿಟಿಐ): 'ಮೋದಿ ಉಪನಾಮ' ಹೇಳಿಕೆ ಕುರಿತ ಮಾನನಷ್ಟ ಮೊಕದ್ದಮೆಯಲ್ಲಿ ತಮಗೆ ವಿಧಿಸಿರುವ ಶಿಕ್ಷೆಗೆ ತಡೆ ನೀಡಬೇಕು ಎಂಬುದಕ್ಕೆ ಸಂಬಂಧಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಲ್ಲಿಸಿರುವ ಮೇಲ್ಮನವಿ ವಿಚಾರಣೆಯನ್ನು ಆಗಸ್ಟ್ 4ಕ್ಕೆ ಮುಂದೂಡಿ ಸುಪ್ರೀಂಕೋರ್ಟ್ ಶುಕ್ರವಾರ ಆದೇಶಿಸಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಹಾಗೂ ಪಿ.ಕೆ.ಮಿಶ್ರಾ ಅವರಿದ್ದ ನ್ಯಾಯಪೀಠ, ಈ ವಿಷಯಕ್ಕೆ ಸಂಬಂಧಿಸಿ ಪ್ರತಿಕ್ರಿಯೆ ಸಲ್ಲಿಸುವಂತೆ ಮೂಲ ಅರ್ಜಿದಾರರಾದ ಮಾಜಿ ಮಂತ್ರಿ ಪೂರ್ಣೇಶ್ ಮೋದಿ ಹಾಗೂ ಗುಜರಾತ್ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ.

ಪ್ರಕರಣದಲ್ಲಿ ಸೂರತ್ ನ್ಯಾಯಾಲಯ ತಮಗೆ ನೀಡಿರುವ ಶಿಕ್ಷೆಗೆ ತಡೆ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿ ಗುಜರಾತ್ ಹೈಕೋರ್ಟ್ ಇತ್ತೀಚೆಗೆ ನೀಡಿದ್ದ ತೀರ್ಪನ್ನು ಪ್ರಶ್ನಿಸಿ ರಾಹುಲ್ ಗಾಂಧಿ ಅರ್ಜಿ ಸಲ್ಲಿಸಿದ್ದರು.

**ವಾದ–ಪ್ರತಿವಾದ:** ಇದಕ್ಕೂ ಮುನ್ನ ವಾದ ಆಲಿಸಿದ ನ್ಯಾಯಪೀಠ, 'ಈ ಹಂತದಲ್ಲಿ ಶಿಕ್ಷೆಗೆ ತಡೆ ನೀಡಬಹುದೇ ಎಂಬುದೇ ಈಗ ಉದ್ಭವಿಸಿರುವ ಪ್ರಶ್ನೆ' ಎಂದಿತು.

ರಾಹುಲ್ ಗಾಂಧಿ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, 'ನನ್ನ ಕಕ್ಷಿದಾರ ಕಳೆದ 111 ದಿನಗಳ ಕಾಲ ಯಾತನೆ ಅನುಭವಿಸಿದ್ದಾರೆ. ಸಂಸತ್‌ನ ಒಂದು ಅಧಿವೇಶನದಿಂದ ವಂಚಿತರಾಗಿದ್ದು, ಮತ್ತೊಂದು ಅಧಿವೇಶನಕ್ಕೆ ಹಾಜರಾಗುವ ಅವಕಾಶ ಕಳೆದುಕೊಳ್ಳಲಿದ್ದಾರೆ' ಎಂದರು.

ಈ ಪ್ರಕರಣದಲ್ಲಿ ರಾಹುಲ್ ಗಾಂಧಿ ಅವರಿಗೆ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿದ ನಂತರ, ಅವರನ್ನು ಲೋಕಸಭಾ ಸದಸ್ಯ ಸ್ಥಾನದಿಂದ ಅನರ್ಹಗೊಳಿಸಲಾಗಿದೆ. ಹೀಗಾಗಿ ಅವರು ಈ ಮೊದಲು ಪ್ರತಿನಿಧಿಸುತ್ತಿದ್ದ ವಯನಾಡು ಲೋಕಸಭಾ ಕ್ಷೇತ್ರಕ್ಕೆ ಯಾವುದೇ ಕ್ಷಣದಲ್ಲಿ ಉಪಚುನಾವಣೆ ಘೋಷಿಸಬಹುದು. ಹೀಗಾಗಿ, ಶಿಕ್ಷೆಗೆ ತಡೆ ನೀಡಬೇಕು ಎಂಬುದು ಈಗಿನ ತುರ್ತು' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

**'ಆಕ್ಷೇಪ ಇದ್ದರೆ ತಿಳಿಸಿ':** ವಿಚಾರಣೆ ವೇಳೆ ನ್ಯಾಯಮೂರ್ತಿ ಬಿ.ಆರ್. ಗವಾಯಿ,'ನನ್ನ ತಂದೆ ದಿವಂಗತ ಆರ್. ಎಸ್.ಗವಾಯಿ ಅವರು ಕಾಂಗ್ರೆಸ್ ಸದಸ್ಯರಾಗಿರದಿದ್ದರೂ ಪಕ್ಷದೊಂದಿಗೆ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ನಂಟು ಹೊಂದಿದ್ದರು. ಪಕ್ಷದ ಬೆಂಬಲದಿಂದ ಸಂಸದ ಹಾಗೂ ಶಾಸಕರೂ ಆಗಿದ್ದರು. ನನ್ನ ಸಹೋದರ ಕೂಡ ರಾಜಕಾರಣಿ' ಎಂದರು.

'ನನ್ನ ಈ ಹಿನ್ನೆಲೆಯ ಬಗ್ಗೆ ನಿಮ್ಮ ತಕರಾರುಗಳಿದ್ದಲ್ಲಿ ತಿಳಿಸಿ' ಎಂದು ಸಿಂಘ್ವಿ ಹಾಗೂ ಪೂರ್ಣೇಶ್ ಮೋದಿ ಪರ ಹಾಜರಿದ್ದ ಹಿರಿಯ ವಕೀಲ ಮಹೇಶ್ ಜೇಠ್ಮಲಾನಿ ಅವರನ್ನು ಉದ್ದೇಶಿಸಿ ನ್ಯಾಯಮೂರ್ತಿ ಗವಾಯಿ ಹೇಳಿದರು.

'ಈ ಸಂಗತಿಗಳು ನಮಗೆ ಗೊತ್ತಿವೆ. ನೀವು ಈ ಪ್ರಕರಣದ ವಿಚಾರಣೆ ನಡೆಸುವುದಕ್ಕೆ ನಮ್ಮ ಆಕ್ಷೇಪ ಇಲ್ಲ' ಎಂದು ಸಿಂಘ್ವಿ ಮತ್ತು ಜೇಠ್ಮಲಾನಿ ಸ್ಪಷ್ಟಪಡಿಸಿದರು.

## 'ಈ ಹಂತದಲ್ಲಿ ಬ್ರಿಜ್‌ಭೂಷಣ್ ಸಿಂಗ್ ಕಸ್ಟಡಿ ಸಲ್ಲ'

ನವದೆಹಲಿ (ಪಿಟಿಐ): 'ಭಾರತ ಕುಸ್ತಿ ಫೆಡರೇಷನ್‌ನ ನಿರ್ಗಮಿತ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧದ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ ಆರೋಪಗಳು ಗಂಭೀರವಾಗಿವೆ. ಆದರೆ, ಈ ಹಂತದಲ್ಲಿ ಅವರನ್ನು ಕಸ್ಟಡಿಗೆ ತೆಗೆದುಕೊಳ್ಳುವುದರಿಂದ ಯಾವುದೇ ಉದ್ದೇಶ ಈಡೇರುವುದಿಲ್ಲ' ಎಂದು ದೆಹಲಿ ನ್ಯಾಯಾಲಯ ಹೇಳಿದೆ.

ಬ್ರಿಜ್‌ಭೂಷಣ್ ಸಿಂಗ್ ಅವರಿಗೆ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಹರ್ಜೀತ್ ಸಿಂಗ್ ಜಸ್ಪಾಲ್ ಗುರುವಾರ ಜಾಮೀನು ನೀಡಿ ಆದೇಶಿಸಿದ್ದರು. ಶುಕ್ರವಾರ ಲಭ್ಯವಾಗಿರುವ ಆದೇಶದಲ್ಲಿ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಈ ಪ್ರಕರಣದಲ್ಲಿನ ಆರೋಪಗಳು ಗಂಭೀರವಾಗಿವೆ. ಆರೋಪಿ ಸಲ್ಲಿಸಿರುವ ಜಾಮೀನು ಅರ್ಜಿಯನ್ನು ಪರಿಗಣಿಸುವಾಗ ಈ ಆರೋಪಗಳ ಗಂಭೀರತೆಯನ್ನು ಪರಿಗಣಿಸಬೇಕು ಎಂಬುದರಲ್ಲಿ ಯಾವುದೇ ಸಂಶಯ ಇಲ್ಲ. ಆದರೆ, ಜಾಮೀನು ಕೊಡುವ ಬಗ್ಗೆ ನಿರ್ಧಾರ ಕೈಗೊಳ್ಳಲು ಈ ಸಂಗತಿಯಷ್ಟೆ ಮುಖ್ಯವಾಗುವುದಿಲ್ಲ' ಎಂದು ನ್ಯಾಯಾಧೀಶ ಜಸ್ಪಾಲ್ ಆದೇಶದಲ್ಲಿ ಹೇಳಿದ್ದಾರೆ.

## 'ದೆಹಲಿ ಸರ್ಕಾರದ ಅಧಿಕಾರವನ್ನು ಸಂಸತ್ ರದ್ದು ಮಾಡಬಹುದೇ?'

ನವದೆಹಲಿ (ಪಿಟಿಐ): ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿ ಕಾಯ್ದೆ ರೂಪಿಸುವ ಮೂಲಕ ರಾಷ್ಟ್ರ ರಾಜಧಾನಿ ಆಡಳಿತಕ್ಕೆ ಸಂಬಂಧಿಸಿ ದೆಹಲಿ ಸರ್ಕಾರ ಹೊಂದಿರುವ ಅಧಿಕಾರವನ್ನು ಸಂಸತ್ ರದ್ದು ಮಾಡಬಹುದೇ ಎಂಬ ಬಗ್ಗೆ ಸಂವಿಧಾನ ಪೀಠ ಪರಿಶೀಲನೆ ನಡೆಸಲಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರ ಇತ್ತೀಚೆಗೆ ಹೊರಡಿಸಿದ್ದ ಸುಗ್ರೀವಾಜ್ಞೆ ಪ್ರಶ್ನಿಸಿ ದೆಹಲಿ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಐವರು ನ್ಯಾಯಮೂರ್ತಿಗಳಿರುವ ಸಂವಿಧಾನ ಪೀಠಕ್ಕೆ ವರ್ಗಾಯಿಸಿ ಸುಪ್ರೀಂಕೋರ್ಟ್ ಗುರುವಾರ ಆದೇಶಿಸಿತ್ತು.

# ಇರ್ಶಾಲ್‌ವಾಡಿಯಲ್ಲಿ ಭೂಕುಸಿತ ಸಾವಿನ ಸಂಖ್ಯೆ 22ಕ್ಕೆ ಏರಿಕೆ

ಮುಂಬೈ/ಔರಂಗಾಬಾದ್ (ಪಿಟಿಐ): ಮಹಾರಾಷ್ಟ್ರದ ಹಲವೆಡೆ ಭಾರಿ ಮಳೆಯಾಗುತ್ತಿದ್ದು, ರಾಯಗಡ ಜಿಲ್ಲೆಯ ಖಾಲಾಪುರ ತಾಲ್ಲೂಕಿನ ಇರ್ಶಾಲ್‌ವಾಡಿ ಗ್ರಾಮದಲ್ಲಿ ಗುರುವಾರ ಸಂಭವಿಸಿದ ಭಾರಿ ಭೂಕುಸಿತದಿಂದ ಮೃತಪಟ್ಟವರ ಸಂಖ್ಯೆ 22ಕ್ಕೆ ಏರಿಕೆಯಾಗಿದೆ.

ದುರಂತ ಸಂಭವಿಸಿದ ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿರುವ ಎನ್‌ಡಿಆರ್‌ಎಫ್ ಸಿಬ್ಬಂದಿ, ಶುಕ್ರವಾರ ಮತ್ತೆ ಆರು ಮೃತದೇಹಗಳನ್ನು ಮಣ್ಣಿನಿಂದ ಹೊರತೆಗೆದರು.

ಈವರೆಗೆ 22 ಮೃತ ದೇಹಗಳು ದೊರೆತಿವೆ. ಭೂಕುಸಿತದಲ್ಲಿ ಆರು ತಿಂಗಳಿಂದ ನಾಲ್ಕು ವರ್ಷದೊಳಗಿನ ನಾಲ್ಕು ಮಕ್ಕಳು ಮೃತಪಟ್ಟಿವೆ. ಇದರಲ್ಲಿ ಎರಡು ಮಕ್ಕಳು ಒಡಹುಟ್ಟಿದವಾಗಿವೆ. ಗ್ರಾಮದಲ್ಲಿ ಒಟ್ಟು 228 ನಿವಾಸಿಗಳು ನೆಲೆಸಿದ್ದರು. ಇದರಲ್ಲಿ 93 ಮಂದಿ ಪತ್ತೆಯಾಗಿದ್ದಾರೆ. ಇನ್ನು 114 ಗ್ರಾಮಸ್ಥರ ಬಗ್ಗೆ ಸುಳಿವು ಸಿಕ್ಕಿಲ್ಲ. ಇವರಲ್ಲಿ ಮದುವೆ–

ಮಹಾರಾಷ್ಟ್ರದ ರಾಯಗಡ ಜಿಲ್ಲೆಯ ಇರ್ಶಾಲ್‌ವಾಡಿ ಗ್ರಾಮದಲ್ಲಿ ಭೂಕುಸಿತ ಸಂಭವಿಸಿದ್ದು ಎನ್‌ಡಿಆರ್‌ಎಫ್ ಸಿಬ್ಬಂದಿ ಶುಕ್ರವಾರ ಶೋಧ ಮತ್ತು ರಕ್ಷಣಾ ಕಾರ್ಯದಲ್ಲಿ ತೊಡಗಿದ್ದರು – ಪಿಟಿಐ ಚಿತ್ರ

ಮುಂಜಿಗೆ ಹೋದವರು, ಭತ್ತದ ಗದ್ದೆ ಹಾಗೂ ತೋಟಗಳಿಗೆ ಕೆಲಸಕ್ಕೆ ಹೋದವರು ಸೇರಿದ್ದಾರೆ ಎಂದು ಅವರು ಹೇಳಿದ್ದಾರೆ.

ಮಣ್ಣಿನಡಿ ಸಿಲುಕಿದವರ ರಕ್ಷಣೆಗೆ ನಡೆಸುತ್ತಿದ್ದ ರಕ್ಷಣಾ ಕಾರ್ಯಾಚರಣೆಯನ್ನು ಪ್ರತಿಕೂಲ ಹವಾಮಾನದಿಂದಾಗಿ ಗುರುವಾರ ರಾತ್ರಿ ಸ್ಥಗಿತಗೊಳಿಸಲಾಗಿತ್ತು. ರಕ್ಷಣಾ ತಂಡಗಳು, ಸುರಿಯುತ್ತಿರುವ ಮಳೆಯ ನಡುವೆಯೇ ಶುಕ್ರವಾರ ಬೆಳಿಗ್ಗೆ 6.30ರ ಸುಮಾರಿಗೆ ಶೋಧವನ್ನು ಪುನಃ ಆರಂಭಿಸಿದವು.

# ಸಹಿಷ್ಣುತೆಯ ಮಟ್ಟ ಕುಸಿಯುತ್ತಿದೆ: 'ಸುಪ್ರೀಂ'

ನವದೆಹಲಿ (ಪಿಟಿಐ): ವಿವಾದಿತ 'ಆದಿಪುರುಷ್' ಸಿನಿಮಾಕ್ಕೆ ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿಯು (ಸಿಬಿಎಫ್‌ಸಿ) ನೀಡಿರುವ ಪ್ರಮಾಣಪತ್ರವನ್ನು ರದ್ದುಪಡಿಸಬೇಕೆಂದು ಕೋರಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಸುಪ್ರೀಂ ಕೋರ್ಟ್ ಶುಕ್ರವಾರ ವಜಾಗೊಳಿಸಿದ್ದು, ಸಮಾಜದಲ್ಲಿ ಸಹಿಷ್ಣುತೆಯ ಮಟ್ಟ ಕುಸಿಯುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಮತ್ತು ಸುಧಾಂಶು ಧುಲಿಯಾ ಅವರನ್ನೊಳಗೊಂಡ ನ್ಯಾಯಪೀಠವು, ಸಿನಿಮಾವು ಸೆನ್ಸಾರ್ ಮಂಡಳಿಯಿಂದ ಪ್ರಮಾಣಪತ್ರವನ್ನು ಪಡೆದಿದೆ. ಈಗ ಈ ನ್ಯಾಯಾಲಯವು ಮಧ್ಯಪ್ರವೇಶಿಸುವುದು ಸೂಕ್ತವಲ್ಲ. ಸಿನಿಮಾದಲ್ಲಿರುವ ಪ್ರಾತಿನಿಧ್ಯವು ರಾಮಾಯಣ ಪಠ್ಯದಲ್ಲಿ ನಿಖರವಾದ ಪ್ರತಿರೂಪವಲ್ಲ ಎಂದೂ ಅಭಿಪ್ರಾಯಪಟ್ಟಿದೆ.

ಇಂಥ ವಿಷಯಗಳನ್ನು ನ್ಯಾಯಾಲಯಗಳು ಪರಿಗಣಿಸಬಾರದು ಎಂದೂ ನ್ಯಾಯಪೀಠವು ಹೇಳಿದೆ. 'ಸಂವಿಧಾನದ 32ನೇ ಪರಿಚ್ಛೇದದ ಅಡಿಯಲ್ಲಿ ಇಂಥ ವಿಷಯಗಳನ್ನು ನಾವು ಏಕೆ ಪರಿಗಣಿಸಬೇಕು? ನೀವು (ಅರ್ಜಿದಾರರು) ಪ್ರತಿಸಲವೂ ಕೋರ್ಟ್‌ಗೆ ಬಂದಾಗ ನಾವು ಎಲ್ಲವನ್ನೂ ಪರಿಶೀಲಿಸಬೇಕೇ? ಇತ್ತೀಚಿನ ದಿನಗಳಲ್ಲಿ ಚಲನಚಿತ್ರಗಳು, ಪುಸ್ತಕಗಳ ವಿಷಯಗಳಲ್ಲಿ ಸಹಿಷ್ಣುತೆಯ ಮಟ್ಟ ಕುಸಿಯುತ್ತಿದೆ' ಎಂಬುದನ್ನು ನ್ಯಾಯ ಪೀಠವು ಗಮನಿಸಿತು.

**ತಡೆ:** ವಿವಾದಿತ ಚಲನಚಿತ್ರ 'ಆದಿಪುರುಷ್'ಗೆ ಸಂಬಂಧಿಸಿದಂತೆ ವಿವಿಧ ಹೈಕೋರ್ಟ್‌ಗಳಲ್ಲಿ ಬಾಕಿ ಉಳಿದಿರುವ ಪ್ರಕ್ರಿಯೆಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆ ನೀಡಿದೆ.

ನ್ಯಾಯಪೀಠವು ಪ್ರಕರಣಕ್ಕೆ ಸಂಬಂಧಿಸಿದ ಅರ್ಜಿದಾರರಿಗೆ ಈ ಸಂಬಂಧ ನೋಟಿಸ್ ಜಾರಿ ಮಾಡಿದೆ.

# 'ಸುಪ್ರೀಂ'ನಲ್ಲಿ ಪ್ರತ್ಯಕ್ಷನಾಗಿ ದಿಗ್ಭ್ರಮೆ ಮೂಡಿಸಿದ ಮಲಿಕ್

ನವದೆಹಲಿ(ಪಿಟಿಐ): ಜೀವಾವಧಿ ಶಿಕ್ಷೆಗೆ ಗುರಿಯಾಗಿ ತಿಹಾರ್ ಜೈಲಿನಲ್ಲಿರುವ ಜೆಕೆಎಲ್‌ಎಫ್ ಮುಖ್ಯಸ್ಥ ಯಾಸಿನ್ ಮಲಿಕ್, ಕಿಕ್ಕಿರಿದು ತುಂಬಿದ್ದ ಸುಪ್ರೀಂಕೋರ್ಟ್‌ನ ಸಭಾಂಗಣವೊಂದರಲ್ಲಿ ಹಾಜರಾಗಿದ್ದು ಶುಕ್ರವಾರ ದಿಗ್ಭ್ರಮೆಗೆ ಕಾರಣವಾಗಿತ್ತು.

ಯಾಸಿನ್ ಮಲಿಕ್

ಕೋರ್ಟ್‌ಗೆ ಮಲಿಕ್‌ನನ್ನು ಹಾಜರುಪಡಿಸಲು ನ್ಯಾಯಾಲಯದ ಅನುಮತಿಯೂ ಇರಲಿಲ್ಲ. ಸಶಸ್ತ್ರ ಸಿಬ್ಬಂದಿಯ ಭಾರಿ ಭದ್ರತೆಯಲ್ಲಿ ಸುಪ್ರೀಂ ಕೋರ್ಟ್ ಆವರಣ ಪ್ರವೇಶಿಸಿದ ಯಾಸಿನ್, ಕಲಾಪ ನಡೆಯುತ್ತಿದ್ದ ಸಭಾಂಗಣ ಪ್ರವೇಶಿಸಿದ್ದು ಅಚ್ಚರಿಗೆ ಕಾರಣವಾಗಿತ್ತು.

'ತನ್ನ ಪರವಾಗಿ ಸ್ವತಃ ವಾದ ಮಂಡಿಸುವ ಸಲುವಾಗಿ, ಶಿಕ್ಷೆಗೆ ಗುರಿಯಾದ ಅಪಾಯಕಾರಿ ವ್ಯಕ್ತಿಗಳನ್ನು ನ್ಯಾಯಾಲಯದ ಕೊಠಡಿಗೆ ತರುವುದಕ್ಕೆ ಸಂಬಂಧಿಸಿ ಶಿಷ್ಟಾಚಾರ ಇದೆ' ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ ಮತ್ತು ದೀಪಂಕರ್ ದತ್ತ ಅವರಿದ್ದ ನ್ಯಾಯಪೀಠಕ್ಕೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ತಿಳಿಸಿದರು.

ಆಗ, 'ಇಲ್ಲಿ ಹಾಜರಾಗಲು ಆತನಿಗೆ ಅನುಮತಿ ಇಲ್ಲವೇ ಆದೇಶ ನೀಡಿರಲಿಲ್ಲ' ಎಂದು ನ್ಯಾಯಮೂರ್ತಿಗಳು ಹೇಳಿದರು.

'ವಿಚಾರಣೆಯಿಂದ ಹಿಂದೆ ಸರಿಯುವುದಾಗಿ ನ್ಯಾಯಮೂರ್ತಿ ದತ್ತ ಹೇಳಿದ್ದಾರೆ. ಹೀಗಾಗಿ, ಪ್ರಕರಣವನ್ನು ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ಪೀಠಕ್ಕೆ ಒಪ್ಪಿಸಲಾಗುವುದು' ಎಂದು ನ್ಯಾಯಮೂರ್ತಿ ಸೂರ್ಯಕಾಂತ ಹೇಳಿದರು.

ಉಗ್ರರಿಗೆ ಹಣಕಾಸು ನೆರವು ನೀಡಿದ ಪ್ರಕರಣದಲ್ಲಿ ಯಾಸಿನ್‌ಗೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ.

**ತನಿಖೆಗೆ ಆದೇಶ:** 'ಯಾಸಿನ್ ಮಲಿಕ್ ಸುಪ್ರೀಂಕೋರ್ಟ್‌ಗೆ ಹಾಜರಾಗಿದ್ದಕ್ಕೆ ಸಂಬಂಧಿಸಿ ಮೇಲ್ನೋಟಕ್ಕೆ ಲೋಪವಾಗಿರುವುದು ಕಂಡುಬಂದಿದೆ' ಎಂದಿರುವ ದೆಹಲಿ ಬಂದಿಖಾನೆ ಇಲಾಖೆ, ಈ ಕುರಿತು ತನಿಖೆಗೆ ಆದೇಶಿಸಿದೆ.

ಡಿಐಜಿ (ಬಂದಿಖಾನೆ) ರಾಜೀವ್ ಸಿಂಗ್ ತನಿಖೆ ನಡೆಸಿ, ಮೂರು ದಿನಗಳ ಒಳಗಾಗಿ ವರದಿ ಸಲ್ಲಿಸುವರು ಎಂದು ಇಲಾಖೆ ಹೇಳಿದೆ.

## ಎಲ್ಲ ಪ್ರಕರಣಗಳ ಮಾಹಿತಿ ಸಲ್ಲಿಸಲು 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ಶ್ರೀಕೃಷ್ಣ ಜನ್ಮಭೂಮಿ–ಶಾಹಿ ಈದ್ಗಾ ವಿವಾದಕ್ಕೆ ಸಂಬಂಧಿಸಿದ ಪ್ರಕರಣಗಳ ವಿವರಗಳನ್ನು ಸಲ್ಲಿಸುವಂತೆ ಅಲಹಾಬಾದ್ ಹೈಕೋರ್ಟ್ ರಿಜಿಸ್ಟ್ರಾರ್ ಅವರಿಗೆ ಸುಪ್ರೀಂಕೋರ್ಟ್ ಶುಕ್ರವಾರ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಎಸ್. ಕೆ.ಕೌಲ್ ಹಾಗೂ ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ವಿವಾದಕ್ಕೆ ಸಂಬಂಧಿಸಿ ಮಥುರಾ ಕೋರ್ಟ್‌ನಲ್ಲಿ ದಾಖಲಾಗಿದ್ದ ಎಲ್ಲ ಅರ್ಜಿಗಳನ್ನು ಅಲಹಾಬಾದ್ ಹೈಕೋರ್ಟ್ ಸ್ವತಃ ತನಗೇ ವರ್ಗಾಯಿಸಿಕೊಂಡು ಹೊರಡಿಸಿದ್ದ ಆದೇಶ ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಪೀಠ ನಡೆಸಿತು.

'ಈ ಪ್ರಕರಣದ ಸ್ವರೂಪವನ್ನು ಪರಿಗಣಿಸಿದರೆ, ಹೈಕೋರ್ಟ್ ವಿಚಾರಣೆ ನಡೆಸುವುದು ಉತ್ತಮವಲ್ಲ ಅಲ್ಲವೇ?' ಎಂದ ನ್ಯಾಯಮೂರ್ತಿ ಕೌಲ್, 'ಉನ್ನತ ಕೋರ್ಟ್‌ನಲ್ಲಿ ವಿಚಾರಣೆ ನಡೆದಾಗ, ಪ್ರಕರಣ ಬಾಕಿ ಉಳಿದು ಕಕ್ಷಿದಾರರ ಪೈಕಿ ಯಾರಾದರೂ ಒಬ್ಬರಿಗೆ ಅಸಮಾಧಾನವಾಗಲಿದೆ' ಎಂದು ಅಭಿಪ್ರಾಯ ಪಟ್ಟರು. ವಿಚಾರಣೆಯನ್ನು 3 ವಾರಗಳ ಕಾಲ ಮುಂದೂಡಲಾಯಿತು.

## ನೇಮಕ: ಶೇ 75 ನ್ಯಾಯಮೂರ್ತಿಗಳು ಪ್ರಬಲ ಜಾತಿಯವರು

ನವದೆಹಲಿ: ದೇಶದ ಹೈಕೋರ್ಟ್‌ಗಳಿಗೆ 2018ರಿಂದ ಜುಲೈ 17ರ ವರೆಗೆ ನೇಮಕಗೊಂಡಿರುವ 604 ನ್ಯಾಯಮೂರ್ತಿಗಳ ಪೈಕಿ 459 (ಶೇ 75.58) ಮಂದಿ ಪ್ರಬಲ ಜಾತಿಗಳಿಗೆ ಸೇರಿದವರಾಗಿದ್ದಾರೆ ಎಂದು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಶುಕ್ರವಾರ ಹೇಳಿದೆ.

18 ನ್ಯಾಯಮೂರ್ತಿಗಳು (ಶೇ 2.98) ಪರಿಶಿಷ್ಟ ಜಾತಿ, 9 ಮಂದಿ (ಶೇ 1.49) ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ ಎಂದೂ ಕೇಂದ್ರ ತಿಳಿಸಿದೆ.

ಎಐಎಂಐಎಂ ಸಂಸದ ಅಸಾದುದ್ದೀನ್ ಒವೈಸಿ ಅವರ ಪ್ರಶ್ನೆಗೆ ಕೇಂದ್ರ ಕಾನೂನು ಸಚಿವ ಅರ್ಜುನ್ ಮೇಘವಾಲ್ ಅವರು ಲಿಖಿತ ಉತ್ತರ ನೀಡಿದ್ದಾರೆ.

ಒಬಿಸಿಗೆ ಸೇರಿದ ನ್ಯಾಯಮೂರ್ತಿಗಳ ಸಂಖ್ಯೆ 72 ಅಥವಾ ಶೇ 11.92 ಇದ್ದರೆ, ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದವರ ಸಂಖ್ಯೆ 34 (ಶೇ 5.6) ಎಂದು ತಿಳಿಸಿದ್ದಾರೆ.

## ಕೇಂದ್ರದ 6.30 ಲಕ್ಷ ಪ್ರಕರಣ ಬಾಕಿ

ನವದೆಹಲಿ: ಕೇಂದ್ರ ಸರ್ಕಾರವು ಕಕ್ಷಿದಾರರಾಗಿರುವ 6.30 ಲಕ್ಷಕ್ಕೂ ಅಧಿಕ ಪ್ರಕರಣಗಳು ದೇಶದ ವಿವಿಧ ನ್ಯಾಯಾಲಯಗಳಲ್ಲಿ ಇತ್ಯರ್ಥಕ್ಕೆ ಬಾಕಿ ಉಳಿದಿವೆ. ಈ ವ್ಯಾಜ್ಯಗಳಿಗಾಗಿ ಕೇಂದ್ರ ಸರ್ಕಾರ ಸರಾಸರಿ ವಾರ್ಷಿಕ ₹50 ಕೋಟಿ ವೆಚ್ಚ ಮಾಡುತ್ತಿದೆ.

ಲೋಕಸಭೆಯಲ್ಲಿ ಬಿಜೆಪಿಯ ಸಂಸದ ದುಷ್ಯಂತ್ ಸಿಂಗ್ ಶುಕ್ರವಾರ ಕೇಳಿರುವ ಪ್ರಶ್ನೆಗೆ ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಈ ಉತ್ತರ ನೀಡಿದ್ದಾರೆ.

'ಕೇಂದ್ರದ 56 ಸಚಿವಾಲಯಗಳ ಪ್ರಕರಣಗಳು ನ್ಯಾಯಾಲಯದಲ್ಲಿವೆ. ಇದರಲ್ಲಿ ಹಣಕಾಸು, ರಕ್ಷಣೆ ಹಾಗೂ ರೈಲ್ವೆಗೆ ಸಂಬಂಧಿಸಿದ ಪ್ರಕರಣಗಳ ಪಾಲು ಶೇ 60ರಷ್ಟು' ಎಂದು ಅವರು ಮಾಹಿತಿ ನೀಡಿದ್ದಾರೆ.

ಈ ಪ್ರಕರಣಗಳಿಗಾಗಿ (ವಕೀಲರ ನೇಮಕ, ನ್ಯಾಯಾಲಯದ ಶುಲ್ಕ ಇತ್ಯಾದಿ) ಕೇಂದ್ರ ಸರ್ಕಾರ ಕಳೆದ ಐದು ವರ್ಷಗಳಲ್ಲಿ ಮಾಡಿರುವ ವೆಚ್ಚದ ವಿವರವನ್ನೂ ಒದಗಿಸಿದ್ದಾರೆ.

ಕೇಂದ್ರ ಮಾಡಿರುವ ವೆಚ್ಚ

| ವರ್ಷ | ವೆಚ್ಚ (₹ಕೋಟಿಗಳಲ್ಲಿ) |
|---|---|
| 2018–19 | 50.85 |
| 2019–20 | 60.40 |
| 2020–21 | 58.01 |
| 2021–22 | 48.37 |
| 2022–23 | 54.35 |

ಗರಿಷ್ಠ ಪ್ರಕರಣಗಳು

1,79,464 ಹಣಕಾಸು ಇಲಾಖೆ

1,10,245 ರೈಲ್ವೆ

87,543 ರಕ್ಷಣೆ

# ಕಣದಲ್ಲಿ ಮಯಂಕ್, ಮನೀಷ್

## ಕೆಎಸ್‌ಸಿಎ ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್: ಹರಾಜು ಪ್ರಕ್ರಿಯೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಆಯೋಜಿಸಲಿರುವ ಮಹಾರಾಜ ಟ್ರೋಫಿ ಟಿ20 ಫ್ರ್ಯಾಂಚೈಸಿ ಲೀಗ್ ಟೂರ್ನಿಯಲ್ಲಿ ಆಡಲು ಆಟಗಾರರ ಹರಾಜು ಪ್ರಕ್ರಿಯೆ ಶನಿವಾರ ನಡೆಯಲಿದೆ. 700 ಆಟಗಾರರು ಈ ಪ್ರಕ್ರಿಯೆಯಲ್ಲಿ ಭಾಗವಹಿಸುವರು.

ಖ್ಯಾತನಾಮ ಆಟಗಾರರಾದ ಮಯಂಕ್ ಅಗರವಾಲ್, ಮನೀಷ್ ಪಾಂಡೆ, ದೇವದತ್ತ ಪಡಿಕ್ಕಲ್, ಕರುಣ್ ನಾಯರ್, ಅಭಿನವ್ ಮನೋಹರ್, ಕೆ.ಸಿ. ಕಾರ್ಯಪ್ಪ, ಅಭಿಮನ್ಯು ಮಿಥುನ್, ಪ್ರವೀಣ್ ದುಬೆ, ರೋನಿತ್ ಮೋರೆ, ಶ್ರೇಯಸ್ ಗೋಪಾಲ್, ಜೆ. ಸುಚಿತ್, ಕೆ.ಪಿ. ಅಪ್ಪಣ್ಣ ಮತ್ತು ವೈಶಾಖ ವಿಜಯಕುಮಾರ್ ಕೂಡ ಈ ಪಟ್ಟಿಯಲ್ಲಿದ್ದಾರೆ.

ಆಗಸ್ಟ್ 13ರಿಂದ ಟೂರ್ನಿಯು ಆರಂಭವಾಗಲಿದೆ. ಹೋದ ವರ್ಷದ ಚಾಂಪಿಯನ್ ಗುಲ್ಬರ್ಗ ಮಿಸ್ಟಿಕ್ಸ್, ರನ್ನರ್ಸ್ ಅಪ್ ಬೆಂಗಳೂರು ಬ್ಲಾಸ್ಟರ್ಸ್, ಮೈಸೂರು ವಾರಿಯರ್ಸ್ ಮತ್ತು ಹುಬ್ಬಳ್ಳಿ ಟೈಗರ್ಸ್ ತಂಡಗಳು ಆಟಗಾರರನ್ನು ಖರೀದಿಸಲಿವೆ. ಈ ಬಾರಿ ಎರಡು ಹೊಸ ಫ್ರ್ಯಾಂಚೈಸಿಗಳಾದ ಮಂಗಳೂರು ಡ್ರ್ಯಾಗನ್ಸ್ ಮತ್ತು ಶಿವಮೊಗ್ಗ ಲಯನ್ಸ್ ಕೂಡ ಕಣದಲ್ಲಿವೆ. ಪ್ರತಿ ಫ್ರ್ಯಾಂಚೈಸಿಯೂ ಗರಿಷ್ಠ ತಲಾ ₹ 50 ಲಕ್ಷ ಥೈಲಿ ಹೊಂದಿವೆ.

ಮಯಂಕ್ ಅಗರವಾಲ್, ರೋನಿತ್ ಮೋರೆ, ಮನೀಷ್ ಪಾಂಡೆ

ಒಟ್ಟು ನಾಲ್ಕು ಗುಂಪುಗಳಲ್ಲಿ ಆಟಗಾರರನ್ನು ವಿಂಗಡಿಸಲಾಗಿದೆ. ಎ ಗುಂಪಿನಲ್ಲಿ ಭಾರತ ಮತ್ತು ಐಪಿಎಲ್‌ನಲ್ಲಿ ಆಡಿರುವ ಆಟಗಾರರು ಇದ್ದಾರೆ. ಬಿ ಗುಂಪಿನಲ್ಲಿ ಬಿಸಿಸಿಐ ಆಯೋಜಿತ ರಾಜ್ಯ ಟೂರ್ನಿಗಳಾದ ರಣಜಿ ಟ್ರೋಫಿ, ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಟೂರ್ನಿ ಮತ್ತು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಗಳಲ್ಲಿ ಆಡಿದವರು ಇರುತ್ತಾರೆ. ಸಿ ಗುಂಪಿನಲ್ಲಿ ಬಿಸಿಸಿಐನ ಇನ್ನಿತರ ಟೂರ್ನಿಗಳಲ್ಲಿ ಆಡಿದ ಆಟಗಾರರು ಹಾಗೂ ಡಿ ಗುಂಪಿನಲ್ಲಿ ಕೆಎಸ್‌ಸಿಎನಲ್ಲಿ ನೋಂದಾಯಿತ ಆಟಗಾರರು ಇದ್ದಾರೆ.

ಪ್ರತಿ ತಂಡವೂ ಕನಿಷ್ಠ 16 ಹಾಗೂ ಗರಿಷ್ಠ 18 ಆಟಗಾರರನ್ನು ಆಯ್ಕೆ ಮಾಡಿಕೊಳ್ಳಬೇಕು. ಇದರಲ್ಲಿ ತಂಡವು ಪ್ರತಿನಿಧಿಸುವ ಕ್ರಿಕೆಟ್ ವಲಯದ ಇಬ್ಬರು ಆಟಗಾರರು ಇರುವುದು ಕಡ್ಡಾಯ.

'ಹೋದ ವರ್ಷದ ಅವೃತ್ತಿಯು ಯಶಸ್ವಿಯಾಗಿತ್ತು. ಬಹಳಷ್ಟು ಯುವ ಆಟಗಾರರಿಗೆ ಅವಕಾಶ ಸಿಕ್ಕಿತ್ತು. ಪ್ರತಿಭಾನ್ವಿತರಿಗೆ ವೇದಿಕೆ ಒದಗಿಸುವುದೇ ಈ ಟೂರ್ನಿಯ ಪ್ರಮುಖ ಉದ್ದೇಶವಾಗಿದೆ. ಕರ್ನಾಟಕದ ಮತ್ತಷ್ಟು ಆಟಗಾರರು ಪ್ರವರ್ಧಮಾನಕ್ಕೆ ಬರಲಿ ಎಂಬ ಆಶಯ ಈ ಬಾರಿಯೂ ಇದೆ. ಈ ಬಾರಿಯ ಹರಾಜು ಪ್ರಕ್ರಿಯೆಯಲ್ಲಿ ಏಳನೂರು ಆಟಗಾರರು ಲಭ್ಯರಿದ್ದಾರೆ' ಎಂದು ಮಹಾರಾಜ ಟ್ರೋಫಿ ಟೂರ್ನಿಯ ಕಮಿಷನರ್ ಹಾಗೂ ಕೆಎಸ್‌ಸಿಎ ಉಪಾಧ್ಯಕ್ಷರೂಆಗಿರುವ ಬಿ.ಕೆ. ಸಂಪತ್ ಕುಮಾರ್ ತಿಳಿಸಿದ್ದಾರೆ.

ನಾಲ್ಕು ವರ್ಷಗಳ ಹಿಂದೆ ಕೆಎಸ್‌ಸಿಎ ಕರ್ನಾಟಕ ಪ್ರೀಮಿಯರ್ ಲೀಗ್ ಟೂರ್ನಿಯನ್ನು ಆಯೋಜಿಸುತ್ತಿತ್ತು. 2019ರಲ್ಲಿ ಮ್ಯಾಚ್ ಫಿಕ್ಸಿಂಗ್ ಪ್ರಕರಣ ವರದಿಯಾಗಿದ್ದವು. ಹಲವು ಆಟಗಾರರನ್ನು ಪೊಲೀಸರು ವಿಚಾರಣೆ ನಡೆಸಿದ್ದರು. ಅದರಿಂದಾಗಿ ನಂತರದ ವರ್ಷಗಳಲ್ಲಿ ಟೂರ್ನಿ ನಡೆದಿರಲಿಲ್ಲ.

ಹೋದ ವರ್ಷ ಮಹಾರಾಜ ಟ್ರೋಫಿ ಟೂರ್ನಿಯನ್ನು ಆರಂಭಿಸಲಾಗಿತ್ತು. ಆಗ ಡ್ರಾಫ್ಟ್ ಮಾದರಿಯಲ್ಲಿ ತಂಡಗಳೂ ಮತ್ತು ಆಟಗಾರರ ಆಯ್ಕೆ ನಡೆದಿತ್ತು. ಈ ಬಾರಿ ಹರಾಜು ನಡೆಸಲಾಗುತ್ತಿದೆ.

**ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್ ಕೋಡ್

ಮುಖ್ಯಾಂಶಗಳು

- ಹರಾಜು ಪ್ರಕ್ರಿಯೆಯಲ್ಲಿ 700 ಆಟಗಾರರು
- ಒಟ್ಟು ಆರು ತಂಡಗಳು ಭಾಗಿಯಾಗಲಿವೆ
- ಆಗಸ್ಟ್ 13ರಿಂದ ಬೆಂಗಳೂರಿನಲ್ಲಿ ನಡೆಯಲಿರುವ ಟೂರ್ನಿ

## ಫುಟ್‌ಬಾಲ್: 20 ವರ್ಷದೊಳಗಿನವರ ಟೂರ್ನಿಗೆ ನಿರ್ಧಾರ

ನವದೆಹಲಿ (ಪಿಟಿಐ): ಮುಂದಿನ ವರ್ಷದಿಂದ 20 ವರ್ಷದೊಳಗಿನವರ ಪುರುಷರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್ ಆಯೋಜಿಸಲು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ನಿರ್ಧರಿಸಿದೆ.

ಈ ಟೂರ್ನಿಯನ್ನು ಪ್ರತಿವರ್ಷ ನಡೆಸಲು ಉದ್ದೇಶಿಸಲಾಗಿದ್ದು, ಚೊಚ್ಚಲ ಚಾಂಪಿಯನ್‌ಷಿಪ್ 2024ರ ಜನವರಿ–ಫೆಬ್ರುವರಿ ತಿಂಗಳಲ್ಲಿ ನಡೆಯಲಿದೆ. 2005ರ ಜ.1 ಮತ್ತು 2007ರ ಡಿ.31ರ ಒಳಗೆ ಜನಿಸಿದವರು ಮೊದಲ ಋತುವಿನ ಟೂರ್ನಿಯಲ್ಲಿ ಪಾಲ್ಗೊಳ್ಳಲು ಅರ್ಹರಾಗಿರುವರು.

'ಫೆಡರೇಷನ್‌ನ ತಾಂತ್ರಿಕ ವಿಭಾಗ ಮತ್ತು ಸ್ಪರ್ಧಾ ಸಮಿತಿಯ ಜತೆಗಿನ ವಿಸ್ತೃತ ಚರ್ಚೆಯ ಬಳಿಕ ಈ ಟೂರ್ನಿ ಆರಂಭಿಸುತ್ತಿದ್ದೇವೆ' ಎಂದು ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಹೇಳಿದರು.

'ಸಂತೋಷ್ ಟ್ರೋಫಿ ಟೂರ್ನಿಗೆ ತಮ್ಮ ರಾಜ್ಯದ ಸೀನಿಯರ್ ತಂಡದಲ್ಲಿ ಸ್ಥಾನ ಪಡೆಯಲು ವಿಫಲವಾದ 20 ವರ್ಷದೊಳಗಿನ ಆಟಗಾರರಿಗೆ ಪ್ರತಿಭೆ ತೋರಿಸಲು ಹೆಚ್ಚಿನ ಅವಕಾಶಗಳನ್ನು ಒದಗಿಸುವುದು ಈ ಚಾಂಪಿಯನ್‌ಷಿಪ್‌ನ ಮುಖ್ಯ ಉದ್ದೇಶ' ಎಂದು ತಿಳಿಸಿದರು.

ಎಐಎಫ್‌ಎಫ್ ಈ ಹಿಂದೆ ಆಯೋಜಿಸುತ್ತಿದ್ದ 21 ವರ್ಷದೊಳಗಿನವರ ರಾಷ್ಟ್ರೀಯ ಚಾಂಪಿಯನ್‌ಷಿಪ್ ಕೆಲ ವರ್ಷಗಳ ಹಿಂದೆ ಸ್ಥಗಿತಗೊಂಡಿತ್ತು.

ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿ

# ಸ್ಪೇನ್, ಸ್ವಿಟ್ಜರ್‌ಲೆಂಡ್‌ಗೆ ಗೆಲುವು

ವೆಲಿಂಗ್ಟನ್ (ಎಎಫ್‌ಪಿ/ಎಪಿ): ಸ್ಪೇನ್ ಮತ್ತು ಸ್ವಿಟ್ಜರ್‌ಲೆಂಡ್ ತಂಡಗಳು ಇಲ್ಲಿ ನಡೆಯುತ್ತಿರುವ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿದವು.

ವೆಲಿಂಗ್ಟನ್‌ನಲ್ಲಿ ಶುಕ್ರವಾರ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ಸ್ಪೇನ್ 3–0 ಗೋಲುಗಳಿಂದ ಕೋಸ್ಟರಿಕಾ ತಂಡವನ್ನು ಮಣಿಸಿತು.

21ನೇ ನಿಮಿಷದಲ್ಲಿ ಕೋಸ್ಟರಿಕಾ ಡಿಫೆಂಡರ್ ವಲೇರಿಯಾ ಡೆಲ್ ಕ್ಯಾಂಪೊ ಅವರು ಎದುರಾಳಿಗಳಿಗೆ 'ಉಡುಗೊರೆ' ಗೋಲು ನೀಡಿದರು. ಐತಾನಾ ಬೋನ್‌ಮತಿ ಅವರು 23ನೇ ನಿಮಿಷದಲ್ಲಿ ಸ್ಪೇನ್ ಮುನ್ನಡೆಯನ್ನು 2–0ಗೆ ಹೆಚ್ಚಿಸಿದರು. ತಂಡದ ಮೂರನೇ ಗೋಲನ್ನು ಎಸ್ತೆರ್ ಗೊನ್ಸಾಲೆಸ್ 27ನೇ ನಿಮಿಷದಲ್ಲಿ ತಂದಿತ್ತರು.

ಸ್ಪೇನ್ ತಂಡದವರು ಆ ಬಳಿಕ ಎದುರಾಳಿ ಗೋಲು ವಲಯ ಗುರಿಯಾಗಿಸಿ ಹಲವು ಸಲ ಚೆಂಡಿನೊಂದಿಗೆ ಮುನ್ನುಗ್ಗಿದರೂ, ಗುರಿ ಸೇರಿಸಲು ಆಗಲಿಲ್ಲ. ಸ್ಟಾರ್ ಆಟಗಾರ್ತಿ ಅಲೆಕ್ಸಿಯಾ ಪುಟೆಯಾಸ್ 77ನೇ ನಿಮಿಷದಲ್ಲಿ ಕಣಕ್ಕಿಳಿದು ಕಾಲ್ಚಳಕ ಮೆರೆದರೂ, ಗೋಲು ಗಳಿಸಲು ವಿಫಲರಾದರು. ಸ್ಪೇನ್‌ನ ಆಕ್ರಮಣಕಾರಿ ಆಟಕ್ಕೆ ಕಡಿವಾಣ ತೊಡಿಸಲು, ಕೋಸ್ಟರಿಕಾ ತಂಡದವರು ರಕ್ಷಣೆಗೆ ಹೆಚ್ಚು ಒತ್ತು ನೀಡಬೇಕಾಯಿತು.

**ಸ್ವಿಟ್ಜರ್‌ಲೆಂಡ್ ಶುಭಾರಂಭ (ಡನೇಡಿನ್ ವರದಿ):** ಡನೇಡಿನ್‌ನಲ್ಲಿ ನಡೆದ ಪಂದ್ಯದಲ್ಲಿ ಸ್ವಿಟ್ಜರ್‌ಲೆಂಡ್ 2–0 ಗೋಲುಗಳಿಂದ ಫಿಲಿಪ್ಪೀನ್ಸ್ ವಿರುದ್ಧ ಗೆದ್ದಿತು. ರಮೋನಾ ಬಾಕ್‌ಮನ್ (45ನೇ ನಿ., ಪೆನಾಲ್ಟಿ) ಮತ್ತು ಸೆರೈನಾ ಪ್ಯುಬೆಲ್ (64 ನೇ ನಿ.) ಅವರು ಗೋಲು ಗಳಿಸಿದರು.

ಡ್ರಾ ಪಂದ್ಯದಲ್ಲಿ ಕೆನಡಾ (ಮೆಲ್ಬರ್ನ್ ವರದಿ): ಮೆಲ್ಬರ್ನ್‌ನಲ್ಲಿ ನಡೆದ ಪಂದ್ಯದಲ್ಲಿ ಪೆನಾಲ್ಟಿ ಕಿಕ್ ಅವಕಾಶವನ್ನು ಹಾಳುಮಾಡಿಕೊಂಡ ಕೆನಡಾ ತಂಡ, ನೈಜೀರಿಯಾ ಜತೆ ಗೋಲುರಹಿತ ಡ್ರಾಗೆ ತೃಪ್ತಿಪಟ್ಟುಕೊಂಡಿತು.

ಪಂದ್ಯದ 50ನೇ ನಿಮಿಷದಲ್ಲಿ ಕೆನಡಾಕ್ಕೆ ಪೆನಾಲ್ಟಿ ಕಿಕ್ ಅವಕಾಶ ಲಭಿಸಿತ್ತು. ಅನುಭವಿ ಆಟಗಾರ್ತಿ ಕ್ರಿಸ್ಟಿನ್ ಸಿಂಕ್ಲೇರ್ ಅವರು ಒದ್ದ ಚೆಂಡನ್ನು ನೈಜೀರಿಯಾ ಗೋಲ್‌ಕೀಪರ್ ಚಿಯಮಾಕಾ ನಾಡೊಝಿ ಡೈವ್ ಮಾಡಿ ತಡೆದರು. ಚಿಯಮಾಕಾ ಅವರು ಕೆನಡಾ ತಂಡದ ಗೋಲು ಗಳಿಸುವ ಇತರ ಕೆಲವು ಪ್ರಯತ್ನಗಳಿಗೂ ಅಡ್ಡಿಯಾದರು.

ಕೋಸ್ಟರಿಕಾ ವಿರುದ್ಧ ಗೋಲು ಗಳಿಸಿದ ಸ್ಪೇನ್ ತಂಡದ ಐತಾನಾ ಬೋನ್‌ಮತಿ ಅವರ ಸಂಭ್ರಮ –ಎಎಫ್‌ಪಿ ಚಿತ್ರ

40 ವರ್ಷದ ಸಿಂಕ್ಲೇರ್ ಅವರು 190 ಗೋಲುಗಳನ್ನು ಗಳಿಸಿದ್ದು, ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ (ಮಹಿಳೆಯರು ಮತ್ತು ಪುರುಷರಲ್ಲಿ) ಅತ್ಯಧಿಕ ಗೋಲು ಗಳಿಸಿದ ಆಟಗಾರ್ತಿ ಎನಿಸಿದ್ದಾರೆ.

## ಪ್ರೊಲೀಗ್ ಹಾಕಿ: ಭಾರತ ತಂಡಗಳಿಗೆ ಭುವನೇಶ್ವರದಲ್ಲಿ ಉದ್ಘಾಟನಾ ಪಂದ್ಯ

ನವದೆಹಲಿ (ಪಿಟಿಐ): ಭಾರತ ಪುರುಷರ ಮತ್ತು ಮಹಿಳೆಯರ ಹಾಕಿ ತಂಡಗಳು, 2023–24ನೇ ಸಾಲಿನ ಎಫ್‌ಐಎಚ್ ಪ್ರೊ ಲೀಗ್‌ನ ಆರಂಭದ ಪಂದ್ಯಗಳನ್ನು ಭುವನೇಶ್ವರದಲ್ಲಿ ಆಡಲಿದೆ. ಮಹಿಳಾ ತಂಡವು ತನ್ನ ಮೊದಲ ಪಂದ್ಯವನ್ನು ಚಿಲಿ ವಿರುದ್ಧ ಆಡಲಿದೆ. ಪುರುಷರ ತಂಡವು, ಸ್ಪೇನ್ ತಂಡವನ್ನು ಎದುರಿಸಲಿದೆ.

ಐದನೇ ಪ್ರೊ ಲೀಗ್ ಋತುವಿನ ವೇಳಾಪಟ್ಟಿಯನ್ನು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್ (ಎಫ್‌ಐಎಚ್) ಗುರುವಾರ ಪ್ರಕಟಿಸಿದೆ. ಪ್ಯಾರಿಸ್ ಒಲಿಂಪಿಕ್ಸ್‌ಗೆ ಸಜ್ಜಾಗಲು ಲೀಗ್‌ನ ಈ ಪಂದ್ಯಗಳು ನೆರವಾಗಬಹುದು ಎಂಬ ಖುಷಿಯಲ್ಲಿ ಎಂದು ಭಾರತದ ಆಟಗಾರರು ಇದ್ದಾರೆ.

ಎರಡೂ ತಂಡಗಳು ಕಳಿಂಗ ಕ್ರೀಡಾಂಗಣದಲ್ಲಿ ಮೊದಲ ಪಂದ್ಯದ ನಂತರ ರೂರ್ಕೆಲಾದ ಬಿರ್ಸಾ ಮುಂಡಾ ಹಾಕಿ ಕ್ರೀಡಾಂಗಣದಲ್ಲಿ ಉಳಿದ ಪಂದ್ಯಗಳನ್ನು ಆಡಲಿವೆ.

ನೇಷನ್ಸ್ ಲೀಗ್‌ನಲ್ಲಿ ಚಾಂಪಿಯನ್ ಆದ ನಂತರ ಪ್ರೊ ಲೀಗ್‌ಗೆ ಬಡ್ತಿ ಪಡೆದಿರುವ ಭಾರತ ಮಹಿಳಾ ತಂಡ ಫೆ. 6ರಂದು ಚೀನಾ ವಿರುದ್ಧ ಕಳಿಂಗ ಕ್ರೀಡಾಂಗಣದಲ್ಲಿ ಮೊದಲ ಪಂದ್ಯ ಆಡಲಿದೆ. ನಂತರ ನೆದರ್ಲೆಂಡ್ಸ್, ಆಸ್ಟ್ರೇಲಿಯಾ, ಅಮೆರಿಕ ವಿರುದ್ಧ ಆಡಲಿದೆ. ನಂತರ ರೂರ್ಕೆಲಾದಲ್ಲಿ ಇದೇ ತಂಡಗಳ ವಿರುದ್ಧ ಮರು ಪಂದ್ಯಗಳಲ್ಲಿ ಆಡಲಿದೆ. ವನಿತೆಯರ ತಂಡ ನಂತರ ಆ್ಯಂಟ್‌ವರ್ಪ್ (ಬೆಲ್ಜಿಯಂ), ಲೀ ವ್ಯಾಲಿ (ಬ್ರಿಟನ್)ನಲ್ಲಿ ಪಂದ್ಯಗಳನ್ನು ಆಡಲಿದೆ. ಅಲ್ಲಿ ಅರ್ಜೆಂಟಿನಾ, ಬೆಲ್ಜಿಯಂ, ಜರ್ಮನಿ ಮತ್ತು ಬ್ರಿಟನ್ ವಿರುದ್ಧ ಕ್ರಮವಾಗಿ ಪಂದ್ಯಗಳನ್ನು ಆಡಲಿದೆ.

ಪುರುಷರ ತಂಡವು ಕಳಿಂಗ ಕ್ರೀಡಾಂಗಣದಲ್ಲಿ ಸ್ಪೇನ್ ವಿರುದ್ಧ ಫೆ. 10ರಂದು ಮೊದಲ ಪಂದ್ಯ ಆಡಲಿದೆ. ಕಳೆದ ಋತುವಿನಲ್ಲಿ ಭಾರತ ತಂಡ ನಾಲ್ಕನೇ ಸ್ಥಾನ ಪಡೆದಿತ್ತು. ಭಾರತ ತವರಿನಲ್ಲಿ ಸ್ಪೇನ್ ಮಾತ್ರವಲ್ಲ, ನೆದರ್ಲೆಂಡ್ಸ್, ಆಸ್ಟ್ರೇಲಿಯಾ, ಐರ್ಲೆಂಡ್ ತಂಡಗಳ ವಿರುದ್ಧವೂ ಆಡಲಿದೆ. ಅರ್ಜೆಂಟಿನಾ ಮತ್ತು ಬೆಲ್ಜಿಯಂ ವಿರುದ್ಧ ಪಂದ್ಯಗಳನ್ನು ಆ್ಯಂಟ್‌ವರ್ಪ್ ಮತ್ತು ಲೀ ವ್ಯಾಲಿಯಲ್ಲಿ ಆಡಲಿದೆ.

ಭಾಗಿಯಾಗಲು ಮಹಾರಾಷ್ಟ್ರ ಘಟಕ ಅನರ್ಹ: ಚುನಾವಣಾಧಿಕಾರಿ

# ಭಾರತ ಕುಸ್ತಿ ಫೆಡರೇಷನ್ ಚುನಾವಣೆ ಆ. 12ಕ್ಕೆ

ನವದೆಹಲಿ (ಪಿಟಿಐ): ಈಗಾಗಲೇ ಸಾಕಷ್ಟು ಬಾರಿ ಮುಂದಕ್ಕೆ ಹೋಗಿರುವ, ಭಾರತ ಕುಸ್ತಿ ಫೆಡರೇಷನ್‌ನ ಚುನಾವಣೆಯನ್ನು ಆಗಸ್ಟ್ 12ರಂದು ನಡೆಸಲಾಗುವುದು ಎಂದು ಶುಕ್ರವಾರ ಪ್ರಕಟಿಸಲಾಗಿದೆ. ಮಹಾರಾಷ್ಟ್ರ ಘಟಕವನ್ನು ಚುನಾವಣಾ ಪ್ರಕ್ರಿಯೆಯಿಂದ ಅನರ್ಹಗೊಳಿಸಲಾಗಿದೆ.

ಮಹಾರಾಷ್ಟ್ರದ ಘಟಕದ ಎರಡೂ ಬಣಗಳು ಈ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗಿಯಾಗಲು ಅನರ್ಹವಾಗಿವೆ ಎಂದು ಚುನಾವಣಾಧಿಕಾರಿ ಆಗಿರುವ ನ್ಯಾ.ಎಂ.ಎಂ.ಕುಮಾರ್ ತಿಳಿಸಿದರು.

ನಿಗದಿಯಂತೆ ಚುನಾವಣೆ ಜುಲೈ 6ರಂದು ನಡೆಯಬೇಕಿತ್ತು. ಆದರೆ ಫೆಡರೇಷನ್ ತಮ್ಮ ಮಾನ್ಯತೆ ತೆಗೆದುಹಾಕಿದ್ದು ಸರಿಯಲ್ಲ ಎಂದು ಮಹಾರಾಷ್ಟ್ರ, ಹರಿಯಾಣ, ತೆಲಂಗಾಣ, ರಾಜಸ್ತಾನ ಮತ್ತು ಹಿಮಾಚಲ ಪ್ರದೇಶ ಘಟಕಗಳು ಅಹವಾಲು ಮಂಡಿಸಿದ ಕಾರಣ ಜುಲೈ 11ಕ್ಕೆ ಮುಂದೆ ಹೋಗಿತ್ತು.

ಅಹವಾಲು ಆಲಿಕೆಯೂ ನಡೆಯಿತು. ಇದರ ನಡುವೆ, ಅಸ್ಸಾಂ ಕುಸ್ತಿ ಸಂಸ್ಥೆ ತನಗೆ ಚುನಾವಣೆಯಲ್ಲಿ ಮತದ ಹಕ್ಕು ನೀಡಬೇಕೆಂದು ಗುವಾಹಟಿ ಹೈಕೋರ್ಟ್ ಮೊರೆ ಹೋಗಿತ್ತು. ಕೋರ್ಟ್ ತಡೆ ನೀಡಿದ ಕಾರಣ ಚುನಾವಣೆ ನಿಗದಿ ದಿನದಂದು ನಡೆಯಲಿಲ್ಲ. ಕಳೆದ ಮಂಗಳವಾರ ಸುಪ್ರೀಂ ಕೋರ್ಟ್, ಗುವಾಹಟಿ ಹೈಕೋರ್ಟ್‌ನ ಆದೇಶಕ್ಕೆ ತಡೆ ನೀಡಿತ್ತು.

24 ರಾಜ್ಯ ಘಟಕಗಳ 48 ಸದಸ್ಯರು ಮತದಾನದಲ್ಲಿ ಭಾಗಿಯಾಗಲಿದ್ದಾರೆ. ಆಗಸ್ಟ್ 1ರಂದು ಹುದ್ದೆಗಳಿಗೆ ನಾಮಪತ್ರ ಸಲ್ಲಿಸಬೇಕು. ಆ. 2ರಂದು ಪರಿಶೀಲನೆ ನಡೆಯಲಿದೆ. ಕಣದಲ್ಲಿರುವವರ ಅಂತಿಮ ಪಟ್ಟಿ ಆ. 7ರಂದು ಪ್ರಕಟವಾಗಲಿದೆ. ಅಗತ್ಯವಾದಲ್ಲಿ ಆ. 12ರಂದು ಮತದಾನ ನಡೆಯಲಿದೆ.

ಈಗ ಇತ್ಯರ್ಥಗೊಳಿಸಲಾಗಿರುವ ರಾಜ್ಯ ಘಟಕಗಳ ಮಾನ್ಯತೆ ವಿಷಯದಲ್ಲಿ ಫೆಡರೇಷನ್‌ನ ಈ ಹಿಂದಿನ ಆಡಳಿತದ ಕೈ ಮೇಲಾಗಿದೆ.

ಮಹಾರಾಷ್ಟ್ರದಲ್ಲಿ ಕಲಹದಲ್ಲಿ ತೊಡಗಿರುವ ಶರದ್ ಪವಾರ್ ಬಣ ಮತ್ತು ರಾಮದಾಸ ತಡಸ್ ಬಣಕ್ಕೆ ಚುನಾವಣೆಗೆ ಪ್ರತಿನಿಧಿಗಳನ್ನು ನಾಮ ನಿರ್ದೇಶನ ಮಾಡಲು ಅನರ್ಹಗೊಳಿಸಲಾಗಿದೆ ಎಂದು ನ್ಯಾ.ಕುಮಾರ್ ಘೋಷಿಸಿದ್ದಾರೆ.

## ವಿನಾಯಿತಿ ಪ್ರಶ್ನಿಸಿ ಅರ್ಜಿ: ಹೈಕೋರ್ಟ್ ಆದೇಶ ಇಂದು

ನವದೆಹಲಿ (ಪಿಟಿಐ): ಪ್ರಮುಖ ಕುಸ್ತಿಪಟುಗಳಾದ ವಿನೇಶಾ ಫೋಗಟ್ ಮತ್ತು ಬಜರಂಗ್ ಪೂನಿಯಾ ಅವರಿಗೆ ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಿಂದ ವಿನಾಯಿತಿ ಕೊಟ್ಟಿರುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿ ಶನಿವಾರ ಆದೇಶ ನೀಡುವುದಾಗಿ ದೆಹಲಿ ಹೈಕೋರ್ಟ್ ಶುಕ್ರವಾರ ತಿಳಿಸಿದೆ.

ವಿಶ್ವ 20 ವರ್ಷದೊಳಗಿನವರ ಮಹಿಳಾ ಚಾಂಪಿಯನ್ ಅಂತಿಮ್ ಪಂಘಲ್ ಮತ್ತು 23 ವರ್ಷದೊಳಗಿನವರ ಏಷ್ಯನ್ ಚಾಂಪಿಯನ್ ಸುಜೀತ್ ಕಲ್ಕಲ್ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸುಬ್ರಮಣಿಯಮ್ ಪ್ರಸಾದ್, ಆದೇಶ ಕಾದಿರಿಸಿದರು.

'ಯಾರು ಉತ್ತಮ ಎಂದು ಪರಿಶೀಲಿಸುವುದು ನ್ಯಾಯಾಲಯದ ಕೆಲಸವಲ್ಲ. ಆಯ್ಕೆ ಪ್ರಕ್ರಿಯೆಯಲ್ಲಿ ನಿಯಮಾವಳಿಗಳನ್ನು ಅನುಸರಿಸಲಾಗಿದೆಯೇ ಎಂಬುದನ್ನು ಗಮನಿಸುವುದಷ್ಟಕ್ಕೆ ನಮ್ಮ ಪ್ರಯತ್ನ ಇರಲಿದೆ' ಎಂದು ವಿಚಾರಣೆಯ ವೇಳೆ ನ್ಯಾಯಮೂರ್ತಿ ಅವರು ಹೇಳಿದರು.

## ವಾಟರ್ ಪೋಲೊ: ಫೈನಲ್‌ಗೆ ರಾಜ್ಯದ ಬಾಲಕಿಯರ ತಂಡ

ಬೆಂಗಳೂರು: ಪ್ರಚೇತಾ ಆರ್. ರಾವ್ (5 ಗೋಲು) ಮತ್ತು ಡಿ.ಕೆ. ದೃತಿ (4 ಗೋಲು) ಅವರ ಆಟದ ನೆರವಿನಿಂದ ಕರ್ನಾಟಕದ ಬಾಲಕಿಯರ ತಂಡ ಚೆನ್ನೈನಲ್ಲಿ ನಡೆಯುತ್ತಿರುವ 49ನೇ ಜೂನಿಯರ್ ರಾಷ್ಟ್ರೀಯ ಅಕ್ವಾಟಿಕ್ ಚಾಂಪಿಯನ್‌ಷಿಪ್‌ನ ವಾಟರ್‌ಪೋಲೊ ಸ್ಪರ್ಧೆಯಲ್ಲಿ ಮಹಾರಾಷ್ಟ್ರ ತಂಡವನ್ನು 10–8ರಿಂದ ಮಣಿಸಿ ಫೈನಲ್ ಪ್ರವೇಶ ಮಾಡಿತು.

ಶುಕ್ರವಾರ ಸೆಮಿಫೈನಲ್ ಹಂತದ ಸ್ಪರ್ಧೆಗಳು ನಡೆದವು. ರಾಜ್ಯದ ಬಾಲಕರ ತಂಡವು ಮಹಾರಾಷ್ಟ್ರ ತಂಡದ ವಿರುದ್ಧ 22–8ರಿಂದ ಪರಾಭವಗೊಂಡಿತು.

ಬಾಲಕರ ವಿಭಾಗದ ಮತ್ತೊಂದು ಸ್ಪರ್ಧೆಯಲ್ಲಿ ಕೇರಳ ತಂಡವು ಬಂಗಾಲ ತಂಡವನ್ನು 10–9ರಿಂದ ಮಣಿಸಿದರೆ, ಬಾಲಕಿಯರ ವಿಭಾಗದಲ್ಲಿ ಕೇರಳ ತಂಡವು ಬಂಗಾಲ ತಂಡವನ್ನು 15–2ರಿಂದ ಮಣಿಸಿ ಪ್ರಶಸ್ತಿ ಸುತ್ತಿಗೆ ಪ್ರವೇಶ ಪಡೆದವು.

ಶನಿವಾರ ಫೈನಲ್ ಪಂದ್ಯಗಳು ನಡೆಯಲಿದ್ದು, ರಾಜ್ಯದ ಬಾಲಕಿಯರ ತಂಡವು ಕೇರಳವನ್ನು ಎದುರಿಸಲಿದೆ. ಬಾಲಕರ ವಿಭಾಗದಲ್ಲಿ ಕೇರಳ ಮತ್ತು ಮಹಾರಾಷ್ಟ್ರ ತಂಡಗಳು ಪ್ರಶಸ್ತಿಗೆ ಸೆಣಸಾಡಲಿದೆ.

## ಶೂಟಿಂಗ್: ಭಾರತಕ್ಕೆ ಬೆಳ್ಳಿ ಪದಕ

ನವದೆಹಲಿ (ಪಿಟಿಐ): ಭಾರತದ ಸಮೀರ್, ರಾಜ್‌ಕನ್ವರ್ ಸಿಂಗ್ ಸಂಧು ಮತ್ತು ಮಹೇಶ್ ಆನಂದ್‌ಕುಮಾರ್ ಅವರನ್ನೊಳಗೊಂಡ ತಂಡ ಕೊರಿಯಾದ ಚಾಂಗ್ವಾನ್‌ನಲ್ಲಿ ನಡೆಯು ತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್ ಷಿಪ್‌ನ 25 ಮೀ. ರ್‍ಯಾಪಿಡ್ ಫೈರ್ ಪಿಸ್ತೂಲ್ ವಿಭಾಗದಲ್ಲಿ ಬೆಳ್ಳಿ ಜಯಿಸಿತು.

ಭಾರತ ತಂಡ ಒಟ್ಟು 1730 ಪಾಯಿಂಟ್ಸ್ ಕಲೆಹಾಕಿ, ಚೀನಾದ ಬಳಿಕ (1747) ಎರಡನೇ ಸ್ಥಾನ ಪಡೆದುಕೊಂಡಿತು.

## ಟೆಸ್ಟ್ ಕ್ರಿಕೆಟ್: ಲಾರಾ, ಎಬಿಡಿ ದಾಖಲೆ ಮೀರಿದ ಕೊಹ್ಲಿ; 438 ರನ್ ಕಳೆಹಾಕಿದ ಭಾರತ

# 500ನೇ ಪಂದ್ಯಕ್ಕೆ ಕೊಹ್ಲಿ ಶತಕ ಮೆರುಗು

**ಪೋರ್ಟ್ ಆಫ್ ಸ್ಪೇನ್ (ಪಿಟಿಐ):** ವಿರಾಟ್ ಕೊಹ್ಲಿ ತಮ್ಮ 500ನೇ ಅಂತರರಾಷ್ಟ್ರೀಯ ಪಂದ್ಯಕ್ಕೆ ಶತಕದ ಮೆರುಗು ತುಂಬಿದರು.

ಕ್ವೀನ್ಸ್ ಓವಲ್ ಪಾರ್ಕ್ ಮೈದಾನದಲ್ಲಿ ವೆಸ್ಟ್ ಇಂಡೀಸ್ ತಂಡದ ಬೌಲರ್‌ಗಳ ಬೆವರಿಳಿಸಿದ 'ರನ್ ಯಂತ್ರ' ಖ್ಯಾತಿಯ ಕೊಹ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ 29ನೇಯ ಹಾಗೂ ಒಟ್ಟಾರೆ 76ನೇ ಶತಕ ಸಾಧನೆ ಮಾಡಿದರು. ಭಾರತ ಮತ್ತು ವಿಂಡೀಸ್ ತಂಡಗಳ ನಡುವಣ 100ನೇ ಟೆಸ್ಟ್ ಕೂಡ ಇದಾಗಿದೆ.

ವಿರಾಟ್ (121; 206 ಎಸೆತ, 4X11) ಎಚ್ಚರಿಕೆಯ ಆಟದ ಬಲದಿಂದ ತಂಡವು ಉತ್ತಮ ಮೊತ್ತ ಪೇರಿಸಿದೆ. ಮೊದಲ ಇನ್ನಿಂಗ್ಸ್‌ನಲ್ಲಿ ಭಾರತವು 128 ಓವರ್‌ಗಳಲ್ಲಿ 438 ರನ್ ಕಳೆಹಾಕಿದೆ.

ವಿರಾಟ್ ಮತ್ತು ರವೀಂದ್ರ ಜಡೇಜ (61; 152ಎ, 4X5) 5ನೇ ವಿಕೆಟ್ ಜೊತೆಯಾಟದಲ್ಲಿ 159 ರನ್ ಗಳಿಸಿದರು. ನಾಲ್ಕನೇ ಕ್ರಮಾಂಕದಲ್ಲಿ ವಿರಾಟ್ ಬ್ಯಾಟಿಂಗ್ ಬರುವ ಮುನ್ನ ಜೈಸ್ವಾಲ್ ಮತ್ತು ರೋಹಿತ್ ಶರ್ಮಾ ಅವರ ಶತಕದ ಜೊತೆಯಾಟದಿಂದ ತಂಡವು ಉತ್ತಮ ಆರಂಭ ಕಂಡಿತ್ತು. ಆದರೆ ಅವರಿಬ್ಬರ ನಂತರ ಶುಭಮನ್ ಗಿಲ್ ವೈಫಲ್ಯ ಅನುಭವಿಸಿದರು. ಅಜಿಂಕ್ಯ ರಹಾನೆ ಕೂಡ ಮಿಂಚಲಿಲ್ಲ.

ಈ ಹಂತದಲ್ಲಿ ಇನಿಂಗ್ಸ್‌ಗೆ ತುಂಬಿದ ವಿರಾಟ್ ದಾಖಲೆಗಳನ್ನೂ ಪೇರಿಸಿದರು. ಅವರ ಈ ಶತಕದಲ್ಲಿ ಬೀಸಾಟವಿರಲಿಲ್ಲ. ಆದರೆ ಚೆಂದದ ಹೊಡೆತಗಳು ಮತ್ತು ತಾಳ್ಮೆಯ ಆಟ ಮೇಳೈಸಿದ್ದವು. ನೂರರ ಗಡಿ ಮುಟ್ಟಲು ಅವರು 180 ಎಸೆತ ಆಡಿದರು. ಕೇವಲ 11 ಬೌಂಡರಿಗಳನ್ನು ಮಾತ್ರ ಹೊಡೆದರು. ಉಳಿದಂತೆ 45 ಸಿಂಗಲ್ ಮತ್ತು 13 ಡಬಲ್ ರನ್‌ಗಳನ್ನು ಅವರು ಗಳಿಸಿದರು.

4ನೇ ಕ್ರಮಾಂಕದಲ್ಲಿ 25ನೇ ಶತಕ ಬಾರಿಸಿದ ಅವರು ವಿಂಡೀಸ್ ತಂಡದ ದಿಗ್ಗಜ ಬ್ರಯನ್ ಲಾರಾ (24) ದಾಖಲೆಯನ್ನು ಮೀರಿದರು.

ವೆಸ್ಟ್ ಇಂಡೀಸ್ ಎದುರು 12ನೇ ಶತಕ ಗಳಿಸಿ ದಕ್ಷಿಣ ಆಫ್ರಿಕಾದ ಎಬಿ ಡಿವಿಲಿಯರ್ಸ್ (11) ಸಾಧನೆಯನ್ನು ಮೀರಿ ನಿಂತರು.

**ಐದು ವರ್ಷಗಳ ನಂತರ:** ವಿದೇಶಿ ಅಂಗಳದಲ್ಲಿ ವಿರಾಟ್ 2018ರ ನಂತರ ಗಳಿಸಿದ ಮೊದಲ ಶತಕ ಇದಾಗಿದೆ. ಐದು ವರ್ಷಗಳ ಹಿಂದೆ ಪರ್ತ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಶತಕ ಗಳಿಸಿದ್ದರು.

ವಿಂಡೀಸ್ ತಂಡದಲ್ಲಿ ಆಫ್‌ಸ್ಪಿನ್ನರ್ ರಕೀಮ್ ಕಾರ್ನವಾಲ್ ಕೊರತೆ ಎದ್ದು ಕಂಡಿತು. ಇದರಿಂದಾಗಿ ಬ್ಯಾಟರ್‌ಗಳಿಗೆ ಹೆಚ್ಚು ನೆರವು ನೀಡುವ ಪಿಚ್‌ನಲ್ಲಿ ವಿಕೆಟ್ ಗಳಿಸುವುದು ಉಳಿದ ಬೌಲರ್‌ಗಳಿಗೆ ತುಸು ಸವಾಲೆನಿಸಿತು. ಜಡೇಜ ಟೆಸ್ಟ್ ಕ್ರಿಕೆಟ್‌ನಲ್ಲಿ 19ನೇ ಅರ್ಧಶತಕ ಗಳಿಸಿದರು.

**ಸಂಕ್ಷಿಪ್ತ ಸ್ಕೋರು:** ಮೊದಲ ಇನಿಂಗ್ಸ್: ಭಾರತ: 128 ಓವರ್‌ಗಳಲ್ಲಿ 438ಕ್ಕೆ ಆಲೌಟ್ (ವಿರಾಟ್ ಕೊಹ್ಲಿ 121, ರವೀಂದ್ರ ಜಡೇಜ 61, ಇಶಾನ್ ಕಿಶನ್ 25, ರವಿಚಂದ್ರನ್ ಅಶ್ವಿನ್ 56; ಕೆಮರ್ ರೋಚ್ 104ಕ್ಕೆ3, ಜೋಮೆಲ್ ವಾರಿಕನ್ 89ಕ್ಕೆ 3)

ಶತಕದ ಸಂಭ್ರಮದಲ್ಲಿ ವಿರಾಟ್ ಕೊಹ್ಲಿ – ಎಎಫ್‌ಪಿ ಚಿತ್ರ

| ಶತಕ | ಬ್ಯಾಟರ್ | ತಂಡ |
|---|---|---|
| 44 | ಸಚಿನ್ ತೆಂಡೂಲ್ಕರ್ | ಭಾರತ |
| 35 | ಜ್ಯಾಕಸ್ ಕಾಲಿಸ್ | ದ.ಆಫ್ರಿಕಾ |
| 30 | ಮಹೇಲಾ ಜಯವರ್ಧನೆ | ಶ್ರೀಲಂಕಾ |
| 25 | ವಿರಾಟ್ ಕೊಹ್ಲಿ | ಭಾರತ |
| 24 | ಬ್ರಯನ್ ಲಾರಾ | ವಿಂಡೀಸ್ |

| ಶತಕ | ಬ್ಯಾಟರ್ | ತಂಡ |
|---|---|---|
| 13 | ಸುನಿಲ್ ಗಾವಸ್ಕರ್ | ಭಾರತ |
| 12 | ಜಾಕಸ್ ಕಾಲಿಸ್ | ದ.ಆಫ್ರಿಕಾ |
| 12 | ವಿರಾಟ್ ಕೊಹ್ಲಿ | ಭಾರತ |
| 11 | ಎಬಿ ಡಿವಿಲಿಯರ್ಸ್ | ದ.ಆಫ್ರಿಕಾ |



### ಪ್ರಮುಖ ಅಂಶಗಳು

**500** ವಿರಾಟ್ ಕೊಹ್ಲಿ ಆಡುತ್ತಿರುವ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯ

**76** ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ವಿರಾಟ್ ಕೊಹ್ಲಿ ಗಳಿಸಿರುವ ಒಟ್ಟು ಶತಕಗಳು

**29** ಟೆಸ್ಟ್ ಕ್ರಿಕೆಟ್‌ನಲ್ಲಿ ವಿರಾಟ್ ಗಳಿಸಿದ ಶತಕಗಳು

**111** ವಿರಾಟ್ ಆಡಿದ ಒಟ್ಟು ಟೆಸ್ಟ್ ಪಂದ್ಯಗಳು

## ಸೆಮಿಗೆ ಸಾತ್ವಿಕ್–ಚಿರಾಗ್ ಶೆಟ್ಟಿ

**ಯೋಸು, ಕೊರಿಯಾ (ಪಿಟಿಐ):** ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ, ಇಲ್ಲಿ ನಡೆಯುತ್ತಿರುವ ಕೊರಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದ ಸೆಮಿಫೈನಲ್ ಪ್ರವೇಶಿಸಿತು.

ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಜೋಡಿ 21–14, 21–17 ರಿಂದ ಜಪಾನ್‌ನ ತಕುರೊ ಹೊಕಿ ಮತ್ತು ಯೂಗೊ ಕೊಬಯಾಶಿ ಅವರನ್ನು ಮಣಿಸಿತು. ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಸಾತ್ವಿಕ್–ಚಿರಾಗ್, ಐದನೇ ಶ್ರೇಯಾಂಕದ ಜೋಡಿಯನ್ನು ಮಣಿಸಲು 40 ನಿಮಿಷಗಳನ್ನು ತೆಗೆದುಕೊಂಡರು.

ಶನಿವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ಅವರು, 2021ರ ವಿಶ್ವ ಚಾಂಪಿಯನ್ ಆಗಿರುವ ಚೀನಾದ ವೀ ಕೆಂಗ್ ಲಿಯಾಂಗ್– ಚಾಂಗ್ ವಾಂಗ್ ಅವರನ್ನು ಎದುರಿಸಲಿದ್ದಾರೆ.

## ಆ್ಯಷಸ್ ಟೆಸ್ಟ್: ಬೇಸ್ಟೊ 99 ರನ್; ಆಸ್ಟ್ರೇಲಿಯಾ ಹೋರಾಟ

# ಇಂಗ್ಲೆಂಡ್ ತಂಡದ ಬಿಗಿಹಿಡಿತ

**ಮ್ಯಾಂಚೆಸ್ಟರ್ (ಎಪಿ):** ಇಂಗ್ಲೆಂಡ್ ತಂಡದವರು ಆ್ಯಷಸ್ ಟೆಸ್ಟ್ ಸರಣಿಯ ನಾಲ್ಕನೇ ಪಂದ್ಯದಲ್ಲಿ ಹಿಡಿತ ಬಿಗಿಗೊಳಿಸಿದ್ದು, ಆಸ್ಟ್ರೇಲಿಯಾ ತಂಡಕ್ಕೆ ಸೋಲಿನ ಆತಂಕ ಎದುರಾಗಿದೆ.

ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಶುಕ್ರವಾರ, ಇಂಗ್ಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 592 ರನ್‌ಗಳಿಗೆ ಆಲೌಟಾಯಿತು. ಈ ಮೂಲಕ 275 ರನ್‌ಗಳ ಮುನ್ನಡೆ ಗಳಿಸಿತು.

ಮೂರನೇ ದಿನದಾಟದ ಅಂತ್ಯಕ್ಕೆ ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್‌ನಲ್ಲಿ 4 ವಿಕೆಟ್‌ಗಳಿಗೆ 113 ರನ್ ಗಳಿಸಿದೆ. ಇನ್ನೂ 162 ರನ್‌ಗಳಿಂದ ಹಿನ್ನಡೆಯಲ್ಲಿರುವ ಪ್ಯಾಟ್ ಕಮಿನ್ಸ್ ಬಳಗ ಒತ್ತಡಕ್ಕೆ ಸಿಲುಕಿದೆ.

ಮಾರ್ಕ್ ವುಡ್ (17ಕ್ಕೆ 3) ಎದುರಾಳಿ ತಂಡಕ್ಕೆ ಆರಂಭಿಕ ಆಘಾತ ನೀಡಿದರು. ಅವರು ಉಸ್ಮಾನ್ ಖ್ವಾಜಾ, ಸ್ಟೀವ್ ಸ್ಮಿತ್ ಮತ್ತು ಟ್ರಾವಿಸ್ ಹೆಡ್ ಅವರ ವಿಕೆಟ್ ಪಡೆದರು. ಡೇವಿಡ್ ವಾರ್ನರ್ ಅವರನ್ನು ಕ್ರಿಸ್ ವೋಕ್ಸ್ ಔಟ್ ಮಾಡಿದರು. ಮಾರ್ನಸ್ ಲಾಬುಷೇನ್ (ಬ್ಯಾಟಿಂಗ್ 44) ಹೆಚ್ಚಿನ ವಿಕೆಟ್ ಬೀಳದಂತೆ ನೋಡಿಕೊಂಡರು.

**ಬೇಸ್ಟೊ ಮಿಂಚು:** ಇದಕ್ಕೂ ಮುನ್ನ 4 ವಿಕೆಟ್‌ಗಳಿಗೆ 384 ರನ್‌ಗಳಿಂದ ಆಟ ಮುಂದುವರಿಸಿದ ಆತಿಥೇಯ ತಂಡದ ಬ್ಯಾಟರ್‌ಗಳು ಶುಕ್ರವಾರವೂ ಅಕ್ರಮಣಕಾರಿ ಆಟವಾಡಿದರು. ಬೇಸ್ಟೊ ಅವರು 81 ಎಸೆತಗಳಲ್ಲಿ 10 ಬೌಂಡರಿ ಮತ್ತು 4 ಸಿಕ್ಸರ್ ನೆರವಿನಿಂದ ಅಜೇಯ 99 ರನ್ ಗಳಿಸಿದರು. ಜತೆಗಾರರು ಇಲ್ಲದ ಕಾರಣ ಶತಕ ಗಳಿಸುವ ಅವಕಾಶ ಕೈತಪ್ಪಿಹೋಯಿತು.

ಜಾನಿ ಬೇಸ್ಟೊ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಬೇಸ್ಟೊ ಅವರು ಜೇಮ್ಸ್ ಆ್ಯಂಡರ್‌ಸನ್ (5) ಅವರೊಂದಿಗೆ 9ನೇ ವಿಕೆಟ್‌ಗೆ 66 ರನ್ ಕಲೆಹಾಕಿದರು. ಆದರೆ ಆ್ಯಂಡರ್‌ಸನ್ ಅವರನ್ನು ಎಲ್‌ಬಿ ಬಲೆಯಲ್ಲಿ ಬೀಳಿಸಿದ ಕ್ಯಾಮರಾನ್ ಗ್ರೀನ್, ಇಂಗ್ಲೆಂಡ್ ಇನಿಂಗ್ಸ್‌ಗೆ ತೆರೆ ಎಳೆದರು. ಬೇಸ್ಟೊ, ಒಂದು ರನ್ ಅಂತರದಲ್ಲಿ ಶತಕ ಗಳಿಸುವ ಅವಕಾಶ ಕಳೆದುಕೊಂಡರು.

ಬೇಸ್ಟೊ ಅವರು ಆ್ಯಷಸ್ ಟೆಸ್ಟ್ ಇತಿಹಾಸದಲ್ಲಿ ಔಟಾಗದೆ 99 ರನ್ ಗಳಿಸಿದ ಎರಡನೇ ಬ್ಯಾಟರ್ ಎನಿಸಿಕೊಂಡರು. ಇದಕ್ಕೂ ಮುನ್ನ ಆಸ್ಟ್ರೇಲಿಯಾದ ಸ್ಟೀವ್ ವಾ (ಪರ್ತ್‌ನಲ್ಲಿ, 1995) ಮಾತ್ರ 99 ರನ್‌ಗಳೊಂದಿಗೆ ಔಟಾಗದೆ ಉಳಿದಿದ್ದರು.

ಬೇಸ್ಟೊ ಅಬ್ಬರಕ್ಕೂ ಮುನ್ನ ಹ್ಯಾರಿ ಬ್ರೂಕ್ಸ್ (61 ರನ್) ಮತ್ತು ನಾಯಕ ಬೆನ್ ಸ್ಟೋಕ್ಸ್ (51 ರನ್) ಅವರು ಅರ್ಧಶತಕಗಳ ಮೂಲಕ ತಂಡದ ಮೊತ್ತ ಹೆಚ್ಚಿಸಲು ನೆರವಾಗಿದ್ದರು. ಆಸ್ಟ್ರೇಲಿಯಾ ಪರ ಜೋಶ್ ಹ್ಯಾಜೆಲ್‌ವುಡ್ 126 ರನ್‌ಗಳಿಗೆ 5 ವಿಕೆಟ್ ಪಡದರು.

**ಸಂಕ್ಷಿಪ್ತ ಸ್ಕೋರ್:** ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 317. ಇಂಗ್ಲೆಂಡ್ 107.4 ಓವರ್‌ಗಳಲ್ಲಿ 592 (ಹ್ಯಾರಿ ಬ್ರೂಕ್ 61, ಬೆನ್ ಸ್ಟೋಕ್ಸ್ 51, ಜಾನಿ ಬೇಸ್ಟೊ ಔಟಾಗದೆ 99, ಜೋಶ್ ಹ್ಯಾಜೆಲ್‌ವುಡ್ 126ಕ್ಕೆ 5, ಮಿಚೆಲ್ ಸ್ಟಾರ್ಕ್ 137ಕ್ಕೆ 2, ಕ್ಯಾಮರಾನ್ ಗ್ರೀನ್ 64ಕ್ಕೆ 2) ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ 41 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 113 (ಉಸ್ಮಾನ್ ಖ್ವಾಜಾ 18, ಡೇವಿಡ್ ವಾರ್ನರ್ 28, ಮಾರ್ನಸ್ ಲಾಬುಷೇನ್ ಬ್ಯಾಟಿಂಗ್ 44, ಸ್ಟೀವ್ ಸ್ಮಿತ್ 17, ಟ್ರಾವಿಸ್ ಹೆಡ್ 1, ಮಾರ್ಕ್ ವುಡ್ 17ಕ್ಕೆ 3)

# ಪ್ರಶಸ್ತಿಗೆ ಭಾರತ–ಪಾಕ್ ಸೆಣಸು

## ಎಮರ್ಜಿಂಗ್ ಏಷ್ಯಾ ಕಪ್: ಸೆಮಿಯಲ್ಲಿ ಬಾಂಗ್ಲಾದೇಶದ ವಿರುದ್ಧ ಗೆಲುವು

**ಕೊಲಂಬೊ (ಪಿಟಿಐ):** ಬ್ಯಾಟಿಂಗ್‌ನಲ್ಲಿ ಎಡವಿದರೂ, ಪರಿಣಾಮಕಾರಿ ಬೌಲಿಂಗ್ ಮೂಲಕ ಬಾಂಗ್ಲಾದೇಶ 'ಎ' ತಂಡವನ್ನು ಸೆಮಿಫೈನಲ್‌ನಲ್ಲಿ 51 ರನ್‌ಗಳಿಂದ ಮಣಿಸಿದ ಭಾರತ 'ಎ' ತಂಡ, ಎಮರ್ಜಿಂಗ್ ಏಷ್ಯಾ ಕಪ್ ಏಕದಿನ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿತು.

ಭಾನುವಾರ ನಡೆಯಲಿರುವ ಫೈನಲ್‌ನಲ್ಲಿ ಭಾರತ 'ಎ' ಮತ್ತು ಪಾಕಿಸ್ತಾನ 'ಎ' ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ. ದಿನದ ಮೊದಲ ಸೆಮಿಫೈನಲ್‌ನಲ್ಲಿ ಪಾಕ್ ತಂಡ, 60 ರನ್‌ಗಳಿಂದ ಶ್ರೀಲಂಕಾ 'ಎ' ತಂಡವನ್ನು ಮಣಿಸಿತು.

ಕೊಲಂಬೊದಲ್ಲಿ ನಡೆದ ಪಂದ್ಯ ದಲ್ಲಿ ಮೊದಲು ಬ್ಯಾಟ್ ಮಾಡಿದ ಭಾರತ 'ಎ', 49.1 ಓವರ್‌ಗಳಲ್ಲಿ 211 ರನ್‌ಗಳಿಗೆ ಆಲೌಟಾಯಿತು. ಪ್ರಮುಖ ಬ್ಯಾಟರ್‌ಗಳು ವಿಫಲವಾದಾಗ ನಾಯಕ ಯಶ್ ಧುಲ್ (66 ರನ್, 85 ಎಸೆತ, 6 ಬೌಂ.) ಆಸರೆಯಾದರು. ಬ್ಯಾಟಿಂಗ್ ಕಷ್ಟಕರವಾಗಿದ್ದ ಪಿಚ್‌ನಲ್ಲಿ ಅವರು ತಾಳ್ಮೆಯ ಆಟವಾಡಿ ತಂಡದ ಮೊತ್ತ 200ರ ಗಡಿ ದಾಟುವಂತೆ ನೋಡಿಕೊಂಡರು.

ನಿಶಾಂತ್ ಸಿಂಧು (ಬಲದಿಂದ ಎರಡನೆಯವರು) ಅವರನ್ನು ಸಹ ಆಟಗಾರರು ಅಭಿನಂದಿಸಿದರು – ಬಿಸಿಸಿಐ ಟ್ವಿಟರ್ ಚಿತ್ರ

ಸಾಧಾರಣ ಗುರಿ ಬೆನ್ನಟ್ಟಿದ ಬಾಂಗ್ಲಾ ದೇಶ 'ಎ' ತಂಡ 34.2 ಓವರ್‌ಗಳಲ್ಲಿ 160 ರನ್‌ಗಳಿಗೆ ಆಲೌಟಾಯಿತು. ಎಡಗೈ ಸ್ಪಿನ್ನರ್ ನಿಶಾಂತ್ ಸಿಂಧು (20ಕ್ಕೆ 5) ಮತ್ತು ಮಾನವ್ ಸುಥಾರ್ (32ಕ್ಕೆ 3) ಅವರು ಬಾಂಗ್ಲಾ ಪತನಕ್ಕೆ ಕಾರಣರಾದರು.

ಮೊಹಮ್ಮದ್ ನಯೀಮ್ (38 ರನ್) ಮತ್ತು ತಂಝಿದ್ ಹಸನ್ (51 ರನ್) ಮೊದಲ ವಿಕೆಟ್‌ಗೆ 70 ರನ್ ಸೇರಿಸಿ ಬಾಂಗ್ಲಾ ತಂಡಕ್ಕೆ ಉತ್ತಮ ಆರಂಭ ನೀಡಿದ್ದರು. ನಯೀಮ್ ವಿಕೆಟ್ ಪಡೆದ ಸುಥಾರ್ ಈ ಜತೆಯಾಟ ಮುರಿದರು. ಆ ಬಳಿಕ ಸಂಧು ಕೈಚಳಕಕ್ಕೆ ಎದುರಾಳಿ ಬ್ಯಾಟರ್‌ಗಳು ಪೆವಿಲಿಯನ್ ಪರೇಡ್ ನಡೆಸಿದರು. ಇನ್ನುಳಿದ 9 ವಿಕೆಟ್‌ಗಳು 90 ರನ್‌ಗಳಿಗೆ ಬಿದ್ದವು.

**ಸಂಕ್ಷಿಪ್ತ ಸ್ಕೋರ್: ಭಾರತ 'ಎ':** 49.1 ಓವರ್‌ಗಳಲ್ಲಿ 211 (ಸಾಯಿ ಸುದರ್ಶನ್ 21, ಅಭಿಷೇಕ್ ಶರ್ಮಾ 34, ನಿಕಿನ್ ಜೋಸ್ 17, ಯಶ್ ಧುಲ್ 66, ರಿಯಾನ್ ಪರಾಗ್ 12, ಮಾನವ್ ಸುಥಾರ್ 21, ರಾಜವರ್ಧನ್ ಹಂಗರ್ಗೇಕರ್ 15, ಮೆಹದಿ ಹಸನ್ 39ಕ್ಕೆ 2, ತಂಝೀಮ್ ಹಸನ್ 58ಕ್ಕೆ 2, ರಕೀಬುಲ್ 36ಕ್ಕೆ 2) **ಬಾಂಗ್ಲಾದೇಶ 'ಎ':** 34.2 ಓವರ್‌ಗಳಲ್ಲಿ 160 (ಮೊಹಮ್ಮದ್ ನಯೀಮ್ 38, ತಂಝಿದ್ ಹಸನ್ 51, ಸೈಫ್ ಹಸನ್ 22, ಮೆಹದಿ ಹಸನ್ 12, ನಿಶಾಂತ್ ಸಿಂಧು 20ಕ್ಕೆ 5, ಮಾನವ್ ಸುಥಾರ್ 32ಕ್ಕೆ 3) **ಫಲಿತಾಂಶ:** ಭಾರತ 'ಎ' ತಂಡಕ್ಕೆ 51 ರನ್ ಗೆಲುವು

## ಬ್ಯಾಸ್ಕೆಟ್‌ಬಾಲ್: ಇಂದು ಫೈನಲ್

**ಬೆಂಗಳೂರು:** ಅಲ್ ಸ್ಟಾರ್ ಅಕಾಡೆಮಿ ಮೈಸೂರು ಮತ್ತು ಎಸ್. ಬ್ಲೂಸ್ ತಂಡಗಳು ಇಲ್ಲಿ ನಡೆಯುತ್ತಿರುವ 13 ವರ್ಷದೊಳಗಿನವರ ರಾಜ್ಯ ಸಬ್ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಬಾಲಕಿಯರ ವಿಭಾಗದಲ್ಲಿ ಫೈನಲ್ ಪ್ರವೇಶ ಮಾಡಿದವು.

ಸೆಮಿಫೈನಲ್ ಲೀಗ್‌ನಲ್ಲಿ ಆಲ್ ಸ್ಟಾರ್ ಅಕಾಡೆಮಿ ಮೈಸೂರು ತಂಡವು ಅಪ್ಪಯ್ಯ ಬಿ.ಸಿ ತಂಡವನ್ನು 47–20ರಿಂದ ಮಣಿಸಿತು. ಮತ್ತೊಂದು ಪಂದ್ಯದಲ್ಲಿ ಎಸ್. ಬ್ಲೂಸ್ ತಂಡವು ಯಂಗ್ ಓರಿಯನ್ಸ್ ಎಸ್.ಸಿ ತಂಡವನ್ನು 42–27ರಿಂದ ಸೋಲಿಸಿತು.

ಬಾಲಕರ ವಿಭಾಗದಲ್ಲಿ ಯಂಗ್ ಓರಿಯನ್ಸ್ ಎಸ್.ಸಿ ತಂಡವು ವಿಮಾನಪುರ ಎಸ್.ಸಿ ತಂಡವನ್ನು 51–32ರಿಂದ ಮತ್ತು ಎಂಸಿಎಚ್‌ಎಸ್ ತಂಡವು ಸ್.ಬ್ಲೂಸ್ ತಂಡವನ್ನು 80–49 ರಿಂದ ಮಣಿಸಿ ಪ್ರಶಸ್ತಿ ಸುತ್ತು ಪ್ರವೇಶಿಸಿದವು.

ಬಾಲಕಿಯರ ವಿಭಾಗದಲ್ಲಿ ಆಲ್ ಸ್ಟಾರ್ ಅಕಾಡೆಮಿ ಮೈಸೂರು ತಂಡವು ಎಸ್.ಬ್ಲೂಸ್ ವಿರುದ್ಧ ಹಾಗೂ ಬಾಲಕರ ವಿಭಾಗದಲ್ಲಿ ಎಂಸಿಎಚ್‌ಎಸ್ ತಂಡವು ಯಂಗ್ ಓರಿಯನ್ಸ್ ವಿರುದ್ಧ ಶನಿವಾರ ಪೈಪೋಟಿ ನಡೆಸಲಿದೆ.

# ಎನ್‌ಸಿಎ ಅಭ್ಯಾಸ ಪಂದ್ಯ ಆಡಲಿರುವ ಬೂಮ್ರಾ

